₹ 6 @vishwavaninews epaper.vishwavani.news vishwavani.news **ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಗುರುವಾರ 19.12.2024** **ಸಂಪುಟ:** 09 **ಸಂಚಿಕೆ:** 360 **ಪುಟಗಳು:** 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

# ವಿಶ್ವವಾಣಿ
ವಿಶ್ವಾಸವೇ ವಿಶ್ವ

## ಚಿಕಿತ್ಸೆಗಾಗಿ ಅಮೆರಿಕಕ್ಕೆ ತೆರಳಿದ ಶಿವಣ್ಣ

ಅನಾರೋಗ್ಯದ ಕಾರಣದಿಂದ ನಟ ಶಿವರಾಜ್‌ಕುಮಾರ್ ಹೆಚ್ಚಿನ ಚಿಕಿತ್ಸೆಗಾಗಿ ಬುಧವಾರ ರಾತ್ರಿ ಅಮೆರಿಕಕ್ಕೆ ತೆರಳಿದ್ದಾರೆ. ಡಿ.24ರಂದು ಅಲ್ಲಿನ ಮಯಾಮಿ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನಲ್ಲಿ ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದಾರೆ. ವೈದ್ಯರಾದ ಮುರುಗೇಶನ್ ಮನೋಹರನ್ ಅವರು ಶಸ್ತ್ರಚಿಕಿತ್ಸೆ ಮಾಡಲಿದ್ದಾರೆ.


ಪುಟ ತೆರೆದಂತೆ...

ಜಪಾನಿನಲ್ಲಿ ಬೀದಿಯಲ್ಲಿಟ್ಟ ಕಸದ ತೊಟ್ಟಿಗಳೂ ಮಾತಾಡುತ್ತವೆ!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6

ಕನ್ನಡದ ಗುಡಿಯೂ ಅಧ್ಯಕ್ಷರ ನುಡಿಯೂ
ಕಾಡುದಾರಿ
ಹರೀಶ್ ಕೇರ
ಸಂ.ಗಮ | 7


### ದಾರಿದೀಪೋಕ್ತಿ

ಜೀವನದಲ್ಲಿ ಪ್ರಾಮಾಣಿಕರಾಗಿರುವುದರಿಂದ ಮತ್ತು ಸತ್ಯವನ್ನು ನುಡಿಯುವುದರಿಂದ ನಿಮಗೆ ಹೆಚ್ಚು ಸ್ನೇಹಿತರು ಸಿಗಲಿಕ್ಕಿಲ್ಲ. ಇರುವವರೂ ಬಿಟ್ಟು ಹೋಗಬಹುದು. ಆದರೆ ಯಾರು ನಿಮ್ಮ ಜತೆ ಉಳಿಯುತ್ತಾರೋ ಅವರು ಯೋಗ್ಯರೂ, ಒಳ್ಳೆಯವರೂ ಆಗಿರುತ್ತಾರೆ.

### ವಕ್ರತುಂಡೋಕ್ತಿ

ನಿವೃತ್ತರಾಗುವ ಒಂದು ಲಾಭವೆಂದರೆ ಎಲ್ಲ ದಿನವೂ ಭಾನುವಾರವೆಂದೇ ಅನಿಸುವುದು.

ಅಂಬೇಡ್ಕರ್ ಕುರಿತ ಶಾ ಹೇಳಿಕೆ ವಿರುದ್ಧ ಹಕ್ಕುಚ್ಯುತಿ | ರಾಜೀನಾಮೆ ಪಡೆಯಲು ಕಾಂಗ್ರೆಸ್ ಗಡುವು

# ಅಮಿತ ಹೇಳಿಕೆಗೆ ವಿಪಕ್ಷ ಕೆಂಡ

**ದೆಹಲಿ:** ಅಂಬೇಡ್ಕರ್ ಕುರಿತು ನೀಡಿದ ಆಕ್ಷೇಪಾರ್ಹ ಹೇಳಿಕೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹಲವಾರು ಸಂಸದರು ಸಂಸತ್ತಿನ ಆವರಣದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಅಂಬೇಡ್ಕರ್ ಅವರ ಭಾವಚಿತ್ರಗಳನ್ನು ಹಿಡಿದುಕೊಂಡು ಸಂಸತ್ತಿನ ಹೊರಗೆ ಸಂಸದರು ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಯಲ್ಲಿ ಕಾಂಗ್ರೆಸ್, ಡಿಎಂಕೆ, ಆರ್‌ಜೆಡಿ, ಎಡಪಕ್ಷಗಳು ಹಾಗೂ ಆಪ್ ಸೇರಿದಂತೆ ವಿವಿಧ ಪಕ್ಷಗಳು ಸಂಸದರು ಭಾಗವಹಿಸಿದ್ದರು. ಈ ಪ್ರತಿಭಟನೆಗೆ ಟಿಎಂಸಿ ಗೈರಾಗಿತ್ತು. ರಾಜ್ಯಸಭೆಯಲ್ಲಿ ಮಧ್ಯಾಹ್ನ ಅಮಿತ್ ಶಾ ವಿರುದ್ಧ ಘೋಷಣೆ ಕೂಗಿ ಸಭಾತ್ಯಾಗ ಮಾಡಿತ್ತು.

ಪ್ರತಿಭಟನೆ ಬಳಿಕ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ, ಅಮಿತ್ ರಾಜೀನಾಮೆ ಪಡೆಯುವಂತೆ ಮನವಿ ಮಾಡಿದರು.

**ಟಿಎಂಸಿ ಹಕ್ಕುಚ್ಯುತಿ ನೋಟಿಸ್:** ಅಂಬೇಡ್ಕರ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ರಾಜ್ಯಸಭೆಯಲ್ಲಿ ತೃಣಮೂಲ ಕಾಂಗ್ರೆಸ್‌ನ ಡೆರೆಕ್ ಒಬ್ರಯಾನ್ ಅವರು ಹಕ್ಕು ಚ್ಯುತಿ ನೋಟಿಸ್ ನೀಡಿದ್ದಾರೆ. ಅಮಿತ್ ಶಾ ಹೇಳಿಕೆ ಹಾಗೂ ಅವರು ಹೇಳಿದ ರೀತಿ ಎರಡೂ ಅವಮಾನಕಾರಿಯಾಗಿತ್ತು ಎಂದು ಬುಧವಾರ ಮಧ್ಯಾಹ್ನದ ಬಳಿಕ ನೀಡಿರುವ ಹಕ್ಕುಚ್ಯುತಿ ನೋಟಿಸ್‌ನಲ್ಲಿ ಹೇಳಲಾಗಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಸಂಸದರು ಸಂಸತ್ ಆವರಣದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಸಂವಿಧಾನ ಶಿಲ್ಪಿ ಅಂಬೇಡ್ಕರ್ ದೇಶಕ್ಕೆ ಹೊಸ ದಿಕ್ಕು ತೋರಿಸಿದವರು. ಅಂಬೇಡ್ಕರ್ ಅವರಿಗೆ ಅಥವಾ ಅವರು ರಚಿಸಿರುವ ಸಂವಿಧಾನಕ್ಕೆ ಅವಮಾನ ಮಾಡಿದರೆ ಈ ದೇಶದ ಜನ ಸಹಿಸುವುದಿಲ್ಲ. ತಕ್ಷಣ ಗೃಹ ಸಚಿವರು ಕ್ಷಮೆಯಾಚಿಸಬೇಕು.
**-ರಾಹುಲ್ ಗಾಂಧಿ** ಲೋಕಸಭೆ ಪ್ರತಿಪಕ್ಷ ನಾಯಕ

ಮನುಸ್ಮೃತಿಯ ಯೋಚನೆಯು ಮೋದಿಯವರ ಸರಕಾರದ್ದಾಗಿದೆ. ಅವರ ಪಾಪಗಳಿಗೆ ಮೋದಿಯವರು ಸಾಥ್ ಕೊಡುತ್ತಾರೆ. ಅಮಿತ್ ಶಾ ಅವರನ್ನು ಪ್ರಧಾನಿ ಮೋದಿಯವರು ತಡೆಯಬೇಕು. ಕೂಡಲೇ ಅವರ ರಾಜೀನಾಮೆ ಪಡೆಯಬೇಕು.
**- ಮಲ್ಲಿಕಾರ್ಜುನ ಖರ್ಗೆ** ಎಐಸಿಸಿ ಅಧ್ಯಕ್ಷ

ಅಂಬೇಡ್ಕರ್ ಅವರ ಹೆಸರನ್ನು ಹೇಳಿಕೊಂಡು ಎಷ್ಟೋ ಜನ ತಮ್ಮ ಹಕ್ಕುಗಳನ್ನು ಪಡೆಯುತ್ತಿದ್ದಾರೆ. ಅವರ ಹೆಸರು ಹೇಳುವುದು ಘನತೆಯ ಸಂಕೇತವಾಗಿದೆ. ಕೋಟ್ಯಂತರ ದಲಿತರು, ವಂಚಿತ ವರ್ಗದವರಿಗೆ ಅಂಬೇಡ್ಕರ್ ಹೆಸರು ಆತ್ಮ ಗೌರವದ ಸಂಕೇತವಾಗಿದೆ.
**- ಪ್ರಿಯಾಂಕಾ ಗಾಂಧಿ** ವಯನಾಡ್ ಸಂಸದೆ

### ಅಮಿತ್ ಶಾ ಹೇಳಿದ್ದೇನು?

ಅಂಬೇಡ್ಕರ್ ಹೆಸರು ಹೇಳುವುದು ಈಗ ಫ್ಯಾಷನ್ ಆಗಿಬಿಟ್ಟಿದೆ. ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್. ಇಷ್ಟು ಸಲ ದೇವರ ನಾಮಸ್ಮರಣೆ ಮಾಡಿದ್ದರೆ ಏಳೇಳು ಜನ್ಮಕ್ಕೂ ಸ್ವರ್ಗಕ್ಕೆ ಹೋಗುತ್ತಿದ್ದರು. ಅಂಬೇಡ್ಕರ್ ಅವರ ಹೆಸರನ್ನು ನೂರು ಬಾರಿ ತೆಗೆದುಕೊಳ್ಳಿ, ಆದರೆ ಅಂಬೇಡ್ಕರ್ ಬಗ್ಗೆ ಕಾಂಗ್ರೆಸ್ ಪಕ್ಷಕ್ಕೆ ಏನು ಅನಿಸುತ್ತದೆ ಎಂಬುದನ್ನು ನಾನು ಹೇಳುತ್ತೇನೆ.

**ನನ್ನ ಹೇಳಿಕೆಯನ್ನು ಕಾಂಗ್ರೆಸ್ ತಿರುಚಿದೆ:** ನನ್ನ ಹೇಳಿಕೆಯನ್ನು ಕಾಂಗ್ರೆಸ್ ತಿರುಚುತ್ತಿದೆ ಎಂದು ಅಮಿತ್ ಶಾ ದೂರಿದ್ದಾರೆ. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂಬೇಡ್ಕರ್ ಅವರಿಗೆ ಎಂದಿಗೂ ಅವಮಾನ ಮಾಡದ ಪಕ್ಷದಿಂದ ನಾನು ಬಂದಿದ್ದೇನೆ. ಸಮಾಜದಲ್ಲಿ ಗೊಂದಲ ಮೂಡಿಸಲು ಮತ್ತು ಜನರ ದಾರಿ ತಪ್ಪಿಸಲು ಕಾಂಗ್ರೆಸ್ ಈ ಹಿಂದೆಯೂ ನನ್ನ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಯನ್ನು ತಿರುಚಿತ್ತು ಎಂದು ಹೇಳಿದರು.

### ಶಾ ಹೇಳಿಕೆ ಸಮರ್ಥಿಸಿಕೊಂಡ ಮೋದಿ

ಕಾಂಗ್ರೆಸ್ ಆರೋಪವನ್ನು ತಳ್ಳಿ ಹಾಕಿರುವ ಪ್ರಧಾನಿ ಮೋದಿ, ಸಂವಿಧಾನ ಶಿಲ್ಪಿಯನ್ನು ಸದಾ ಅವಮಾನಿಸುತ್ತಲೇ ಇರುವ ಕಾಂಗ್ರೆಸ್‌ನ ಕರಾಳ ಇತಿಹಾಸವನ್ನು ಗೃಹ ಸಚಿವರು ಬಹಿರಂಗಪಡಿಸಿದ್ದಾರೆ. ಶಾ ಹೇಳಿದ ಸತ್ಯಗಳಿಂದ ಕಾಂಗ್ರೆಸ್‌ನವರು ಸ್ಪಷ್ಟವಾಗಿ ದಿಗ್ಭ್ರಮೆಗೊಂಡಿದ್ದಾರೆ. ಅದಕ್ಕಾಗಿಯೇ ಈಗ ಡ್ರಾಮಾ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ.

### ಅಂಬೇಡ್ಕರ್ ನಮಗೆ ವ್ಯಸನ ಅಲ್ಲ, ನಿತ್ಯ ಸ್ಮರಣೆ

ಬಾಬಾಸಾಹೇಬ್ ಅಂಬೇಡ್ಕರ್ ಕೊಟ್ಟ ಸಂವಿಧಾನದಡಿಯಲ್ಲಿಯೇ ಕಾರ್ಯನಿರ್ವಹಿಸುತ್ತಿರುವ ಸಂಸತ್‌ನಲ್ಲಿ ನಿಂತು ಅವರ ಸ್ಮರಣೆಯನ್ನು ವ್ಯಸನ ಎಂದಿದ್ದೀರಿ. ಆದರೆ ವಾಸ್ತವವಾಗಿ ನಿಮ್ಮ ಪಕ್ಷದವರು ಮೋದಿ..ಮೋದಿ..ಮೋದಿ ಎಂದು ಹೇಳುವುದು ಒಂದು ವ್ಯಸನ ಆಗಿದೆ. ಮೋದಿಯವರ ಬದಲಿಗೆ ಅಷ್ಟು ಬಾರಿ ದೇವರ ನಾಮ ಸ್ಮರಣೆ ಮಾಡಿದ್ದರೆ ಏಳು ಜನ್ಮದಲ್ಲಿ ಮಾತ್ರ ಅಲ್ಲ, ನೂರು ಜನ್ಮದಲ್ಲಿಯೂ ನಿಮಗೆ ಸ್ವರ್ಗವೇ ಸಿಗುತ್ತಿತ್ತು ಎಂದು ಸಿಎಂ ಸಿದ್ದರಾಮಯ್ಯ ಅವರು ಅಮಿತ್ ಶಾ ಅವರಿಗೆ ಬಹಿರಂಗ ಪತ್ರ ಬರೆದಿದ್ದಾರೆ.

## ಅಪಘಾತದಲ್ಲಿ ಐವರ ಸಾವು

**ಮುಳಬಾಗಿಲು:** ತಾಲೂಕಿನ ಎನ್.ವಡ್ಡಹಳ್ಳಿಯಿಂದ ಗುಡಿಪಲ್ಲಿ ಕಡೆಗೆ ತೆರಳುವ ಮುಖ್ಯ ರಸ್ತೆ ಬಳಿ ಮೂರು ದ್ವಿಚಕ್ರ ವಾಹನಗಳಿಗೆ ಬೊಲೇರೊ ಟೆಂಪೊ ಡಿಕ್ಕಿ ಹೊಡೆದಿದ್ದು, ದ್ವಿಚಕ್ರ ವಾಹನಗಳಲ್ಲಿದ್ದ ಐವರು ಮೃತಪಟ್ಟಿದ್ದಾರೆ. ಕೋನಂಗುಂಟೆ ಗ್ರಾಮದ ರಾಧಪ್ಪ (45), ವೆಂಕಟರಾಮಪ್ಪ (45), ವೆಂಕಟರಾಮಪ್ಪ ಪತ್ನಿ ಅಲುವೇಲಮ್ಮ (30) ಹಾಗೂ ಮತ್ತಿಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ನಂಗಲಿ ಠಾಣೆ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ದೋಣಿಗೆ ಬೋಟ್ ಡಿಕ್ಕಿ 13 ಪ್ರಯಾಣಿಕರು ಸಾವು

**ಮುಂಬೈ:** ಗೇಟ್‌ವೇ ಆಫ್ ಇಂಡಿಯಾ ಬಳಿ ಪ್ರಯಾಣಿಕರಿದ್ದ ದೋಣಿಗೆ ಸ್ಪೀಡ್ ಬೋಟ್ ಡಿಕ್ಕಿ ಹೊಡೆದಿದ್ದು 13 ಪ್ರಯಾಣಿಕರು ಮೃತಪಟ್ಟಿದ್ದಾರೆ. ಮೃತರ ಪೈಕಿ 10 ಮಂದಿ ಪ್ರಯಾಣಿಕರಿದ್ದು, ಮೂವರು ನೌಕಾಪಡೆ ಸಿಬ್ಬಂದಿ ಎಂದು ತಿಳಿದುಬಂದಿದೆ. ಸಿಬ್ಬಂದಿ ಸೇರಿದಂತೆ ಸುಮಾರು 110ಕ್ಕೂ ಹೆಚ್ಚು ಪ್ರವಾಸಿಗರನ್ನು ಹೊತ್ತ ದೋಣಿಯು ಐಕಾನಿಕ್ ಗೇಟ್ ವೇ ಆಫ್ ಇಂಡಿಯಾದಿಂದ ಯುನೆಸ್ಕೋ ಪರಂಪರೆಯ ಎಲಿಫೆಂಟಾ ದ್ವೀಪಕ್ಕೆ ತೆರಳುತ್ತಿದ್ದಾಗ ಸಂಜೆ 5.15ರ ಸುಮಾರಿಗೆ ಈ ಘಟನೆ ನಡೆದಿದೆ.

### ಫನ್‌ತರಂಗ
- ರಘುಪತಿ ಶೃಂಗೇರಿ -

ನ್ಯೂಜಿಲೆಂಡ್ ವೇಗಿ ಟಿಮ್ ಸೌಥಿ ನಿವೃತ್ತಿ




ವಿಧಾನಸಭೆಯಲ್ಲಿ ಸಚಿವ ಜಮೀರ್ ಅಹಮದ್ ಸ್ಪಷ್ಟನೆ

## ದೇಗುಲ, ರೈತರ ಭೂಮಿ ವಕ್ಫ್ ವಶಕ್ಕೆ ಪಡೆಯಲ್ಲ

ಸುವರ್ಣಸೌಧ ಬೆಳಗಾವಿ

ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ ವಕ್ಫ್ ನೋಟಿಸ್ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರ ಸ್ಪಷ್ಟನೆ ನೀಡಿದೆ. ಯಾವುದೇ ಕಾರಣಕ್ಕೂ ದೇವಾಲಯ ಹಾಗೂ ರೈತರು ಉಳಿಮೆ ಮಾಡಿಕೊಂಡಿರುವ ಜಮೀನಿನಿಂದ ಯಾವುದೇ ಎತ್ತುವಳಿ ಮಾಡುವುದಿಲ್ಲ, ಇರುವ ಗೊಂದಲಗಳ ಪರಿಹಾರಕ್ಕೆ ಗೆಜೆಟ್ ನೋಟಿಫಿಕೇಷನ್ ಹಿಂಪಡೆಯುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಬುಧವಾರ ವಕ್ಫ್ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಚರ್ಚೆಗೆ ಸರಕಾರದ ಪರವಾಗಿ ಉತ್ತರಿಸಿದ ವಕ್ಫ್ ಸಚಿವ ಜಮೀರ್ ಅಹಮದ್, ಕಂದಾಯ ಸಚಿವ ಕೃಷ್ಣಬೈರೇಗೌಡ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುದೀರ್ಘ ಉತ್ತರ ನೀಡಿದರು. ಉತ್ತರಿಸುವ ಆರಂಭದಲ್ಲಿಯೇ, ಯಾವುದೇ ಕಾರಣಕ್ಕೂ ರೈತರ ಹಾಗೂ ದೇವಾಲಯದ ಭೂಮಿ ಹಿಂಪಡೆಯುವುದಿಲ್ಲ ಎನ್ನುವ ಮೂಲಕ ಬಿಜೆಪಿ ನಾಯಕರನ್ನು ಕಟ್ಟಿಹಾಕುವ ಪ್ರಯತ್ನದಲ್ಲಿ ಯಶಸ್ವಿಯಾದರು. ಆದರೆ ಕೆಲವೊಂದಷ್ಟು ನೋಟಿಸ್‌ನಲ್ಲಿ ಗೊಂದಲಗಳಿರುವುದನ್ನು ಒಪ್ಪಿಕೊಂಡಿರುವ ರಾಜ್ಯ ಸರಕಾರ, ಈ ಗೊಂದಲ ಪರಿಹಾರಕ್ಕೆ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ವರದಿ ಪಡೆಯುವ ಭರವಸೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ಬಿಜೆಪಿಗರು ರೈತರ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ. ನಾವು ಈಗಾಗಲೇ ರೈತರ ಭೂಮಿಯನ್ನು ಮುಟ್ಟುವುದಿಲ್ಲ ಎಂದು ಸ್ಪಷ್ಟಪಡಿಸಿದ್ದೇವೆ. ಆದರೆ ಬಿಜೆಪಿಯವರು ರೈತರ ಮೇಲೆ ಗೋಲಿಬಾರ್ ಮಾಡಿದ್ದೇಕೆ? ಸಾಲಮನ್ನಾ ಮಾಡಲು ಹೇಳಿ ಬಳಿಕ ಸಾಲಮನ್ನಾ ಮಾಡಲು ಹಣವಿಲ್ಲವೆಂದು ಹೇಳಿದ್ದೇಕೆ?
**- ಜಮೀರ್ ಅಹಮದ್,** ಸಚಿವ

ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಆರ್.ಅಶ್ವಿನ್ ನಿವೃತ್ತಿ ಘೋಷಣೆ

## ಅಶ್ವಿನ್ ಅಲ್ವಿದಾ

**ಬ್ರಿಸ್‌ಬೇನ್:** ಭಾರತೀಯ ಕ್ರಿಕೆಟ್ ತಂಡದ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ.

ಆಸ್ಟ್ರೇಲಿಯಾದಲ್ಲಿ ಸಾಗುತ್ತಿರುವ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿ ಮಧ್ಯೆ ದಿಢೀರ್ ನಿವೃತ್ತಿ ನಿರ್ಧಾರ ಪ್ರಕಟಿಸಿರುವ ಅಶ್ವಿನ್, ಕ್ರೀಡಾಪ್ರೇಮಿಗಳನ್ನು ಆಶ್ಚರ್ಯಚಕಿತಗೊಳಿಸಿದ್ದಾರೆ. ಬ್ರಿಸ್‌ಬೇನ್‌ನ ಗಾಬಾದಲ್ಲಿ ನಡೆದ ಮೂರನೇ ಟೆಸ್ಟ್ ಪಂದ್ಯ ಡ್ರಾಗೊಂಡಿರುವ ಬೆನ್ನಲ್ಲೇ ಅಶ್ವಿನ್ ನಿವೃತ್ತಿ ನಿರ್ಧಾರವನ್ನು ಬಿಸಿಸಿಐ ಪ್ರಕಟಿಸಿದೆ. 'ನಾನು ನಿಮ್ಮ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ, ಭಾರತೀಯ ಕ್ರಿಕೆಟಿಗನಾಗಿ ಇಂದು ನನ್ನ ಕೊನೆಯ ದಿನ' ಎಂದು ಅಶ್ವಿನ್ ಹೇಳಿದ್ದಾರೆ.

### ಅಶ್ವಿನ್ ಸಾಧನೆಗಳು

- ಭಾರತ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ಅನಿಲ್ ಕುಂಬ್ಳೆ (619) ಬಳಿಕ ಅತಿ ಹೆಚ್ಚು ವಿಕೆಟ್ ಗಳಿಸಿದ ದಾಖಲೆ ಅಶ್ವಿನ್ ಹೆಸರಲ್ಲಿದೆ
- ಅಶ್ವಿನ್ 106 ಟೆಸ್ಟ್ ಪಂದ್ಯಗಳಲ್ಲಿ 537 ವಿಕೆಟ್ ಗಳಿಸಿದ್ದಾರೆ. ಟೆಸ್ಟ್ ಕ್ರಿಕೆಟ್‌ನಲ್ಲಿ ಆರು ಶತಕಗಳನ್ನು ಗಳಿಸಿದ್ದಾರೆ
- ಟೆಸ್ಟ್ ಕ್ರಿಕೆಟ್‌ನಲ್ಲಿ 37 ಸಲ ಐದು ವಿಕೆಟ್‌ಗಳನ್ನು ಗಳಿಸಿದ್ದಾರೆ. 116 ಏಕದಿನದಲ್ಲಿ 156 ವಿಕೆಟ್ ಗಳಿಸಿದ್ದಾರೆ

ಬಿಜೆಪಿ ರಾಜ್ಯಾಧ್ಯಕ್ಷರಾಗಿ ವರ್ಷ ಪೂರ್ಣ

## ಪ್ರಧಾನಿ ಮೋದಿ ಭೇಟಿ ಮಾಡಿದ ವಿಜಯೇಂದ್ರ

ದೆಹಲಿಯಲ್ಲಿ ಬುಧವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಭೇಟಿಯಾಗಿ ಶುಭ ಕೋರಿದರು.

**ದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಯ ಅಪೂರ್ವ ಕ್ಷಣಗಳು ಕರ್ನಾಟಕದಲ್ಲಿ ಪಕ್ಷ ಬಲವರ್ಧನೆಗೆ ದೊರೆತ ಪ್ರೇರಣೆಯ ಕಿರಣಗಳು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ರಾಜ್ಯಾಧ್ಯಕ್ಷ ಸ್ಥಾನದ ಜವಾಬ್ದಾರಿ ವಹಿಸಿಕೊಂಡು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಬುಧವಾರ ಭೇಟಿಯಾಗಿ ಆಶೀರ್ವಾದ ಪಡೆದಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಕಸಿತ ಭಾರತ ನಿರ್ಮಾಣಕ್ಕಾಗಿ ಮಹಾಸಂಕಲ್ಪ ತೊಟ್ಟು ತಪಸ್ವಿ ಸಾಧಕರಂತೆ ದೇಶ ಕಟ್ಟುವ ಕಾಯಕದಲ್ಲಿ ತಮ್ಮನ್ನು ಸಮರ್ಪಿಸಿಕೊಂಡಿರುವ ಹೆಮ್ಮೆಯ ಪ್ರಧಾನಿ ಮೋದಿ ಅವರ ಕಾರ್ಯಶೈಲಿಯು ನಮ್ಮಂಥ ಕಾರ್ಯಕರ್ತರಿಗೆ ನಿತ್ಯ ಚೈತನ್ಯದ ಚಿಲುಮೆಯಾಗಿದೆ. ಅವರ ಆಶೀರ್ವಾದದ ಮಾರ್ಗ ದರ್ಶನ ರಾಜ್ಯದಲ್ಲಿ ಪಕ್ಷ ಕಟ್ಟುವ ಕಾರ್ಯಕ್ಕೆ ಅದಮ್ಯ ಉತ್ಸಾಹ ತುಂಬಿದೆ. ಅವರ ಭೇಟಿಯ ಸಂದರ್ಭದ ಮಾತುಗಳು ಸಂಘಟನೆಯ ಬಲ ವೃದ್ಧಿಯ ಜತೆ ಜತೆಗೇ ರಾಷ್ಟ್ರ ಬಲಿಷ್ಠಗೊಳಿಸುವ ಮಹಾ ಕಾರ್ಯದಲ್ಲಿ ಯುವಜನರ ಸಹಭಾಗಿತ್ವ ನಿರೀಕ್ಷೆ ಮೀರಿ ತೊಡಗಿಸಿಕೊಳ್ಳುವಂತೆ ಕಾರ್ಯಕ್ರಮ ರೂಪಿಸಲು ಪ್ರೇರಣೆ ನೀಡಿತು ಎಂದಿದ್ದಾರೆ.

## ಒಎನ್‌ಒಪಿ: ಜೆಪಿಸಿಯಲ್ಲಿ ಪ್ರಿಯಾಂಕಾ ಗಾಂಧಿ ಸದಸ್ಯೆ

**ದೆಹಲಿ:** ಒಂದು ದೇಶ, ಒಂದು ಚುನಾವಣೆ ಮಸೂದೆ ಕುರಿತ ಚರ್ಚೆಗೆ ಕೇಂದ್ರ ಸರಕಾರ ರಚಿಸಲಿರುವ ಜಂಟಿ ಸಂಸದೀಯ ಸಮಿತಿಯಲ್ಲಿ ಕಾಂಗ್ರೆಸ್ ಪಕ್ಷವನ್ನು ಪ್ರಿಯಾಂಕಾ ಗಾಂಧಿ ವಾದ್ರಾ ಪ್ರತಿನಿಧಿಸಲಿದ್ದಾರೆ. ಇವರೊಂದಿಗೆ ಮನೀಶ್ ತಿವಾರಿ, ಸುಖದೇವ್ ಭಗತ್ ಹಾಗೂ ರಣದೀಪ್ ಸುರ್ಜೇವಾಲಾ ಅವರ ಹೆಸರನ್ನು ಸಮಿತಿಗೆ ಶಿಫಾರಸು ಮಾಡಲಾಗಿದೆ. ತೃಣಮೂಲ ಕಾಂಗ್ರೆಸ್‌ನಿಂದ ಕಲ್ಯಾಣ್ ಬ್ಯಾನರ್ಜಿ ಮತ್ತು ಸಾಕೇತ್ ಗೋಖಲೆ ಅವರ ಹೆಸರನ್ನು ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಕಳುಹಿಸಿದ್ದಾರೆ.

## ಪ್ರೊ. ಕೆ.ವಿ.ಎನ್‌ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಗೌರವ

**ದೆಹಲಿ:** ಕೇಂದ್ರ ಸಾಹಿತ್ಯ ಅಕಾಡೆಮಿಯ 2024ನೇ ಸಾಲಿನ ಪ್ರಶಸ್ತಿಗೆ ಕನ್ನಡದ ವಿದ್ವಾಂಸ, ಭಾಷಾ ವಿಜ್ಞಾನಿ ಹಾಗೂ ವಿಮರ್ಶಕ ಪ್ರೊ.ಕೆ.ವಿ.ನಾರಾಯಣ ಅವರು ಆಯ್ಕೆಯಾಗಿದ್ದಾರೆ. ಕೆ.ವಿ.ನಾರಾಯಣ ಅವರ 'ನುಡಿಗಳ ಅಳಿವು' ಎಂಬ ಸಾಹಿತ್ಯ ವಿಮರ್ಶೆ ಕೃತಿಗೆ ಈ ಪ್ರಶಸ್ತಿ ಲಭಿಸಿದೆ. ₹1 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ. ಕೆ.ವಿ.ನಾರಾಯಣ ಸೇರಿದಂತೆ 21 ಭಾಷೆಗಳ ಲೇಖಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಮಾರ್ಚ್ 8ರಂದು ದೆಹಲಿಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.



## ರಾಜ್ಯದ ಮಾಜಿ ಸೈನಿಕರಿಗೆ ಸರಕಾರದಿಂದ ನಿವೇಶನ

**ಸುವರ್ಣಸೌಧ:** ರಾಜ್ಯದಲ್ಲಿರುವ ಮಾಜಿ ಸೈನಿಕರಿಗೆ ವ್ಯವಸಾಯದ ಉದ್ದೇಶಕ್ಕಾಗಿ ಭೂ ಮಂಜೂರಾತಿ ಮಾಡಲು ರಾಜ್ಯದಲ್ಲಿ ಸರಕಾರಿ ಭೂಮಿಯ ತೀವ್ರ ಕೊರತೆಯಿರುವುದರಿಂದ ಅವರಿಗೆ ನಿವೇಶನ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು. ಜವಾನ್ ಸಮ್ಮಾನ್ ಹೆಸರಿನಲ್ಲಿ ಮಾಜಿ ಸೈನಿಕರಿಗೆ ಸರಕಾರಿ ವೆಚ್ಚದಲ್ಲಿಯೇ ಲೇ ಔಟ್ ಮಾಡಿ, ನಿವೇಶನ ನೀಡುವ ಕುರಿತಂತೆ ಪ್ರಸ್ತುತ ಅಧಿವೇಶನ ಮುಗಿದ ಕೂಡಲೇ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗುವುದು ಎಂದರು.



## ಆನ್‌ಲೈನ್ ಬೆಟ್ಟಿಂಗ್ ತಡೆಗೆ ಸೂಕ್ತ ಕಾನೂನು

**ಸುವರ್ಣಸೌಧ:** ಆನ್‌ಲೈನ್ ಬೆಟ್ಟಿಂಗ್ ಗೇಮ್‌ಗಳ ನಿರ್ಬಂಧ ಸಂಬಂಧ ಮುಂದಿನ ದಿನಗಳಲ್ಲಿ ಸೂಕ್ತ ಕಾನೂನು ಜಾರಿಗೊಳಿಸಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದ್ದಾರೆ. ಬಿಜೆಪಿ ಸದಸ್ಯ ಎಸ್.ಟಿ. ಸೋಮಶೇಖರ್ ಪ್ರಶ್ನೆಗೆ ಉತ್ತರಿಸಿದ ಅವರು, ಆನ್‌ಲೈನ್ ಬೆಟ್ಟಿಂಗ್ ಗೇಮ್‌ಗಳ ಸಂಸ್ಥೆಗಳಿಗೆ ಸರಕಾರ ಪರವಾನಗಿ ನೀಡುವುದಿಲ್ಲ. ಆದರೂ, ಇವುಗಳಿಗೆ ಕಡಿವಾಣ ಹಾಕಲು ಸೂಕ್ತ ಕಾನೂನು ಜಾರಿಗೆ ಕ್ರಮ ಕೈಗೊಳ್ಳಲಾಗುವುದು. ಆದರೆ, ನಿರ್ಬಂಧ ವಿಧಿಸಲು ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ನೀಡಿದೆ ಎಂದರು.

ಎಂಆರ್‌ಎನ್‌ಎ ಆಧಾರಿತ ಲಸಿಕೆ 2025ರ ವರ್ಷಾರಂಭದಲ್ಲಿ ಲಭ್ಯ | ಎಲ್ಲ ರೋಗಿಗಳಿಗೂ ಲಸಿಕೆ ಉಚಿತ ಎಂದ ರಷ್ಯಾ ಆರೋಗ್ಯ ಇಲಾಖೆ

## ರಷ್ಯಾದಲ್ಲಿ ಕ್ಯಾನ್ಸರ್‌ಗೆ ರಾಮಬಾಣ ಲಸಿಕೆ ಅಭಿವೃದ್ಧಿ

**ದೆಹಲಿ:** ಮಾರಣಾಂತಿಕ ರೋಗ ಕ್ಯಾನ್ಸರ್‌ನಿಂದ ಬಚಾವು ಮಾಡುವಂತಹ, ಚಿಕಿತ್ಸೆ ನೋವಿಲ್ಲದಂತೆ ಸುಲಭದಲ್ಲಿ ನಡೆಯುವಂತೆ ಮಾಡುವಂತಹ ಔಷಧ ಯಾವಾಗ ಬರುವುದೋ ಎಂದು ಇಡೀ ವಿಶ್ವದ ಕ್ಯಾನ್ಸರ್ ರೋಗಿಗಳ ಕಾಯುವಿಕೆ ಕೊನೆಗೊಳ್ಳುವ ಸಮಯ ಬಂದಿದೆ. ರೋಗಿಗಳನ್ನು ಇನ್ನಿಲ್ಲದಂತೆ ನೋಯಿಸಿ, ಪೀಡಿಸಿ ಸಾವು ತರುತ್ತಿದ್ದ ಕ್ಯಾನ್ಸರ್‌ನ ಚಿಕಿತ್ಸೆಗೆ ರಾಮಬಾಣದಂತಹ ಲಸಿಕೆ ಅಭಿವೃದ್ಧಿಯಾಗಿದೆ.




ಕ್ಯಾನ್ಸರ್ ಕೋಶಗಳನ್ನು ಪೂರ್ಣವಾಗಿ ನಾಶಪಡಿಸುವಂತಹ 'ಎಂಆರ್‌ಎನ್‌ಎ' ಆಧಾರಿತ ಚಿಕಿತ್ಸಕ ಲಸಿಕೆ ಅಭಿವೃದ್ಧಿಪಡಿಸಿರುವುದಾಗಿ ರಷ್ಯಾ ಬುಧವಾರ ಪ್ರಕಟಿಸಿದೆ. ಮಹತ್ವದ ಈ ಲಸಿಕೆ 2025ರಲ್ಲಿ ಚಿಕಿತ್ಸೆಗೆ ಲಭ್ಯವಾಗಲಿದೆ. ಎಲ್ಲ ಕ್ಯಾನ್ಸರ್ ರೋಗಿಗಳಿಗೂ ಉಚಿತವಾಗಿ ಸಿಗಲಿದೆ ಎಂದು ರಷ್ಯಾ ಸರಕಾರಿ ಸ್ವಾಮ್ಯದ ಸುದ್ದಿ ಸಂಸ್ಥೆ 'ಟಿಎಎಸ್‌ಎಸ್' ಪ್ರಕಟಿಸಿದೆ.

ರಷ್ಯಾ ವಿಜ್ಞಾನಿಗಳು ಕ್ಯಾನ್ಸರ್ ಕೋಶಗಳನ್ನು ಪೂರ್ಣವಾಗಿ ನಾಶಪಡಿಸುವಂತಹ 'ಎಂಆರ್ ಎನ್‌ಎ' ಲಸಿಕೆ ಅಭಿವೃದ್ಧಿಪಡಿಸಿದ್ದಾರೆ. ಈ ಲಸಿಕೆಯು ರೋಗಿಯ ದೇಹದಲ್ಲಿ ಪ್ರತಿರಕ್ಷಣಾ ಪ್ರಕ್ರಿಯೆ ನಡೆಯುವುದಕ್ಕೆ ಅತ್ಯಗತ್ಯವಾದ ಮೆಸೆಂಜರ್ ಆರ್‌ಎನ್‌ಎ(ಎಂಆರ್‌ಎನ್‌ಎ) ಎಂಬ ಅಣುವಿನ ನಕಲನ್ನು ಬಳಸುತ್ತದೆ ಎಂದು ಲಸಿಕೆಗೆ ಸಂಬಂಧಿಸಿದ ವರದಿಯಲ್ಲಿ ವಿವರಿಸಲಾಗಿದೆ.

→ 8

### ಕ್ಲಿನಿಕಲ್ ಟ್ರಯಲ್ ಯಶಸ್ವಿ

ಲಸಿಕೆಯ ಕ್ಲಿನಿಕಲ್ ಟ್ರಯಲ್ ಬಗ್ಗೆ ಗಮಾಲೆಯ 'ನ್ಯಾಷನಲ್ ರಿಸರ್ಚ್ ಸೆಂಟರ್ ಫಾರ್ ಎಪಿಡೆಮಿಯಾಲಜಿ ಮತ್ತು ಮೈಕ್ರೋಬಯಾಲಜಿ' ಸಂಸ್ಥೆ ನಿರ್ದೇಶಕ ಅಲೆಕ್ಸಾಂಡರ್ ಗಿಂಟ್ಸ್‌ಬರ್ಗ್ ವಿವರಿಸಿದ್ದಾರೆ. 'ಲಸಿಕೆಯು ಕ್ಯಾನ್ಸರ್ ಗಡ್ಡೆಯ(ಟ್ಯೂಮರ್) ಬೆಳವಣಿಗೆ ಮತ್ತು ಸಂಭಾವ್ಯ ಮೆಟಾಸ್ಟೇಸ್‌ಗಳನ್ನು ಸಮರ್ಥವಾಗಿ ನಿಗ್ರಹಿಸುತ್ತದೆ. ಈ ಅಂಶವನ್ನು ಕ್ಲಿನಿಕಲ್ ಟ್ರಯಲ್‌ಗಳಲ್ಲಿ ಕಂಡುಕೊಳ್ಳಲಾಗಿದೆ ಎಂದಿದ್ದಾರೆ.

### ಲಸಿಕೆ ಉಚಿತ ಹಂಚಿಕೆ

**ಮಾಸ್ಕೊ:** ಕ್ಯಾನ್ಸರ್ ಚಿಕಿತ್ಸಕ ಲಸಿಕೆಯನ್ನು 2025 ವರ್ಷಾರಂಭದಲ್ಲಿ ಹೊರಬಿಡಲಾಗುವುದು. ಜೀವರಕ್ಷಕವಾದ ಈ ಲಸಿಕೆಯನ್ನು ಸದ್ಯಕ್ಕೆ ಮಾರುಕಟ್ಟೆಗೆ ಬಿಡುಗಡೆ ಮಾಡುವುದಿಲ್ಲ. ಮಾರಕ ಕಾಯಿಲೆ ಕ್ಯಾನ್ಸರ್‌ನಿಂದ ಬಳಲುತ್ತಿರುವವರಿಗೆ ಉಚಿತವಾಗಿ ನೀಡಲಾಗುವುದು. ರೋಗಿಗಳ ಚಿಕಿತ್ಸೆಗೆ ಆದ್ಯತೆ ಮೇರೆಗೆ ಬಳಸಲಾಗುವುದು ಎಂದು ರಷ್ಯಾ ಆರೋಗ್ಯ ಸಚಿವಾಲಯ ಘೋಷಿಸಿದೆ.

ಬಂಗಾಳಕೊಲ್ಲಿಯಲ್ಲಿ ಮತ್ತೆ ಚಂಡಮಾರುತ | ಮಂಡ್ಯ ಸೇರಿ 5 ಜಿಲ್ಲೆಗಳಲ್ಲಿ ಮಳೆ ಸಂಭವ

## ಮಂಡ್ಯ ಸಾಹಿತ್ಯ ತೇರಿಗೆ ಚಳಿ, ಮಳೆ ಭೀತಿ

**ಬೆಂಗಳೂರು:** ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದ ಹಿನ್ನೆಲೆ ಡಿ.20ರವರೆಗೆ ಹಲವು ಭಾಗಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮಾಹಿತಿ ನೀಡಿದ್ದು, ಮಂಡ್ಯದಲ್ಲಿ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನದ ಮೇಲೂ ಮೋಡ ಮುಸುಕುವಂತಾಗಿದೆ.

ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತವುಂಟಾಗಿದ್ದು, ಡಿ.18ರಂದು ತಮಿಳುನಾಡು, ಕರಾವಳಿ ಆಂಧ್ರಪ್ರದೇಶ, ಕೇರಳ ಹಾಗೂ ಕರ್ನಾಟಕದಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದ್ದು, ವಾರಪೂರ್ತಿ ಇದೇ ವಾತಾವರಣ ಮುಂದುವರಿಯಲಿದೆ ಎಂದು ಹೇಳಿದೆ.

ಮುಂದಿನ ಕೆಲವು ದಿನ ರಾಜ್ಯದ ಹಲವು ಭಾಗಗಳಲ್ಲಿ ಭಾರೀ ಮಳೆಯಾಗಲಿದ್ದು, ಡಿ.20ರವರೆಗೆ ಇದೇ ರೀತಿಯ ವಾತಾವರಣವಿರಲಿದ್ದು, ಭಾರೀ ಚಳಿಯ ಜತೆಗೆ ಬೆಂಗಳೂರು ಗ್ರಾ, ನಗರ ಚಾಮರಾಜನಗರ, ಹಾಸನ, ಕೊಡಗು, ಕೋಲಾರ ರಾಮನಗರ, ಮಂಡ್ಯದಲ್ಲಿ ಮಳೆಯಾಗಲಿದೆ. ಕರ್ನಾಟಕದ ಹಲವು ಭಾಗಗಳಲ್ಲಿ ಶೀತಗಾಳಿ ಬೀಸಲಿದ್ದು, ಡಿ.20ರಿಂದ ಕೆಲ ಜಿಲ್ಲೆಗಳಲ್ಲಿ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

→ 8

ನೈಋತ್ಯ ಬಂಗಾಳ ಕೊಲ್ಲಿಯಲ್ಲಿ ಕಡಿಮೆ ಒತ್ತಡದ ಪ್ರದೇಶ ನಿರ್ಮಾಣವಾಗಿದ್ದು, ಚಂಡಮಾರುತದ ಪರಿಚಲನೆ ಸರಾಸರಿ ಸಮುದ್ರ ಮಟ್ಟದಿಂದ 5.8 ಕಿಮೀ ಎತ್ತರದಲ್ಲಿದೆ. ಮುಂದಿನ 2 ದಿನಗಳಲ್ಲಿ ಪಶ್ಚಿಮ-ವಾಯುವ್ಯವಾಗಿ ಚಲಿಸಿ ತಮಿಳುನಾಡು ಕರಾವಳಿಯ ಕಡೆಗೆ ಚಲಿಸುವ ಸಾಧ್ಯತೆ ಇದೆ. ಈ ಹಿನ್ನಲೆ ಮುಂದಿನ 24 ಗಂಟೆಗಳ ರಾಜ್ಯದ ಒಳನಾಡಿನಲ್ಲಿ ಶುಷ್ಕ ಹವಾಮಾನ ಇರಲಿದೆ.
**-ಸಿ.ಎಸ್ ಪಾಟೀಲ್** ಪ್ರಾದೇಶಿಕ ನಿರ್ದೇಶಕ, ಬೆಂಗಳೂರು ಹವಾಮಾನ ಕೇಂದ್ರ

## ಸಮಾಚಾರ ಸಣ್ಣದಲ್ಲ

### ಹ್ಯುಂಡೈ ಫೌಂಡೇಶನ್: ಅನುದಾನ ಘೋಷಣೆ

**ಬೆಂಗಳೂರು:** ಹ್ಯುಂಡೈ ಮೋಟಾರ್ ಇಂಡಿಯಾ ಲಿಮಿಟೆಡ್‌ನ ಸಿಎಸ್‌ಆರ್ ಅಂಗಸಂಸ್ಥೆಯಾಗಿರುವ ಹ್ಯುಂಡೈ ಮೋಟಾರ್ ಇಂಡಿಯಾ ಫೌಂಡೇಶನ್ 2025ನೇ ಆವೃತ್ತಿಯ 'ಆರ್ಟ್ ಫಾರ್ ಹೋಪ್' ಕಾರ್ಯಕ್ರಮದ ಭಾಗವಾಗಿ 50 ಮಂದಿ ಕಲಾವಿದರು ಮತ್ತು ಕಲಾ ಸಮೂಹಗಳಿಗೆ ಅನುದಾನ ಒದಗಿಸುತ್ತಿರುವುದಾಗಿ ಘೋಷಿಸಿದೆ. ಕಲಾವಿದರು ತಲಾ 1 ಲಕ್ಷ ರು. ಅನುದಾನ ಪಡೆಯಲಿದ್ದಾರೆ ಮತ್ತು ಕಲಾ ಸಮೂಹಗಳು ತಲಾ 2 ಲಕ್ಷ ರು. ಅನುದಾನ ಪಡೆಯಲಿದ್ದಾರೆ. ಒಟ್ಟಾರೆ ಸಂಸ್ಥೆ 60 ಲಕ್ಷ ರು. ಅನುದಾನ ಒದಗಿಸುತ್ತಿದೆ. 2025ನೇ ಆವೃತ್ತಿಯ 'ಆರ್ಟ್ ಫಾರ್ ಹೋಪ್' ಕಾರ್ಯಕ್ರಮಕ್ಕೆ ಕಲಾವಿದರು ಮತ್ತು ಕಲಾ ಸಮೂಹಗಳಿಂದ 521 ಅರ್ಜಿಗಳು ಬಂದಿದ್ದವು. ಅವುಗಳಲ್ಲಿ ಕಠಿಣ ಆಯ್ಕೆ ಪ್ರಕ್ರಿಯೆಯ ಮೂಲಕ 50 ಅತ್ಯುತ್ತಮ ಕಲಾವಿದರು ಮತ್ತು ಕಲಾ ಸಮೂಹಗಳನ್ನು ಆರಿಸಲಾಗಿದ್ದು ಅವರು ತಮ್ಮ ಯೋಜನೆ ಸಾಕಾರಕ್ಕಾಗಿ ಅನುದಾನ ಪಡೆಯಲಿದ್ದಾರೆ.

### ಸ್ಥಳೀಯರಿಗೆ ಉದ್ಯೋಗ: ಘೋಷಿಸಲು ಒತ್ತಾಯ

**ಬೆಂಗಳೂರು:** 87ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಂಡ್ಯದಲ್ಲಿ ಉದ್ಘಾಟನೆ ಮಾಡಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಖಾಸಗಿ ಕಂಪನಿಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡುವ ಕಾನೂನನ್ನು ಜಾರಿಗೆ ತರುವ ಘೋಷಣೆ ಮಾಡಲಿ ಎಂದು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ.ಚನ್ನೇಗೌಡ ತಿಳಿಸಿದ್ದಾರೆ. ಖಾಸಗಿ ಕಂಪನಿಗಳ ಮಾಲೀಕರ ಒತ್ತಡಕ್ಕೆ ಮಣಿದು ಸ್ಥಳೀಯರಿಗೆ ಉದ್ಯೋಗ ನೀಡುವ ಕಾನೂನನ್ನು ರೂಪಿಸುವುದಾಗಿ ಘೋಷಿಸಿ, ಹಿಂದೆ ಸರಿದಿರುವ ಮುಖ್ಯಮಂತ್ರಿ ಈಗಲಾದರೂ ನಾಡಿನ ಮಣ್ಣಿನ ಮಕ್ಕಳಿಗೆ ಉದ್ಯೋಗ ನೀಡುವ ಘೋಷಣೆ ಮಾಡಲಿ, ಆಗ ಮಾತ್ರ ಇವರ ನಿಜವಾದ ಕನ್ನಡಪ್ರೇಮ ನಾಡಿನ ಜನತೆಗೆ ತಿಳಿಯುತ್ತದೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕೇವಲ ಹಣ ನೀಡಿದರೆ ಸಾಲದು, ಕನ್ನಡದ ಮಕ್ಕಳು ಉದ್ಯೋಗಕ್ಕಾಗಿ ಅಲೆಯುತ್ತಿರುವ ಈ ಕಾಲಘಟ್ಟದಲ್ಲಿ ಅವರಿಗೆ ಅನ್ನ ನೀಡುವ ಕಾನೂನು ರೂಪಿಸಲಿ ಎಂದೂ ಆಗ್ರಹಿಸಿದ್ದಾರೆ.

### ಕೆಐಎಗೆ ಪ್ರಶಸ್ತಿ

**ಬೆಂಗಳೂರು:** ಟ್ರಾವೆಲ್ ಹಾಗೂ ಲೀಶರ್ ಇಂಡಿಯಾ ನೀಡುವ ಅತ್ಯುತ್ತಮ ದೇಶೀಯ ಏರ್‌ಪೋರ್ಟ್ ಲಾಂಜ್ ಪ್ರಶಸ್ತಿಯನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟಿ.2ನ ದೇಶೀಯ ನಿರ್ಗಮನ ಪ್ರದೇಶದ 080ಲಾಂಜ್ ಮುಡಿಗೇರಿಸಿಕೊಂಡಿದೆ. ಕಾಂಡೆ

ನಾಸ್ಟ್ ರೀಡರ್ಸ್ ಚಾಯ್ಸ್ ಅವಾರ್ಡ್ಸ್ -2024 ನಲ್ಲಿ ಟರ್ಮಿನಲ್ 2ನಲ್ಲಿನ ಅಂತಾರಾಷ್ಟ್ರೀಯ ನಿರ್ಗಮನ ಪ್ರದೇಶದಲ್ಲಿರುವ 080 ಲಾಂಜ್‌ಗೆ ಮೆಚ್ಚಿನ ವಿಮಾನ ನಿಲ್ದಾಣ ಲಾಂಜ್ ಎಂಬ ಶೀರ್ಷಿಕೆಯ ಮನ್ನಣೆ ನೀಡಲಾಗಿದ್ದು, ಈ ಮೂಲಕ ಪ್ರಯಾಣಿಕರಿಗೆ ವಿಶ್ವದರ್ಜೆಯ ಪ್ರಯಾಣದ ಅನುಭವ, ಸೌಕರ್ಯ, ಸೌಲಭ್ಯ ಮತ್ತು ಅಸಾಧಾರಣ ಸೇವೆ ನೀಡುತ್ತಿರುವ ಕೆಐಎಯ ಬದ್ಧತೆ ಎತ್ತಿಹಿಡಿಯುತ್ತದೆ. ಬೆಂಗಳೂರು ಇಂಟರ್‌ನ್ಯಾಶನಲ್ ಏರ್‌ಪೋರ್ಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಅಧಿಕಾರಿ ಹರಿ ಮರಾರ್ ಮಾತನಾಡಿ, ಕಾಂಡೆ ನಾಸ್ಟ್ ಟ್ರಾವೆಲರ್ ಮತ್ತು ಟ್ರಾವೆಲ್ + ಲೀಶರ್ ವತಿಯಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2 ರ ಲಾಂಜ್‌ಗೆ ದೊರೆತಿರುವ ಈ ಮನ್ನಣೆ ಪ್ರಶಂಸನೀಯ. ಪ್ರಯಾಣಿಕರಿಗೆ ಮೊದಲ ಆದ್ಯತೆಯಲ್ಲಿ ಉತ್ತಮ ಸೌಕರ್ಯ ಹಾಗೂ ವ್ಯವಸ್ಥೆಯೊಂದಿಗೆ ನಿರ್ಮಾಣವಾಗಿರುವ ಲಾಂಜ್‌ನ್ನು ಇನ್ನಷ್ಟು ಪ್ರಯಾಣಿಕರ ಸ್ನೇಹಿಯಂತೆ ಕಾರ್ಯನಿರ್ವಹಿಸಲು ಎಲ್ಲಾ ವ್ಯವಸ್ಥೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಈ ಅನುಭವ ಇನ್ನಷ್ಟು ಉನ್ನತೀಕರಿಸಲು ಹಾಗೂ ಆತಿಥ್ಯದ ಹೊಸ ಮಾನದಂಡ ಹೆಚ್ಚಿಸಲು ನಮಗೆ ಪ್ರೇರಣೆ ನೀಡಿದಂತಾಗಿದೆ ಎಂದರು.

---

ಮತ್ತೆ ತನಿಖೆಯ ಬಗ್ಗೆ ಹೈಕೋರ್ಟ್ ನಿರ್ದೇಶನ | ಈ ಹಿಂದೆ ನೀಡಿದ ಆದೇಶ ಬದಲಿಲ್ಲ

# ಜೀವಾ ಆತ್ಮಹತ್ಯೆ: ಎಸ್‌ಐಟಿ ತನಿಖೆಗೆ ಆದೇಶ




**ಬೆಂಗಳೂರು:** ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ರೂಪಾಯಿಗಳ ಅವ್ಯವಹಾರ ಪ್ರಕರಣದ ಆರೋಪಿಯಾಗಿದ್ದ ವಕೀಲೆ ಜೀವಾ ಆತ್ಮಹತ್ಯೆ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಸಿಬಿಐ ಅಧಿಕಾರಿಯ ಜತೆ ಇಬ್ಬರು ಪೊಲೀಸ್ ವರಿಷ್ಠಾಧಿಕಾರಿ ಶ್ರೇಣಿಯ ಪೊಲೀಸ್ ಅಧಿಕಾರಿಗಳ ಎಸ್‌ಐಟಿ ನೇಮಕ ಮಾಡಿದ್ದ ತನ್ನ ಈ ಹಿಂದಿನ ಆದೇಶವನ್ನು ಹೈಕೋರ್ಟ್ ಅಧಿಕೃತಗೊಳಿಸಿದ್ದು, ಕೂಡಲೇ ತನಿಖೆ ಆರಂಭಿಸುವಂತೆ ಎಸ್‌ಐಟಿಗೆ ನಿರ್ದೇಶಿಸಿದೆ.

ರಾಜ್ಯ ಪ್ರಾಸಿಕ್ಯೂಷನ್ ತೆಗೆದಿದ್ದ ತಕರಾರನ್ನು ನ್ಯಾಯಮೂರ್ತಿ ಎಂ .ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ಮಂಗಳವಾರ ಪರಿಶೀಲಿಸಿತಲ್ಲದೆ, ಹೈಕೋರ್ಟ್ ನೀಡಿರುವ ಆದೇಶ ಸಿಬಿಐ ಸಂಪೂರ್ಣ ಅನುಪಾಲನೆ ಮಾಡುತ್ತೇವೆ ಎಂದು ತಿಳಿಸಿರುವ ಕಾರಣ ಈ ಹಿಂದೆ ನೀಡಲಾದ ಆದೇಶದಲ್ಲಿ ಯಾವುದೇ ಮಾರ್ಪಾಡು ಮಾಡುವುದಿಲ್ಲ ಎಂದು ಆದೇಶಿಸಿತು.

ವಿಚಾರಣೆ ವೇಳೆ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ಅವರು ಪೀಠ ನೀಡಿರುವ ಆದೇಶ ಪಾಲಿಸಲು ಸಿಬಿಐ ಬದ್ಧವಾಗಿದೆ. ಆದೇಶದಲ್ಲಿ ಯಾವುದೇ ಮಾರ್ಪಾಡು ಮಾಡುವಂತೆ ನಾವು ಕೇಳುತ್ತಿಲ್ಲ. ತಮ್ಮ ಆದೇಶದ ಪ್ರಕಾರ ತನಿಖೆ ನಡೆಸುತ್ತೇವೆ. ಯಾರನ್ನೂ ಬದಲಾಯಿಸುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಪ್ರತಿಯಾಗಿ ರಾಜ್ಯ ಹೆಚ್ಚುವರಿ ಸರಕಾರಿ ಅಭಿಯೋಜಕರಾದ ಬಿ.ಎನ್. ಜಗದೀಶ್ ಅವರು ಸಿಬಿಐ ವಿವರಣೆ ಮತ್ತು ಪೀಠದ ಆದೇಶಕ್ಕೆ ಸಹಮತ ವ್ಯಕ್ತಪಡಿಸಿದರು.

ಈ ಹಿಂದೆ ಇದೇ ಪೀಠ ಈ ಕುರಿತಾದ ಅರ್ಜಿ ವಿಚಾರಣೆ ನಡೆಸಿ ಜೀವಾ ಆತ್ಮಹತ್ಯೆಯ ತನಿಖೆಗೆ ಎಸ್ ಐಟಿ ರಚನೆ ಮಾಡಿ ಆದೇಶಿಸಿತ್ತು. ಎಸ್‌ಐಟಿಯಲ್ಲಿ ಸಿಬಿಐನ ಪೊಲೀಸ್ ವರಿಷ್ಠಾಧಿಕಾರಿ ವಿನಾಯಕ ವರ್ಮಾ, ಕರ್ನಾಟಕ ಗೃಹ ರಕ್ಷಕ ದಳದ ಪೊಲೀಸ್ ವರಿಷ್ಠಾಧಿಕಾರಿ ಹಕಾಯ ಅಕ್ಷಯ್ ಮಚೀಂದ್ರ ಮತ್ತು ಆಂತರಿಕ ಭದ್ರತಾ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿ ನಿಶಾ ಜೇಮ್ಸ್ ಸದಸ್ಯರಾಗಿ ಇರುತ್ತಾರೆ ಎಂದು ಆದೇಶಿಸಿತ್ತು.

#### ನ್ಯಾಯಮೂರ್ತಿಯ ಪ್ರತಿಕ್ರಿಯೆ

**ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಪ್ರತಿಕ್ರಿಯೆ ವ್ಯಕ್ತಪಡಿಸಿ, ಯಾವ ಅಧಿಕಾರಿಯೂ ಮತ್ತೊಬ್ಬರ ಅಧೀನದಲ್ಲಿ ಕೆಲಸ ಮಾಡುವುದಿಲ್ಲ. ಇದೇನೂ ತಿರುಪತಿ ಲಡ್ಡು ವಿವಾದದಷ್ಟು ದೊಡ್ಡ ಪ್ರಕರಣವಲ್ಲ. ಆ ಪ್ರಕರಣದಲ್ಲಿ ಐ.ಜಿ.ಯನ್ನು ಮುಖ್ಯಸ್ಥರನ್ನಾಗಿ ಮಾಡಲಾಗಿತ್ತು ಎಂದರೆ ಇದರಲ್ಲಿ ಅಂತಹ ಅವಶ್ಯಕತೆ ಕಾಣುತ್ತಿಲ್ಲ. ಮೂವರು ಪೊಲೀಸ್ ವರಿಷ್ಠಾಧಿಕಾರಿಗಳೂ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಾರೆ. ಹೀಗಾಗಿ ತಾರತಮ್ಯದ ಭಾವನೆ ಉದ್ಭವವಾಗವುದಿಲ್ಲ ಎಂದು ಸ್ಪಷ್ಟಪಡಿಸಿತು. ಅಂತೆಯೇ ತನಿಖೆ ಕೂಡಲೇ ಪ್ರಾರಂಭಿಸಬೇಕು ಎಂದು ಎಸ್‌ಐಟಿಗೆ ತಾಕೀತು ಮಾಡಿತು.**

---

ಪೋಕ್ಸೋ ಪ್ರಕರಣ ರದ್ದು ಕೋರಿರುವ ಅರ್ಜಿ
ಬಾಲಕಿಯ ಹೇಳಿಕೆ ಆಧರಿಸಿ ಆರೋಪಪಟ್ಟಿ

# ಯಡಿಯೂರಪ್ಪ ಅರ್ಜಿ ವಿಚಾರಣೆ ಇಂದು

**ಬೆಂಗಳೂರು:** ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪ್ರಕರಣ ರದ್ದು ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ಹೈಕೋರ್ಟ್ ಗುರುವಾರಕ್ಕೆ ಮುಂದೂಡಿತು.

ಯಡಿಯೂರಪ್ಪ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ವಿಚಾರಣೆಯನ್ನು ಮುಂದೂಡಿತು. ಯಡಿ ಯೂರಪ್ಪ ಪರ ವಕೀಲರು, ಅರ್ಜಿದಾರರಿಗೆ 82 ವರ್ಷ ವಯಸ್ಸಾಗಿದೆ. ಅವರ ವಿರುದ್ಧ ದೂರು ದಾಖಲಿಸಿರುವ ಸಂತ್ರಸ್ತ ಬಾಲಕಿಯ ದೂರುದಾರ ತಾಯಿಯ ನಡವಳಿಕೆ ಗಮನಿಸಬೇಕು. ಅಧಿಕಾರಿಗಳು, ಸಂಬಂಧಿಗಳು, ರಾಜಕಾರಣಿಗಳ ಮೇಲೆ ಸುಮಾರು 56 ದೂರು ನೀಡಿದ್ದಾರೆ. ಘಟನೆ ನಡೆದ ಒಂದೂವರೆ ತಿಂಗಳ ನಂತರ ಮಾರ್ಚ್ 14ರಂದು ಪ್ರಕರಣ ದಾಖಲಿಸಲಾಗಿದೆ. ಬಾಲಕಿಯ ಹೇಳಿಕೆ ಆಧರಿಸಿ ಆರೋಪಪಟ್ಟಿ ದಾಖಲಿಸಲಾಗಿದೆ. ಅರ್ಜಿದಾರರು ಅನುಚಿತವಾಗಿ ಸ್ಪರ್ಶಿಸಿದ್ದಾರೆಂದು ಬಾಲಕಿ ಹೇಳಿಕೆ ನೀಡಿದ್ದಾರೆ. ಸ್ಥಳದಲ್ಲಿ ಹಲವು ಜನರಿದ್ದು ಅವರ ಸಮ್ಮುಖದಲ್ಲಿ ಈ ಘಟನೆ ನಡೆಯಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಆರೋಪಪಟ್ಟಿಯಲ್ಲಿನ ಸಾಕ್ಷಿಗಳು ನೀಡಿರುವ ಹೇಳಿಕೆಗಳಂತೆ, ಅರ್ಜಿದಾರರಿಗೆ ಕೈ ನಡುಗುತ್ತದೆ. ಲೈಟ್ ಸ್ವಿಚ್ ಹಾಕಲೂ ಅವರು ಇತರರಿಗೆ ಹೇಳುತ್ತಾರೆ. ದೂರುದಾರ ಮಹಿಳೆ ತನ್ನ ಮಗಳೊಂದಿಗೆ ರೂಮಿಗೆ ಹೋಗಿರಲಿಲ್ಲವೆಂದು ಸಾಕ್ಷಿಯ ಹೇಳಿಕೆ ಇದೆ. ಅಂಗರಕ್ಷಕರು ಅರ್ಜಿದಾರರ ಸುತ್ತಮುತ್ತಲೇ ಇರುತ್ತಾರೆ ಎಂದು ಪೀಠಕ್ಕೆ ವಿವರಿಸಿದರು. ಪ್ರಾಸಿಕ್ಯೂಷನ್ ಪರ ಎಸ್‌ಪಿಪಿ ರವಿವರ್ಮ ಕುಮಾರ್, ನಡೆದ ಘಟನೆಯನ್ನು ಸಂಪೂರ್ಣವಾಗಿ ಸಂತ್ರಸ್ತೆ ಹೇಳಿಕೆಯಲ್ಲಿ ವಿವರಿಸಿದ್ದಾರೆ. ಬಾಲಕಿ ಹೊರಗಡೆಗೆ ಅಳುತ್ತಾ ಬಂದು ತಾಯಿಗೆ ವಿಷಯ ತಿಳಿಸಿದ್ದಳು ಎಂದು ವಾದ ಮಂಡಿಸಿದರು.

---

ಕಾನೂನಾತ್ಮಕವಾಗಿ ಎದುರಿಸುವೆ | ಪೊಲೀಸರ ಬಳಿ ಅತುಲ್ ಪತ್ನಿಯ ಹೇಳಿಕೆ

# ಘಟನೆಯಲ್ಲಿ ನಾನೇ ನಿಜವಾದ ಸಂತ್ರಸ್ತೆ

**ಬೆಂಗಳೂರು:** ಉತ್ತರ ಪ್ರದೇಶ ಮೂಲದ ಟೆಕ್ಕಿ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣ ಭಾರೀ ಪರ ವಿರೋಧ ಚರ್ಚೆಗೆ ಗ್ರಾಸವಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅತುಲ್ ಪತ್ನಿ ನಿಖಿತಾ ಸಿಂಘಾನಿಯಾ ಅವರನ್ನು ಬೆಂಗಳೂರಿನ ಮಾರತ್ತಹಳ್ಳಿ ಪೊಲೀಸರು ವಿಚಾರಣೆಗೊಳಪಡಿಸಿದ್ದು, ಈ ವೇಳೆ ಕೆಲವು ಸ್ಫೋಟಕ ಅಂಶಗಳನ್ನು ಬಿಚ್ಚಿಟ್ಟಿದ್ದಾರೆ. ಘಟನೆಯಲ್ಲಿ ಅತುಲ್ ಸಂತ್ರಸ್ತ ಅಲ್ಲ, ನಾನೇ ನಿಜವಾದ ಸಂತ್ರಸ್ತೆ ಎಂದು ನಿಖಿತಾ ಪೊಲೀಸರ ಮುಂದೆ ತನ್ನ ಅಳಲನ್ನು ತೋಡಿಕೊಂಡಿದ್ದಾರೆ.

ಅಡುಗೆ ಚೆನ್ನಾಗಿ ಮಾಡಿಲ್ಲ ಎಂದು ಕಿರುಕುಳ ನೀಡುತ್ತಿದ್ದ, ನಾನ್ ವೆಜ್ ಮಾಡದಿದ್ದರೂ ಮಾಡಿ ಎಂದು ಒತ್ತಾಯಿಸುತ್ತಿದ್ದರು. ಇಷ್ಟೆಲ್ಲಾ ಆದರೂ ನಾನು ಮನೆ ಬಿಟ್ಟು ಹೋಗಿರಲಿಲ್ಲ. ಮನೆ ಬಿಟ್ಟು ಹೋಗುವಂತೆ ಮಾಡಿದ್ದು ಅತುಲ್‌ನಿಂದಾಗಿಯೇ ಹೊರತು, ನಾನಾಗಿಯೇ ಹೋಗಿಲ್ಲ ಎಂದು ಪೊಲೀಸರ ಮುಂದೆ ಹೇಳಿಕೊಂಡಿದ್ದಾರೆ. ನಾನು ಮತ್ತು ಅತುಲ್ ಬೇರೆ ಬೇರೆ ಕಡೆ ವಾಸ ಮಾಡುತ್ತಿದ್ದೇವೆ. ಆತ ಮಾಡಿರುವ ಆರೋಪ ಸುಳ್ಳು, ಎಲ್ಲವನ್ನು ಕಾನೂನಾತ್ಮಕವಾಗಿ ಎದುರಿಸುತ್ತೇನೆ. 2020ರಿಂದಲೂ ನಾವು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೆ. ಆತನ ಸಾವಿಗೂ, ನನಗೂ ಯಾವುದೇ ಸಂಬಂಧ ಇಲ್ಲ. ನನ್ನನ್ನು ಯಾಕೆ ನೀವು ಬಂಧಿಸಿದ್ದೀರಿ ಎಂದು ಗೊತ್ತಿಲ್ಲ, ಕಾನೂನಾತ್ಮಕವಾಗಿ ಎಲ್ಲವನ್ನೂ ನೋಡಿಕೊಳ್ಳುತ್ತೇನೆ ಎಂದು ನಿಖಿತಾ, ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

#### ಪ್ರಕರಣದ ಹಿನ್ನೆಲೆ

**ಬೆಂಗಳೂರಿನ ಟೆಕ್ಕಿ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣ ಭಾರೀ ಸುದ್ದಿಯಾಗುತ್ತಿದ್ದಂತೆಯೇ ಪತ್ನಿ ಹಾಗೂ ಆಕೆಯ ಕುಟುಂಬಸ್ಥರು ಮನೆ ಬಿಟ್ಟು ನಾಪತ್ತೆಯಾಗಿದ್ದರು. ಆದರೂ ಮಾರತಹಳ್ಳಿ ಪೊಲೀಸರು ಉತ್ತರ ಪ್ರದೇಶಕ್ಕೆ ತೆರಳಿ, ಆರೋಪಿಗಳ ಮೊಬೈಲ್ ಫೋನ್ ಕಾಲ್‌ಗಳು ಮತ್ತು ಲೋಕೇಶನನ್‌ಗಳನ್ನು ಬಳಸಿಕೊಂಡು ಅವರನ್ನು ಪತ್ತೆ ಮಾಡಿ ಹರಿಯಾಣದ ಗುರುಗ್ರಾಮ್ ಮತ್ತು ಪ್ರಯಾಗ್ರಾಜ್‌ನಲ್ಲಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದರು. ಸದ್ಯ ತನಿಖೆ ಚುರುಕುಗೊಂಡಿದ್ದು, ಪೊಲೀಸರು ಎಲ್ಲಾ ಆಯಾಮಾಗಳಲ್ಲಿ ಆರೋಪಿಗಳ ವಿಚಾರಣೆ ನಡೆಸುತ್ತಿದ್ದಾರೆ.**

---

ಮತ್ತೆ ಸಿಂಧೂರಿ-ರೂಪಾ ಕಾನೂನು ಜಟಾಪಟಿ | ಹೈಕೋರ್ಟ್‌ನಿಂದ ನೋಟಿಸ್

# ರೋಹಿಣಿ ವಿರುದ್ಧ ಮಾನನಷ್ಟ ದೂರು

**ಬೆಂಗಳೂರು:** ಕರ್ನಾಟಕದ ಹಿರಿಯ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರ ವಿರುದ್ಧ ಐಪಿಎಸ್ ಅಧಿಕಾರಿ ಡಿ. ರೂಪಾ ಮೌದ್ಗಿಲ್ ಅವರು ಬೆಂಗಳೂರಿನ 7ನೇ ಎಸಿಎಂಎಂ

ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕೋರ್ಟ್‌ನಿಂದ ರೋಹಿಣಿ ಸಿಂಧೂರಿ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ.

ಐಪಿಎಸ್ ಅಧಿಕಾರಿ ಡಿ. ರೂಪಾ ಮೌದ್ಗಿಲ್ ಅವರು ಇದೀಗ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ಬೆಂಗಳೂರಿನ 7 ನೇ ಎಸಿಎಂಎಂ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅರ್ಜಿ ಪರಿಶೀಲಿಸಿದ ಕೋರ್ಟ್‌ನಿಂದ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಇನ್ನು ಡಿ. ರೂಪಾ ಅವರು ಸಲ್ಲಿಕೆ ಮಾಡಿರುವ ದೂರಿನಲ್ಲಿ '2023, ಫೆಬ್ರವರಿ-19ರಂದು ರೋಹಿಣಿ ಸಿಂಧೂರಿ ನನ್ನ ವಿರುದ್ಧ ಮಾಧ್ಯಮ ಹೇಳಿಕೆ ನೀಡಿದ್ದರು. ನಂತರ ಅದನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. ಈ ಹೇಳಿಕೆಯಲ್ಲಿ ತಮ್ಮ ವಿರುದ್ಧ ಅವಹೇಳನಕಾರಿ ಆರೋಪ ಇದೆ. ಈ ಹೇಳಿಕೆಯನ್ನು 1.8 ಲಕ್ಷ ಜನರು ವೀಕ್ಷಣೆ ಮಾಡಿದ್ದಾರೆ. ರೋಹಿಣಿ ಸಿಂಧೂರಿ ಅವರ ಅವಹೇಳನಕಾರಿ ಹೇಳಿಕೆ ನಂತರ ತಮ್ಮ ವರ್ಗಾವಣೆ ಮಾಡಲಾಗಿತ್ತು. ಈ ವೇಳೆ ಸುಮಾರು 6 ತಿಂಗಳವರೆಗೆ ಸಂಬಳ ನೀಡದೇ ಹುದ್ದೆ ಇಲ್ಲದೇ ವರ್ಗಾಯಿಸಿದ್ದರು. ಅವರ ಹೇಳಿಕೆಯಿಂದ, ನನ್ನ ತಂಗಿ, ನನ್ನ ಪತಿ ಮನೀಶ್ ಮೌದ್ಗಿಲ್ ಹಾಗೂ ನನ್ನ ಮಕ್ಕಳು ಸೇರಿದಂತೆ ಬಹುತೇಕ ಕುಟುಂಬಸ್ಥರು ಮಾನಸಿಕ ಯಾತನೆ ಅನುಭವಿಸಿದ್ದೇವೆ.

ಹೀಗಾಗಿ, ಕ್ರಿಮಿನಲ್ ಮಾನನಷ್ಟ ಪ್ರಕರಣ ದಾಖಲಿಸ ಬೇಕು' ಅರ್ಜಿ ಸಲ್ಲಿಸಿದ್ದರು. ಡಿ.ರೂಪಾ ಅವರ ಅರ್ಜಿ ಸಂಬಂಧ ಬೆಂಗಳೂರಿನ 7ನೇ ಎಸಿಎಂಎಂ ಕೋರ್ಟ್‌ನಿಂದ ರೋಹಿಣಿ ಸಿಂಧೂರಿ ಅವರಿಗೆ ನೋಟಿಸ್ ಜಾರಿಗೊಳಿಸಲಾಗಿದೆ.

#### ಪ್ರಕರಣದ ಹಿನ್ನೆಲೆ

**ರಾಜ್ಯದಲ್ಲಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಹಾಗೂ ಐಪಿಎಸ್ ಅಧಿಕಾರಿ ಡಿ.ರೂಪಾ ಅವರ ನಡುವೆ ಕಳೆದ ಎರಡು ವರ್ಷಗಳ ಹಿಂದೆ ಆರಂಭವಾಗಿತ್ತು. ಬಿಜೆಪಿ ಸರಕಾರದಲ್ಲಿ ಆರಂಭವಾಗಿದ್ದ ಇವರ ಆರೋಪ, ಪ್ರತ್ಯಾರೋಪದ ಜಗಳ ಬಿಜೆಪಿ ಹೋಗಿ ಕಾಂಗ್ರೆಸ್ ಸರಕಾರ ಬಂದು ಒಂದೂವರೆ ವರ್ಷ ಆಡಳಿತ ಮಾಡಿದರೂ ಮುಕ್ತಾಯಗೊಂಡಿಲ್ಲ. ಡಿ. ರೂಪಾ ಅವರು ರೋಹಿಣಿ ಸಿಂಧೂರಿ ಅವರ ಮೇಲೆ ಕೆಲವೊಂದಿಷ್ಟು ಆರೋಪಗಳನ್ನು ಮಾಡಿ ಸಾಮಾಜಿಕ ಜಾಲತಾಣದಲ್ಲಿ ರೋಹಿಣಿ ಸಿಂಧೂರಿ ಅವರ ಖಾಸಗಿ ಫೋಟೋಗಳನ್ನು ಹಂಚಿಕೊಂಡಿದ್ದರು. ಇದರ ಬೆನ್ನಲ್ಲಿಯೇ ಕೋರ್ಟ್ ಮೊರೆ ಹೋಗಿದ್ದ ರೋಹಿಣಿ ಸಿಂಧೂರಿ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ಇದಾದ ನಂತರ ಈ ಪ್ರಕರಣ ಸುಪ್ರೀಂ ಕೋರ್ಟ್‌ವರೆಗೂ ಹೋಗಿತ್ತು. ಆದರೆ ಅಲ್ಲಿಯೂ ನ್ಯಾಯ ಬಗೆಹರಿಯದೇ ಪುನಃ ಹೈಕೋರ್ಟ್‌ನಲ್ಲಿ ಬಗೆಹರಿಸಿಕೊಳ್ಳುವಂತೆ ವಾಪಸ್ ಕಳುಹಿಸಲಾಗಿತ್ತು.**

---

### ಪ್ಯಾಸೆಂಜರ್ ರೈಲು ಸಂಚಾರ ವಿಳಂಬ

**ಬೆಂಗಳೂರು:** ಕ್ರಾಂತಿವಿರ ಸಂಗೊಳ್ಳಿ ರಾಯಣ್ಣ ನಿಲ್ದಾಣ- ಕೆಂಗೇರಿ ನಿಲ್ದಾಣಗಳ ನಡುವೆ ಅಗತ್ಯ ಸುರಕ್ಷತೆ ಮತ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುವ ಹಿನ್ನೆಲೆ ಬೆಂಗಳೂರು-ಮೈಸೂರು ಡೈಲಿ ಪ್ಯಾಸೆಂಜರ್ ರೈಲು ಸಂಚಾರ ವಿಳಂಬವಾಗ ಲಿದೆ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಎಸ್‌ಎಂವಿಟಿ ಬೆಂಗಳೂರು-ಮೈಸೂರು ಡೈಲಿ ಪ್ಯಾಸೆಂಜರ್ ವಿಶೇಷ ರೈಲು (ರೈಲು ಸಂಖ್ಯೆ 06270) ಡಿಸೆಂಬರ್ 22, 24, 27, 29, 31, ಜನವರಿ 3 ಮತ್ತು 5ರಂದು ನಿಗದಿತ ಸಮಯಕ್ಕಿಂತ 90 ನಿಮಿಷ ತಡವಾಗಿ ಎಸ್‌ಎಂವಿಟಿ ಬೆಂಗಳೂರು ನಿಲ್ದಾಣದಿಂದ ಹೊರಡಲಿದೆ.

---




ಕರ್ನಾಟಕ ಮಾಧ್ಯಮ ಮಿತ್ರ ಬಳಗದಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾದ ಕನ್ನಡ ರತ್ನ ಸಮಾರಂಭದಲ್ಲಿ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗಡೆರವರಿಂದ ಸರ್ವಧರ್ಮದ ಗುರುಗಳಿಗೆ ಕನ್ನಡ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಡಾಕ್ಟರ್ ಆಂಜನಪ್ಪ, ಭಾರತ ಸಾರಥಿ ಕನ್ನಡ ದಿನ ಪತ್ರಿಕೆ ಸಂಪಾದಕ ಗಂಡಸಿ ಸದಾನಂದ ಸ್ವಾಮಿ, ಕನ್ನಡಪರ ಹೋರಾಟಗಾರ ಶಿವಕುಮಾರ್ ನಾಯಕ್, ಹಿರಿಯ ಕಲಾವಿದೆ ಸುಮತಿ, ಅಂಜನ್ ಕುಮಾರ್, ಚಂದ್ರು, ಮಲ್ಲಿಕಾರ್ಜುನ್ ಮತ್ತಿತರರು ಇದ್ದರು.

---

# ಓಟಿಎಸ್ ರದ್ದುಗೊಳಿಸಲು ಆಮ್ ಆದ್ಮಿ ಪಕ್ಷ ಆಗ್ರಹ

**ಬೆಂಗಳೂರು:** ರಾಜ್ಯದಲ್ಲಿ ಹಲವು ವರ್ಷಗಳಿಂದ ಅಕ್ರಮ ಗಣಿಗಾರಿಕೆಗಳನ್ನು ಮಾಡಿ ಸಾವಿರಾರು ಕೋಟಿ ರು. ಗಳನ್ನು ಲೂಟಿ ಮಾಡಿರುವ ಗಣಿ ಮಾಲೀಕರುಗಳಿಗೆ ಬೆಂಬಲ ನೀಡುವ ರೀತಿಯಲ್ಲಿ ಓಟಿಎಸ್ ಪದ್ಧತಿ ಜಾರಿಗೆ ತಂದಿದ್ದು, ಸರಕಾರ ಲೂಟಿಕೋರರ ಪರ ನಿಂತಿರುವುದು ಸ್ಪಷ್ಟವಾ ಗುತ್ತದೆ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ.ಸದಂ ಆರೋಪಿಸಿದರು.

ಬುಧವಾರ ನಗರದ ಪ್ರೆಸ್ ಕ್ಲಬ್‌ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಎಸ್‌ಟಿ ಕಟ್ಟದೆ ಸಾವಿರಾರು ಕೋಟಿ ವಂಚಿಸಿರುವ ವಂಚಕರಿಗೂ ಸಹ ಓಟಿಎಸ್ ನೀತಿ ಜಾರಿಗೆ ತರುತ್ತಿರುವುದು ಮತ್ತಷ್ಟು ಆತಂಕದ ಸಂಗತಿ. ಈಗಾಗಲೇ ಅಕ್ರಮ ಗಣಿಗಾರಿಕೆಗಳ ವಿರುದ್ಧ ಹೋರಾಟ ಮಾಡುತ್ತಿರುವ ಎಸ್.ಟಿ.ಹಿರೇಮಠ್‌ರಂತಹ ಹೋರಾಟಗಾರರಿಗೆ ಮಾಡುತ್ತಿರುವ ಅಪಮಾನವಾಗಿದೆ. ಮುಂದಿನ ಪೀಳಿಗೆಗೆ ರಾಜ್ಯದ ನೈಸರ್ಗಿಕ ಸಂಪತ್ತನ್ನು ಉಳಿಸದೆ ಎಲ್ಲವನ್ನು ಲೂಟಿ ಮಾಡಿ ಸರಕಾರ ಉಳಿಸಿಕೊಳ್ಳುವ ಇರಾದೆ ಕಾಂಗ್ರೆಸ್ ಸರಕಾರಕ್ಕೆ ಇದ್ದಂತಿದೆ ಎಂದೂ ಅಸಮಾಧಾನ ವ್ಯಕ್ತಪಡಿಸಿದರು.

ತುಮಕೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮಾಂಜನಪ್ಪ ದಾಖಲೆಗಳನ್ನು ಬಿಡುಗಡೆ ಮಾಡಿ ಮಾತನಾಡಿ, ಪಾವಗಡ ಕ್ಷೇತ್ರದ ಶಾಸಕ ಎಚ್.ವಿ.ವೆಂಕಟೇಶ್ ಅವರ ಪತ್ನಿಯ ಒಡೆತನದ ವೆಂಕಟೇಶ್ವರ ಸ್ಟೋನ್ ಕ್ರಷರ್ ಈಗಾಗಲೇ ಸರಕಾರಕ್ಕೆ 10 ಕೋಟಿಗಳಿಗೂ ಹೆಚ್ಚು ರಾಜಧನ ಹಾಗೂ ದಂಡದ ಮೊತ್ತ ಬಾಕಿ ಉಳಿಸಿಕೊಂಡಿದೆ.

ಇವರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳದೆ ಓಟಿಎಸ್ ನೀತಿಯ ಮೂಲಕ ಅವರ ಬೆಂಬಲಕ್ಕೆ ನಿಂತಿರುವುದು ಸ್ಪಷ್ಟವಾಗಿದೆ. ಈ ಕೂಡಲೇ ಈ ರೀತಿಯ ಅನಿಷ್ಟ ನೀತಿ ರದ್ದುಗೊಳಿಸಬೇಕು ಹಾಗೂ ಅಕ್ರಮ ಗಣಿ ಮಾಲೀಕರುಗಳ ಆಸ್ತಿಗಳನ್ನು ಜಪ್ತಿ ಮಾಡಿಕೊಂಡು ಹಣಕಾಸಿನ ಕ್ರೋಡೀಕರಣ ಮಾಡಿಕೊಳ್ಳಬೇಕು ಎಂದು ಕೇಳಿಕೊಂಡರು.

ಇದೇ ರೀತಿ ರಾಜ್ಯದ ಅನೇಕ ಹಾಲಿ ಶಾಸಕರುಗಳು, ಮಾಜಿ ಶಾಸಕರುಗಳು, ಮಂತ್ರಿಗಳು ಅಕ್ರಮ ಗಣಿಗಾರಿಕೆಯಲ್ಲಿ ನಿರತರಾಗಿದ್ದು ದಂಡದ ಮೊತ್ತ ಸಾವಿರಾರು ಕೋಟಿ ರು. ಆಗಿದೆ. ಅವರನ್ನೆಲ್ಲ ರಕ್ಷಿಸಲು ಕಾಂಗ್ರೆಸ್ ಸರ್ಕಾರ ನಿಂತಿರುವುದು ರಾಜ್ಯದ ದೌರ್ಭಾಗ್ಯವಾಗಿದೆ. ಸರ್ಕಾರ ಈ ಕೂಡಲೇ ಎಚ್ಚೆತ್ತುಕೊಳ್ಳುತ್ತಿದ್ದಲ್ಲಿ ಆಮ್ ಆದ್ಮಿ ಪಕ್ಷ ಬೃಹತ್ ಜನಾಂದೋಲನಕ್ಕೆ ಸಿದ್ಧವಾಗಲಿದೆ ಎಂದು ರಾಮಾಂಜಿನಪ್ಪ ಎಚ್ಚರಿಸಿದರು.

---

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ
ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

| ಅ ನಂ. | ಸಾಲಗಾರರ ಹೆಸರು (ಎ) | ಅಡವು ಇಟ್ಟ ಆಸ್ತಿಯ ವಿವರ (ಬಿ) | ಎನ್‌ಪಿಎಯ ತಾರೀಖು (ಸಿ) | ಬಾಕಿ ಉಳಿದ ಕೊಡಬೇಕಾದಹಣ (ಡಿ) |
|---|---|---|---|---|
| 1. | ಸಾಲ ಖಾತೆ ನಂ. HLAPBGM00355164 1. ಎಂ ವಿ ಪದ್ಮನಾಭರಾವ್ ಆಲಿಯಾಸ್ ಎಚ್ ವಿ ಪದ್ಮನಾಭರಾವ್ 2. ದೀಪಕ್ ಎಚ್ ಪಿ 3. ಶಾರದಾ | ಮೊದಲ ಮಹಡಿ, ಮುಂಭಾಗದ ಭಾಗ, ಪೂರ್ವದಿಂದ ಪಶ್ಚಿಮಕ್ಕೆ 26.9 ಅಡಿ, ಮತ್ತು ಉತ್ತರದಿಂದ ದಕ್ಷಿಣಕ್ಕೆ 20.1 1/2 ಅಡಿ, ಒಟ್ಟಾರೆ ಅಳತೆ 526.43 ಚದರ ಅಡಿ, ಜೊತೆಗೆ ಆಸ್ತಿಯಲ್ಲಿ 362 ಚದರ ಅಡಿ ಅವಿಭಜಿತ ಪಾಲು ಸಂಖ್ಯೆ 102/ಇ ಹೊಸ ಸಂಖ್ಯೆ 76, ಪೂರ್ವದಿಂದ ಪಶ್ಚಿಮಕ್ಕೆ 35 ಅಡಿ, ಮತ್ತು ಉತ್ತರದಿಂದ ದಕ್ಷಿಣಕ್ಕೆ 55.6 ಅಡಿ ಆಸ್ತಿಯ ಸಂಪೂರ್ಣ ಅಳತೆ, ಒಟ್ಟಾರೆ ಅಳತೆ 1946 ಚದರ ಅಡಿ, ಇದು 16ನೇ ಮುಖ್ಯ ರಸ್ತೆ ವಿಜಯನಗರ, ಬೆಂಗಳೂರು - 560040 ಕರ್ನಾಟಕದಲ್ಲಿ ಸ್ಥಿತವಾಗಿದ್ದು ಹಾಗೂ ಈ ಭೂಮಿಯ ಎಲ್ಲಾ ಭಾಗಗಳು | 04.07.2024 | ದಿನಾಂಕ 29.11.2024 ರಂತೆ ರೂ. 23,86,424.62/- (ರೂಪಾಯಿ ಇಪ್ಪತ್ತ ಮೂರು ಲಕ್ಷ ಎಂಬತ್ತ ಆರು ಸಾವಿರದ ನಾಲ್ಕು ನೂರ ಇಪ್ಪತ್ತ ನಾಲ್ಕು ಮತ್ತು ಪೈಸೆ ಅರವತ್ತ ಎರಡು ಮಾತ್ರ) |

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು ) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಬೆಂಗಳೂರು
ಅಧಿಕೃತ ಅಧಿಕಾರಿ

---

# ವಿಮಾನ ನಿಲ್ದಾಣ ಮೆಟ್ರೋ ಕಾಮಗಾರಿ ಮುಗಿಸಲು ಗಡುವು

**ಬೆಂಗಳೂರು:** ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮಾರ್ಗದಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು 15 ಸಾವಿರ ಕೋಟಿ ವೆಚ್ಚದಲ್ಲಿ ಮೆಟ್ರೋ ನೀಲಿಮಾರ್ಗ ಆರಂಭಿಸಲಾಗಿದ್ದು, 2026 ರೊಳಗೆ ಸಂಚಾರ ಆರಂಭಿಸಬೇಕೆಂದು ಸರಕಾರ ಗಡುವು ನೀಡಿದೆ.

ಬೆಂಗಳೂರಿನ ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರ, ಕೆ.ಆರ್.ಪುರದಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ನಡುವೆ ಸಂಚಾರಕ್ಕಾಗಿ ಈ ಮಾರ್ಗದಲ್ಲಿ ಈಗಾಗಲೇ ಕಾಮಗಾರಿ ನಡೆಯುಯತ್ತಿದೆ. ಆದರೆ ಈ ಕಾಮಗಾರಿ ಅಂದುಕೊಂಡಷ್ಟು ವೇಗದಲ್ಲಿ ನಡೆಯುತ್ತಿಲ್ಲ. ಹೀಗಾಗಿ ರಾಜ್ಯ ಸರಕಾರವು ಕಾಮಗಾರಿಗೆ ವೇಗ ನೀಡುವ ಸಲುವಾಗಿ ಅಧಿಕಾರಿಗಳಿಗೆ ಮುಕ್ತಾಯದ ಗಡುವು ನೀಡಿದ್ದು, ಜೂನ್ 2026ರೊಳಗಾಗಿ ಕಾಮಗಾರಿ ಮುಗಿದು ಮೆಟ್ರೋ ರೈಲು ಸಂಚಾರ ಆರಂಭಿಸಬೇಕು ಎಂದು ಎಚ್ಚರಿಕೆ ನೀಡಿದೆ.

ಈ ಹಿನ್ನೆಲೆ ಎಚ್ಚೆತ್ತುಕೊಂಡಿರುವ ಮೆಟ್ರೋ ಅಧಿಕಾರಿಗಳು ಕಾಮಗಾರಿಗೆ ವೇಗ ನೀಡಲು ಮುಂದಾಗಿದ್ದಾರೆ. ಸಿಲ್ಕ್ ಬೋರ್ಡ್ ನಿಂದ ಕೆ.ಆರ್.ಪುರ , ಕೆ.ಆರ್‌ಪುರದಿಂದ ಏರ್‌ಪೋರ್ಟ್ ಮೆಟ್ರೋ 58.19 ಕಿಮೀ ವಿಸ್ತೀರ್ಣವಿದ್ದು, ಈ ಮಾರ್ಗದಲ್ಲಿ ಮೂವತ್ತು ಮೆಟ್ರೋ ಸ್ಟೇಷನ್ ಗಳಿರಲಿವೆ. ಸೆಂಟ್ರಲ್ ಸಿಲ್ಕ್ ಬೋರ್ಡ್ ನಿಂದ ಕೆ.ಆರ್.ಪುರ 19.75 ಕಿಮೀ 13 ಸ್ಟೇಷನ್ ಗಳು. ಕೆ.ಆರ್.ಪುರದಿಂದ ಏರ್‌ಪೋರ್ಟ್ 38.44 ಕಿಮೀ 17 ಮೆಟ್ರೋ ಸ್ಟೇಷನ್ ಗಳಿರಲಿವೆ.

#### ಟರ್ಮಿನಲ್ 1,2 ನಡುವೆ ಮೆಟ್ರೋ ಸ್ಟೇಷನ್ ನಿರ್ಮಾಣ

**ನೀಲಿ ಮಾರ್ಗ ಬರೋಬ್ಬರಿ 14,788 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಏರ್‌ಪೋರ್ಟ್‌ನಲ್ಲಿ ಟರ್ಮಿನಲ್ 1 ಮತ್ತು 2 ನಡುವೆ ಮೆಟ್ರೋ ಸ್ಟೇಷನ್ ನಿರ್ಮಾಣವಾಗಲಿದೆ. ಎರಡು ಟರ್ಮಿನಲ್ ಗೆ ಬರುವ ಮತ್ತು ಹೋಗುವಾಗ ಪ್ರಯಾಣಿಕರ ಅನುಕೂಲಕ್ಕಾಗಿ ಕೆಂಪೇಗೌಡ ಏರ್‌ಪೋರ್ಟ್ ಎರಡು ಟರ್ಮಿನಲ್‌ಗಳ ಮಧ್ಯದಲ್ಲಿ ಮೆಟ್ರೋ ಸ್ಟೇಷನ್ ನಿರ್ಮಾಣ ಮಾಡಲಾಗುತ್ತಿದೆ. ಎರಡು ಟರ್ಮಿನಲ್ ಗಳಿಗೆ ಸಂಪರ್ಕ ಕಲ್ಪಿಸಲು ಮೇಲ್ಸೇತುವೆ ಮತ್ತು ಎಸ್ಕಲೇಟರ್ ಗಳನ್ನು ಆರಂಭ ಮಾಡಲಾಗುತ್ತಿದೆ.**

---

**PUBLIC NOTICE**

I am issuing this public notice on behalf of my client **Sri.Naveed Shafi,** S/o S.M.Shafi, resident of No.2, 6th Cross, 1st Street, 2nd Block, H.B.R. Layout, Near BDA Complex, Bengaluru-560 043, he has cancelled the General Power of Attorney dated 21.01.2017 registered in the office Sub registrar Gnaganagar, Bengaluru of he with respect to the schedule property hereunder. On 21st January, 2017, I have executed General Power of Attorney in favour of Sri Shakil Shafi, S/o. late S.M.Shafi, No. 1/1, Nandi Durga Road, Benson Town Post, Bengaluru - 560046.
When the GPA holder acted against the interest of my client, hereby canceled the General Power of Attorney by issuing the notice to him. It is notice to the General Public not to have any kind of transaction with respect to the schedule property is concerned. If anyone having a transaction with respect to the schedule property is concerned, my client do not have any responsibility.

**SCHEDULE PROPERTY**

All that piece and parcel of Agricultural property bearing **Sy.No.58** situated at **Bellahalli Village, Yelahanka Hobli, Bengaluru North Taluk** and extent of **6 Acres 04 Guntas,** and bounded on:
**East by : Land belongs to Syed Murtaza**
**West by : Sy.No.59**
**North by : Private Property**
**South by : Private Property**

**Sandesh Kumar M**
**Advocate**
#21/2, 3rd Floor,
Opp. Indian Overseas Bank,
1st Main Road, Gandhi Nagar,
Bengaluru-560 009. Mob: 9964150875.

---

# ಸಾರಿಗೆ ಇಲಾಖೆಯಿಂದ 25 ಐಷಾರಾಮಿ ಕಾರುಗಳ ವಶ

**ಬೆಂಗಳೂರು:** ಸಾರಿಗೆ ಇಲಾಖೆಯು ಟ್ರಾವೆಲ್ಸ್ ಮಾಲೀಕರ ಐಷಾರಾಮಿ ವೈಟ್ ಬೋರ್ಡ್ ಕಾರುಗಳನ್ನು ಬಾಡಿಗೆಗೆ ನೀಡುತ್ತಿರುವುದರಿಂದ ಸಾರಿಗೆ ಇಲಾಖೆಗೆ ಕೋಟ್ಯಂತರ ರು. ನಷ್ಟವುಂಟಾಗುತ್ತಿದ್ದು, ಸಾರಿಗೆ ಇಲಾಖೆಯು ಆ ಕಾರುಗಳನ್ನು ವಶಪಡಿಸಿಕೊಂಡಿದ್ದಾರೆ.

ಐಷಾರಾಮಿ ಕಾರುಗಳನ್ನು ಸೆಲೆಬ್ರಿಟಿಗಳಿಗೆ ಬಾಡಿಗೆಗೆ ನೀಡುತ್ತಿರುವುದರಿಂದ ಸಾರಿಗೆ ಇಲಾಖೆಗೆ ಕೋಟ್ಯಂತರ ರು. ನಷ್ಟವುಂಟಾಗುತ್ತಿದೆ. ಈ ಹಿನ್ನೆಲೆ ಸಾರಿಗೆ ಇಲಾಖೆ ಬುಧವಾರ ಕಾರ್ಯಾಚರಣೆ ನಡೆಸಿದ್ದು, ಜಾಗ್ವಾರ್, ಬಿಎಂಡಬ್ಲ್ಯು, ರೇಂಜ್ ರೋವರ್ ಸೇರಿದಂತೆ ಕೋಟ್ಯಂತರ ರು.ಬೆಲೆ ಬಾಳುವ 25 ಐಷಾರಾಮಿ ಕಾರುಗಳನ್ನು ವಶಪಡಿಸಿಕೊಂಡಿ ದ್ದಾರೆ. ಜತೆಗೆ 50 ಲಕ್ಷ ರು. ದಂಡವನ್ನೂ ವಸೂಲಿ ಮಾಡಿದ್ದಾರೆ. ನಗರದ ಯಶವಂತಪುರ, ರಾಜಾಜಿ ನಗರ, ಮತ್ತಿಕೆರೆ, ಪೀಣ್ಯ, ಮಲ್ಲೇಶ್ವರಂ ಸೇರಿದಂತೆ ಅಕ್ಕಪಕ್ಕದ ಪ್ರದೇಶಗಳಲ್ಲಿ ಸಾರಿಗೆ ಇಲಾಖೆಯ 9 ತಂಡಗಳಿಂದ ಕಾರ್ಯಾಚರಣೆ ನಡೆಸಲಾಗಿದೆ. ಟ್ರಾವೆಲ್ಸ್ ಮಾಲೀಕರಿಂದ ಔಡಿ, ಬಿಎಂಡಬ್ಲ್ಯು, ಬೆನ್ಜ್, ವೋಲ್ವೋ ಸೇರಿದಂತೆ ಸಾಕಷ್ಟು ಐಷಾರಾಮಿ ವೈಟ್ ಬೋರ್ಡ್ ಕಾರುಗಳನ್ನು ಸೆಲೆಬ್ರಿಟಿಗಳಿಗೆ ಯೆಲ್ಲೋ ಬೋರ್ಡ್ ರೀತಿಯಲ್ಲಿ ಬಾಡಿಗೆಗೆ ನೀಡುತ್ತಿದ್ದರು. ನಿಯಮದ ಪ್ರಕಾರ ವೈಟ್ ಬೋರ್ಡ್ ಕಾರುಗಳನ್ನು ಸ್ವಂತಕ್ಕಾಗಿ ಬಳಕೆ ಮಾಡಲು ಅವಕಾಶವಿದ್ದು, ಆದರೆ, ವೈಟ್ ಬೋರ್ಡ್ ಐಷಾರಾಮಿ ಕಾರುಗಳನ್ನು ದೊಡ್ಡ ಸಿನಿಮಾ ನಟರು ಸೇರಿದಂತೆ ಸೆಲೆಬ್ರಿಟಿಗಳಿಗೆ ಬಾಡಿಗೆ ನೀಡಲು ಬಳಕೆ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸಾರಿಗೆ ಇಲಾಖೆಗೆ ಕೋಟ್ಯಂತರ ರು. ನಷ್ಟ ಉಂಟಾಗುತ್ತಿದೆ. ಹಾಗಾಗಿ ಆ ಕಾರುಗಳನ್ನು ವಶಪಡಿಸಿಕೊಳ್ಳಲಾಗಿದೆ.

---

# ಅಂಗನವಾಡಿ ನೌಕರರ ಬೃಹತ್ ಪ್ರತಿಭಟನೆ

**ಬೆಂಗಳೂರು:** ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬೆಂಗಳೂರು ಜಿಲ್ಲಾ ಅಂಗನವಾಡಿಯ ಸಾವಿರಾರು ನೌಕರರು ನಗರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಬೆಂಗಳೂರು ನಗರ ಜಿಲ್ಲಾ ಅಧ್ಯಕ್ಷ ಲೀಲಾವತಿ ಪ್ರತಿಭಟನೆಯಲ್ಲಿ ಮಾತನಾಡಿ, ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಿ, ಗುಜರಾತ್ ಹೈಕೋರ್ಟ್ ತೀರ್ಪಿನಂತೆ ಕಾರ್ಯಕರ್ತೆ, ಸಹಾಯಕಿಯರನ್ನು ವರ್ಗ 3 ಮತ್ತು 4 ಎಂದು ಪರಿಗಣಿಸಿ ಖಾಯಂ ಮಾಡಬೇಕು, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗ ಅಂಗನವಾಡಿಯಲ್ಲಿನ ಸಮಸ್ಯೆಗಳನ್ನು ಬಗೆಹರಿಸಿ ಸಂಬಳ ಹೆಚ್ಚಿಸುವುದಾಗಿ ತಿಳಿಸಿದರು. ಆದರೆ ಯಾವುದೇ ರೀತಿಯಲ್ಲೂ ಸಮಸ್ಯೆ ನಿವಾರಣೆಯಾಗಿಲ್ಲ ಎಂದು ಆಗ್ರಹಿಸಿದರು.

## ಸಮಾಚಾರ ಸಣ್ಣದಲ್ಲ

### ಸುಮನಹಳ್ಳಿ ಚಿತಾಗಾರ ತಾತ್ಕಾಲಿಕ ಸ್ಥಗಿತ

**ಬೆಂಗಳೂರು:** ಆರ್‌ಆರ್ ನಗರ ವಲಯ ವ್ಯಾಪ್ತಿಯ ಸುಮ್ಮನಹಳ್ಳಿ ವಿದ್ಯುತ್ ಚಿತಾಗಾರದಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಕೈಗೊಳ್ಳಬೇಕಾಗಿರುವುದರಿಂದ ಡಿ.21ರಿಂದ 30ರವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುತ್ತಿದೆ. ಈ ಚಿತಾಗಾರಕ್ಕೆ ಮೃತ ದೇಹಗಳನ್ನು ದಹನ ಕ್ರಿಯೆಗಾಗಿ ತರುವ ಸಾರ್ವಜನಿಕರು ಸಮೀಪದಲ್ಲಿರುವ ಪೀಣ್ಯ, ಮೇಡಿ ಅಗ್ರಹಾರ ಅಥವಾ ಕೆಂಗೇರಿ ವಿದ್ಯುತ್ ಚಿತಾಗಾರ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ ಎಂದು ವಿದ್ಯುತ್ ವಿಭಾಗದ ಕಾರ್ಯಪಾಲಕ ಅಭಿಯಂತರರು ತಿಳಿಸಿರುತ್ತಾರೆ.

### ವಿದ್ಯುತ್ ವ್ಯತ್ಯಯ ಇಂದು

**ಬೆಂಗಳೂರು:** ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ 66/11 ಕೆ.ವಿ.ಎಲ್.ಆರ್ ಬಂಡೆ ಕೇಂದ್ರದಲ್ಲಿ ಡಿ.19ರಂದು ಬೆಳಗ್ಗೆ 10.00ರಿಂದ 4.00 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಎ.ಕೆ.ಅಶ್ರಮ ರಸ್ತೆ, ದೇವೆಗೌಡ ರಸ್ತೆ, ಆರ್.ಟಿ.ನಗರ 1ನೇ ಬ್ಲಾಕ್, ತಿಮ್ಮಯ್ಯ ಗಾರ್ಡನ್, ಮೋದಿ ಗಾರ್ಡನ್, ಮಿಲಿಟರಿ ಏರಿಯ, ವೀರಣ್ಣಪಾಳ್ಯ, ಲುಂಬಿನಿ ಗಾರ್ಡನ್, ಬಿಡಬ್ಲ್ಯೂಎಸ್‌ಎಸ್‌ಬಿ ಸೆವೇಜ್ ಪ್ಲಾಟ್, ಮರಿಯಣ್ಣಪಾಳ್ಯ, ಕಾಫೀ ಬೋರ್ಡ್ ಲೇಔಟ್ ಕೆಂಪಾಪುರ, ದಾಸರಹಳ್ಳಿ, ಮಾರುತಿ ಲೇಔಟ್ ಭುವನೇಶ್ವರಿನಗರ, ಬಿಇಎಲ್, ಕಾರ್ಪೋರೇಟ್ ಆಫೀಸ್ ಚಾಣಕ್ಯ ಲೇಔಟ್ ನಾಗವಾರ, ವೀರಣ್ಣಪಾಳ್ಯ ಮುಖ್ಯ ರಸ್ತೆ, ಬೈರಪ್ಪ ಲೇಔಟ್ ಮತ್ತು ಸುತ್ತಲಿನ ಪ್ರದೇಶಗಳು. 66/11ಕೆವಿ ಮಾನ್ಯತಾ ಉಪಕೇಂದ್ರದಿಂದ 66/11 ಕೆವಿ ಶೋಭಾ ಸಿಟಿ ಉಪಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ ಡಿ.19ರಿಂದ ಬೆಳಗ್ಗೆ 8:00 ರಿಂದ ಮಧ್ಯಾಹ್ನ 6:00 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ರೈತರ ಹಿತ ಕಾಯಲು ಸರಕಾರ ಬದ್ಧ | ವಕ್ಫ್ ಆಸ್ತಿ ವಿವಾದಕ್ಕೆ ದಿಟ್ಟ ಉತ್ತರ ನೀಡಿದ ಕೃಷ್ಣ ಬೈರೇಗೌಡ

# ವಕ್ಫ್ ಆಸ್ತಿ ಗೊಂದಲಕ್ಕೆ ಬಿಜೆಪಿಯ ಸುಳ್ಳು ಕಥೆಗಳೇ ಕಾರಣ: ಸಚಿವ

**ವಿಧಾನಸಭೆ ಸುವರ್ಣಸೌಧ** ಬೆಳಗಾವಿ

ರಾಜ್ಯದಲ್ಲಿ ವಕ್ಫ್ ಆಸ್ತಿ ಗೊಂದಲ ಉಂಟಾಗಲು ಬಿಜೆಪಿಯ ಸುಳ್ಳು ಕಥೆಗಳೇ ಕಾರಣವೆಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಆರೋಪಿಸಿದರು.

ವಿಧಾನಸಭೆಯಲ್ಲಿ ವಕ್ಫ್ ವಿಷಯದಲ್ಲಿ ಆಗಿರುವ ಗೊಂದಲಗಳ ಕುರಿತು ಸುದೀರ್ಘವಾಗಿ ಉತ್ತರಿಸಿದ ಅವರು, ರಾಜ್ಯದಲ್ಲಿ 'ವಕ್ಫ್ ಆಸ್ತಿ' ವಿಚಾರಗಳಲ್ಲಿ ಸುಳ್ಳು ಕಥೆಗಳನ್ನು ಸೃಷ್ಟಿಸಿ ಗೊಂದಲ ಮೂಡಿಸುವ ಪ್ರಯತ್ನ ನಡೆದಿದೆ. ಆದರೆ, ಇದ್ಯಾವುದಕ್ಕೂ ಭಯಪಡುವ ಅಗತ್ಯವಿಲ್ಲ. ರೈತರ ಹಿತ ಕಾಯಲು ನಮ್ಮ ಸರಕಾರ ಬದ್ಧವಾಗಿದ್ದು, ಯಾವುದೇ ರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲ ಎಂದರು. ವಕ್ಫ್ ಕಾಯ್ದೆ 1913ರಲ್ಲಿ ಬ್ರಿಟೀಷರು ಮಾಡಿದ್ದು, ನಂತರದಲ್ಲಿ ಮೈಸೂರು ಮಹಾರಾಜರ ಕಾಲದ ಲ್ಲಿಯೂ ಮಾಡಲಾಗಿತ್ತು. ಸ್ವಾತಂತ್ರ್ಯ ಪೂರ್ವದ ಲ್ಲಿಯೇ ವಕ್ಫ್ ಕಾಯ್ದೆಯನ್ನು ಮಾಡಲಾಗಿದೆ ಎಂದ ಸಚಿವರು, ರೈತರಿಗೆ ನೀಡಿರುವ ಎಲ್ಲ ನೋಟಿಸ್‌ಗಳನ್ನು ಈಗಾಗಲೇ ಹಿಂಪಡೆದಿದ್ದು, ಇನ್ನೂ ಉಳಿದಿದ್ದರೆ, ಅವುಗಳನ್ನು ಕೂಡ ಹಿಂಪಡೆಯಲಾಗುವ ಭರವಸೆ ನೀಡಿದರು.

> ಸರಕಾರದಲ್ಲಿ ಲಭ್ಯವಿರುವ ದಾಖಲೆಗಳಂತೆ ರಾಜ್ಯದಲ್ಲಿ 1.12 ಲಕ್ಷ ಎಕರೆ ವಕ್ಫ್‌ಗೆ ಸೇರಿದ್ದು, ಇದರಲ್ಲಿ ಕೇವಲ 20,524 ಎಕರೆ ಮಾತ್ರ ವಕ್ಫ್‌ಗೆ ಸಿಕ್ಕಿದೆ. ಇನ್ನೂ ಸುಮಾರು 90 ಸಾವಿರ ಎಕರೆಯಷ್ಟು ಪ್ರದೇಶ ವಕ್ಫ್‌ಗೆ ದೊರೆತಿಲ್ಲ.ಪಹಣಿಯಲ್ಲಿ ವಕ್ಫ್ ಹೆಸರಿನಲ್ಲಿ ನಮೂದಾಗದೇ ಇದ್ದುದರಿಂದ ದಾನ ಕೊಟ್ಟವರ ಹೆಸರಿನವರಲ್ಲಿ ಅಥವಾ ಅವರ ಕುಟುಂಬದವರ ಹೆಸರಿನಲ್ಲಿಯೇ ಮುಂದುವರಿದಿದೆ.
>
> - ಕೃಷ್ಣಬೈರೇಗೌಡ, ಕಂದಾಯ ಸಚಿವ

### ಖಾಸಗಿಯವರಿಂದ ಒತ್ತುವರಿ ಆಗಿದ್ದರೆ ತೆರವು ಮಾಡಬೇಕು

ಒತ್ತುವರಿಯಾಗಿರುವ 19,987 ಎಕರೆ ವಕ್ಫ್ ಭೂಮಿಯನ್ನು, ಅದೂ ಕೂಡ ಸರಕಾರ ಈಗಾಗಲೇ ನೀಡಿರುವ ಖಬರಸ್ತಾನ್, ದರ್ಗಾ ಮಸೀದಿಗಳಿಗೆ ನೀಡಿರುವ ಭೂಮಿಯನ್ನು ಕೆಲವು ಖಾಸಗಿಯವರು ಒತ್ತುವರಿ ಮಾಡಿದ್ದಾರೆ, ಈ ಭೂಮಿಯನ್ನು ಮಾತ್ರ ವಕ್ಫ್ ಹಸ್ತಾಂತರಿಸಲು ವಕ್ಫ್ ಮಂಡಳಿ ತಿಳಿಸಿದೆ ಎಂದು ಸಚಿವರು ಸ್ಪಷ್ಟನೆ ನೀಡಿದರು. ರೈತರಿಗೆ ನೋಟಿಸ್ ನೀಡುವ ಪ್ರಕ್ರಿಯೆ ಈ ಹಿಂದಿನಿಂದಲೂ ನಡೆದು ಬಂದಿರುವ ಪ್ರಕ್ರಿಯೆಯಾಗಿದ್ದು, ಈ ಹಿಂದಿನ ಸರಕಾರದ ಕಾಲದಲ್ಲಿ 4500 ಆಸ್ತಿಗಳನ್ನು ವಕ್ಫ್‌ಗೆ ಖಾತೆ ಬದಲಾವಣೆ ಮಾಡಲಾಗಿದೆ. ಆದರೆ, ನಮ್ಮ ಸರಕಾರ ಬಂದ ಬಳಿಕ ಕೇವಲ 600 ಆಸ್ತಿಗಳನ್ನು ಮಾತ್ರ ವಕ್ಫ್ ಖಾತೆ ಬದಲಾವಣೆ ಮಾಡಲಾಗಿದೆ. ವಕ್ಫ್ ಕಾಯ್ದೆ ಕೇಂದ್ರ ಸರಕಾರ ಮಾಡಿದ್ದು, ರಾಜ್ಯ ಸರಕಾರ ಮಾಡಿಲ್ಲ. ಆದಾಗ್ಯೂ ರೈತರಲ್ಲಿ ಸುಳ್ಳು ಸುದ್ದಿ ಹರಡಿ ರೈತರನ್ನು ಎತ್ತಿಕಟ್ಟುವ ಕೆಲಸ ಮಾಡಲಾಗುತ್ತಿದೆ ಎಂದು ದೂರಿದರು.

ದೀಪಾಂಜಲಿ ನಗರದ ಮೆಟ್ರೋ ನಿಲ್ದಾಣದ ಬಳಿಯ ಮೈಸೂರು ರಸ್ತೆಯ ಬಳಿ ಸಂಜೆಯ ವೇಳೆಗೆ ವಿಪರೀತ ಚಳಿಗೆ ಬೆಂಕಿ ಉರಿಸಿ ಮೈಕಾಯಿಸಿಕೊಳ್ಳುತ್ತಿರುವ ಭದ್ರತಾ ಸಿಬ್ಬಂದಿ. ಫೋಟೋ: ಸುಧಾಕರ್ ದೇವರಾಜ್

ಕಾಸಿಯಾ ಕಾರ್ಯಕ್ರಮದಲ್ಲಿ ವಿಟಿಪಿಸಿ ಎಂ.ಡಿ. ಬಿ.ಕೆ. ಶಿವಕುಮಾರ ಅಭಿಮತ

# ರಾಜ್ಯದಲ್ಲಿ ರಫ್ತಿಗೆ ಪೂರಕ ವಾತಾವರಣ

**ಬೆಂಗಳೂರು:** ಸಣ್ಣ ಕೈಗಾರಿಕಾ ಕ್ಷೇತ್ರ ಬೆಳೆದು ರಫ್ತು ಹೆಚ್ಚಾಗಿ ಆಮದು ಕಡಿಮೆಯಾಗಬೇಕು. ವಿಶ್ವಬ್ಯಾಂಕ್ ಮತ್ತು ಸರಕಾರ ಜೊತೆಗೂಡಿ ಎಸ್‌ಎಂಇಗಳ ಕಾರ್ಯಕ್ಷಮತೆಯ ಹೆಚ್ಚಳ ಹಾಗೂ ವೇಗಗೊಳಿಸುವ ರ‍್ಯಾಂಪ್ ಯೋಜನೆಯನ್ನು ಜಾರಿಗೆ ತರಲಾಗಿದೆ. ರಫ್ತು ಹೆಚ್ಚಿಸಲು ಪೂರಕ ವಾತಾವರಣವಿದ್ದು ಇಂತಹ ಕಾರ್ಯಕ್ರಮಗಳನ್ನು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಹೆಚ್ಚು ಹೆಚ್ಚು ಸದುಪಯೋಗ ಪಡಿಸಿಕೊಳ್ಳಲು ಮುಂದಾಗಬೇಕು ಎಂದು ವಿ.ಟಿ.ಪಿ.ಸಿ. ವ್ಯವಸ್ಥಾಪಕ ನಿರ್ದೇಶಕ ಬಿ.ಕೆ. ಶಿವಕುಮಾರ ಮನವಿ ಮಾಡಿದರು.

ಕಾಸಿಯಾ ಸಭಾಂಗಣದಲ್ಲಿ ನಡೆದ ಒಂದು ದಿನದ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ವಿ.ಟಿ.ಪಿ.ಸಿ. ವ್ಯವಸ್ಥಾಪಕ ನಿರ್ದೇಶಕ ಬಿ.ಕೆ. ಶಿವಕುಮಾರ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಸುನೀಲ್ ಕುಮಾರ್, ಜಿಲ್ಲಾ ಕೈಗಾರಿಕಾ ಕೇಂದ್ರದ ಉಪಾಧ್ಯಕ್ಷ ಗಣೇಶ್ ರಾವ್, ಗೌರವ ಪ್ರಧಾನ ಕಾರ್ಯದರ್ಶಿ ಸುರೇಶ್ ಎನ್. ಸಾಗರ್ ಚಾಲನೆ ನೀಡಿದರು.

ಕಾಸಿಯಾ ಸಭಾಂಗಣದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ, ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರ ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಸಹಯೋಗದಲ್ಲಿ ಎಂ.ಎಸ್.ಎ.ಇ.ಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಮತ್ತು ವೇಗಗೊಳಿಸುವ (ಆರ್‌ಎಎಂಪಿ) ಯೋಜನೆಯಡಿ ಲೀನ್, ಝೆಡ್.ಇ.ಡಿ. ಹಾಗೂ ರಫ್ತು ಕುರಿತು ಆಯೋಜಿಸಲಾಗಿದ್ದ ಒಂದು ದಿನದ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಅಧ್ಯಕ್ಷರಾದ ಎಂ.ಜಿ. ರಾಜಗೋಪಾಲ್ ಮಾತನಾಡಿ, ರ‍್ಯಾಂಪ್ ಯೋಜನೆಯಡಿಯಲ್ಲಿ ರಾಜ್ಯಾದ್ಯಂತ ರಫ್ತು, ಲೀನ್ ಯೋಜನೆ ಹಾಗೂ ಝೆಡ್‌ಇಡಿ ಪ್ರಮಾಣೀಕರಣ ಕುರಿತಂತೆ ಅರಿವು ಮೂಡಿ ಸುವ ಕಾರ್ಯಕ್ರಮಗಳನ್ನು ರಾಜ್ಯದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಉಪಯೋಗಕ್ಕಾಗಿ ಆಯೋಜಿಸಲಾಗುತ್ತಿದೆ ಎಂದರು. ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಸುನೀಲ್ ಕುಮಾರ್, ಜಿಲ್ಲಾ ಕೈಗಾರಿಕಾ ಕೇಂದ್ರದ ಉಪಾಧ್ಯಕ್ಷ ಗಣೇಶ್ ರಾವ್, ಗೌರವ ಪ್ರಧಾನ ಕಾರ್ಯದರ್ಶಿ ಸುರೇಶ್ ಎನ್. ಸಾಗರ್, ಜಂಟಿ ಕಾರ್ಯದರ್ಶಿಜೆ.ಎಸ್. ಬಾಬು, ಸತೀಶ್ ಎನ್., ಮಂಜುನಾಥ್ ಎನ್. ಖಜಾಂಚಿ ಉಪಸ್ಥಿತರಿದ್ದರು.

### ತಿಳಿವಳಿಕೆ ನೀಡುವಲ್ಲಿ ಸಹಕಾರಿ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಪರ ನಿರ್ದೇಶಕ ಮಾಣಿಕ್ ವಿ. ರಾಘೋಜಿ ಮಾತನಾಡಿ, ರ‍್ಯಾಂಪ್ ಯೋಜನೆಯಡಿಯಲ್ಲಿ 4 ವರ್ಷಗಳ ಕಾರ್ಯಕ್ರಮಗಳನ್ನು ರೂಪಿಸಲಾಗಿದ್ದು ಅದರ ಪ್ರಾರಂಭವಾಗಿ ಈ ವರ್ಷ ರಾಜ್ಯಾದ್ಯಂತ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು ಅದರ ಪ್ರಯೋಜನ ಪಡೆಯುವಂತೆ ಮನವಿ ಮಾಡಿದರು. ಈ ರೀತಿಯ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕಾಸಿಯಾ ಸಹಯೋಗದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆಯೋಜಿಸಲಾಗುತ್ತಿದ್ದು ಇದರಿಂದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ತಿಳುವಳಿಕೆ ನೀಡುವಲ್ಲಿ ಸಹಕಾರಿಯಾಗಲಿದೆ ಎಂದರು.

# ನಮ್ಮ ಮೆಟ್ರೋ ಕಾಮಗಾರಿಗಳಿಗೆ ಹಣದ ಕೊರತೆ

**ಬೆಂಗಳೂರು:** ನಮ್ಮ ಮೆಟ್ರೋ ಹಂತ-2ರ ಯೋಜನೆಯ ಕಾಮಗಾರಿಗಾಗಿ ಹಲವು ಪಾವತಿ ಮಾಡಬೇಕಾಗಿದ್ದು, ರಾಜ್ಯ ಸರಕಾರ ಈ ಮೊತ್ತ ಪಾವತಿಸುವಲ್ಲಿ ವಿಫಲವಾಗಿರುವುದರಿಂದ ಮೆಟ್ರೋಗೆ ಹಣದ ಕೊರತೆ ಎದುರಾಗಿದೆ ಎನ್ನುವ ಮಾತುಗಳು ಕೇಳಿ ಬಂದಿದೆ.

ಡಿಸೆಂಬರ್ ತಿಂಗಳ ಆರಂಭದಲ್ಲಿ ಬಹುನಿರೀಕ್ಷಿತ ಬೆಂಗಳೂರು ಮೆಟ್ರೋ ಹಂತ-2 ಯೋಜನೆಯ ಪರಿಷ್ಕೃತ ವೆಚ್ಚದ 40,614 ಕೋಟಿ ರು.ನಲ್ಲಿ ತನ್ನ ಪಾಲಿನ ಹಣ ನೀಡಲು ರಾಜ್ಯ ಸಚಿವ ಸಂಪುಟ ವಿಫಲವಾಗಿದ್ದು, 75.06 ಕಿಮೀ ಜಾಲಕ್ಕೆ ಸುಮಾರು 10,000 ಕೋಟಿ ರು.ಗಳ ವೆಚ್ಚ ಹೆಚ್ಚಳವನ್ನು ಕರ್ನಾಟಕ ಮತ್ತು ಕೇಂದ್ರ ಸರಕಾರವು ಭರಿಸಬೇಕಾಗಿದೆ. ಆದರೆ ಹೆಚ್ಚಿದ ವೆಚ್ಚಕ್ಕೆ ಹಣ ಮಂಜೂರಾತಿ ವಿಳಂಬವಾಗಿರುವುದರಿಂದ ಡಿಸೆಂಬರ್ 2026 ರ ಅಂತಿಮ ಗಡುವಿನತ್ತ ಸಾಗುತ್ತಿರುವ ಹಂತ-2 ರ ಮೇಲೆ ತೀವ್ರ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದೂ ಹೇಳಲಾಗುತ್ತಿದೆ.

ಹಂತ-2, ಹಂತ-1 ಜಾಲವು ನಾಲ್ಕು ವಿಸ್ತರಣೆಗಳನ್ನೊಳಗೊಂಡಿದ್ದು, ಎರಡುನ ಹೊಸ ಮಾರ್ಗಗಳ ಹೊರತಾಗಿ ಆರ್.ವಿ ರಸ್ತೆಯಿಂದ ಎಲೆಕ್ಟ್ರಾನಿಕ್ ಸಿಟಿಯ ಮೂಲಕ ಬೊಮ್ಮಸಂದ್ರದವರೆಗೆ 19.15 ಕಿ.ಮೀ ಹಳದಿ ಮಾರ್ಗ ಹಾಗೂ ಕಾಳೇನ ಅಗ್ರಹಾರದಿಂದ ನಾಗವಾರದವರೆಗೆ 21.26ಕಿ.ಮೀ ಗುಲಾಬಿ ಮಾರ್ಗದ ಯೋಜನೆಗಾಗಿ 2020ರ ಮೂಲ ಗಡುವನ್ನು ಡಿಸೆಂಬರ್ 2026ಕ್ಕೆ ಮುಂದೂಡಲಾಗಿದೆ.

ಭೂಸ್ವಾಧೀನ ವೆಚ್ಚಗಳು, ಸಾಂಕ್ರಾಮಿಕ-ಪ್ರೇರಿತ ವಿಳಂಬಗಳು ಮತ್ತು ಅಂತಾರಾಷ್ಟ್ರೀಯ ಕರೆನ್ಸಿಗಳಲ್ಲಿನ ಏರಿಳಿತಗಳು ಮತ್ತು ಇತರ ಕಾರಣಗಳಿಂದಾಗಿ 30,695 ಕೋಟಿ ರು. ಇದ್ದ ಯೋಜನೆಯು ಈಗ 40,600 ಕೋಟಿ ರು.ಗಳಿಗೆ ಹೆಚ್ಚಾಗಿದೆ. ಪರಿಷ್ಕೃತ ವೆಚ್ಚದ ಪ್ರಸ್ತಾವನೆಯನ್ನು ಈ ವರ್ಷದ ಸೆಪ್ಟೆಂಬರ್‌ನಲ್ಲಿ ರಾಜ್ಯ ಸರಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಹಣಕಾಸು ಇಲಾಖೆ ಇದನ್ನು ಒಪ್ಪಿದ್ದು, ಮೂರು ತಿಂಗಳಲ್ಲಿ ಹಣ ಬಿಡುಗಡೆಯಾಗುವ ಬಗ್ಗೆ ವಿಶ್ವಾಸ ಇತ್ತು.

# ಹಾಲಿನ ಪ್ರೋತ್ಸಾಹ ಧನ ಹೆಚ್ಚಳವಿಲ್ಲ

ವಿಧಾನ ಪರಿಷತ್: ಹಾಲಿನ ಪ್ರೋತ್ಸಾಹ ಧನ ಹೆಚ್ಚಳ ಮಾಡುವ ಬಗ್ಗೆ ಯಾವುದೇ ಪ್ರಸ್ತಾಪ ಸದ್ಯಕ್ಕೆ ಸರಕಾರದ ಮುಂದಿಲ್ಲವೆಂದು ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಸ್ಪಷ್ಟಪಡಿಸಿದರು.

ಶೂನ್ಯ ವೇಳೆ ಜೆಡಿಎಸ್ ಸದಸ್ಯ ಮಂಜೇಗೌಡ ಪ್ರಸ್ತಾಪಕ್ಕೆ ಉತ್ತರಿಸಿ, ನಮ್ಮ ಪ್ರಣಾಳಿಕೆಯಲ್ಲಿ ಹಾಲಿನ ಪ್ರೋತ್ಸಾಹ ಧನ ಹೆಚ್ಚಳ ಮಾಡುವ ಬಗ್ಗೆ ಘೋಷಣೆ ಮಾಡಲಾಗಿದೆ. ಅದಕ್ಕೇನು ಸಮಯವಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಹೆಚ್ಚಳ ಮಾಡಲಾಗುವುದು. ಆದರೆ, ಸದ್ಯಕ್ಕೆ ಮಾತ್ರ ಹಾಲಿನ ಪ್ರೋತ್ಸಾಹ ಧನ ಹೆಚ್ಚಳ ಸಾಧ್ಯವಿಲ್ಲ ಎಂದರು. ಇನ್ನೂ ಹಾಲಿನ ಪ್ರೋತ್ಸಾಹ ಧನ ನಮ್ಮ ಅವಧಿಯಲ್ಲಿ ಯಾವುದೇ ಬಾಕಿಯಿಲ್ಲ. 2023-24ನೇ ಸಾಲಿನಲ್ಲಿ 1,300 ಕೋಟಿ ರು. ಪ್ರೋತ್ಸಾಹ ಧನ ಘೋಷಣೆ ಮಾಡಲಾಗಿದ್ದು, ಇದರಲ್ಲಿ ಈಗಾಗಲೇ 1,245 ಕೋಟಿ ರು. ಬಿಡುಗಡೆ ಆಗಿದೆ. ಇನ್ನುಳಿದ ಹಣವನ್ನು ಶೀಘ್ರವೇ ನೀಡಲಾಗುವುದು ಎಂದು ವಿವರಿಸಿದರು.

ಬೆಳಗಾವಿ ಚಳಿಗಾಲ ಅಧಿವೇಶನ
ಸದನ ಕದನ
ವಿಶ್ವವಾಣಿ
ಗುರುವಾರ
19.12.2024

## ರೋಗಪೀಡಿತವಾದ ಆರೋಗ್ಯ ಇಲಾಖೆ | ಬಾಣಂತಿಯರ ಸಾವು ತಡೆಯುವಲ್ಲಿ ಸರಕಾರ ವಿಫಲ | ಡ್ರಗ್ ಮಾಫಿಯಾಗೆ ಮಹಿಳೆಯರ ಬಲಿ: ಪ್ರತಿಪಕ್ಷ ನಾಯಕ ವಾಕ್ಸಮರ

# ಬಾಣಂತಿಯರ ಸಾವು: ನ್ಯಾಯಾಂಗ ತನಿಖೆಗೆ ನೀಡಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ ಸುವರ್ಣಸೌಧ

ರಾಜ್ಯದಲ್ಲಿನ ಆರೋಗ್ಯ ಇಲಾಖೆಗೆ ರೋಗ ತಗುಲಿದೆ. ರಾಜ್ಯದಲ್ಲಿನ ಬಾಣಂತಿಯರ ಸಾವಿನ ಪ್ರಕರಣ ತಡೆಗಟ್ಟುವಲ್ಲಿ ವಿಫಲವಾಗಿ ರೋಗಗಸ್ಥ ಇಲಾಖೆಯಾಗಿ ಬದಲಾಗಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬುಧವಾರ ವಿಧಾನಸಭೆ ಕಲಾಪ ಆರಂಭವಾಗುತ್ತಿದಂತೆ, ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ನಡೆದ ಚರ್ಚೆಯಲ್ಲಿ ಸದನದಲ್ಲಿ ಮಾತನಾಡಿ, ಕೇವಲ ಬಳ್ಳಾರಿಯಷ್ಟೇ ಅಲ್ಲ, ರಾಜ್ಯದ ಬೇರೆ ಜಿಲ್ಲೆಗಳಲ್ಲೂ ಸಹ ಬಾಣಂತಿಯರ ಸಾವಿನ ಪ್ರಕರಣಗಳು ನಡೆದಿವೆ. ಬೆಳಗಾವಿ, ರಾಯಚೂರು, ಕಲಬುರಗಿ, ಚಿತ್ರದುರ್ಗ ಸೇರಿ ಇತರೆ ಜಿಲ್ಲೆಯಲ್ಲಿ ಬಾಣಂತಿಯರ ಸಾವಾಗಿದೆ. ಇದನ್ನು ತಡೆಗಟ್ಟುವಲ್ಲಿ ಸರಕಾರ ಸಂಪೂರ್ಣ ವಿಫಲವಾಗಿದೆ. ಆದರಿಂದ ಆರೋಗ್ಯ ಇಲಾಖೆಯು ರೋಗಪೀಡಿತವಾಗಿ ವರ್ತಿಸುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಆರೋಗ್ಯ ಸಚಿವರು ಆಸ್ಪತ್ರೆಗಳಿಗೆ ತಕ್ಷಣವೇ ಭೇಟಿ ನೀಡಿ ಪರಿಶೀಲನೆ ನಡೆಸಿಲ್ಲ. ಘಟನೆ ನಡೆದು ಆರು ಬಳಿಕ ಭೇಟಿ ನೀಡಿದ್ದಾರೆ. ರಾಜ್ಯ ಸರಕಾರ ವೈದ್ಯಕೀಯ ಮಾಫಿಯಾಕ್ಕೆ ಸಿಲುಕಿದ್ದು, ವೈದ್ಯರು ಮತ್ತು ಸಿಬ್ಬಂದಿ ಕೊರತೆ ಹೆಚ್ಚಿದೆ. ಬಾಣಂತಿಯರಿಗೆ ಐವಿ ದ್ರಾವಣ ಕೊಟ್ಟ ಬಳಿಕ ಬಹು ಅಂಗಾಂಗ ವೈಫಲ್ಯದಿಂದ ಸಾವನ್ನಪ್ಪಿದ್ದಾರೆ. ಅವಧಿ ಮೀರಿದ ಔಷಧಗಳು ನಾವು ಸ್ಥಳಕ್ಕೆ ಭೇಟಿ ನೀಡಿದ ವೇಳೆ ಕಂಡು ಬಂದಿತ್ತು. ಮೃತ ಬಾಣಂತಿಯರ ಸ್ಥಿತಿ ನೋಡಿದಾಗ ಸರಕಾರಿ ಆಸ್ಪತ್ರೆಗೆ ಬಾಣಂತಿಯರ ಹೋಗಬಾರದವ್ವಾ ಎಂಬ ಪರಿಸ್ಥಿತಿ ಆಗಿದೆ ಎಂದು ಅಶೋಕ್ ಅಸಮಾಧಾನ ವ್ಯಕ್ತಪಡಿಸಿದರು.

**ರಾಜ್ಯದಲ್ಲಿ ನಕಲಿ ವೈದ್ಯರ ಹಾವಳಿ ಮಿತಿ ಮೀರಿದೆ:** ಘಟನೆಯ ಬಗ್ಗೆ ವೈದ್ಯರು ತಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿಲ್ಲ. ಬದಲಾಗಿ ಔಷಧ ನಿಯಂತ್ರಣ ಇಲಾಖೆ ಬಲಿಪಶು ಮಾಡಲಾಗಿದೆ. ರಾಜ್ಯದಲ್ಲಿ ನಕಲಿ ವೈದ್ಯರ ಹಾವಳಿ ಮಿತಿ ಮೀರಿದೆ. ಆದರೆ, ಆರೋಗ್ಯ ಇಲಾಖೆ ಸಂಪೂರ್ಣ ನಿರ್ಲಕ್ಷ್ಯ ವಹಿಸಿದೆ. ಸಿಸೇರಿಯನ್ ಮಾಡುವ ಕೆಲಸ ಸರಕಾರಿ ಆಸ್ಪತ್ರೆಯಲ್ಲಿ ಹೆಚ್ಚಾಗಿದೆ. ಬಾಣಂತಿಯರು ವಾಪಾಸ್ ಬದುಕಿ ಬರುತ್ತಾರೆ ಎನ್ನುವ ಭರವಸೆ ಇಲ್ಲದಂತೆ ಆಗಿದೆ. ಬಾಣಂತಿಯರು ಹಾಗೂ ಮಕ್ಕಳಿಗೆ ಬದುಕಿಗೆ ಬದುಕುವ ಗ್ಯಾರಂಟಿ ಇಲ್ಲದಂತಾಗಿದೆ. ಬಾಣಂತಿಯರ ಸಾವು ಪ್ರಕರಣದಲ್ಲಿ 2ಲಕ್ಷ ರು. ಪರಿಹಾರ ನೀಡಲಾಗಿದೆ. ಆದರೆ, ಕೇರಳದ ವಯನಾಡಿನಲ್ಲಿ ಕರ್ನಾಟಕದ ಆನೆ ತುಳಿತಕ್ಕೆ ಸಿಕ್ಕಿ ಸಾವನ್ನಪ್ಪಿದವರಿಗೆ 15 ಲಕ್ಷ ರು. ಪರಿಹಾರ ನೀಡಲಾಗಿದೆ ಎಂದು ಆರ್.ಅಶೋಕ ಆರೋಪಿಸಿದರು.

ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಮೆಡಿಕಲ್ ಮಾಫಿಯಾ ನಡೆಯುತ್ತಿದೆ. ಪಶ್ಚಿಮ ಬಂಗಾಳದ ಕಂಪನಿಯೊಂದು ಸರಬರಾಜು ಮಾಡಿದ ಔಷಧಿಗಳಿಂದಲೇ ರಾಜ್ಯದಲ್ಲಿ ಬಾಣಂತಿಯರ ಸಾವು ಆಗುತ್ತಿದೆ ಎಂದು ಅಧಿಕಾರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಕಳಪೆ ಗುಣಮಟ್ಟದ ಔಷಧಿ ಪೂರೈಕೆ ಆಗಿದೆ. ಅಲ್ಲದೆ ಕ್ಯಾನ್ಸರ್ ಗೆ ನೀಡುವ ಡ್ರಗ್ ಬೀದಿಬದಿಯಲ್ಲಿ ಸಿಗುತ್ತಿದ್ದೆ ಯುವಕರು ಹಾಳಾಗುತ್ತಿದ್ದಾರೆ. ಆರೋಗ್ಯ ಸಚಿವರು ಮುತುವರ್ಜಿ ವಹಿಸಿ ರೈಡ್ ಮಾಡುವ ಮೂಲಕ ಮೆಡಿಕಲ್ ಮಾಫಿಯಾಗೆ ಕಡಿವಾಣ ಹಾಕಬೇಕು. ಪಕ್ಷಾತೀತವಾಗಿ ನಾವು ಸಹ ಮೆಡಿಕಲ್ ಮಾಫಿಯಾ ತಡೆಗಟ್ಟಲು ಬೆಂಬಲ ನೀಡುತ್ತೇವೆ. ಅದಕ್ಕಾಗಿ ಪ್ರತ್ಯೇಕ ವಿಧೇಯಕ ಜಾರಿಗೆ ತನ್ನಿ. ಕೂಡಲೇ, ರಾಜ್ಯ ಸರಕಾರ ಬಾಣಂತಿಯರ ಸಾವಿನ ಪ್ರಕರಣವನ್ನು ನ್ಯಾಯಾಧೀಶರ ಮಾರ್ಗದರ್ಶನದಲ್ಲಿ ನ್ಯಾಯಾಂಗ ತನಿಖೆಗೆ ನೀಡಬೇಕು ಎಂದು ಆಗ್ರಹಿಸಿದರು.

ಶೇ.80 ಬಾಣಂತಿಯರು ಸಾವು ಆಸ್ಪತ್ರೆಯಲ್ಲೇ ಆಗಿದೆ. ಪಶ್ಚಿಮ ಬಂಗಾಳದ ಕಂಪನಿ ಸರಬರಾಜು ಮಾಡಿದ ಔಷಧಿಗಳಿಂದಲೇ ಮಹಿಳೆಯರ ಸಾವಾಗಿದೆ. ಬಾಣಂತಿಯರ ಸಾವನ್ನು ಸಮರ್ಥಿಸಿಕೊಂಡಿರುವ ಆರೋಗ್ಯ ಸಚಿವರನ್ನು ವಜಾಗೊಳಿಸಬೇಕು. ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು ಮಾಡಬೇಕು.

- ಅಶ್ವತ್ಥ್ ನಾರಾಯಣ ಶಾಸಕ

### ಬಾಣಂತಿಯರ ಸಾವಿಗೆ ಸರಕಾರ ಕಾರಣ

ವಿಧಾನಸಭೆ ಕಲಾಪದಲ್ಲಿ ಬುಧವಾರ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ನಡೆದ ಚರ್ಚೆಯಲ್ಲಿ ಶಾಸಕ ಅಶ್ವತ್ಥ್ ನಾರಾಯಣ ಮಾತನಾಡಿ, ಬಾಣಂತಿಯರ ಸಾವಿಗೆ ಸರಕಾರವೇ ನೇರ ಕಾರಣವಾಗಿದೆ. ಜನವಿರೋಧಿ, ಆರೋಗ್ಯ ವಿರೋಧಿ ಸರಕಾರ, ನೇರವಾಗಿ ಕೊಲೆ ಮಾಡುತ್ತಿದೆ. ರಾಜ್ಯದಲ್ಲಿ ಕೊಲೆಗಡುಕ ಸರಕಾರವಾಗಿದೆ ಅಸ್ತಿತ್ವದಲ್ಲಿದೆ ಎಂದು ಆರೋಪಿಸಿದರು. ರಾಜ್ಯದ ಸರಕಾರಿ ಆಸ್ಪತ್ರೆಗಳಲ್ಲಿ ಯೂಸರ್ ಚಾರ್ಜ್ ಪಾಲಿಸಿ ಇಲ್ಲ. ಯಾವುದೇ ಆಸ್ಪತ್ರೆಗಳು ಸಹ ಯೂಸರ್ ಪಾಲಿಸಿ ಅನುಸರಿಸುವುದಿಲ್ಲ. ಸರಕಾರಿ ಆಸ್ಪತ್ರೆಗಳಲ್ಲಿ ಕ್ಯಾಶ್ ಕೌಂಟರ್ ಅವಶ್ಯಕತೆಯಿಲ್ಲ. ತಕ್ಷಣವೇ ಸರಕಾರಿ ಆಸ್ಪತ್ರೆಗಳಲ್ಲಿನ ಕ್ಯಾಶ್ ಕೌಂಟರ್ ಪದ್ಧತಿಗಳನ್ನು ತೆಗೆಯಬೇಕು ಎಂದು ಆಗ್ರಹಿಸಿದರು.

### ಬ್ಲಾಕ್ ಲಿಸ್ಟ್‌ಗೆ ಹಾಕಿದರು, ಪುನಃ ಸರಬರಾಜು ಮಾಡಿದ್ದು ಏಕೆ?

ರಾಜ್ಯದ ಸರಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಇದೆ ಎಂದು ಕರ್ನಾಟಕ ರಾಜ್ಯ ಔಷಧಿ ನಿಯಮಿತ ಆರು ತಿಂಗಳ ಹಿಂದೆಯೇ ಹೇಳಿತ್ತು. ಎರಡು ಬ್ಯಾಚ್‌ಗಳನ್ನು ದೋಷಪೂರಿತವಾಗಿದೆ. ಅದನ್ನು ಉಪಯೋಗಿಸಬಾರದು ಎಂದು ರಾಜ್ಯದ ಎಲ್ಲಾ ಉಗ್ರಣಗಳಿಗೂ ಡ್ರಗ್ಸ್ ಡಿಪಾರ್ಟ್ಮೆಂಟ್ ಆದೇಶ ಸಹ ಹೊರಡಿಸಿತ್ತು. ಆದರು, ಬ್ಯಾನ್ ಆಗಿದೆ ಎರಡು ಬ್ಯಾಚ್ ಪುನಃ ಔಷಧಿಗಳನ್ನು ಸರಬರಾಜು ಮಾಡಿದ್ದು ಏಕೆ? ಅವರಿಗೆ ಅನುಮತಿ ನೀಡಿದ್ದು ಯಾರು? ಬ್ಲಾಕ್ ಲಿಸ್ಟ್ ಅಲ್ಲಿದ್ದ ಕಂಪನಿಗಳು ವೈಟ್ ಲಿಸ್ಟ್ ಗೆ ಬಂದಿದ್ದು ಹೇಗೆ? ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು, ರಾಜ್ಯದ ನಾಲ್ಕು ಕಡೆಗೆ ಪ್ರಕರಣ ದಾಖಲಾಗಿತ್ತು. ಆದರೆ, ಬ್ಯಾನ್ ಆದ ಕಂಪನಿಗಳು ಕೋರ್ಟ್ ಮೊರೆ ಹೋಗಿ ಪ್ರಕರಣ ವಜಾಗೊಳಿಸಿ, ಮತ್ತೆ ಔಷಧಿ ಸರಬರಾಜು ಮಾಡಲು ಅನುಮತಿ ಪಡೆದಿವೆ ಎಂದರು. ಇದರ ಬಗ್ಗೆ ಸರಕಾರ ಏಕೆ ಹೈಕೋರ್ಟ್ ಗೆ ಮೊರೆ ಹೋಗಿಲ್ಲ. ಆರೋಗ್ಯ ಇಲಾಖೆ ದೊಡ್ಡ ದೊಡ್ಡ ಫ್ರಾಡ್ ಕಂಪನಿಗಳ ವಿರುದ್ಧ ಕ್ರಮಕೈಗೊಳ್ಳಲು ಮುಂದಾಗಬೇಕು ಎಂದು ಸಲಹೆ ನೀಡಿದರು.

---

ಸದನ
ಹೈಲೈಟ್ಸ್

### 5022 ಆಸ್ತಿ ಮುಜರಾಯಿಗೆ ಖಾತಾ ಬದಲಾವಣೆ

ವಿಧಾನ ಪರಿಷತ್: ಕಾಂಗ್ರೆಸ್ ಸರಕಾರ ಅಧಿಕಾರ ಬಂದ ಮೇಲೆ 5022 ಆಸ್ತಿಗಳನ್ನು ಮುಜರಾಯಿ ಇಲಾಖೆಗೆ ಖಾತಾ ಬದಲಾವಣೆ ಮಾಡಿಕೊಳ್ಳಲಾಗಿದೆ ಎಂದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾಹಿತಿ ನೀಡಿದರು.

ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯ ಎನ್. ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಅವರು, ಯಾವುದೇ ಆಸ್ತಿಯನ್ನು ಒತ್ತುವರಿ ಮಾಡಲು ಸರಕಾರ ಬಿಡುವುದಿಲ್ಲ. ನಮ್ಮ ಸರಕಾರ ಅಧಿಕಾರಕ್ಕೆ ಬಂದಾಗಿನಿಟದ ರಾಜ್ಯದ ಮುಜರಾಯಿ ಆಸ್ತಿಗಳ ಸಂರಕ್ಷಣೆಗೆ ಆದ್ಯತೆ ನೀಡಲಾಗಿದೆ. ಇನ್ನೂ ಶ್ರೀರಂಗಪಟ್ಟಣದ ದೇವಸ್ಥಾನಕ್ಕೆ 1939ರಲ್ಲಿ ದಾನವಾಗಿ ನೀಡಿದ್ದ 1198 ಎಕರೆ ಜಾಗದಲ್ಲಿ ಮಾಹಿತಿ ಕೊರತೆಯಿಂದ ಮಂಚನಬೆಲೆ ಜಲಾಶಯದಿಂದ ಜಮೀನು ಕಳೆದುಕೊಂಡ ನಿರಾಶಿತ್ರರಿಗೆ ನೀಡಲಾಗಿದೆ ಎಂದು ತಿಳಿಸಿದರು.

ಅಲ್ಲದೇ ಕೆಲವೊಂದಿಷ್ಟು ಜಾಗ ಒತ್ತುವರಿಯಾಗಿದೆ. ಇದೆಲ್ಲಾವನ್ನು ಪರಿಶೀಲನೆ ಮಾಡಲಾಗುತ್ತಿದ್ದು, ದಾಖಲೆ ಇಲ್ಲದ ಒತ್ತುವರಿ ಮಾಡಿಕೊಂಡವರನ್ನು ತೆರವುಗೊಳಿಸಿ ಉಳಿದವರನ್ನು ಕಾನೂನಾತ್ಮಕವಾಗಿ ಹೆಜ್ಜೆ ಇಟ್ಟು ಕಂದಾಯ ಹಾಗು ಮುಜರಾಯಿ ಇಲಾಖೆ ಜಂಟಿಯಾಗಿ ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು. ಸದ್ಯ ಉಳಿದಿರುವ ಭೂಮಿ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಜೋರ್
ಮಾತು

ಚಿಂಚೋಳಿ ಭಾಗದ ರೈತರ ಮನವಿ ಹಿನ್ನೆಲೆಯಲ್ಲಿ ಐದು ಸಾವಿರ ಟನ್ ಕಬ್ಬು ಅರೆಯುವ ಕಬ್ಬಿನ ಕಾರ್ಖಾನೆಯನ್ನು ಆರಂಭಿಸಿದೆ. ಆದರೆ ರಾಜಕೀಯ ದ್ವೇಷಕ್ಕಾಗಿ ಅದಕ್ಕೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನೋಟಿಸ್ ಕೊಡಿಸಿದ್ದಾರೆ. ಬೆಂಗಳೂರಿನ ಲುಲು ಮಾಲ್‌ಗಾಗಿ ಕೆರೆಯನ್ನೇ ಮುಳುಗಿಸಿರುವವರು, ನಮ್ಮ ಸಕ್ಕರೆ ಕಾರ್ಖಾನೆ ಆರಂಭವಾಗದಂತೆ ನೋಡಿಕೊಳ್ಳುವ ಕಾರಣಕ್ಕೆ ನೋಟಿಸ್ ಕೊಡಿಸಿದ್ದಾರೆ.

- ಬಸವಗೌಡ ಪಾಟೀಲ್ ಯತ್ನಾಳ್ ಶಾಸಕ

ಯತ್ನಾಳ್ ಅವರ ಸಕ್ಕರೆ ಕಾರ್ಖಾನೆಗೆ ನೋಟಿಸ್ ನೀಡುವುದಕ್ಕೂ ರಾಜ್ಯ ಸರಕಾರಕ್ಕೂ ಸಂಬಂಧವಿಲ್ಲ. ಇದರಲ್ಲಿ ಯಾವುದೇ ರಾಜಕೀಯ ದ್ವೇಷವಿಲ್ಲ. ಕೇಂದ್ರ ಮಾಲಿನ್ಯ ಮಂಡಳಿಯಿಂದ ನೋಟಿಸ್ ಬಂದಿರುವ ಕಾರಣಕ್ಕೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೋಟಿಸ್ ನೀಡಿದೆ. ಈ ಕಾನೂನಾತ್ಮಕ ವಿಷಯವನ್ನು ರಾಜಕೀಯವಾಗಿ ನೋಡುವುದು ಸರಿಯಲ್ಲ. ಸರಿಯಾದ ಪರವಾನಗಿ ಇಲ್ಲದಿದ್ದರೆ ನೋಟಿಸ್ ನೀಡುವುದರಲ್ಲಿ ತಪ್ಪೇನಿದೆ?

- ಶರಣಪ್ರಕಾಶ್ ಪಾಟೀಲ್ ಸಚಿವ




## ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ದಾವಣಗೆರೆ

**ಸಮಸ್ಯೆಯೇನು..?**

- ದಾವಣಗೆರೆ ನಗರದಲ್ಲಿ ನಗರ ಸಾರಿಗೆ ವಾಹನಗಳ ಕಾರ್ಯಾಚರಣೆ ಸಮಸ್ಯೆ
- **ಪರಿಹಾರ:** ದಾವಣಗೆರೆ ವಿಭಾಗದಿಂದ ದಾವಣಗೆರೆ ವ್ಯಾಪ್ತಿಯಲ್ಲಿ 867 ಸುತ್ತುವಳಿಗಳನ್ನುಪ್ರತಿ ನಿತ್ಯ ಸಾರ್ವಜನಿಕ ಪ್ರಯಾಣಿಕರು ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಸಾರಿಗೆ ಸೇವೆಯನ್ನು ಜನ ಸಂದಣಿ ಅವಧಿಯಲ್ಲಿ ಹೆಚ್ಚುವರಿ ಸುತ್ತುವಳಿಗಳ ಅವಶ್ಯಕತೆಯಿದ್ದು, ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಕಲ್ಪಿಸಲು ಅಗತ್ಯ ಕ್ರಮವಹಿಸಲಾಗುವುದು.

---

# ವಿಧಾನಸಭೆಯಲ್ಲಿ ಮತ್ತೆ ಮುನಿಟ್ರ್ಯಾಪ್ ಗದ್ದಲ

## ಪ್ರಕರಣ ಕೋರ್ಟಿನಲ್ಲಿರುವುದರಿಂದ ಚರ್ಚೆಗೆ ಬೇಕೆ ಎನ್ನುವ ಗೊಂದಲ | ಚರ್ಚೆಗೆ ಅವಕಾಶ ನೀಡುವಂತೆ ಪಟ್ಟು ಹಿಡಿದ ನಯನಾ ಮೋಟಮ್ಮ | ನನಗೆ ಚರ್ಚೆಗೆ ಅವಕಾಶ ನೀಡಬೇಕು ಎಂದ ಶಾಸಕ ಮುನಿರತ್ನ

**ಸುವರ್ಣಸೌಧ ವಿಧಾನಸಭೆ:** ಶಾಸಕ ಮುನಿರತ್ನ ವಿರುದ್ಧದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಅವಕಾಶ ನೀಡಬೇಕು ಎಂದು ಬುಧವಾರವೂ ಕಾಂಗ್ರೆಸ್ ಶಾಸಕರು ಆಗ್ರಹಿಸಿದರು.

ಬುಧವಾರ ಸದನ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಶಾಸಕಿ ನಯನಾ ಮೋಟಮ್ಮ ಅವರು, ಮಹಿಳೆಯ ಪರವಾಗಿರುವ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ನೀಡಬೇಕು. ಕಳೆದೊಂದು ವಾರದಿಂದ ಈ ವಿಷಯದ ಬಗ್ಗೆ ಚರ್ಚಿಸಲು ಅವಕಾಶ ಕೇಳುತ್ತಿದ್ದೇವೆ. ಆದರೆ ಅವಕಾಶ ನೀಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ವಿಧಾನಸಭೆಯಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ನಡೆದಿದೆ ಎನ್ನಲಾಗಿದೆ. ಇದರೊಂದಿಗೆ ಜಾತಿ ನಿಂದನೆಯೂ ಆಗಿದೆ. ಆದ್ದರಿಂದ ಈ ಬಗ್ಗೆ ಚರ್ಚಿಸಲು ಅವಕಾಶ ನೀಡಬೇಕು. ಚಳಿಗಾಲದ ಅಧಿವೇಶನ ಮುಗಿಯಲು ಇನ್ನೊಂದು ದಿನ ಬಾಕಿಯಿರುವುದರಿಂದ ಯಾವಾಗ ಅವಕಾಶ ಕೊಡುತ್ತಿರಿ? ಮಹಿಳಾ ಪರ ದನಿ ಎತ್ತಲು ಅವಕಾಶ ನೀಡಿ ಎಂದು ಕೋರಿದರು.

ನನ್ನ ವಿರುದ್ಧ ತಂದಿರುವ ಅಲ್ಪಾವಧಿ ಚರ್ಚೆ ಮಾಡಲು ನನಗೆ ಯಾವುದೇ ಸಮಸ್ಯೆಯಿಲ್ಲ. ನ್ಯಾಯಾಲಯದಲ್ಲಿರುವುದರಿಂದ ಚರ್ಚೆಗೆ ಸಾಧ್ಯವೇ ಎನ್ನುವುದನ್ನು ಸಭಾಧ್ಯಕ್ಷರು ತೀರ್ಮಾನಿಸಬೇಕು. ಒಂದು ವೇಳೆ ಚರ್ಚೆಗೆ ಅವಕಾಶ ನೀಡಿದರೆ, ಆ ಚರ್ಚೆಯ ಬಳಿಕ ನನಗೂ ಸ್ಪಷ್ಟೀಕರಣ ನೀಡಲು ಅವಕಾಶ ನೀಡಬೇಕು.

- ಮುನಿರತ್ನ ಶಾಸಕ

ಆಗ ಸಭಾಧ್ಯಕ್ಷ ಯು.ಟಿ.ಖಾದರ್ ಮಾತನಾಡಿ, ನೀವು ನೀಡಿರುವ ನೋಟಿಸ್ ನಿಯಮ 69ರಡಿ ಚರ್ಚೆಗೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಆ ವಿಚಾರ ಎಸ್‌ಐಟಿ ವಿಚಾರಣೆಯಲ್ಲಿದೆ. ನ್ಯಾಯಾಲಯದ ವಿಚಾರವೂ ಇದೆ. ಈ ವಿಚಾರದ ಚರ್ಚೆ ನಡೆದ ಸಂದರ್ಭದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಗದ್ದಲವಾಗಿತ್ತು. ನಿಯಮ 69ರಡಿ ಒಂದೂ ವಿಚಾರ ಚರ್ಚೆಗೆ ಕೊಡಲು ಅವಕಾಶ ಸಿಗಲಿಲ್ಲ. ವಕ್ಫ್ ಕುರಿತ ಚರ್ಚೆಗೆ ಉತ್ತರ, ಉತ್ತರ ಕರ್ನಾಟಕದ ಅಭಿವೃದ್ಧಿ ಕುರಿತ ಚರ್ಚೆಗೆ ಸರಕಾರ ಉತ್ತರ ನೀಡಬೇಕಿದೆ ಎಂದರು. ಆಗ ನಯನ ಮೋಟಮ್ಮ ಮಾತನಾಡಿ, ಆಡಳಿತ ಮತ್ತು ವಿರೋಧ ಪಕ್ಷದವರೂ ನಮ ಮಾತನ್ನು ಕೇಳಿಸಿಕೊಳ್ಳಬೇಕಿದೆ ಎಂದು ಹೇಳಿದರು.

ಆಗ ಸಭಾಧ್ಯಕ್ಷರು ಮಾತನಾಡಿ, ಚರ್ಚೆಗೆ ಅವಕಾಶ ಕೊಡಬೇಡಿ ಎಂದು ಹೇಳಿಲ್ಲ. ನಿಯಮ ಪ್ರಕಾರ ಅವಕಾಶವಿದೆಯೇ ಎಂದು ಕೇಳಿದ್ದಾರೆ. ಯಾವುದೇ ವಿಚಾರ ತನಿಖೆ ಹಂತದಲ್ಲಿದ್ದರೆ ಚರ್ಚಿಸಬಹುದು. ಆದರೆ ತನಿಖೆಗೆ ನ್ಯಾಯಾಲಯದ ವಿಚಾರಣೆಗೆ ಅಡ್ಡಿಯಾಗದಂತೆ ಚರ್ಚೆ ಮಾಡಬೇಕಾಗುತ್ತದೆ ಎಂದು ಆಗ್ರಹಿಸಿದರು.

---

ಸದನ
ಸ್ವಾರಸ್ಯ

### ನಮಗೂ ಪಾನಿಪೂರಿ, ಆಮ್ಲೆಟ್ ಕೊಡಿ

ವಿಧಾನಸಭೆಯ ಮೊಗಸಾಲೆಯಲ್ಲಿ ಕ್ಯಾಂಟೀನ್ನಲ್ಲಿ ಕುರುಕಲು ತಿಂಡಿ, ಪಾನಿಪೂರಿ, ಕಾಫಿ ಟೀ ಸೇರಿದಂತೆ ಲಘು ಉಪಾಹಾರ ಲಭ್ಯವಿದೆ. ಆದರೆ ವಿಧಾನಪರಿಷತ್‌ನಲ್ಲಿ ಈ ರೀತಿಯ ಯಾವುದೇ ವ್ಯವಸ್ಥೆ ಇಲ್ಲದಿರುವುದು ಪರಿಷತ್‌ಗೆ ಚರ್ಚೆಗೆ ಗ್ರಾಸವಾಯಿತು. ಬಿಜೆಪಿಯ ಪರಿಷತ್ ಸದಸ್ಯ ಡಿ.ಎಸ್. ಅರುಣ್ ಮಾತನಾಡಿ, ಸಭಾಪತಿಗಳೇ, ನಾವು ಇಲ್ಲಿ ಗಂಟೆಗಟ್ಟಲೆ ಕುಳಿತರೂ ಏನು ಸಿಗೋಲ್ಲ, ಬರೀ ಕಾಫಿ ಟೀ ಅಷ್ಟೇ ಸಿಗುತ್ತೆ. ಆದರೆ, ವಿಧಾನಸಭೆ ಲಾಂಜ್‌ನಲ್ಲಿ ಪಾನಿಪುರಿಯಿಂದ ಹಿಡಿದು ಆಮ್ಲೆಟ್ ವರೆಗೂ ಸಿಗುತ್ತೆ ಯಾಕೆ ಈ ರೀತಿ ಎಂದು ವಿಧಾನ ಪರಿಷತ್ ಸದಸ್ಯ ಡಿ. ಎಸ್. ಅರುಣ್ ಹಾಸ್ಯದ ಚಟಾಕಿ ಹಾರಿಸಿದರು. ಇನ್ನೂ ಇದಕ್ಕೆ ಸದಸ್ಯೆ ಉಮಾಶ್ರೀ, ಅರುಣ್ ನೀನು ಆಮ್ಲೆಟ್ ತಿಂತೀಯಾ ಎಂದು ಕಾಲೆಳೆದರು. ಅದಕ್ಕೆ ಅರುಣ್ ನಗುಮೊಗದಲ್ಲಿಯೇ ಕುಳಿತುಕೊಂಡರೆ, ಮೊಗಸಾಲೆಯಲ್ಲಿ ವಿಧಾನಸಭೆಯಂತೆ ನಮಗೂ ತಿನ್ನುವುದಕ್ಕೆ ಏನಾದರೂ ಕೊಡಿಸಿ ಎನ್ನುವ ಬೇಡಿಕೆಯನ್ನು ಮಾತ್ರ ಸಭಾಪತಿಗಳ ಕಿವಿಗೆ ಹಾಕುವಲ್ಲಿ ಪರಿಷತ್ ಸದಸ್ಯರು ಯಶಸ್ವಿಯಾದರು.

### 16,644 ಪೋಡಿ ಮುಕ್ತ ಗ್ರಾಮ: ಸಚಿವ ಕೃಷ್ಣ ಬೈರೇಗೌಡ

ವಿಧಾನ ಪರಿಷತ್: ಪೋಡಿ ಮುಕ್ತ ಯೋಜನೆಯಡಿ ರಾಜ್ಯದಲ್ಲಿ ಈಗಾಗಲೇ 16,644 ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮಗಳಾಗಿ ಮಾಡಲು ಕ್ರಮ ವಹಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು. ಪ್ರಶ್ನೋತ್ತರ ಅವಧಿ ವೇಳೆ ಸದಸ್ಯ ರಾಮೋಜಿ ಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಭೂ ಮಾಪನ ಇಲಾಖೆಯಲ್ಲಿ ಕಳೆದ 3 ವರ್ಷಗಳಲ್ಲಿ ವಿವಿಧ ರೀತಿಯ 6,62,825 ಪೋಡಿ ಅರ್ಜಿಗಳನ್ನು ಸ್ವೀಕರಿಸಿದ್ದು, ಅದರಲ್ಲಿ 5,33,545 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಪ್ರಕರಣಗಳಲ್ಲಿನ ನ್ಯೂನತೆಗಳನ್ನು ಶೀಘ್ರವಾಗಿ ಸರಿಪಡಿಸಿಕೊಂಡು ಕಂದಾಯ ಹಾಗೂ ಭೂ ಮಾಪನ ಇಲಾಖೆಯ ನಡವಳಿಗಳೊಂದಿಗೆ ವಿಳಂಬವಿಲ್ಲದೆ ಪೋಡಿ ದುರಸ್ತಿ ಮಾಡಲಾಗುತ್ತಿದೆ ಎಂದರು. ಈ ಹಿಂದೆ, ಮ್ಯುಟೇಷನ್ ಪೋಡಿಯಂತಹ ಪ್ರಕ್ರಿಯೆಯನ್ನು ಪೂರೈಸಲು ನಾಲ್ಕರಿಂದ ಆರು ತಿಂಗಳವರೆಗೆ ಕಾಲಾವಕಾಶ ತೆಗೆದುಕೊಳ್ಳಲಾಗುತ್ತಿತ್ತು. ಆದರೆ, ಇದೀಗ ಇಂತಹ ಕೆಲಸಗಳಿಗೆ ಹೆಚ್ಚಿನ ಆದ್ಯತೆ ನೀಡಿ ಎಲ್ಲ ಹಂತಗಳ ಪ್ರಕ್ರಿಯೆಗಳನ್ನು ಸೂಕ್ತ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮೂಲಕ ಚುರುಕುಗೊಳಿಸಿದ್ದು, ಪೋಡಿಗೆ ಯೋಗ್ಯವಾಗಿರುವ ಯಾವುದೇ ಪ್ರಕರಣವನ್ನು 1 ತಿಂಗಳ ಅವಧಿಯಲ್ಲಿ ಪೂರೈಸಲಾಗುತ್ತಿದೆ ಎಂದು ವಿವರಿಸಿದರು.

---

# ಸುವರ್ಣಸೌಧಕ್ಕೆ ಬಂದ ಗೃಹಲಕ್ಷ್ಮಿಯರು

## ಸಿದ್ದರಾಮಯ್ಯ ಅವರಿಗೆ ಅಭಿನಂದನೆ ಸಲ್ಲಿಸಿದ ಗೃಹಲಕ್ಷ್ಮಿ ಫಲಾನುಭವಿಗಳು

**ಸುವರ್ಣಸೌಧ:** ರಾಜ್ಯ ಸರಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿರುವ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳು ಬುಧವಾರ ಸುವರ್ಣಸೌಧಕ್ಕೆ ಭೇಟಿ ನೀಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸೇರಿದಂತೆ ಸಂಪುಟದ ವಿವಿಧ ಸಚಿವರನ್ನು ಭೇಟಿಯಾಗಿ ಸಂಭ್ರಮಿಸಿದರು.

ಗೃಹಲಕ್ಷ್ಮಿ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದ ಬಳಿಕ ಮಾತನಾಡಿದ ಸಿದ್ದರಾಮಯ್ಯ ಅವರು, ಗ್ಯಾರಂಟಿಗಳಿಂದ ಬಡವರು, ಮಧ್ಯಮ ಸೇರಿದಂತೆ ಎಲ್ಲಾ ವರ್ಗದ ಜನರಿಗೆ ಅನುಕೂಲವಾಗುತ್ತಿದೆ. ಗ್ಯಾರಂಟಿಗಳ ಅನುಕೂಲ ಪಡೆದ ಮಹಿಳೆಯರು ನನ್ನನ್ನು ಭೇಟಿಯಾಗಿದ್ದಾರೆ. ಮಹಿಳೆಯರಿಗೆ ತುಂಬಾ ಅನುಕೂಲವಾಗಿದೆ ಎಂದು ಹೇಳಿದ್ದಾರೆ. ರಾಜ್ಯ ಸರಕಾರ ಜಾರಿಗೊಳಿಸಿರುವ ಐದು ಗ್ಯಾರಂಟಿಗಳು ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಗೃಹಲಕ್ಷ್ಮಿ ಯೋಜನೆಯ ಹಣದಿಂದ ನಾನಾ ಬದುಕಿನ ಅವಕಾಶಗಳನ್ನು ಸೃಷ್ಟಿಸಿಕೊಂಡ 25 ಕ್ಕೂ ಹೆಚ್ಚು ಮಂದಿ ಫಲಾನುಭವಿಗಳನ್ನು ಭೇಟಿ ಮಾಡಿ ಸಂವಾದ ನಡೆಸಿದ್ದೇನೆ. ಗೃಹಲಕ್ಷ್ಮಿ ಯೋಜನೆಯಿಂದ ಫಲಾನುಭವಿಗಳ ಜೀವನದಲ್ಲಿ ಆಗಿರುವ ಲಾಭಗಳ ಬಗ್ಗೆ ವಿವರಿಸಿದ್ದಾರೆ. ಬದುಕಿಗೆ ಹೊಸ ಚೈತನ್ಯ ನೀಡಿದ ಗೃಹಲಕ್ಷ್ಮಿ ಯೋಜನೆಯನ್ನು ಸಾಕಾರಗೊಳಿಸಿದ ಮುಖ್ಯಮಂತ್ರಿಗಳು, ಇಲಾಖೆಯ ಸಚಿವರು ಹಾಗೂ ಸರಕಾರಕ್ಕೆ ಕೃತಜ್ಞರಾಗಿರುವುದಾಗಿ ಗೃಹಲಕ್ಷ್ಮಿಯರು ತಿಳಿಸಿದರು.

ಈ ಯೋಜನೆಯಿಂದ ಒಂದೇ ಮನೆಯ ಅತ್ತೆ ಸೊಸೆಯ ಮಧ್ಯೆ ಜಗಳ ತಂದಿದೆ ಎಂದು ಬಿಜೆಪಿಯವರು ಆರೋಪಿಸಿದ್ದರು. ಆದರೆ ಇಂದಿನ ಕಾರ್ಯಕ್ರಮಕ್ಕೆ ಅತ್ತೆಸೊಸೆಯರೇ ಜೊತೆ ಜೊತೆಯಾಗಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಯೋಜನೆಯಿಂದ ತಮಗಾಗಿರುವ ಲಾಭದ ಬಗ್ಗೆ ಮಾತನಾಡಿದ್ದಾರೆ. ಈ ಯೋಜನೆಯಿಂದ ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರಾಗುತ್ತಿರುವುದು ಸಂತೋಷದ ವಿಚಾರ. ಆದ್ದರಿಂದ ಮಹಿಳೆಯರನ್ನು ಸಶಕ್ತಗೊಳಿಸುವ ಈ ಯೋಜನೆಯನ್ನು ಮುಂದುವರಿಸಲಿದ್ದೇವೆ ಎಂದು ತಿಳಿಸಿದರು.

ಈ ವೇಳೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಎಚ್.ಎಂ.ರೇವಣ್ಣ ಉಪಸ್ಥಿತರಿದ್ದರು.

ರಾಜ್ಯ ಸರಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿರುವ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳು ಬುಧವಾರ ಸುವರ್ಣಸೌಧಕ್ಕೆ ಭೇಟಿ ನೀಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸೇರಿದಂತೆ ಸಂಪುಟದ ವಿವಿಧ ಸಚಿವರನ್ನು ಭೇಟಿಯಾಗಿ ಸಂಭ್ರಮಿಸಿದರು.

### ವಿಪಕ್ಷಗಳ ಅಪಪ್ರಚಾರಕ್ಕೆ ತಿರುಗೇಟು

ಗೃಹಲಕ್ಷ್ಮಿ ಹಣ ಕೂಡಿಟ್ಟು ಬೋರ್‌ವೆಲ್ ಕೊರೆಸಿದ ಗದಗ ಜಿಲ್ಲೆಯ ಗಜೇಂದ್ರಗಢದ ಅತ್ತೆ-ಸೊಸೆ ಮಾಬುಬಿ ಹಾಗೂ ರೋಷನ್ ಬೇಗಂ ಅವರನ್ನು ಮುಖ್ಯಮಂತ್ರಿಗಳಿಗೆ ಸಚಿವರು ಪರಿಚಯಿಸಿಕೊಟ್ಟರು. ಗೃಹಲಕ್ಷ್ಮಿ ಯೋಜನೆ ಹಣದಿಂದ ಅತ್ತೆ-ಸೊಸೆ ನಡುವೆ ಜಗಳ ಆಗಲಿದೆ ಎನ್ನುತ್ತಿದ್ದ ವಿಪಕ್ಷಗಳ ಅಪಪ್ರಚಾರಕ್ಕೆ ಇದು ತಿರುಗೇಟಾಗಿದೆ ಎಂದು ಸಚಿವರು ಹೇಳಿದರು. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಲೈಬ್ರರಿ ಆರಂಭಿಸಿದ ರಾಯಭಾಗದ ಮಲ್ಲವ್ವಾ ಮೇಟಿ, ಫ್ಯಾನ್ಸಿ ಸ್ಟೋರ್ ಆರಂಭಿಸಿದ ಶಿಗ್ಗಾವ್‌ನ ದ್ರಾಕ್ಷಾಯಣಿ ಪಾಟೀಲ್, ತರಕಾರಿ ವ್ಯಾಪಾರ ಆರಂಭಿಸಿದ ಬಾಗಲಕೋಟೆಯ ಮುಧೋಳದ ಗೌರಿ ಕೃಷ್ಣಾ ಲಮಾಣಿ ಸೇರಿದಂತೆ ಪ್ರತಿಯೊಬ್ಬರನ್ನು ಮುಖ್ಯಮಂತ್ರಿಗಳಿಗೆ ಸಚಿವರು ಪರಿಚಯಿಸಿಕೊಟ್ಟರು.

---

ಸದನ
ಕ್ಲಿಕ್

ಪ್ರತಿಪಕ್ಷಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರಿಸಿದ ಪರಿ.

## ಪ್ರತಿದಿನ ಪ್ರಯಾಣಿಸುವ ಸಂಖ್ಯೆ 23 ಲಕ್ಷಕ್ಕೆ ಹೆಚ್ಚಳ

**ವಿಧಾನ ಪರಿಷತ್:** ರಾಜ್ಯದಲ್ಲಿ ಶಕ್ತಿ ಯೋಜನೆ ಜಾರಿಯಾದ ಬಳಿಕ ಪ್ರತಿದಿನ ಸರಕಾರಿ ಬಸ್‌ಗಳಲ್ಲಿ ಪ್ರಯಾಣಿಸುವರ ಸಂಖ್ಯೆ 23 ಲಕ್ಷದಷ್ಟು ಹೆಚ್ಚಳ ಕಂಡಿದೆ ಎಂದು ಸಚಿವ ಸಂತೋಷ್ ಲಾಡ್ ತಿಳಿಸಿದ್ದಾರೆ. ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯ ಎಸ್.ವಿ.ಸಂಕನೂರ ಪ್ರಶ್ನೆಗೆ ಸಾರಿಗೆ ಸಚಿವರ ಪರವಾಗಿ ಉತ್ತರಿಸಿದ ಅವರು, ಶಕ್ತಿ ಯೋಜನೆ ಜಾರಿಗೆ ಮುನ್ನ ದಿನಂಪ್ರತಿ 93.46 ಲಕ್ಷದಷ್ಟು ಪ್ರಯಾಣಿಕರ ಸಂಖ್ಯೆಯಿದ್ದರೆ ನಂತರದಲ್ಲಿ ಇದು 1.16 ಕೋಟಿಗೆ ಹೆಚ್ಚಳವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಉದ್ಯೋಗದಲ್ಲಿ ತೊಡಗಿಕೊಂಡು ಆರ್ಥಿಕ ಅಭಿವೃದ್ಧಿ ಸಹಕಾರಿಯಾಗಿದೆ ಎಂದಿದ್ದಾರೆ.

### ಯಾವುದಾದರೂ ದೇವಾಲಯ, ರೈತರಿಗೆ ಸಮಸ್ಯೆಯಾಗಿದ್ದರೆ ನ್ಯಾಯಾಂಗ ತನಿಖೆಗೆ ಸಿದ್ಧ: ಸಚಿವ ಜಮೀರ್ ಸ್ಪಷ್ಟನೆ

# ದೇಗುಲ, ರೈತರ ಭೂಮಿ ವಕ್ಫ್ ವಶಕ್ಕಿಲ್ಲ

ನಾವು ಈಗಾಗಲೇ ದೇವಾಲಯ ಹಾಗೂ ರೈತರ ಆಸ್ತಿಯನ್ನು ಮುಟ್ಟುವುದಿಲ್ಲ ಎಂದು ಸ್ಪಷ್ಟಪಡಿಸಿದ್ದೇವೆ. ಮುಂದಿನ ದಿನದಲ್ಲಿ ಈ ಬಗ್ಗೆ ಮತ್ತೊಮ್ಮೆ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು. ಗೊಂದಲದಲ್ಲಿರುವ ನೋಟಿಸ್ ಗಳ ಬಗ್ಗೆ ತನಿಖೆ ನಡೆಸಲು ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಲಾಗುವುದು.
- ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಿಜೆಪಿಗರು ಸುಳ್ಳುಗಳನ್ನೇ ನೂರು ಬಾರಿ ಹೇಳಿ ಸತ್ಯವನ್ನಾಗಿಸುವ ಪ್ರಯತ್ನಮಾಡುತ್ತಿದ್ದಾರೆ. ಯಾವುದೇ ಗೊಂದಲವಿಲ್ಲದಿದ್ದರೂ ಗೊಂದಲ ಸೃಷ್ಟಿಸಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನದಲ್ಲಿ ಬಿಜೆಪಿಗರಿದ್ದಾರೆ. ಈ ಮೂಲಕ ರಾಜ್ಯದಲ್ಲಿ ಸಹೋದರರಂತಿರುವ ಧರ್ಮಗಳ ನಡುವೆ ತಂದಿಡುವ ಕೆಲಸವನ್ನು ಮಾಡುತ್ತಿದ್ದಾರೆ.
- ಕೃಷ್ಣಬೈರೇಗೌಡ, ಸಚಿವ

ರೈತರ ಭೂಮಿಯನ್ನು ಹಿಂಪಡೆಯಲ್ಲ ಎನ್ನುತ್ತಾರೆ. ಆದರೆ ಊರಿಗೆ ಊರನ್ನೇ ವಕ್ಫ್ ಆಸ್ತಿ ಎಂದು ಘೋಷಿಸುತ್ತಿದ್ದಾರೆ. ವಿಶ್ವೇಶ್ವರಯ್ಯ ಅವರು ಓದಿದ ಶಾಲೆಯನ್ನೂ ವಕ್ಫ್ ಆಸ್ತಿ ಎನ್ನಲಾಗುತ್ತಿದೆ. ಈಗ ನೀಡಿರುವ ನೋಟಿಸ್ ಅನ್ನು ಹಿಂಪಡೆಯುವುದಷ್ಟೇ ಅಲ್ಲದೇ, ರಾಜ್ಯಪತ್ರವನ್ನೇ ಹಿಂಪಡೆಯಬೇಕು.
- ಆರ್.ಅಶೋಕ, ಪ್ರತಿಪಕ್ಷ ನಾಯಕ

ವಕ್ಫ್ ವಿಷಯದಲ್ಲಿ ರೈತರು, ದೇವಾಲಯಗಳಿಗೆ ಯಾವುದೇ ಸಮಸ್ಯೆ ಮಾಡುವುದಿಲ್ಲ ಎಂದಿರುವುದು ಸರಿ. ಆದರೆ 1974ರ ಕಾಯಿದೆ ಹಾಗೂ ರಾಜ್ಯಪತ್ರವನ್ನು ರದ್ದುಪಡಿಸಬೇಕು. ಆಗ ಮಾತ್ರ ಈ ಸಮಸ್ಯೆಗೆ ಪೂರ್ಣ ಪರಿಹಾರ ಸಿಗಲು ಸಾಧ್ಯವಾಗುತ್ತದೆ
- ಸುನೀಲ್ ಕುಮಾರ್, ಶಾಸಕ

**ಸುವರ್ಣಸೌಧ** ಬೆಳಗಾವಿ

ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ ವಕ್ಫ್ ನೋಟಿಸ್ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರ ಸ್ಪಷ್ಟನೆ ನೀಡಿದೆ. ಯಾವುದೇ ಕಾರಣಕ್ಕೂ ದೇವಾಲಯ ಹಾಗೂ ರೈತರು ಉಳಿಮೆ ಮಾಡಿಕೊಂಡಿರುವ ಜಮೀನಿನಿಂದ ಯಾವುದೇ ಎತ್ತುವಳಿ ಮಾಡುವುದಿಲ್ಲ. ಇರುವ ಗೊಂದಲಗಳ ಪರಿಹಾರಕ್ಕೆ ಗೆಜೆಡ್ ನೋಟಿಫಿಕೇಷನ್ ಹಿಂಪಡೆಯುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಬುಧವಾರ ವಕ್ಫ್ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಚರ್ಚೆಗೆ ಸರಕಾರದ ಪರವಾಗಿ ಉತ್ತರಿಸಿದ ವಕ್ಫ್ ಸಚಿವ ಜಮೀರ್ ಅಹಮದ್ , ಕಂದಾಯ ಸಚಿವ ಕೃಷ್ಣಬೈರೇಗೌಡ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುದೀರ್ಘ ಉತ್ತರ ನೀಡಿದರು. ಉತ್ತರಿಸುವ ಆರಂಭದಲ್ಲಿಯೇ, ಯಾವುದೇ ಕಾರಣಕ್ಕೂ ರೈತರ ಹಾಗೂ ದೇವಾಲಯದ ಭೂಮಿ ಹಿಂಪಡೆಯುವುದಿಲ್ಲ ಎನ್ನುವ ಮೂಲಕ ಬಿಜೆಪಿ ನಾಯಕರನ್ನು ಕಟ್ಟಿಹಾಕುವ ಪ್ರಯತ್ನದಲ್ಲಿ ಯಶಸ್ವಿಯಾದರು. ಆದರೆ ಕೆಲವೊಂದಷ್ಟು ನೋಟಿಸ್‌ನಲ್ಲಿ ಗೊಂದಲಗಳಿರುವುದನ್ನು ಒಪ್ಪಿಕೊಂಡಿರುವ ರಾಜ್ಯ ಸರಕಾರ, ಈ ಗೊಂದಲ ಪರಿಹಾರಕ್ಕೆ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ವರದಿ ಪಡೆಯುವ ಭರವಸೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ಆರಂಭದಲ್ಲಿ ಸಚಿವ ಜಮೀರ್ ಉತ್ತರಿಸಿದ ಬಳಿಕ ಕಂದಾಯ ಸಚಿವ ಕೃಷ್ಣಬೈರೇಗೌಡ ಮಾತನಾಡಲು ಮುಂದಾಗಿದ್ದಕ್ಕೆ ವಿರೋಧಿಸಿದ ಬಿಜೆಪಿ ಶಾಸಕರು, ಯಾವುದೇ ಕಾರಣಕ್ಕೂ ಕೃಷ್ಣಬೈರೇಗೌಡ ಅವರು ಉತ್ತರಿಸಬಾರದು. ವಕ್ಫ್ ವಿಷಯದಲ್ಲಿ ಮುಖ್ಯ ಮಂತ್ರಿಗಳೇ ಉತ್ತರಿಸಬೇಕು ಎಂದು ಆಗ್ರಹಿಸಿದರು. ಇದರೊಂದಿಗೆ ಗೆಜೆಟ್ ನೋಟಿಫಿಕೇಷನ್ ರದ್ದುಪಡಿಸಲು ಆಗ್ರಹಿಸಿದ ಬಿಜೆಪಿ ಮಾತನ್ನು ಒಪ್ಪದ ಕಾರಣಕ್ಕೆ ಬಿಜೆಪಿಗರು ಸಭಾತ್ಯಾಗ ಮಾಡಿದರು. ಸರಕಾರದ ವಿರುದ್ಧ ಘೋಷಣೆ ಕೂಗುವುದರೊಂದಿಗೆ ಸಭಾತ್ಯಾಗ ಮಾಡಿದರು. ಬಳಿಕ ಕಂದಾಯ ಸಚಿವ ಕೃಷ್ಣಬೈರೇಗೌಡ, ಸಿದ್ದರಾಮಯ್ಯ ಅವರು ಉತ್ತರಿಸಿದರು.

**ನಮ್ಮ ಆಸ್ತಿ ಉಳಿಸಿಕೊಳ್ಳುತ್ತೇವೆ:** ಇನ್ನು ಉತ್ತರಿಸುವ ಆರಂಭದಲ್ಲಿಯೇ ಜಮೀರ್ ಅಹಮದ್ ಅವರು, ದೇವಾಲಯ ಹಾಗೂ ರೈತರ ಭೂಮಿ ಹಿಂಪಡೆಯುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಆದರೆ ವಕ್ಫ್ ಭೂಮಿಯನ್ನು ಕಾಪಾಡಿಕೊಳ್ಳುವುದು ವಕ್ಫ್ ಬೋರ್ಡ್ ಹಾಗೂ ಇಲಾಖೆಯ ಕರ್ತವ್ಯವಾಗಿರುತ್ತದೆ. ಆದ್ದರಿಂದ ಕಾನೂನಾತ್ಮಕವಾಗಿ ನಮ್ಮ ಭೂಮಿಯನ್ನು ನಾವು ಉಳಿಸಿಕೊಳ್ಳುತ್ತೇವೆ ಎಂದು ಸವಾಲು ಹಾಕಿದರು. ಈ ವೇಳೆ ಮಧ್ಯಪ್ರವೇಶಿಸಿದ ಬಿಜೆಪಿಗರು, ವಿಶ್ವೇಶ್ವರಯ್ಯ ಅವರು ಓದಿದ ಶಾಲೆಯನ್ನು ನಿಮ್ಮದು ಎನ್ನಲು ಸಾಧ್ಯವೇ ಎಂದು ಪ್ರಶ್ನಿಸಿದರು. ಆ ಪ್ರಕರಣ ನ್ಯಾಯಾಲಯದಲ್ಲಿದೆ. ಹಾಗೆಂದ ಮಾತ್ರಕ್ಕೆ ಎಲ್ಲ ಆಸ್ತಿಯನ್ನು ಬಿಟ್ಟುಕೊಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಜಮೀರ್ ಅವರ ಉತ್ತರಕ್ಕೆ ವಿರೋಧಿಸಿದ ಬಿಜೆಪಿಗರು, ಕಾಂಗ್ರೆಸಿಗರು ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಒಂದೆಡೆ ಯಾವುದೇ ಕ್ರಮವಹಿಸುವುದಿಲ್ಲ ಎನ್ನುವ ಸರಕಾರ, ಇಡೀ ಆಸ್ತಿಯನ್ನು ಕಬಳಿಸಲು ಮುಂದಾಗಿದೆ ಎಂದು ಆರೋಪಿಸಿದರು. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿ, ವಕ್ಫ್ ವಿಷಯದಲ್ಲಿ ಸುಳ್ಳನ್ನು ಹೇಳಿಕೊಂಡು ಬಿಜೆಪಿಗರು ಓಡಾಡುತ್ತಿದ್ದಾರೆ. ಇದೇ ವಿಷಯವನ್ನು ಮುಂದಿಟ್ಟುಕೊಂಡು ಉಪಚುನಾವಣೆ ಎದುರಿಸಿದ ಬಿಜೆಪಿಗರಿಗೆ ರಾಜ್ಯದ ಜನರು ಉತ್ತರ ನೀಡಿದ್ದಾರೆ ಎಂದು ತಿರುಗೇಟು ನೀಡಿದರು. ಈ ವೇಳೆ ಬಿಜೆಪಿ-ಕಾಂಗ್ರೆಸ್ ಶಾಸಕರ ನಡುವೆ ವಾಕ್ಸಮರ ನಡೆಯಿತು. ಕೃಷ್ಣಬೈರೇಗೌಡ ಉತ್ತರಿಸಲು ಮುಂದಾಗಿದ್ದನ್ನು ಖಂಡಿಸಿ, ಬಿಜೆಪಿಗರು ಸಭಾತ್ಯಾಗ ನಡೆಸಿದರು.

### ಬಿಜೆಪಿಯ ವಾದವೇನು?

- ರಾಜ್ಯಪತ್ರ ರದ್ದುಗೊಳಿಸದಿದ್ದರೆ ಇದು ಕೇವಲ ತಾತ್ಕಲಿಕ ರಿಲೀಫ್ ಆಗಲಿದೆ
- ವಕ್ಫ್ ಕಾಯಿದೆಯ ತಿದ್ದುಪಡಿಗೆ ವಿಧಾನ ಮಂಡಲದಿಂದ ನಿರ್ಣಯ ಕೈಗೊಳ್ಳಬೇಕು
- ವಕ್ಫ್ ವಿಷಯದಲ್ಲಿ ರೈತರ ಬಗ್ಗೆ ಕಾಂಗ್ರೆಸಿಗರದ್ದು ಮೊಸಳೆ ಕಣ್ಣೀರು ಹಾಕುತ್ತಿದ್ದಾರೆ
- ಅಕ್ರಮವಾಗಿ ಒತ್ತುವರಿಯಾಗಿರುವ ವಕ್ಫ್ ಆಸ್ತಿಯ ಬಗ್ಗೆಯೂ ತನಿಖೆಯಾಗಬೇಕು
- ಈ ಗೊಂದಲದ ಬಗ್ಗೆ ಮುಖ್ಯಮಂತ್ರಿಗಳೇ ಉತ್ತರಿಸಬೇಕು

### ಸರಕಾರದ ವಾದವೇನು?

- ರೈತರಿಗೆ ಹಾಗೂ ದೇವಾಲಯಕ್ಕೆ ಸೇರಿದ ಆಸ್ತಿಯನ್ನು ಮುಟ್ಟುವುದಿಲ್ಲ
- ಆದರೆ ಈಗಾಗಲೇ ಪ್ರಕಟವಾಗಿರುವ ಗೆಜೆಟ್ ನೋಟಿಫಿಕೇಶನ್ ರದ್ದುಪಡಿಸಲ್ಲ
- ವಕ್ಫ್ ಬೋರ್ಡ್‌ನ ಹೆಸರಲ್ಲಿರುವ ಭೂಮಿಯನ್ನು ಸಂರಕ್ಷಣೆಗೆ ಕ್ರಮ
- ವಕ್ಫ್ ನೋಟಿಸ್‌ನ ಗೊಂದಲಗಳನ್ನು ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆ
- ರಾಜಕೀಯ ಕಾರಣಕ್ಕೆ ಮಾಡುತ್ತಿರುವ ಬಿಜೆಪಿಗರ ಆರೋಪದಲ್ಲಿ ಹುರುಳಿಲ್ಲ

### ಕೃಷ್ಣ ಉತ್ತರಿಸಲು ಆಕ್ಷೇಪಿಸಿದ ಬಿಜೆಪಿ

ಆರಂಭದಲ್ಲಿ ವಕ್ಫ್ ಸಚಿವ ಜಮೀರ್ ಅಹಮದ್ ಉತ್ತರಿಸಿದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಂದಾಯ ಸಚಿವ ಕೃಷ್ಣಬೈರೇ ಗೌಡ ಅವರು ಉತ್ತರಿಸಲಿದ್ದಾರೆ ಎಂದು ಪ್ರಕಟಿಸಿದರು. ಆದರೆ ವಕ್ಫ್ ವಿಷಯವನ್ನು ಕೃಷ್ಣಬೈರೇಗೌಡರೇಕೆ ಉತ್ತರಿಸಬೇಕು ಎಂದು ಬಿಜೆಪಿಗರು ಪ್ರಶ್ನಿಸಿದರು. ಕಂದಾಯ ಇಲಾಖೆ ಅಧಿಕಾರಿಗಳೇ ನೋಟಿಸ್ ನೀಡಿರುವುದರಿಂದ ಕೃಷ್ಣಬೈರೇಗೌಡರು ಉತ್ತರಿಸಲಿ ಎಂದು ಸಿದ್ದರಾಮಯ್ಯ ಹೇಳಿದರು. ಆದರೆ ಇದಕ್ಕೆ ಒಪ್ಪದ ಬಿಜೆಪಿಗರು, ವಕ್ಫ್ ಸಚಿವರಿಗೆ ಕೆಪ್ಯಾಸಿಟಿ ಇಲ್ಲ ಎನ್ನುವುದಾದರೆ ಕಂದಾಯ ಸಚಿವರು ಉತ್ತರಿಸಲಿ ಎಂದು ಸವಾಲು ಹಾಕಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್ ಶಾಸಕ ಬಸವರಾಜ ರಾಯರಡ್ಡಿ, ಸಂಪುಟದಲ್ಲಿರುವ ಸಚಿವರಲ್ಲಿ ಯಾರೇ ಆದರೂ ಉತ್ತರಿಸಬಹುದು ಎಂದು ಕ್ರಿಯಾಲೋಪ ಎತ್ತಿದರು. ಇದನ್ನೂ ಬಿಜೆಪಿಗರು ಒಪ್ಪದಿದ್ದಾಗ, ಜಮೀರ್ ನಾನೇ ಉತ್ತರಿಸುವೆ ಎಂದು ಹೇಳಿದರೂ, ಸಿದ್ದರಾಮಯ್ಯ ಅವರು ಕಂದಾಯ ಸಚಿವರೇ ಉತ್ತರಿಸುತ್ತಾರೆ ಎನ್ನುವ ಮೂಲಕ ಬಿಜೆಪಿಗರ ಆಕ್ರೋಶಕ್ಕೆ ಕಾರಣವಾದರು.

### ಬಿಜೆಪಿ ಅವಧಿಯಲ್ಲಿಯೂ ನೋಟಿಸ್ ಜಾರಿ

ಸಚಿವ ಜಮೀರ್ ಅಹ್ಮದ್ ಮಾತನಾಡಿ, ವಕ್ಫ್ ಆಸ್ತಿಗಳಿಗೆ ನೋಟಿಸ್ ನೀಡುವುದು ಇದೇ ಮೊದಲಲ್ಲ. 1974ರ ಕಾಯಿದೆಯ ಅನ್ವಯ ಎಲ್ಲ ಸರಕಾರಗಳೂ ನೋಟಿಸ್ ನೀಡುತ್ತಾ ಬಂದಿದೆ. ಬಿಜೆಪಿ ಸರಕಾರದ ಅವಧಿಯಲ್ಲಿ 2008ರಿಂದ 13ರವರೆಗೆ ಎರಡು ಸಾವಿರಕ್ಕೂ ಹೆಚ್ಚು ನೋಟಿಸ್ ನೀಡಲಾಗಿತ್ತು. ಬಳಿಕ 2019ರ ಅವಧಿಯಲ್ಲಿ 2567 ನೋಟಿಸ್‌ಗಳನ್ನು ನೀಡಲಾಗಿತ್ತು. ಒಟ್ಟು ಬಿಜೆಪಿ ಅವಧಿಯಲ್ಲಿ 5667 ನೋಟಿಸ್‌ಗಳನ್ನು ನೀಡಿದ್ದಾರೆ. ಕಾಂಗ್ರೆಸ್ ಸರಕಾರದ ಅವಧಿಯಲ್ಲಿ 5099 ನೋಟಿಸ್‌ನ್ನು ನೀಡಲಾಗಿದೆ ಎಂದು ಮಾಹಿತಿ ನೀಡಿದರು. ಇದಕ್ಕೆ ಕಾಂಗ್ರೆಸ್ ಶಾಸಕರು, ಬಿಜೆಪಿ ಅವಧಿಯಲ್ಲಿ ನೋಟಿಸ್ ನೀಡುವಾಗ ದೇವಾಲಯ, ರೈತರ ನೆನಪಾಗಲಿಲ್ಲವೇ? ಎಂದು ಪ್ರಶ್ನಿಸಿದರು. ಇದಕ್ಕೆ ಅಕ್ಷೇಪವ್ಯಕ್ತಪಡಿಸಿದ ಬಿಜೆಪಿಗರು, ನೋಟಿಸ್ ನೀಡುವುದಕ್ಕೆ ನೀವು ತಂದಿರುವ ರಾಜ್ಯಪತ್ರವೇ ಕಾರಣ. ಆದ್ದರಿಂದ ರಾಜ್ಯಪತ್ರವನ್ನೇ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

## ಸದನ ಹೈಲೈಟ್ಸ್

### ಮುಡಾ ವಿಧೇಯಕಕ್ಕೆ ಅಂಗೀಕಾರ

**ವಿಧಾನಸಭೆ:** 2024ನೇ ಸಾಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ರಚನೆ ವಿಧೇಯಕಕ್ಕೆ ವಿಧಾನಸಭೆ ಅಂಗೀಕಾರ ನೀಡಿದೆ. ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್. ಸುರೇಶ್ ಗುರುವಾರ ವಿಧಾನ ಸಭೆ ಕಲಾಪದಲ್ಲಿ, 2024ನೇ ಸಾಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚನೆ ಹಾಗೂ ಅಂಗೀಕಾರಕ್ಕೆ ಸದನದ ಮುಂದೆ ಮಂಡಿಸಿದರು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾದರಿಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ರಚನೆಗಾಗಿ ವಿಧೇಯಕ ರಚನೆ ಮಾಡಲಾಗಿದೆ. ಪ್ರಾಧಿಕಾರಕ್ಕೆ ಹಿರಿಯ ಶ್ರೇಣಿ ಐಎಎಸ್ ಅಧಿಕಾ ರಿಯನ್ನು ಆಯಕ್ತರನ್ನಾಗಿ ನೇಮಿಸಲು ಅವಕಾಶ ನೀಡಲಾಗಿದೆ. ಪ್ರಾಧಿಕಾರ ಸದಸ್ಯತ್ವದ ನೇಮಕಕ್ಕೂ ತಿದ್ದುಪಡಿ ತಂದು ಸರಕಾರಕ್ಕೆ ಸದಸ್ಯರ ನೇಮಕ ಮಾಡಲು ಅಧಿಕಾರ ನೀಡಲಾಗಿದೆ. ಮೈಸೂರು ಪಾರಂಪರಿಕ ಮಹತ್ವ ಕಾಪಾಡಲು ಪ್ರಾಧಿಕಾರದ ಅಡಿ ಪರಾಂಪರಿಕ ಕಟ್ಟಡಗಳ ರಕ್ಷಣಾ ಸಮಿತಿ ರಚನೆ ಮಾಡಲಾಗುವುದು ಎಂದು ಸಚಿವ ಬಿ.ಎಸ್. ಸುರೇಶ್ ತಿಳಿಸಿದರು. ಶಾಸಕರಾದ ತಮ್ಮಣ್ಣ, ಭೈರತಿ ಸುರೇಶ್, ಎಸ್.ಟಿ.ಸೋಮಶೇಖರ್,ಟಿ.ಎಸ್.ಶ್ರೀವತ್ಸ, ಜಿ.ಟಿ.ದೇವೇಗೌಡ, ವಿ.ಸುನಿಲ್ ಕುಮಾರ್, ಎಚ್.ಡಿ.ರೇವಣ್ಣ ವಿಧೇಯಕ ಕುರಿತು ಚರ್ಚಿಸಿದರು.

### ಹಾಸನ ಸಹಕಾರ ಬ್ಯಾಂಕ್ ವಂಶಾಡಳಿತದ ಕೈಯಲ್ಲಿ

**ವಿಧಾನ ಪರಿಷತ್:** ಹಾಸನ ಸಹಕಾರಿ ಬ್ಯಾಂಕ್ ಒಂದು ಕುಟುಂಬದ ಕಪಿಮುಷ್ಠಿಯಲ್ಲಿದ್ದು, ಇದನ್ನು ಕೊನೆಗಾಣಿಸಲು ಹಾಲಿ ಸಹಕಾರ ಸಚಿವರು ಕ್ರಮ ವಹಿಸಬೇಕಾಗಿದೆ ಎಂದು ಪರೋಕ್ಷವಾಗಿ ಮಾಜಿ ಪ್ರಧಾನಿ ದೇವೇಗೌಡರ ವಿರುದ್ಧ ಕಾಂಗ್ರೆಸ್ ಸದಸ್ಯ ಎಸ್. ರವಿ ಹರಿಹಾಯ್ದಿದ್ದಾರೆ. ಪ್ರಶ್ನೋತ್ತರ ಅವಧಿಯಲ್ಲಿ ಸಹಕಾರ ಸಚಿವರಿಗೆ ಈ ಕುರಿತು ಪ್ರಸ್ತಾಪಿಸಿ, ಹಾಸನ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ ಸಾಲ ನೀಡುವಲ್ಲಿ ಬಹುದೊಡ್ಡ ಹಗರಣವಾಗಿದೆ. ರೈತರ ಗಮನಕ್ಕೆ ಬಾರದಂತೆ ಅವರ ಹೆಸರಿನಲ್ಲಿ ಸಾಲ ಪಡೆದು ವಂಚನೆ ಮಾಡಿದ್ದಾರೆ. ಚನ್ನರಾಯಪಟ್ಟಣ ತಾಲೂಕಿನಲ್ಲೇ ನಡೆದ ಈ ಅಕ್ರಮದ ಬಗ್ಗೆ ಸಮಗ್ರ ತನಿಖೆ ಆಗಬೇಕೆಂದು ಒತ್ತಾಯಿಸಿದರು.

## ಜೋರ್ ಮಾತು

ರಾಜ್ಯದ ಸರಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಇದೆ ಎಂದು ರಾಜ್ಯ ಔಷಧಿ ನಿಯಮಿತ 6 ತಿಂಗಳ ಹಿಂದೆಯೇ ಹೇಳಿತ್ತು. ಅದನ್ನು ಉಪಯೋಗಿ ಸಬಾರದು ಎಂದು ರಾಜ್ಯದ ಎಲ್ಲಾ ಉಗ್ರಣಗಳಿಗೂ ಡ್ರಗ್ಸ್ ಡಿಪಾರ್ಟ್‌ಮೆಂಟ್ ಆದೇಶ ಸಹ ಹೊರಡಿಸಿತ್ತು. ಆದರು, ಬ್ಯಾನ್ ಆಗಿದೆ ಎರಡು ಬ್ಯಾಚ್ ಪುನಃ ಔಷಧಿಗಳನ್ನು ಸರಬರಾಜು ಮಾಡಿದ್ದು ಏಕೆ.?
- ಆರ್. ಅಶೋಕ್, ಪ್ರತಿಪಕ್ಷ ನಾಯಕ

ಗುತ್ತಿಗೆದಾರರು ಸರಿಯಿಲ್ಲವೆಂದು ಸರಕಾರ ಹೇಳಿದ ಬಳಿಕವೂ, ಕಾಂಟ್ರಾಕ್ಟರ್ ಕೋರ್ಟ್‌ಗೆ ಹೋಗಿ ಪ್ರಕರಣವನ್ನು ವಜಾ ಮಾಡಿಸಿಕೊಂಡು ಬರುತ್ತಾರೆ. ಶಾಸಕಾಂಗ ಹಾಗೂ ಕಾರ್ಯಾಂಗಗಳ ಕಾರ್ಯವೈಖರಿಗಳ ಮಧ್ಯ ಹಸ್ತಕ್ಷೇಪ ಭಯ ಹುಟ್ಟಿಸುತ್ತಿದೆ. ಶಾಸಕಾಂಗ ಹಾಗೂ ಕಾರ್ಯಾಂಗದಲ್ಲಿ ನ್ಯಾಯಾಂಗದ ಹಸ್ತಕ್ಷೇಪ ಎಷ್ಟು ಸರಿ?
- ಪ್ರಿಯಾಂಕ್ ಖರ್ಗೆ, ಸಚಿವ

## ಸದನ ಸ್ವಾರಸ್ಯ

### ಬೆಂಗ್ಳೂರಿಗೆ ಬಂದರೆ ಮಾಜಿ ಡಿಸಿಎಂ ಖುಷ್ ಅಂತೆ!

ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯ ವೇಳೆ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಎಂ.ಬಿ. ಪಾಟೀಲರು ಬಿಯಾಡ್ ಬೆಂಗಳೂರಿನ ಯೋಜನೆಗೆ ಸಂಬಂಧಿಸಿದಂತೆ ಚರ್ಚಿಸುವಾಗ, ಪ್ರಿಯಾಂಕ್ ಖರ್ಗೆ ಅವರು ತಮ್ಮ ಇಲಾಖೆಯ ಸಾಧನೆಯನ್ನು ಹೇಳಿಕೊಳ್ಳಲು ಮುಂದಾದರು. ಖರ್ಗೆ ಅವರು ಐಟಿ-ಬಿಟಿ ಇಲಾಖೆಯಿಂದ ಆಗಿರುವ ಹಲವು ಯೋಜನೆಗಳ ಬಗ್ಗೆ ಹೇಳಲು ಮುಂದಾಗುತ್ತಿದ್ದಂತೆ ಯತ್ನಾಳ, ಬೆಲ್ಲದ್ ಸೇರಿದಂತೆ ಹಲವು ಶಾಸಕರು ವಿರೋಧಿಸಲು ಮುಂದಾದರು. ಅದಕ್ಕೆ ಖರ್ಗೆ ಅವರು, ಇಲಾಖೆಯ ಸಾಧನೆಯ ಬಗ್ಗೆ ಬೇಕಿದ್ದರೆ ಅಶ್ವತ್ಥನಾರಾಯಣ ಅವರನ್ನು ಕೇಳಿ ಎಂದು ಸವಾಲು ಹಾಕಿದರು. ಆಗ ಏನು ಮಾತಾಡಿದಿದ್ದರೂ ನಗುಮೊಗದಲ್ಲಿಯೇ ಎಲ್ಲವನ್ನು ಸ್ವಾಗತಿಸಿದರು. ಇದಕ್ಕೆ ಎದ್ದುನಿಂತ ಅರವಿಂದ ಬೆಲ್ಲದ್, ಮಾಜಿ ಡಿಸಿಎಂ ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ಬೆಂಗಳೂರು ಅಭಿವೃದ್ಧಿಯಾದರೆ ಸಾಕು ಇನ್ನೇನು ಬೇಡ. ಆದರೆ ನಮಗೆ ನಮ್ಮ ಊರುಗಳು ಅಭಿವೃದ್ಧಿಯಾಗಬೇಕಲ್ಲವೇ ಎಂದು ಕಾಲೆಳೆದರು.

### ಶೀಘ್ರವೇ ಮಲ್ಲಾಬಾದ್ ಏತ ನೀರಾವರಿ ಯೋಜನೆ: ಡಿಸಿಎಂ

**ವಿಧಾನಪರಿಷತ್:** ಶೀಘ್ರದಲ್ಲೇ ಮಲ್ಲಾಬಾದ್ ಏತ ನೀರಾವರಿ ಯೋಜನೆ ಟೆಂಡರ್ ಪ್ರಕ್ರಿಯೆ ಕೈಗೆತ್ತಿಕೊಳ್ಳ ಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ವಿಧಾನ ಪರಿಷತ್ತಿನ ಶೂನ್ಯ ವೇಳೆಯಲ್ಲಿ ಬಿಜೆಪಿ ಸದಸ್ಯರಾದ ಬಿ.ಜಿ.ಪಾಟೀಲ್ ಅವರು ಕಲಬುರ್ಗಿ ಮಲ್ಲಾಬಾದ್ ಏತ ನೀರಾವರಿ ಯೋಜನೆ ಟೆಂಡರ್ ಪ್ರಕ್ರಿಯೆ ಸ್ಥಗಿತಗೊಂಡಿದ್ದು, ಕೂಡಲೇ ಟೆಂಡರ್ ಕರೆದು ಕಾಮಗಾರಿ ಆರಂಭಿಸಬೇಕು ಎಂದು ಬುಧವಾರ ಗಮನ ಸೆಳೆದರು. ಇದಕ್ಕೆ ಉತ್ತರಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್, ಬಿ.ಜಿ.ಪಾಟೀಲ್ ಅವರ ಬೇಡಿಕೆ ಸರಿಯಾಗಿದೆ. ಬೊಮ್ಮಾಯಿ ಅವರ ಸರಕಾರದ ಬಜೆಟ್ ನಲ್ಲಿ ನೀರಾವರಿ ಇಲಾಖೆಗೆ 22 ಸಾವಿರ ಕೋಟಿ ಅನುದಾನ ನೀಡಿದ್ದರು. ಆದರೆ ನಿಗಮಗಳಲ್ಲಿ 28 ಸಾವಿರ ಕೋಟಿ ಮೊತ್ತ ದ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಕೆಲಸ ಮಾಡಿಸಿ ಬಿಲ್ ಪಾವತಿ ಮಾಡದಿದ್ದರೆ ಅನಗತ್ಯ ಒತ್ತಡ ಬೀಳಲಿದೆ. ಕೇಂದ್ರ ಸರಕಾರದಿಂದ ನಮಗೆ ಬರಬೇಕಾಗಿರುವ 5400 ಕೋಟಿ ಹಣ ಬಂದಿಲ್ಲ. ಹೀಗಾಗಿ ನಮ್ಮ ಬಜೆಟ್ ನಲ್ಲಿ ಇದನ್ನು 16 ಸಾವಿರ ಕೋಟಿಗೆ ಇಳಿಸಲಾಗಿದೆ. ಕೋಲಾರದ ಎತ್ತಿನ ಹೊಳೆ ಯೋಜನೆ ಪರಿಸ್ಥಿತಿಯೂ ಹೀಗೆ ಇದೆ ಎಂದರು.

### ಉತ್ತರ ಕರ್ನಾಟಕ ನೀರಾವರಿ ಸಮಸ್ಯೆಗಳ ಬಗೆಹರಿಸಲು ಸರಕಾರ ಮುಂದಾಗಲಿ । ಕೃಷ್ಣ ಮೇಲ್ದಂಡೆ ಯೋಜನೆ ಶೀಘ್ರ ಪೂರ್ಣಗೊಳಿಸಿ, ಪರಿಹಾರ ನೀಡಿ: ಯತ್ನಾಳ

# ಉತ್ತರದವರೇ ನೀರಾವರಿ ಸಚಿವರಾಗಲಿ

**ವಿಶ್ವವಾಣಿ ಸುದ್ದಿಮನೆ ವಿಧಾನಸಭೆ** ಸುವರ್ಣಸೌಧ

ಕೃಷ್ಣ ನೀರಾವರಿ ಯೋಜನೆ ಬಹುದೊಡ್ಡ ಯೋಜನೆಯಾಗಿದ್ದು, ನಮ್ಮ ಭಾಗದ ನೀರಾವರಿ ಯೋಜನೆಗಳಿಗೆ ನ್ಯಾಯ ಒದಗಿಸಲು ಉತ್ತರ ಕರ್ನಾಟಕ ಭಾಗದವರನ್ನೇ ಜಲ ಸಂಪನ್ಮೂಲ ಸಚಿವರನ್ನಾಗಿ ಸರಕಾರ ನೇಮಕ ಮಾಡಬೇಕು ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಆಗ್ರಹಿಸಿದರು.

ಬುಧವಾರ ವಿಧಾನಸಭೆಯಲ್ಲಿ ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತ ಮುಂದುವರಿದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಸರಕಾರದಲ್ಲಿ ಉತ್ತರ ಕರ್ನಾಟಕ ಭಾಗದವರು ನೀರಾವರಿ ಸಚಿವರು ಆಗಿಲ್ಲ. ಅದಕ್ಕಾಗಿ ನಮಗೆ ನ್ಯಾಯ ಸಿಕ್ಕಿಲ್ಲ. ಹೀಗಾಗಿ ಉತ್ತರ ಕರ್ನಾಟಕ ಭಾಗದವರನ್ನು ನೀರಾವರಿ ಸಚಿವರನ್ನಾಗಿ ಮಾಡಬೇಕು. ಈ ಹಿಂದೆ ಎಂ.ಬಿ.ಪಾಟೀಲ್, ಎಚ್.ಕೆ.ಪಾಟೀಲ್ ಸಚಿವರಾಗಿದ್ದಾಗ ಅವರಿಗೆ ಈ ಭಾಗದ ನೀರಾವರಿ ಯೋಜನೆಗಳ ಬಗ್ಗೆ ಕಳಕಳಿ ಇತ್ತು. ಈಗ ಯಾವುದೇ ಕಳಕಳಿಯೂ ಇಲ್ಲ, ಕಾಳಜಿಯೂ ಇಲ್ಲ ಎನ್ನುವ ಮೂಲಕ ಪರೋಕ್ಷವಾಗಿ ಜಲಸಂಪನ್ಮೂಲ ಖಾತೆ ಹೊಂದಿರುವ ಡಿ.ಕೆ.ಶಿವಕುಮಾರ್‌ಗೆ ಟಾಂಗ್ ನೀಡಿದರು.

ಸರಕಾರ ಕಾವೇರಿಗೆ ನೀಡುವ ಗಮನ ಕೃಷ್ಣ ನದಿಗೆ ಕೊಡುತ್ತಿಲ್ಲ. ಕಾವೇರಿಗಿಂತ ಹಿರಿದಾಗಿರುವ ಕೃಷ್ಣೆಗಾದ ಅನ್ಯಾಯ ಬಹುದೊಡ್ಡದು. 1392 ಕೀಮಿ ಸಂಚರಿಸುವ ಕೃಷ್ಣೆ 2.60 ಚದರ ಕಿ.ಮೀ ವಿಸ್ತರಣೆ ಹರಿಯುತ್ತದೆ. ಇಷ್ಟಾದರೂ ಅನುದಾನ ನೀಡುವಲ್ಲಿ ಮಾತ್ರ ಹಿಂದೇಟು ಹಾಕುತ್ತಾರೆ. ಆದರಿಂದ ಕಾವೇರಿಗೆ ನೀಡುವ ಮಹತ್ವ ಕೃಷ್ಣೆಗೂ ಸರಕಾರ ನೀಡಬೇಕು. ಭೂಮಿ ಕಳೆದುಕೊಂಡಿರುವ ರೈತರಿಗೆ ಒಂದೇ ಹಂತದಲ್ಲಿ ಪರಿಹಾರ ನೀಡಿ, ಬಾಕಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಹೇಳಿದರು.

**ಇಮ್ಮಡಿ ಪುಲಕೇಶಿಯನ್ನು ಕರ್ನಾಟಕದ ರಾಯಭಾರಿಯೆಂದು ಘೋಷಿಸಿ:** ಇಡೀ ಭಾರತ ಖಂಡವನ್ನೇ ಆಳಿದ ಚಾಲುಕ್ಯ ದೊರೆ ದಕ್ಷಿಣಪಥೇಶ್ವರ ಇಮ್ಮಡಿ ಪುಲಕೇಶಿ ಅವರನ್ನು ಕರ್ನಾಟಕದ ರಾಯಭಾರಿಯನ್ನಾಗಿ ಮಾಡಬೇಕು. ಮಹಾರಾಷ್ಟ್ರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರಿ ಸಿಗುವ ಗೌರವ ಹಾಗೂ ಕರ್ನಾಟಕದಲ್ಲಿ ಸಾಂಸ್ಕೃತಿಕ ರಾಯಭಾರಿ ಎಂದು ಬಸವಣ್ಣನವರಿಗೆ ಗೌರವಿಸು ವಂತೆ, ಕರ್ನಾಟಕದ ರಾಯಭಾರಿ ಎಂದು ಚಾಲುಕ್ಯ ದೊರೆ ಇಮ್ಮಡಿ ಪುಲಕೇಶಿ ಅವರನ್ನು ಘೋಷಣೆ ಮಾಡಬೇಕು ಎಂದು ಸದನದ ಗಮನಕ್ಕೆ ತಂದರು.

ಉತ್ತರಪಥೇಶ್ವರ ಎಂದು ಖ್ಯಾತಿ ಪಡೆದಿದ್ದ, ಹರ್ಷವರ್ಧನ್ ನನ್ನೇ ನರ್ಮದಾ ತಟದಲ್ಲಿ ಪರಭಾವಗೊಳಿಸಿ ದಕ್ಷಿಣಪಥೇಶ್ವರ ಬಿರುದು ಪಡೆದ ರಾಜನಾಗಿದ್ದಾನೆ. ಉತ್ತರ ಭಾರತದವರಿಗೆ ತನ್ನ ಶಕ್ತಿ, ಸಾಮರ್ಥ್ಯದಿಂದ ಹೆದರುವಂತೆ ಮಾಡಿ ಇಡೀ ಭಾರತದಲ್ಲಿ ತನ್ನ ಹೆಸರು ಅಜರಾಮರಗೊಳಿಸಿದ್ದಾನೆ. ಅಂತಹ ಮಹಾನ್ ಶಕ್ತಿ ಪುರುಷನನ್ನು ಕರ್ನಾಟಕದಲ್ಲಿ ಗೌರವಿಸುವ ಕೆಲಸ ಆಗುತ್ತಿಲ್ಲ. ಆದರಿಂದ ಶಿವಾಜಿ ಹಾಗೂ ಬಸವಣ್ಣನವರಂತೆ ಗೌರವ ಇಮ್ಮಡಿ ಪುಲಕೇಶಿಗೂ ಸಿಗಬೇಕಿದೆ. ಈ ಬಗ್ಗೆ ಸರಕಾರ ಕ್ರಮಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ರನ್ನು ಭೇಟಿ ಮಾಡಿದ್ದು, ನನ್ನ ವೈಯಕ್ತಿಕ ವಿಚಾರಕ್ಕೆ ಅಲ್ಲ. ಬದಲಿಗೆ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಪಟ್ಟ ವಿಚಾರಗಳಿಗೆ ಅವರನ್ನು ಭೇಟಿ ಮಾಡಿದ್ದೇನೆ. ಅದನ್ನು ಹೊರತುಪಡಿಸಿದರೆ, ಯಾವುದೇ ವೈಯಕ್ತಿಯ ವಿಚಾರಗಳನ್ನು ಚರ್ಚೆ ಮಾಡಿಲ್ಲ. ನನ್ನ ಕ್ಷೇತ್ರದ ಅಭಿವೃದ್ಧಿಗೆ ಹಾಗೂ ಜನರ ಆಶೋತ್ತರವನ್ನು ಈಡೇರಿಸಲು ನಾನು ಬದ್ಧನಾಗಿದ್ದೇನೆ.
- ಬಸನಗೌಡ ಪಾಟೀಲ್ ಯತ್ನಾಳ, ಶಾಸಕ

### ಡಾ. ಅಂಬೇಡ್ಕರ್ ಅವರನ್ನು ಸಂಭ್ರಮಿಸಿ

ಬೆಳಗಾವಿಯಲ್ಲಿ ಮಹಾತ್ಮ ಗಾಂಧೀಜಿ ಕಾಂಗ್ರೆಸ್ ಅಧಿವೇಶನ ನಡೆಸಿ 100 ವರ್ಷ ಸಂಭ್ರಮ ಆಚರಣೆ ಮಾಡುತ್ತಿದ್ದಾರೆ. ಅದು ಒಳ್ಳೆಯ ಸಂಗತಿಯಾಗಿದೆ. ಅದರಂತೆ ದೇಶಕ್ಕೆ ಸಂವಿಧಾನ ನೀಡಿದ ಡಾ.ಬಿ.ಆರ್ ಅಂಬೇಡ್ಕರ್ ಅವರು ಬೆಳಗಾವಿಯ ಚಿಕ್ಕೋಡಿಯ ಕೋರ್ಟ್ ವೊಂದರಲ್ಲಿ ವಾದ ಮಾಡಿದ್ದಾರೆ. ವಿಜಯಪುರದ ಸ್ಲಂವೊಂದರಲ್ಲಿ ಒಂದು ದಿನ ಕಳೆದು ಹೋಗಿದ್ದಾರೆ. ಹೀಗಾಗಿ, ಸರಕಾರ ಗಾಂಧೀಜಿ ಅವರಿಗೆ ನೀಡುತ್ತಿರುವ ಗೌರವ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರ ಸ್ಮರಣೆಯ ಭಾಗವಾಗಿ ಇಲ್ಲಿ ಸಂಭ್ರಮಾಚಾರಣೆ ಮಾಡಬೇಕು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಒತ್ತಾಯಿಸಿದರು.

## ಸದನ ಸ್ವಾರಸ್ಯ

### ಮಿನಿಸ್ಟ್ರಿ, ಸ್ಪೀಕರ್ ಬೇಡ; ಏನಿದ್ರು ಸಿಎಂ

ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡೋವಾಗ ತರಹೇವಾರಿ ಚರ್ಚೆಗಳು ಕೇಳಿಬಂದಿತ್ತು. ಅದರಲ್ಲಿಯೂ ಯತ್ನಾಳ ಮಾತಿಗೆ ನಿಂತಾಗ ಈ ಚರ್ಚೆ ಸ್ವಲ್ಪ ಜೋರಾಗಿಯೇ ನಡೆದಿತ್ತು. ಚರ್ಚೆಯ ವೇಳೆ ಆಡಳಿತ ರೂಢ ಶಾಸಕರು ಪದೇಪದೆ ಯತ್ನಾಳ ಅವರ ಮಾತಿಗೆ ಅಡ್ಡಪಡಿಸಿದರು. ಅದಕ್ಕೆ ಸಚಿವ ಎಂ.ಬಿ. ಪಾಟೀಲ್ ಸಹ ಧ್ವನಿಗೂಡಿಸಿದರು. ಇದರಿಂದ ಕಿರಿಕಿರಿ ಯಾದ ಯತ್ನಾಳ, ನಾನು ಯಾವಾಗಲೂ ಪವರ್‌ಫುಲ್. ಕೇಂದ್ರದಲ್ಲಿಯೂ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಈಗ ನಮ್ಮ ಕ್ಷೇತ್ರದ ಜನರಿಂದ ಶಾಸಕನಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿದೆ. ನಾನು ರಾಜ್ಯದ ಮಂತ್ರಿ ಗಳಿಗಿಂತ ಪವರ್ ಫುಲ್ ಎಂದು ಯತ್ನಾಳ್ ಹೇಳಿಕೊಂಡರು. ಇದಕ್ಕೆ ಆಕ್ಷೇಪಿಸಿದ ಸಚಿವ ಎಂ.ಬಿ.ಪಾಟೀಲ್, ಈ ವೇಳೆ ನೀವು ಮಂತ್ರಿ ಯಾಗಿಲ್ಲವಲ್ಲ ನಿಮ್ಮನ್ನು ನಿಮ್ಮ ಪಕ್ಷದವರು ಮಂತ್ರಿಯಾಗಲು ಬಿಡಲ್ಲವಲ್ಲ ಎಂದು ಕಾಲೆಳೆದರು. ಇದಕ್ಕೆ ಪ್ರತಿಯಾಗಿ ಯತ್ನಾಳ, ಮಂತ್ರಿಗಿಂತಲೂ ನಾನು ಶಕ್ತಿಶಾಲಿ ಆಗಿದ್ದೇನೆ. ನಾನು ಯಾರಿಗೂ ಅಂಜುವ ಮಗನೂ ಅಲ್ಲ.

ನೀವು ಸ್ಪೀಕರ್ ಆಗಿ ಎನ್ನುವ ಸಲಹೆ ಕೇಳಿಬಂದಾಗ ಪ್ರತಿಕ್ರಿಯಿಸಿ, ನಾನು ಇನ್ಮುಂದೆ ಸಚಿವನಾಗಿ ಅಥವಾ ವಿಧಾನಸಭಾಧ್ಯಕ್ಷರಾಗಿ ಇರುವುದಿಲ್ಲ. ನನ್ನದು ಏನಿದ್ದರೂ ಡೈರೆಕ್ಟ್ ಮುಖ್ಯಮಂತ್ರಿ ಹುದ್ದೆ ಎನ್ನುವ ಹೊಸ ಫಾರ್ಮುಲವನ್ನು ಸದನದಲ್ಲಿ ಬಿಟ್ಟರು.



## ಸದನ ಕ್ಲಿಕ್

ಬೆಳಗಾವಿ ಸುವರ್ಣಸೌಧದಲ್ಲಿ ನಡೆದಿರುವ ವಿಶೇಷ ಅಧಿವೇಶನವನ್ನು ನೋಡಲು ಆಗಮಿಸಿದ್ದ ವಿವಿಧ ಶಾಲೆಗಳ ಅಪಾರ ಸಂಖ್ಯೆಯ ಮಕ್ಕಳು ಗ್ಯಾಲರಿ ಯಲ್ಲಿ ಕುಳಿತು ಕುತೂಹಲದಿಂದ ಕಲಾಪವನ್ನು ವೀಕ್ಷಿಸಿದರು.

**ವಿಶ್ವವಾಣಿ**

## ಸಂಪಾದಕೀಯ

# ಜವಾನ್ ಸಮ್ಮಾನ್ ಯೋಜನೆ ಸ್ವಾಗತಾರ್ಹ

ಹಿಂದೆ ಸೈನ್ಯಕ್ಕೆ ಸೇರುವವರಿಗೆ ನಿವೃತ್ತಿಯಾದ ಬಳಿಕ ಸರಕಾರದ ವತಿಯಿಂದ ಉಚಿತವಾಗಿ ವ್ಯವಸಾಯ ಯೋಗ್ಯ ಭೂಮಿ ನೀಡುವ ಯೋಜನೆ ಜಾರಿಯಲ್ಲಿತ್ತು. ಕೆಲವು ದಶಕಗಳ ಹಿಂದಿನವರೆಗೂ ನಿವೃತ್ತ ಸೈನಿಕರಿಗೆ ಭೂ ಮಂಜೂರಾತಿ ಮಾಡಲಾಗುತ್ತಿತ್ತು. ಆದರೆ ಜನಸಂಖ್ಯೆ ಹೆಚ್ಚಳ ಮತ್ತು ಒತ್ತುವರಿ ಕಾರಣದಿಂದ ಈಗ ಸರಕಾರದ ಬಳಿ ಇರುವ ಭೂಮಿ ಅತ್ಯಲ್ಪ. ಇದೇ ಕಾರಣದಿಂದ ಕಳೆದ ಹಲವು ವರ್ಷಗಳಿಂದ ಭೂಮಿ, ನಿವೇಶನಕ್ಕೆ ಬೇಡಿಕೆ ಮುಂದಿಟ್ಟ ನಿವೃತ್ತ ಸೈನಿಕರಿಗೆ ಭೂ ಮಂಜೂರಾತಿ ಆಗಿರಲಿಲ್ಲ. ಇದೀಗ ಇಂತಹ ಸೈನಿಕರಿಗೆ ಸಾಗುವಳಿ ಭೂಮಿಯ ಬದಲು ನಿವೇಶನ ನೀಡಲು ಕ್ರಮ ಕೈಗೊಳ್ಳುವುದಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ಇದಲ್ಲದೆ 'ಜವಾನ್ ಸಮ್ಮಾನ್' ಹೆಸರಿನಲ್ಲಿ ಮಾಜಿ ಸೈನಿಕರಿಗೆ ಸರಕಾರದ ವೆಚ್ಚದಲ್ಲಿಯೇ ಬಡಾವಣೆ ಮಾಡಿ ವಿತರಿಸಲು ಕ್ರಮ ಕೈಗೊಳ್ಳುವುದಾಗಿ ಮಾಹಿತಿ ನೀಡಿದ್ದಾರೆ. ದೇಶಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧರಾದ ಸೈನಿಕರಿಗೆ ನಿವೇಶನ ನೀಡಲು ಹೊರಟಿರುವ ರಾಜ್ಯ ಸರಕಾರದ ಈ ನಡೆ ಸ್ವಾಗತಾರ್ಹ. ''ರಾಜ್ಯದಲ್ಲಿರುವ ಮಾಜಿ ಸೈನಿಕರಿಗೆ ವ್ಯವಸಾಯದ ಉದ್ದೇಶಕ್ಕಾಗಿ ಭೂ ಮಂಜೂರಾತಿ ಮಾಡಲು ರಾಜ್ಯದಲ್ಲಿ ಸರಕಾರಿ ಭೂಮಿಯ ತೀವ್ರ ಕೊರತೆಯಿರುವುದರಿಂದ, ಅವರಿಗೆ ನಿವೇಶನ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಕಂದಾಯ ಸಚಿವರು ತಿಳಿಸಿದ್ದಾರೆ. ಪ್ರಸ್ತುತ ಅಧಿವೇಶನ ಮುಗಿದ ಕೂಡಲೇ ' ಜವಾನ್ ಸಮ್ಮಾನ್' ಹೆಸರಿನಲ್ಲಿ ಮಾಜಿ ಸೈನಿಕರಿಗೆ ಸರಕಾರಿ ವೆಚ್ಚದಲ್ಲಿಯೇ ಬಡಾವಣೆ ನಿರ್ಮಿಸಿ, ನಿವೇಶನ ನೀಡುವ ಕುರಿತಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗುವುದು ಎಂದು ಸಚಿವರು ಮಾಹಿತಿ ನೀಡಿದ್ದಾರೆ. ಸರಕಾರದ ಯೋಜನೆಯ ಪ್ರಯೋಜನ ಪಡೆಯಲು ಸಾಧ್ಯವಾಗದೆ ಕೆಲವು ನಿವೃತ್ತ ಸೈನಿಕರು ಈ ಹಿಂದೆ ನ್ಯಾಯಾಲಯದ ಮೆಟ್ಟಿಲೇರಿದ್ದರು. ಹಲವರು ಜಿಲ್ಲಾಧಿಕಾರಿ ಕಚೇರಿಗೆ ಅಲೆದು ಸುಸ್ತಾಗಿದ್ದರು. ಮಾಜಿ ಸೈನಿಕರ ಈ ಬವಣೆಗಳಿಗೆ ಈ ಯೋಜನೆ ಮುಕ್ತಿ ದೊರಕಿಸುವ ಸಾಧ್ಯತೆ ಇದೆ. ಭವಿಷ್ಯದಲ್ಲಿ ಎಲ್ಲ ರೈತರಿಗೆ ಎಕರೆಗಟ್ಟಲೆ ಭೂಮಿ ನೀಡಲು ಸಾಧ್ಯವಿಲ್ಲ. ಆದರೆ ನಗರಕ್ಕೆ ಸಮೀಪ ಆಯಕಟ್ಟಿನ ಜಾಗದಲ್ಲಿ ನಿವೇಶನ ನೀಡುವ ಮೂಲಕ ಯೋಧರ ತ್ಯಾಗ,ಪರಿಶ್ರಮಕ್ಕೆ ತಕ್ಕ ಪ್ರತಿಫಲ ನೀಡಲು ಸಾಧ್ಯವಿದೆ.

## ಸೊಂಪಾದಕೀಯ

# ಹೆಣ್ಮಕ್ಳೇ ರಾಂಗು ಗುರೂ?!

ಇತ್ತೀಚೆಗೆ ನಡೆಯುತ್ತಿರುವ ಒಂದು ದೊಡ್ಡ ಚರ್ಚೆ ಅಂದ್ರೆ, ವೈವಾಹಿಕ ಸಂಬಂಧಗಳಲ್ಲಿ ಪುರುಷರ ಮೇಲೆ ಮಹಿಳೆಯರ ದೌರ್ಜನ್ಯ ಹೆಚ್ಚಾಗುತ್ತಿದೆ ಅನ್ನೋದ್ರ ಬಗ್ಗೆ. ಅತುಲ್ ಅನ್ನೋ ವ್ಯಕ್ತಿ ಹೆಂಡತಿಯ ಕಿರುಕುಳದಿಂದಾಗಿ ಆತ್ಮಹತ್ಯೆ ಮಾಡಿಕೊಂಡ ಅನ್ನೋ ಪ್ರಕರಣ ಇದಕ್ಕೆಲ್ಲಾ ಮೂಲ. ಹೆಣ್ಣುಮಕ್ಕಳು ಮದುವೆ ಆಗಿ ಮಿಸೆಸ್ ಆದಮೇಲೆ ತಮ್ಮ ಗಂಡಂದಿರನ್ನು 'ಮಿಸ್ ಯೂಸ್' ಮಾಡಿಕೊಳ್ಳುತ್ತಿದ್ದಾರೆ ಅನ್ನೋ ಆರೋಪ ಹೊಸದೇನೂ ಅಲ್ಲ. ಕಾನೂನು ಹೆಣ್ಣುಮಕ್ಕಳ ರಕ್ಷಣೆಗಾಗಿ ರೂಪಿಸಿರುವ ಹಲವು ನಿಯಮಗಳನ್ನು ಅವರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಅನ್ನೋದು ತುಂಬಾ ಹಳೆಯ ವಾದ. ಅದು ತಕ್ಕ ಮಟ್ಟಿಗೆ ನಿಜ ಕೂಡಾ. ಗಂಡಂದಿರನ್ನು ತಾವು ಹೇಳಿದಂತೆ ಕೇಳುವಂತೆ ಮಾಡಲು ಹೆಂಗಸರು ಈ ಕಾನೂನನ್ನು ಅಸ್ತ್ರವಾಗಿ ಬಳಸಿಕೊಂಡಿರುವ ಅನೇಕ ಉದಾಹರಣೆಗಳಿವೆ. ಸಂಸಾರ ಮಾಡುವಾಗ ಗಂಡನನ್ನು ಇದರ ಮೂಲಕ ನಿಯಂತ್ರಿಸುವುದಷ್ಟೇ ಅಲ್ಲದೆ, ವಿಚ್ಛೇದನ ಕೊಡುವ ಸಮಯದಲ್ಲಿ ಕೂಡಾ ಹೆಂಡತಿ ಎನಿಸಿಕೊಂಡವಳು, ಗಂಡನಿಂದ ಲೆಕ್ಕವಿಲ್ಲದಷ್ಟು ಹಣವನ್ನು ಜೀವನಾಂಶದ ಹೆಸರಿನಲ್ಲಿ ಡಿಮ್ಯಾಂಡ್ ಮಾಡುವುದನ್ನೂ ನೋಡಿದ್ದೇವೆ. ವರದಕ್ಷಿಣೆ ಕೇಳುವ ಗಂಡಸರನ್ನು ತುಚ್ಛವಾಗಿ ನೋಡುವ ನಮ್ಮ ಸಮಾಜ, ವಿಚ್ಛೇದನದ ಸಮಯದಲ್ಲಿ ಹೆಣ್ಣು ಬಾಯಿಗೆ ಬಂದಷ್ಟು ಹಣ ಡಿಮ್ಯಾಂಡ್ ಮಾಡಿದ್ದನ್ನು ಮಾತ್ರ ಬಾಯಿ ಮುಚ್ಚಿಕೊಂಡು ನೋಡುವ ಮೂಲಕ ಇದಕ್ಕೆ ಮೂಕಸಾಕ್ಷಿಯಾಗಿದೆ. ಆದರೆ ಇತ್ತೀಚೆಗೆ ಕೆಲವು ಪ್ರಕರಣಗಳಲ್ಲಿ ಜಡ್ಜ್‌ಗಳು 'ಇದು ತಪ್ಪು' ಅಂತ ದನಿ ಎತ್ತುತ್ತಿರೋದ್ರಿಂದ ಈ ಚರ್ಚೆಗೆ ಬಲ ಬಂದಂತಾಗಿದೆ. ಇಂಥ ಕೇಸುಗಳಲ್ಲಿ ಕೇಳಲಾಗುವ ಪರಿಹಾರ, ತನ್ನ ಜೀವನೋಪಾಯಕ್ಕಾಗಿ ಎಷ್ಟು ಹಣ ಬೇಕು ಅನ್ನುವುದನ್ನು ಬಿಟ್ಟು, ಗಂಡನ ಬಳಿ ಎಷ್ಟು ದುಡ್ಡಿದೆ ಅನ್ನೋದ್ರ ಮೇಲೆ ಡಿಪೆಂಡ್ ಆಗಿರುತ್ತೆ ಅನ್ನೋದು ಇತ್ತೀಚಿನ ಬೆಳವಣಿಗೆ. ಗಂಡನ ಹತ್ರ ಎಷ್ಟು ದುಡ್ಡಿದೆಯೋ ಅಷ್ಟನ್ನೂ ಲಪಟಾಯಿಸಿಬಿಡಬೇಕು ಅನ್ನೋ ಕಾರಣಕ್ಕೆ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ ಹೆಂಡತಿಯರ ಈ ಪ್ಲ್ಯಾನ್ ಹೆಚ್ಚು ಜನಪ್ರಿಯ. ಹಾಗಾಗಿ ಸದ್ಯಕ್ಕೆ ಹೆಣ್ಣುಮಕ್ಕಳು ಕಾನೂನಿನ ದುರ್ಬಳಕೆ ಮಾಡಿಕೊಳ್ಳದಂತೆ ಅದಕ್ಕೆ ತಿದ್ದುಪಡಿ ತರೋ ಅವಶ್ಯಕತೆ ಇದೆ ಅನ್ನೋ ಕೂಗು ಎದ್ದಿದೆ. ಆದರೆ ಅದಕ್ಕೂ ಮುಂಚೆ ಹೆಣ್ಣುಮಕ್ಕಳ ಕಿರುಕುಳದಿಂದ ಅನೇಕ ಗಂಡಸರ ಹೆಣ ಬೀಳುತ್ತಿರೋದು ಮಾತ್ರ ವಿಪರ್ಯಾಸ.

## ಸಂಪಾದಕರ ಸದ್ಯಶೋಧನೆ

# ಒಂದು ಸ್ಥಳ, ಹಲವು ಸೌಕರ್ಯ

ಜಪಾನಿಯರು ಹೊಸತನಕ್ಕೆ ಮತ್ತು ಆವಿಷ್ಕಾರಕ್ಕೆ ಹೆಸರುವಾಸಿ. ದೈನಂದಿನ ಜೀವನದಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಸುಧಾರಣೆ ತರಲು ಅವರು ಸತತ ಪ್ರಯತ್ನಿಸುತ್ತಲೇ ಇರುತ್ತಾರೆ. ಯಾವುದೇ ಒಂದು ಹೊಸ ಪದ್ಧತಿಯನ್ನು ಜಾರಿಗೊಳಿಸಿದರೆ, ಅದನ್ನು ಕಾಲಕಾಲಕ್ಕೆ ಅಭಿವೃದ್ಧಿಪಡಿಸಿ, ಸುಧಾರಿಸುವುದು ಮತ್ತು ಗುಣಮಟ್ಟವನ್ನು ಹೆಚ್ಚಿಸುವುದು ಅವರ ರಕ್ತಗುಣ. ಹೀಗಾಗಿ ಯಾವುದೇ ಒಂದು ಹೊಸ ಪದ್ಧತಿ ಜಾರಿಗೆ ಬಂದ ಕೆಲವೇ ದಿನಗಳಲ್ಲಿ ಅದರ ಸುಧಾರಿತ ಆವೃತ್ತಿಯೂ ಬಂದಿರುತ್ತದೆ. ಜಾರಿ ಮಾಡುವಾಗ ಇದ್ದ ನ್ಯೂನತೆಗಳನ್ನು ತಕ್ಷಣವೇ ಸುಧಾರಿಸಿರುತ್ತಾರೆ. ಇದಕ್ಕೆ ಜಪಾನಿನ ರೈಲು ನಿಲ್ದಾಣವೇ ಒಂದು ಉತ್ತಮ ನಿದರ್ಶನ. ಮೂಲತಃ ಜಪಾನಿಯರ ಜೀವನದಲ್ಲಿ ರೈಲು ಅವಿಭಾಜ್ಯ ಅಂಗ. ಐವರಲ್ಲಿ ಮೂವರು ಸಂಚಾರಕ್ಕೆ ರೈಲನ್ನು ಅವಲಂಬಿಸಿರುತ್ತಾರೆ. ಹೀಗಾಗಿ ರೈಲು ಮತ್ತು ರೈಲು ನಿಲ್ದಾಣದಲ್ಲಿ ಆಗಾಗ ಹೊಸತನ, ಬದಲಾವಣೆ ಮತ್ತು ಸುಧಾರಣೆಗಳು ರೈಲು ಬೋಗಿಗಳಂತೆ ಒಂದನ್ನೊಂದು ಹಿಂಬಾಲಿಸುತ್ತಿರುತ್ತವೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ರೈಲು ನಿಲ್ದಾಣಗಳು ಹೊಸ ಹೊಸ ಅವತಾರಗಳನ್ನು ಪಡೆಯುತ್ತಲೇ ಇವೆ. ಅವು ಪ್ರಯಾಣಿಕರು ಬರುವ-ಹೋಗುವ, ರೈಲನ್ನು ಹತ್ತುವ-ಇಳಿಯುವ ತಾಣಗಳಲ್ಲ. ಹಾಗೆ ನೋಡಿದರೆ, ಅದೇ ಒಂದು ಪ್ರಪಂಚ. ಅಲ್ಲಿ ಏನುಂಟು ಏನಿಲ್ಲ? ರೈಲನ್ನು ಬಳಸಿ ಸಂಚರಿಸುವವರು ತಮ್ಮ ಅಗತ್ಯ ವಸ್ತುಗಳನ್ನು ಖರೀದಿಸಲು ಬೇರೆಲ್ಲೂ ಹೋಗಬೇಕಿಲ್ಲ. ಎಲ್ಲವೂ ಅಲ್ಲಿಯೇ ಲಭ್ಯ. ರೈಲಿಗಾಗಿ ಕಾಯುವ ಸಂದರ್ಭದಲ್ಲಿ ಪ್ಲಾಟ್‌ಫಾರ್ಮಿನಲ್ಲಿರುವ ಬೃಹತ್ ಗಾತ್ರದ ಪರದೆಯ ಮೇಲೆ ಕಿರುಚಿತ್ರಗಳನ್ನು ವೀಕ್ಷಿಸಬಹುದು. ಒಂದು ನಿಮಿಷವನ್ನೂ ನೀರಸವಾಗಿ ಕಳೆಯಬೇಕಿಲ್ಲ. ಪ್ರಯಾಣಿಕರ ಜೀವನವನ್ನು ಸುಧಾರಿಸಲು ನಿರಂತರವಾಗಿ ಹೊಸ ಹೊಸ ಪ್ರಯೋಗಗಳು ನಡೆಯುತ್ತಲೇ ಇರುತ್ತವೆ. ಸಾಮಾನ್ಯವಾಗಿ ರೈಲು ಹಿಡಿದು ಆಫೀಸಿಗೆ ಹೋಗಿ, ಬರುವವರಿಗೆ ತಮ್ಮ ಸ್ವಂತ ಕೆಲಸವನ್ನು ಮಾಡಿಕೊಳ್ಳಲು ಸಮಯವಿರುವುದಿಲ್ಲ. ಅದರಲ್ಲೂ ಡಾಕ್ಟರರನ್ನು ಕಾಣಬೇಕೆಂದರೆ ಆಫೀಸಿಗೆ ರಜೆ ಹಾಕಬೇಕು. ಈ ಕಾರಣದಿಂದ ಅನೇಕರು ಗಂಭೀರ ಕಾಯಿಲೆಯನ್ನು ಎದುರಿಸುತ್ತಿದ್ದರೂ ಡಾಕ್ಟರರನ್ನು ಭೇಟಿಯಾಗಲು ಸಾಧ್ಯವಾಗಿರುವುದಿಲ್ಲ. ಇದಕ್ಕಾಗಿ ರೈಲು ನಿಲ್ದಾಣದಲ್ಲಿಯೇ ಕ್ಲಿನಿಕ್‌ಗಳನ್ನು ತೆರೆಯಲಾಗಿದೆ. ಬೋಗಿಯಿಂದ ಇಳಿದು ಹತ್ತು ಹೆಜ್ಜೆ ನಡೆದು ನೇರವಾಗಿ ಕ್ಲಿನಿಕ್‌ಗೆ ಹೋಗಬಹುದು. ಅಪಾಯಿಂಟ್‌ಮೆಂಟ್ ತೆಗೆದುಕೊಂಡಿದ್ದರೆ ವೈದ್ಯರು ಕಾಯುತ್ತಿರುತ್ತಾರೆ. ಇನ್ನು ಕೆಲವು ರೈಲುಗಳಲ್ಲಿ ಒಂದು ಬೋಗಿಯನ್ನೇ ಕ್ಲಿನಿಕ್ ಆಗಿ ಪರಿವರ್ತಿಸಲಾಗಿದೆ. ಪ್ರಯಾಣ ಮಾಡುತ್ತಲೇ ಡಾಕ್ಟರರಿಂದ ಆರೋಗ್ಯ ತಪಾಸಣೆಯನ್ನೂ ಮಾಡಿಸಿಕೊಳ್ಳಬಹುದು. ಜ್ವರ, ಮೈಕೈನೋವು, ನೆಗಡಿ, ಶೀತ, ತಲೆನೋವು ಮುಂತಾದ ಬಾಧೆಯಿರುವವರು ಬೋಗಿಯಲ್ಲಿರುವ ಕ್ಲಿನಿಕ್‌ಗಳಿಗೆ ಹೋಗಿ ಚಿಕಿತ್ಸೆ ಪಡೆಯಬಹುದಾಗಿದೆ. ಇದಕ್ಕಾಗಿ ದೈನಂದಿನ ದಿನಚರಿಯನ್ನು ಬದಲಿಸಿಕೊಳ್ಳಬೇಕಿಲ್ಲ. ಮನೆಯಲ್ಲಿ ಪತಿ-ಪತ್ನಿ ಇಬ್ಬರೂ ಆಫೀಸಿಗೆ ಹೋಗುವವರಾದರೆ, ಚಿಕ್ಕ ಮಕ್ಕಳನ್ನು 'ಡೇ ಕೇರ್ ಸೆಂಟರ್'ಗಳಲ್ಲಿ ಬಿಡುವುದು ಮತ್ತು ಕೆಲಸದಿಂದ ಮರಳುವಾಗ ಅವರನ್ನು ಕರೆದುಕೊಂಡು ಬರುವುದು ಕಷ್ಟವೇ. ಈ ಅಂಶವನ್ನು ಪರಿಗಣಿಸಿ, ಜಪಾನಿನ ರೈಲು ಕಂಪನಿಗಳು ರೈಲು ನಿಲ್ದಾಣಕ್ಕೆ ಹೊಂದಿಕೊಂಡಂತೆ ಶಿಶುಪಾಲನಾ ಕೇಂದ್ರಗಳನ್ನು ತೆರೆದಿವೆ. ರೈಲು ನಿಲ್ದಾಣದ ಒಂದು ಪಾರ್ಶ್ವದಲ್ಲಿರುವ ಶಿಶುಪಾಲನಾ ಕೇಂದ್ರದಲ್ಲಿ ತಮ್ಮ ಮಕ್ಕಳನ್ನು ಬಿಟ್ಟು, ರೈಲಿನಲ್ಲಿ ನಿರಾತಂಕವಾಗಿ ಕೆಲಸಕ್ಕೆ ಹೋಗಬಹುದು. ಆಫೀಸಿನಿಂದ ಮರಳುವಾಗ ರೈಲು ನಿಲ್ದಾಣದಿಂದಲೇ ಅವರನ್ನು ಮನೆಗೆ ಕರೆದುಕೊಂಡು ಬರಬಹುದು. ಇದು ಪಾಲಕರ ಎಷ್ಟೋ ಕೆಲಸವನ್ನು ಸುಲಭಗೊಳಿಸುತ್ತದೆ. ರೈಲು ನಿಲ್ದಾಣವನ್ನೇ ಕೇಂದ್ರವನ್ನಾಗಿಸಿಕೊಂಡು ಹಲವು ಸೌಕರ್ಯಗಳನ್ನು ನೀಡಲಾಗುತ್ತಿದೆ. ಕೆಲವು ರೈಲು ನಿಲ್ದಾಣಗಳಲ್ಲಿ, ಬ್ಯೂಟಿ ಪಾರ್ಲರ್, ಸಲೂನ್ ಸೌಕರ್ಯವನ್ನೂ ಒದಗಿಸಲಾಗಿದೆ. ರೈಲಿನಿಂದ ಇಳಿದವರೇ ಆ ಕೆಲಸವನ್ನು ಪೂರೈಸಿಕೊಂಡು ಮನೆಗೆ ಮರಳಬಹುದು. ಇನ್ನು ಕೆಲವು ರೈಲು ನಿಲ್ದಾಣಗಳಲ್ಲಿ ಮನೆ-ಸಾಮಾನುಗಳ ರಿಪೇರಿ ಅಂಗಡಿಗಳನ್ನೂ ತೆರೆಯಲಾಗಿದೆ. ಒಂದೇ ಸ್ಥಳದಲ್ಲಿ ಹಲವು ಸುವಿಧಾಗಳು, ಸೌಕರ್ಯಗಳು! ರೈಲು ನಿಲ್ದಾಣ ಎರಡನೇ ಮನೆಯಿದ್ದಂತೆ.

# ಜಪಾನಿನಲ್ಲಿ ಬೀದಿಯಲ್ಲಿಟ್ಟ ಕಸದ ತೊಟ್ಟಿಗಳೂ ಮಾತಾಡುತ್ತವೆ!

**ನೂರೆಂಟು ವಿಶ್ವ**

ವಿಶ್ವೇಶ್ವರ ಭಟ್
vbhat@me.com

ಜಪಾನಿನ ರಾಜಧಾನಿ ಟೋಕಿಯೋ ನಗರದಲ್ಲಿ ನಾನು ಓಡಾಡುವಾಗ, ಮುಖಕ್ಕೆ ಹೊಡೆಯುವಂತಿರುವ ಅಲ್ಲಿನ ಸ್ವಚ್ಛತೆ, ಅಚ್ಚುಕಟ್ಟುತನ, ಶಿಸ್ತು ನನ್ನೊಳಗೆ ಸಣ್ಣ ಸಾಂಸ್ಕೃತಿಕ ಆಘಾತ (Cultural Shock)ವನ್ನು ಮೂಡಿಸಿದ್ದು ಸುಳ್ಳಲ್ಲ. ಪಿಸ್ತಾ ತಿಂದರೂ ಸಿಪ್ಪೆಯನ್ನು ಹೊರಗೆ ಎಸೆಯುವಂತಿಲ್ಲ. ಕಳ್ಳೇಕಾಯಿ ತಿನ್ನುವಾಗ ಮೇಲಿನ ತೆಳು ಪದರವನ್ನು ಸಹ ಚೆಲ್ಲುವಂತಿಲ್ಲ (ಚೆಲ್ಲಲು ಮನಸ್ಸೂ ಬರುವುದಿಲ್ಲ, ಅದು ಬೇರೆ ಮಾತು). ಕೋನ್ ಐಸ್‌ಕ್ರೀಮ್ ತಿಂದ ನಂತರ, ಅದರ ಹೊರಭಾಗವನ್ನು ಎಸೆಯಲೆಂದು ಸುತ್ತಲೂ ಕಸದಬುಟ್ಟಿಗೆ ಹುಡುಕಾಡಿದರೆ, ಅದು ಎಲ್ಲೂ ಕಾಣಿಸುವುದಿಲ್ಲ. ಕುಡಿದು ಖಾಲಿ ಮಾಡಿದ ನೀರಿನ ಬಾಟಲಿಯನ್ನು ಎಸೆಯುವಾಗಲೂ ಇದೇ ಸಮಸ್ಯೆ. ಕಸದ ತೊಟ್ಟಿಗೆ ಎಸೆಯೋಣ ಅಂದುಕೊಂಡರೆ ಅದು ಸುತ್ತಮುತ್ತ ಎಲ್ಲೂ ಕಾಣಿಸುವುದಿಲ್ಲ. ಹಾಗಂತ ಅಲ್ಲಿಯೇ ಎಸೆಯಲು ಮನಸ್ಸು ಬರುವುದಿಲ್ಲ.

ಕಾರಣ ಅಲ್ಲಿನ ರಸ್ತೆ, ಬೀದಿ ಮತ್ತು ಸಾರ್ವಜನಿಕ ಸ್ಥಳಗಳು ಸ್ವಚ್ಛ ಹಾಗೂ ಶುಭ್ರ. ನಮ್ಮ ಮನೆಯ ಜಗುಲಿಯಲ್ಲಾದರೂ ಕಸ-ಕಡ್ಡಿ ಸಿಕ್ಕೀತು. ಆದರೆ ಜನನಿಬಿಡ ಟೋಕಿಯೋ ಬೀದಿಗಳಲ್ಲಿ ಒಂದೇ ಒಂದು ಕಾಗದದ ಚೂರು, ಕಸ, ಸೇದಿಬಿಟ್ಟ ಸಿಗರೇಟಿನ ತುಂಡು, ಅರ್ಧ ಸುಟ್ಟ ಬೆಂಕಿ ಕಡ್ಡಿ, ಚಿಪ್ಸ್ ಪ್ಯಾಕೆಟ್, ಗುಟಖಾ ಚೀಟಿ ಕಾಣುವುದಿಲ್ಲ. ಕಾಗದ ಅಥವಾ ದಪ್ಪ ರಟ್ಟಿನ ಹಾಳೆಯಲ್ಲಿ ಕಟ್ಟಿಕೊಡುವ ಯಾವುದೇ ಆಹಾರವನ್ನು ಸೇವಿಸಿದ ಬಳಿಕ, ಅವನ್ನು ಎಲ್ಲಿ ಎಸೆಯುವುದು ಎಂಬುದು ಅಲ್ಲಿಗೆ ಮೊದಲ ಬಾರಿಗೆ ಹೋದ ಎಲ್ಲರ ಪ್ರಶ್ನೆ. ಯುರೋಪ್ ಮತ್ತು ಅಮೆರಿಕದಂಥ ಸ್ವಚ್ಛ ದೇಶಗಳಲ್ಲಿ ಸಹ ತಿಂದು ಬಿಟ್ಟ ಆಹಾರ ಅಥವಾ ಅವನ್ನು ಸುತ್ತಿದ ಕಾಗದವನ್ನು ಎಸೆಯಲು ಎಲ್ಲೆಡೆ ಕಸದತೊಟ್ಟಿಗಳಾದರೂ ಇರುತ್ತವೆ. ಆದರೆ ಟೋಕಿಯೋ ಸೇರಿದಂತೆ ಜಪಾನಿನ ನಗರಗಳಲ್ಲಿ ಕಸದ ತೊಟ್ಟಿಗಳು ಹುಡುಕಿದರೂ ಸಿಗುವುದಿಲ್ಲ. ಮ್ಯಾಕ್ ಡೊನಾಲ್ಡ್‌ಗೆ ಹೋಗಿ ಬರ್ಗರ್ ತಂದು ಮುಕ್ಕಾಲು ಭಾಗ ಸೇವಿಸಿ ಉಳಿದುದನ್ನು ಬಿಸಾಕೋಣ ಅಂತ ಅಂದುಕೊಂಡರೆ ಅಲ್ಲೆಲ್ಲೂ ಕಸದಬುಟ್ಟಿಗಳು ಕಾಣುವುದಿಲ್ಲ. ಅನಿವಾರ್ಯವಾಗಿ ಅದನ್ನು ನಮ್ಮ ಕಿಸೆಯೊಳಗೋ, ಬ್ಯಾಗಿನೊಳಗೋ ಇಟ್ಟುಕೊಳ್ಳಬೇಕು. ಮನೆಗೋ, ಹೋಟೆಲಿಗೋ ಹೋದ ನಂತರ ಅಲ್ಲಿರುವ ಕಸದ ಬುಟ್ಟಿಗೆ ಹಾಕಿ ಧನ್ಯರಾಗಬೇಕು!

ಅಸಲಿಗೆ ಜಪಾನಿನ ಹಾದಿ-ಬೀದಿಗಳಲ್ಲಿ ಕಸದತೊಟ್ಟಿಗಳೇ ಇಲ್ಲ! ಆದರೂ ಅವೆಲ್ಲ ತೊಳೆದ ಕೆನ್ನೆಯಂತೆ ನುಣುಪು ಮತ್ತು ಶುದ್ಧ ಸ್ವಚ್ಛ. ನಾನು ಕೋನ್ ಐಸ್‌ಕ್ರೀಮ್ ತಿಂದು, ನೀರು ಕುಡಿದು ಹೊರಗಿನ ಕವರ್ ಮತ್ತು ಖಾಲಿ ಬಾಟಲಿಯನ್ನು ಎಸೆಯಲಾಗದೇ ಅವನ್ನೆಲ್ಲ (ಒಲ್ಲದ ಮನಸ್ಸಿನಿಂದ) ನನ್ನ ಬ್ಯಾಕ್ ಪ್ಯಾಕ್‌ನಲ್ಲಿಟ್ಟುಕೊಳ್ಳುವುದು ಅನಿವಾರ್ಯವಾಯಿತು. ನಂತರ ಹೋಟೆಲಿಗೆ ಬಂದವನೇ ಅಲ್ಲಿದ್ದ ಕಸದಬುಟ್ಟಿಗೆ ಅವನ್ನು ಎಸೆದು 'ಭಾರ' ಇಳಿಸಿಕೊಂಡಾಗಲೇ ಸಮಾಧಾನವಾಗಿದ್ದು. ಜಪಾನಿನಲ್ಲಿ ನಿರ್ದಿಷ್ಟ ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟು ಸೇದಲು ಯಾರ ಅಭ್ಯಂತರವೂ ಇಲ್ಲ. ಆದರೆ ಬೂದಿಯನ್ನು ಬೇಕಾಬಿಟ್ಟಿ ಕೊಡವುವಂತಿಲ್ಲ. ಹಾಗಂತ ಎಲ್ಲೂ ಸೂಚನಾ ಫಲಕಗಳನ್ನು ನೆಟ್ಟಿಲ್ಲ. 'ಗಲೀಜು ಮಾಡಿದರೆ ದಂಡ ವಿಧಿಸಲಾಗುವುದು' ಎಂದು ಬೋರ್ಡು ಹಾಕಿಲ್ಲ. ಆದರೆ ಯಾರೂ ಹಾಗೆ ಮಾಡುವುದಿಲ್ಲ. ಆ ದೇಶಕ್ಕೆ ಮೊದಲ ಬಾರಿಗೆ ಹೋದವರೂ ಹಾಗೆ ಮಾಡುವುದಿಲ್ಲ. ಮಾಡಲು ಮನಸ್ಸೂ ಬರುವುದಿಲ್ಲವೆನ್ನಿ.

ರಸ್ತೆ ಅಥವಾ ಬೀದಿಗಳಲ್ಲಿ ಯಾರೂ ಕಸವನ್ನು ಎಸೆಯಬಾರದು ಅಂದರೆ ಕನಿಷ್ಠ ನೂರು ಮೀಟರುಗಳಿಗೆ ಒಂದಾದರೂ ಕಸದಬುಟ್ಟಿಗಳನ್ನು ಇಡಬೇಕು ಎಂಬ ಭಾವನೆಯಿದೆ. 2014ರಲ್ಲಿ ಭಾರತದಲ್ಲಿ ಪ್ರಧಾನಿ ಮೋದಿ ಆರಂಭಿಸಿದ 'ಸ್ವಚ್ಛ ಭಾರತ ಅಭಿಯಾನ' ಸಂಪೂರ್ಣ ಯಶಸ್ಸು ಕಾಣದಿರಲು ಕಸದಬುಟ್ಟಿಗಳ ಕೊರತೆ ಮತ್ತು ಅಲಭ್ಯತೆಯೂ ಪ್ರಮುಖ ಕಾರಣ. ಆದರೆ ಈ ವಿಷಯದಲ್ಲಿ ಜಪಾನಿಯರ ಧೋರಣೆಯೇ ಬೇರೆ. ಕಸಕ್ಕಿಂತ ಕಸದ ತೊಟ್ಟಿಗಳೇ ಅಸಹ್ಯ ಎಂಬುದು ಅವರ ವಾದ. ಅವು ನಗರ ಸೌಂದರ್ಯಕ್ಕೆ ಮಾರಕ. ಒಂದು ದಿನ ಕಸದ ತೊಟ್ಟಿಗಳನ್ನು ಬರಿದು ಮಾಡದಿದ್ದರೆ ಅವೇ ಗಬ್ಬುನಾತ ಸೂಸಲಾರಂಭಿಸುತ್ತವೆ. ಕೆಲವು ಕಡೆಗಳಲ್ಲಿ ಕಸದ ಬುಟ್ಟಿಗಳು ಭರ್ತಿಯಾಗಿ ತೊಟ್ಟಿಕ್ಕಲು (Overflow) ಆರಂಭಿಸುತ್ತವೆ. ಕಸದಬುಟ್ಟಿಗಳ ಅಂದ-ಚೆಂದವನ್ನು ಕಾಪಾಡುವುದು ಕಷ್ಟ. ಕಸದ ಬುಟ್ಟಿಗಳು ಕಸವಿರುವುದನ್ನು ಸಾರಿ ಹೇಳುತ್ತವೆ. ಅವೇ ಗಲೀಜಿನ ತಾಣಗಳಾಗುತ್ತವೆ. ಕಸದಬುಟ್ಟಿಗಳನ್ನು ಸಹಿಸಿಕೊಂಡರೆ ಕಸವನ್ನು ಸಹಿಸಿಕೊಂಡಂತೆ. ಹೀಗಾಗಿ ಕಸ ಮತ್ತು ಕಸದ ಬುಟ್ಟಿಗಳಿಗೆ ಆಸ್ಪದವನ್ನೇ ನೀಡಬಾರದು ಎಂಬುದು ಜಪಾನಿಯರ ವಾದ ಮತ್ತು ಚಿಂತನೆ.

ಕಸದತೊಟ್ಟಿಗಳಿಂದ ಸಾರ್ವಜನಿಕ ಸ್ಥಳಗಳನ್ನು ಮುಕ್ತಗೊಳಿಸಲು ಇನ್ನೂ ಒಂದು ಕಾರಣವಿದೆ. 1995ರ ಮಾರ್ಚ್ 20ರಂದು ಟೋಕಿಯೋ ಸಬ್ ವೇಯಲ್ಲಿ ಸಂಭವಿಸಿದ ಭಯೋತ್ಪಾದಕ ಸಾರಿನ್ ಗ್ಯಾಸ್ ದಾಳಿ. ಆ ದಾಳಿಗೆ ಬೇಕಾದ ಸ್ಫೋಟಕ ಸಾಮಗ್ರಿಗಳನ್ನು ಭಯೋತ್ಪಾದಕರು ಕಸದ ಬುಟ್ಟಿಗಳಲ್ಲಿ ಇಟ್ಟಿದ್ದರು. ಆ ದಾಳಿಯಲ್ಲಿ ಸುಮಾರು 13 ಜನ

ಸಾವಿಗೀಡಾಗಿ, 50 ಮಂದಿ ಗಂಭೀರ ಗಾಯಗೊಂಡರು. ಆ ದಾಳಿಯ ಬಳಿಕ, ಸಾರ್ವಜನಿಕ ಸ್ಥಳಗಳಲ್ಲಿ ಸುರಕ್ಷತೆಯನ್ನು ಹೆಚ್ಚಿಸಲು ಹಲವೆಡೆ ಕಸದ ಬುಟ್ಟಿಗಳನ್ನು ತೆಗೆದುಹಾಕಲಾಯಿತು. ಶಂಕಾಸ್ಪದ ವಸ್ತುಗಳನ್ನು ಸಂಗ್ರಹಿಸಲು ಅವುಗಳನ್ನು ಬಳಸಬಹುದು ಮತ್ತು ಕಸದ ಬುಟ್ಟಿಗಳು ಭದ್ರತೆಗೆ ಅಪಾಯವಾಗಬಹುದೆಂಬ ಆತಂಕದಿಂದ ಆ ಕ್ರಮ ತೆಗೆದುಕೊಳ್ಳಲಾಯಿತು. ಇದು 'ಪೊಲೀಸ್ ಸುಧಾರಣೆ'ಯ ಭಾಗವೂ ಆಗಿತ್ತು.

ಕ್ರಮೇಣ ಸಾರ್ವಜನಿಕ ಸ್ಥಳಗಳಲ್ಲಿ ಕಸದತೊಟ್ಟಿಗಳು ಕಣ್ಮರೆಯಾದವು. ಆಗ ಸಾರ್ವಜನಿಕರು ಕಸವನ್ನು ಬೇಕಾಬಿಟ್ಟಿ ಎಸೆಯುವ ಅಪಾಯವೂ ಇತ್ತು. ಆದರೆ ಜಪಾನಿಯರಲ್ಲಿರುವ ವ್ಯಕ್ತಿಗತ ಶಿಸ್ತು, ಅಚ್ಚುಕಟ್ಟುತನ ಮತ್ತು ಜಾಗೃತಿ ನೆರವಿಗೆ ಬಂದಿತು. ಅಲ್ಲಿನ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿಯೇ 'ನಿಮ್ಮ ಕಸ, ನಿಮ್ಮ ಹೊಣೆ' (Your trash is your responsibility) ಎಂಬ ಪಾಠವನ್ನು ಬೋಧಿಸಲಾಗುತ್ತದೆ. ಮೊದಲ ಕ್ಲಾಸಿನಿಂದಲೇ ಶಾಲೆಯ ಆವರಣವನ್ನು ಸ್ವಚ್ಛಗೊಳಿಸುವ ಹೊಣೆಗಾರಿಕೆ ವಿದ್ಯಾರ್ಥಿಗಳದ್ದೇ. ಮಕ್ಕಳು ಶಾಲೆಯ ಪ್ರಾಂಗಣವನ್ನು ಸ್ವಚ್ಛಗೊಳಿಸಬೇಕು ಮತ್ತು ಶೌಚಾಲಯಗಳನ್ನೂ ತೊಳೆಯಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆಯನ್ನು ಕಾಪಾಡುವುದನ್ನು ಅವರಿಗೆ ಆದೇಶದಿಂದ ಕಲಿಸಬೇಕಿಲ್ಲ. ಅದು ಬಾಲ್ಯದಿಂದಲೇ ರೂಢಿಯಿಂದ ಬಂದಿರುತ್ತದೆ. ಅಪ್ಪಿ-ತಪ್ಪಿ ಕಸ ಬಿದ್ದರೆ, ಅದನ್ನು ತೆಗೆಯುವಂತೆ ಬೇರೆಯವರು ಹೇಳಬೇಕಿಲ್ಲ, ಹೇಳುವುದೂ ಇಲ್ಲ. ಅದನ್ನು ಯಾರೇ ಗಮನಿಸಲಿ, ತಕ್ಷಣ ಅದನ್ನು ಆಯ್ದು ತಮ್ಮ ಪ್ಯಾಂಟಿನ ಜೇಬಿನಲ್ಲಿಟ್ಟುಕೊಳ್ಳುತ್ತಾರೆ. ಅವರಲ್ಲಿ ಬಲವಾಗಿ ಬೇರೂರಿರುವ ಸಮುದಾಯ ಸ್ವಚ್ಛತಾ ಗುಣ ಹಾಗೆ ಮಾಡುವಂತೆ ಪ್ರೇರೇಪಿಸುತ್ತದೆ. ಯಾರಾದರೂ ಸಾರ್ವಜನಿಕ ಸ್ಥಳದಲ್ಲಿ ಕಸ ಚೆಲ್ಲಿದರೆ, ಅದು ತಕ್ಷಣವೇ ಅವನಿಗೆ/ಅವಳಿಗೆ ನೈತಿಕ ಬಾಧ್ಯತೆಯಂತೆ ಕಾಣುತ್ತದೆ. 'ಬೇಕಾದರೆ ಬೇರೆಯವರು ಬಂದು ಎತ್ತಲಿ' ಎಂದು ಅಂದುಕೊಳ್ಳುವುದಿಲ್ಲ.

ಈ ಭಾವ, ಪ್ರಜ್ಞೆ ಎಚ್ಚರವಾಗಿರುವುದು ಜನರ ಸಾರ್ವಜನಿಕ ವರ್ತನೆಗಳ ಮೇಲೂ ಪರಿಣಾಮ ಬೀರಿದೆ. ಉದಾಹರಣೆಗೆ, ಸಾರ್ವಜನಿಕ ಸ್ಥಳಗಳಲ್ಲಿ, ಹಾದಿ-ಬೀದಿಗಳಲ್ಲಿ ಜಪಾನಿಯರು ಆಹಾರ ಸೇವಿಸುವುದಿಲ್ಲ. ಬೀದಿಯಲ್ಲಿ ನಡೆದಾಡುತ್ತಾ ಆಹಾರ ಸೇವಿಸುವವರು ವಿರಳ. ಆಹಾರ ಪದಾರ್ಥಗಳು ಬಿದ್ದು ಗಲೀಜಾಗಬಹುದು ಮತ್ತು ಆಹಾರ ಸೇವಿಸಿದ ಬಳಿಕ, ಕಾಗದಗಳನ್ನು ಬಿಸಾಡುವುದು ಸಮಸ್ಯೆಯಾಗಬಹುದೆಂದು ಯಾರೂ ಹಾಗೆ ಮಾಡುವುದಿಲ್ಲ. ಇದಕ್ಕೆ ಅಪವಾದವೇ ಇಲ್ಲ ಅನ್ನುವಂತಿಲ್ಲ. ಆದರೆ ಬೇರೆಯವರು ಕಸ ಎಸೆದರೂ ಅದನ್ನು ಮೊದಲು ನೋಡಿದವರೇ ಎತ್ತಿ ಎಲ್ಲಿಡಬೇಕೋ ಅಲ್ಲಿ ಇಡುತ್ತಾರೆ.

ಇದರಿಂದ ಕಸ ಹುಟ್ಟುವ ಪ್ರಮಾಣವೇ ಕಡಿಮೆಯಾಗುವುದರಿಂದ, ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚು ಬುಟ್ಟಿಗಳ ಅಗತ್ಯ ಉದ್ಭವಿಸುವುದಿಲ್ಲ. ವಿಪರೀತವಾಗಿ ಕುಡಿದು ಕೆಲವರು ರಸ್ತೆಯಲ್ಲಿ ಬೀಳಬಹುದು, ಆದರೆ ರಸ್ತೆಯಲ್ಲಿ ಕಸ ಮಾತ್ರ ಬೀಳುವುದಿಲ್ಲ. ಜಪಾನಿನ ಸಂಸ್ಕೃತಿಯಲ್ಲಿ ಒಟ್ಟಾಗಿ ಬಾಳುವುದಕ್ಕೆ ಮತ್ತು ಸಮುದಾಯದ ಕಲ್ಯಾಣಕ್ಕೆ ಒತ್ತುನೀಡುತ್ತಾರೆ. ಈ ಹಿನ್ನೆಲೆಯಲ್ಲಿ, ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಡಲು ಪ್ರತಿಯೊಬ್ಬರೂ ತಮ್ಮದೇ ಯೋಗದಾನ ನೀಡಲು ಮುಂದಾಗುತ್ತಾರೆ. 'ತಮ್ಮ ಕಸವನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬೇಕು' ಎಂಬ ಸಂಸ್ಕೃತಿಯನ್ನು ಜಪಾನಿಯರು ನಿತ್ಯಜೀವನದಲ್ಲಿ ಮತ್ತು ಸಾರ್ವಜನಿಕ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ. ಈ ದೃಷ್ಟಿಕೋನವು ಕೇವಲ ಶಿಸ್ತು ಮತ್ತು ಸ್ವಚ್ಛತೆಯಲ್ಲ, ಅವರ ಸಾಮಾಜಿಕ ಜವಾಬ್ದಾರಿಯ ಅರಿವಿನ ಪ್ರತೀಕವಾಗಿದೆ.

ಜಪಾನಿಯರ ರಕ್ತದಲ್ಲಿ ಕಸದ ಬಗ್ಗೆ ಅದೆಂಥ ಕಟು ನಿರಾಕರಣೆ ಅಥವಾ ಉಗ್ರ ತಿರಸ್ಕಾರವಿದೆಯೆಂದರೆ, ಅವರು ಕಸ ನಿರ್ವಹಣೆಗೂ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಸ್ಮಾರ್ಟ್ ಬಿನ್ (Smart Bins)ಗಳು ಜಪಾನಿನ ಸ್ವಚ್ಛತೆಯ ಅನುಕೂಲತೆ, ತಂತ್ರಜ್ಞಾನದಲ್ಲಿ ಪ್ರಗತಿ ಮತ್ತು ಪರಿಸರ ಸಂರಕ್ಷಣೆಯ ಔನ್ನತ್ಯವನ್ನು ಪ್ರತಿಬಿಂಬಿಸುತ್ತವೆ. ತೀರಾ ಅಗತ್ಯ ಎಂದು ಅನಿಸುವ ಕಡೆಗಳಲ್ಲಿ, ಕೋಲ್ಡ್ ಡ್ರಿಂಕ್ಸ್ ಇರುವ ವೆಂಡಿಂಗ್ ಮಶೀನ್ ಇರುವ ಸ್ಥಳಗಳಲ್ಲಿ, ರೈಲು ನಿಲ್ದಾಣದಲ್ಲಿ ಸ್ಮಾರ್ಟ್ ಬಿನ್‌ಗಳನ್ನಿಡಲಾಗಿದೆ. ಆ ಬಿನ್‌ಗಳಿಗೆ ಸೆನ್ಸರ್ ಅಳವಡಿಸಲಾಗಿದೆ. ಬಿನ್ ತುಂಬಿದಾಗ ಅಥವಾ ಕಸದ ಒತ್ತಡ ಹೆಚ್ಚಾದಾಗ ತಕ್ಷಣವೇ ಅದು ಸೂಚನೆಯನ್ನು ನೀಡುತ್ತದೆ. ಬೀಪ್ ಸಂದೇಶವನ್ನು ಕಳಿಸುತ್ತದೆ. ಈ ಸೆನ್ಸರ್‌ಗಳು ತೊಟ್ಟಿಯೊಳಗಿರುವ ಕಸದ ಗುಣವನ್ನು ಸಹ ಗುರುತಿಸುತ್ತವೆ. ಉದಾಹರಣೆಗೆ ಪ್ಲಾಸ್ಟಿಕ್, ಲೋಹ, ಗಾಜು...ಇತ್ಯಾದಿ.

ಕಸ ವಿಂಗಡಣೆಗೆ ಸಂಪೂರ್ಣ ಸಮರ್ಪಕ ತಂತ್ರಜ್ಞಾನವನ್ನು ಜಪಾನ್ ಬಳಸುತ್ತಿದೆ. ಕೆಲ ಸ್ಮಾರ್ಟ್ ಬಿನ್‌ಗಳು ಕಸದ ವಸ್ತುಗಳನ್ನು ಸ್ವಯಂಚಾಲಿತ (Automatic Sorting)ವಾಗಿ ವಿಂಗಡಿಸುತ್ತವೆ. ಬಿನ್ ಮೇಲಿರುವ ಬಟನ್ ಅಮುಕಿದರೆ ಪ್ಲಾಸ್ಟಿಕ್, ಗಾಜು, ಲೋಹ, ಮತ್ತು ಬಯೋಡಿಗ್ರೇಡಬಲ್ ವಸ್ತುಗಳು ಪ್ರತ್ಯೇಕವಾಗಿ ವಿಂಗಡಣೆಯಾಗುತ್ತವೆ. ಇಂಧನ ಉಳಿಸಲು ಸ್ಮಾರ್ಟ್ ಬಿನ್‌ಗಳ ಮೇಲೆ ಸೋಲಾರ್ ಪ್ಯಾನಲ್ ಜೋಡಿಸಿ, ಸೌರಶಕ್ತಿಯಿಂದ ಕಾರ್ಯನಿರ್ವಹಿಸುವ ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಸೌರಶಕ್ತಿ ಬಳಸಿ ಕಸದತೊಟ್ಟಿಯೊಳಗಿನ ತಾಪಮಾನವನ್ನು ಸಹ ನಿಯಂತ್ರಿಸಲಾಗುತ್ತದೆ. ಇದು ಕಸ ಕೆಡದಂತೆ, ವಾಸನೆ ಬರದಂತೆ ತಡೆಗಟ್ಟಲು ಸಹಾಯಕ. ಕೆಲವು ಬಿನ್‌ಗಳು ಆಧುನಿಕ ಸ್ವಚ್ಛತಾ ವ್ಯವಸ್ಥೆ ಹೊಂದಿವೆ, ಇವು ಅವುಗಳ ಒಳಗೆ ಹರಿಯುವ ಕಸದ ದ್ರವವನ್ನು ಶುದ್ಧೀಕರಿಸುತ್ತವೆ. ಇನ್ನು ಕೆಲವು ಬಿನ್‌ಗಳಲ್ಲಿ ಕಸದಿಂದ ಉತ್ಪನ್ನವಾಗುವ ದ್ರವಗಳನ್ನು ಹೀರಿಕೊಳ್ಳುವ ವ್ಯವಸ್ಥೆಯೂ ಇದೆ. ಅಕ್ಷರಶಃ ಈ ತೊಟ್ಟಿಗಳು ಸಂದೇಶ, ಬೀಪ್, ಸೂಚನೆಗಳ ಮೂಲಕ ಮಾತಾಡುತ್ತವೆ!

ವಿಶೇಷವೆಂದರೆ, ಈ ಸ್ಮಾರ್ಟ್ ಬಿನ್‌ಗಳನ್ನು ಇಂಟರ್ನೆಟ್ ಆಫ್ ಥಿಂಗ್ಸ್ (IoT) ಮೂಲಕ ಸಾರ್ವಜನಿಕ ಸ್ವಚ್ಛತಾ ತಂತ್ರಜ್ಞಾನ ಜಾಲಕ್ಕೆ ಬೆಸೆಯಲಾಗಿದೆ. ಬಿನ್ ತುಂಬಿದಾಗ, ಒಳಗೆ ಇರುವ ಕಾಂಪಾಕ್ಟರ್ ಸ್ವಯಂಚಾಲಿತವಾಗಿ ತ್ಯಾಜ್ಯದ ಮೇಲೆ ಒತ್ತಡ ಹಾಕಿ (compress) ಸಂಕುಚಿತಗೊಳಿಸುತ್ತದೆ. ಇದರಿಂದ ಬಿನ್ ಅದೇ ಗಾತ್ರದ ಸಾಮಾನ್ಯ ಬಿನ್‌ಗಿಂತ ಆರು ಪಟ್ಟು ಹೆಚ್ಚು ಕಸವನ್ನು ಹಿಡಿದಿಡಲು ಸಾಧ್ಯವಾಗುತ್ತದೆ. ತೊಟ್ಟಿಗಳ ಮುಚ್ಚಳವನ್ನು ತೆರೆಯಲು touch-free ವ್ಯವಸ್ಥೆಯೂ ಇದೆ. ಕಾಲಿನಿಂದ ಪೆಡಲ್ ಒತ್ತಿದರೆ ಮುಚ್ಚಳ ತೆರೆಯುತ್ತದೆ. ತ್ಯಾಜ್ಯ ವಸ್ತುಗಳ ಪ್ರಮಾಣದ ನೋಟಿಫಿಕೇಶನ್‌ಗಳನ್ನು ಆ ಸ್ಮಾರ್ಟ್ ಬಿನ್‌ಗಳು ನಗರ ನಿರ್ವಹಣಾ ಕೇಂದ್ರಗಳಿಗೆ ತಕ್ಷಣವೇ ಕಳುಹಿಸುತ್ತವೆ.

ಸಾರ್ವಜನಿಕರು ಕಸವನ್ನು ವಿಂಗಡಿಸಿ ಹಾಕುವಂತಾಗಲು ಮತ್ತು ರಿಸೈಕ್ಲಿಂಗ್ ಅನ್ನು ಪ್ರೋತ್ಸಾಹಿಸಲು, ಹಣದ ಆಮಿಷವನ್ನು ಕೂಡ ಒಡ್ಡಲಾಗಿದೆ. ಸ್ಮಾರ್ಟ್ ಬಿನ್‌ಗೆ ಬಿಯರ್ ಬಾಟಲಿ ಅಥವಾ ಸಾಫ್ಟ್ ಡ್ರಿಂಕ್ ಕ್ಯಾನ್ ಹಾಕಿದ ಬಳಿಕ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ, ಕ್ಯಾಶ್ ಬ್ಯಾಕ್ ಪಡೆಯಬಹುದು. ಕಸದ ತೊಟ್ಟಿಗಳೇ ಹಣ ಪಾವತಿ ಮಾಡುತ್ತವೆ. ಸಮಯ ಮತ್ತು ಶ್ರಮದ ಉಳಿತಾಯ ಸ್ಮಾರ್ಟ್ ಬಿನ್‌ಗಳ ಪ್ರಯೋಜನಗಳಲ್ಲೊಂದು. ಕಸ ವಿಂಗಡಣೆಗೆ ಹೆಚ್ಚು ಶ್ರಮಪಡಬೇಕಾಗಿಲ್ಲ, ಬಿನ್‌ಗಳು ಇದನ್ನು ಸ್ವಯಂಚಾಲಿತವಾಗಿ ಕ್ಷಣಾರ್ಧದಲ್ಲಿ ಮಾಡಿ ಮುಗಿಸುತ್ತವೆ. ಭದ್ರತೆ ದೃಷ್ಟಿಯಿಂದಲೂ ಈ ಬಿನ್‌ಗಳು ಸುರಕ್ಷಿತ. ಹೆಚ್ಚಿನ ಜನಸಂದಣಿ ಇರುವ ಸ್ಥಳಗಳಲ್ಲಿ ಕಸದ ಗುಣವನ್ನು ತಕ್ಷಣ ಗುರುತಿಸುವುದರಿಂದ, ಸ್ಫೋಟಕ ಅಥವಾ ಧ್ವಂಸಕ ವಸ್ತು/ಕಸವನ್ನು ಪತ್ತೆ ಹಚ್ಚಲು ಅನುಕೂಲ. ಅಷ್ಟೇ ಅಲ್ಲ, ಇದರಿಂದ ಪೂರ್ಣ ಪ್ರಮಾಣದಲ್ಲಿ ವಿಂಗಡಣೆ ಹಾಗೂ ರಿಸೈಕ್ಲಿಂಗ್ ಪ್ರಕ್ರಿಯೆ ಜಾರಿಗೊಂಡು, ವಾಯುಮಾಲಿನ್ಯ ಮತ್ತು ಭೂಮಾಲಿನ್ಯ ಗಣನೀಯ ಕಡಿಮೆಯಾಗುತ್ತದೆ. ರೈಲು ನಿಲ್ದಾಣ, ವಿಮಾನ ನಿಲ್ದಾಣ ಸೇರಿದಂತೆ ಹೆಚ್ಚು ಜನಸಂದಣಿ ಇರುವ ಸ್ಥಳಗಳಲ್ಲಿ ತಕ್ಷಣವೇ ಕಸ ವಿಂಗಡಣೆ ಮತ್ತು ಸುರಕ್ಷತೆ ಕಾಪಾಡಲು ಸ್ಮಾರ್ಟ್ ಬಿನ್‌ಗಳು ಉಪಯುಕ್ತ.

ಸ್ಮಾರ್ಟ್ ಬಿನ್‌ಗಳಿಂದ ಈಗ ಜಪಾನ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ Smart Garbage Box (SmaGO)ಗಳನ್ನೂ ಅಳವಡಿಸಲಾರಂಭಿಸಿದೆ. ಇದು ಸಹ ಇಂಟರ್ನೆಟ್ ಆಫ್ ಥಿಂಗ್ಸ್ (IoT) ಮತ್ತು ಕೃತಕ ಬುದ್ಧಿಮತ್ತೆ (AI) ತಂತ್ರಜ್ಞಾನವನ್ನು ಹೊಂದಿದೆ. ಬಿನ್ ಒಳಗಿರುವ ಯಾವ ಯಾವ ವಸ್ತು ಎಷ್ಟು ಪ್ರಮಾಣದಲ್ಲಿದೆ ಎಂಬುದನ್ನು ನಿಖರವಾಗಿ ತಿಳಿಸುತ್ತದೆ ಮತ್ತು ರಿಸೈಕ್ಲಿಂಗ್ ಪ್ರಕ್ರಿಯೆಗೆ ಶೀಘ್ರ ಚಾಲನೆ ನೀಡುತ್ತದೆ. ಜಪಾನಿನ ಸ್ಮಾರ್ಟ್ ಬಿನ್‌ಗಳು ತಂತ್ರಜ್ಞಾನ ಮತ್ತು ಪರಿಸರದ ನಡುವಿನ ಸಮತೋಲನದ ಆದರ್ಶ ಮಾದರಿ ಎಂಬುದಂತೂ ಸತ್ಯ. ಅದಕ್ಕಿಂತ ಮುಖ್ಯವಾಗಿ ಇವು ಕೇವಲ ಕಸ ನಿರ್ವಹಣಾ ಸಾಧನಗಳಲ್ಲ, ಬದಲಾಗಿ ಸಾರ್ವಜನಿಕರಿಗೆ ಶಿಸ್ತು, ಸ್ವಚ್ಛತೆ, ಅಚ್ಚುಕಟ್ಟುತನ ಮತ್ತು ಸಾಮಾಜಿಕ ಜವಾಬ್ದಾರಿಯ ಸಂದೇಶ ಸಾರುವ ಸ್ಥಾವರಗಳಾಗಿವೆ.

ನಾಗರಿಕತೆ ಬೆಳೆದು ಶತಶತಮಾನಗಳೇ ಕಳೆದರೂ ನಮಗಿನ್ನೂ ಕನಿಷ್ಠ ಕಸ ನಿರ್ವಹಿಸುವುದು ಗೊತ್ತಿಲ್ಲ. ಎಲ್ಲ ಹಾದಿ-ಬೀದಿಗಳು ಗಬ್ಬುನಾರುತ್ತಿವೆ. ನಗರಗಳೆಲ್ಲ ಕೊಳೆಗೇರಿಗಳಾಗಿವೆ. ಇಷ್ಟು ಸಣ್ಣ ಸಂಗತಿಯೇ ಬೃಹದಾಕಾರದ ಸಮಸ್ಯೆಯಾಗಿ ಕಾಡುತ್ತಿದೆ. ಜಪಾನಿಯರಿಗೆ ಚಿಂದಿಯೇ ಚಿತ್ರಾನ್ನ! ಅವರು ಕಸದಿಂದ ರಸ ತೆಗೆದು ವಿಕಾಸಗೊಂಡಿದ್ದರೆ, ನಮಗೆ ಕಸವೇ ವಿಷವಾಗಿದೆ.

ರಬ್ಬಿಶ್!

# ಜನರ ಹೃದಯ ಆವರಿಸಿಕೊಂಡಿರುವ ರಾಜ್ ಸಾಹೇಬ್!

**ನೀವು ಯಾವತ್ತಾದರೂ ಚಿತ್ರಗಳು ಮಾತನಾಡುವುದನ್ನು ನೋಡಿದ್ದೀರಾ? ಎಂದು ರಾಜ್ ಕಪೂರ್ ಕೇಳಿದರು. ಅವು ಮಾತನಾಡದೆ ಇದ್ದರೆ ನಾವೇಕೆ ಇಟ್ಟುಕೊಳ್ಳಬೇಕು? ಎಂದು ನಾನು ಕೇಳಿದೆ. ಇನ್ನೊಮ್ಮೆ ಅವರು ಹೇಳಿದ ಮಾತು ಯಾವತ್ತೂ ಮರೆಯಲಾರೆ. 'ಎಲ್ಲರೂ ಊಟ ಮಾಡುತ್ತಾರೆ. ಆದರೆ ಖುಷಿಯಿಂದ ಊಟ ಮಾಡುತ್ತಾರೋ, ಕಣ್ಣೀರಿಡುತ್ತಾ ಉಣ್ಣುತ್ತಾರೋ ಎಂಬುದು ಮುಖ್ಯ'.**

**ಸಂಗತ**

ಡಾ.ವಿಜಯ್ ದರಡಾ
vveditoped@gmail.com

ಶಾಲೆಯಲ್ಲಿ ನನಗೊಬ್ಬ ಗೆಳೆಯನಿದ್ದ. ಅವನ ಹೆಸರು ಭಾವು ದೇಶಮುಖ್. ಜಿಲ್ಲಾಧಿಕಾರಿಯ ಮಗ. ಈಗ ಅವನು ಡಾಕ್ಟರ್. ಚಿಕ್ಕವನಿದ್ದಾಗ ಅವನಿಗೆ ದೊಡ್ಡ ದೊಡ್ಡ ವ್ಯಕ್ತಿಗಳಿಗೆ ಪತ್ರ ಬರೆಯುವ ಹವ್ಯಾಸವಿತ್ತು. ಆ ಕಾಲದಲ್ಲಿ ಹಾಗೆ ಯಾರಾದರೂ ಪತ್ರ ಬರೆದರೆ ಪ್ರಸಿದ್ಧರು ಅದಕ್ಕೆ ಉತ್ತರ ಬರೆಯುತ್ತಿದ್ದರು. ಭಾವು ಒಮ್ಮೆ ರಾಜ್ ಕಪೂರ್‌ಗೆ ಪತ್ರ ಬರೆದಿದ್ದ. ಅದಕ್ಕೆ ಬಂದ ಸ್ವೀಕೃತಿ ಪತ್ರವನ್ನು ನನಗೆ ಹೆಮ್ಮೆಯಿಂದ ತೋರಿಸಿದ್ದ. ಅದನ್ನು ನೋಡಿ ನನಗೂ ಆಸೆಯಾಗಿತ್ತು- ಒಮ್ಮೆಯಾದರೂ ನಾನು ರಾಜ್ ಕಪೂರ್‌ರನ್ನು ಭೇಟಿಯಾಗಿ ಮಾತನಾಡಬೇಕು ಅಥವಾ ಕೊನೆಯ ಪಕ್ಷ ಒಮ್ಮೆ ಅವರನ್ನು ಪ್ರತ್ಯಕ್ಷವಾಗಿ ನೋಡಬೇಕು! ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಅವರ ಬಗ್ಗೆ ಅಧ್ಯಾಯವೊಂದು ದಾಖಲಾಗಲಿದೆ ಎಂಬ ಯಾವುದೇ ಕಲ್ಪನೆ ಆಗ ನನಗೆ ಇರಲಿಲ್ಲ.

ಈಗ ರಾಜ್ ಕಪೂರ್ ಅವರ ಜನ್ಮಶತಮಾನೋತ್ಸವ ಸಮಾರಂಭಗಳು ನಡೆಯುತ್ತಿವೆ. ನನಗೆ ಆ ಕಾಲದ ಘಟನೆಗಳು ಒಂದೊಂದಾಗಿ ನೆನಪಾಗುತ್ತಿವೆ. ಅವೆಲ್ಲ ನಿನ್ನೆ ಮೊನ್ನೆ ನಡೆದಿವೆಯೇನೋ ಎಂಬಷ್ಟು ಹಸಿರಾಗಿವೆ! ಆ ದಿನಗಳಲ್ಲಿ ನಾನು ನಾಲ್ವರು ನಟರಿಗೆ ಬಹುದೊಡ್ಡ ಅಭಿಮಾನಿಯಾಗಿದ್ದೆ. ರಾಜ್ ಕಪೂರ್, ದೇವಾನಂದ್, ದಿಲೀಪ್ ಕುಮಾರ್ ಮತ್ತು ಸುನಿಲ್ ದತ್ ನನಗೆ ಆರಾಧ್ಯ ದೈವದಂತಿದ್ದರು. ಅದರಲ್ಲೂ ರಾಜ್ ಕಪೂರ್ ಮತ್ತು ದೇವಾನಂದ್ ಬಗ್ಗೆ ನನ್ನಲ್ಲೊಂದು ವಿಶೇಷ ಹುಚ್ಚಿತ್ತು! ಕಾಲೇಜು ದಿನಗಳಲ್ಲಿ ರಾಜ್ ಕಪೂರ್‌ರನ್ನು ಖುದ್ದಾಗಿ ನೋಡುವ ಅವಕಾಶ ಲಭಿಸಿತು. 'ಮೇರಾ ನಾಮ್ ಜೋಕರ್' ಸಿನಿಮಾದ 'ಜೀನಾ ಯಹಾ ಮರ್‌ನಾ ಯಹಾ' ಹಾಡಿನ ಚಿತ್ರೀಕರಣವನ್ನು ವೀಕ್ಷಿಸಲು ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಆಹ್ವಾನ ದೊರಕಿತ್ತು. ಹಾಗೆ ಅಲ್ಲಿಗೆ ಹೋದವರಲ್ಲಿ ನಾನೂ ಒಬ್ಬನಾಗಿದ್ದೆ. ಸಾಕಷ್ಟು ಸಮೀಪದಿಂದ ನನ್ನ ನೆಚ್ಚಿನ ನಟನನ್ನು ನೋಡಿ ಹೃದಯ ಖುಷಿಯಿಂದ ತುಂಬಿತ್ತು. ಆಗ ಅವರನ್ನು ಭೇಟಿಯಾಗಿ ಮಾತನಾಡಲು ಅವಕಾಶ ಲಭಿಸಿರಲಿಲ್ಲ.

ಆದರೆ ಕೆಲವೇ ವರ್ಷಗಳಲ್ಲಿ ಅವರನ್ನು ಭೇಟಿಯಾಗುವ ಅದೃಷ್ಟ ಹುಡುಕಿಕೊಂಡು ಬಂತು. ಆಗ ನಾನು ತರಬೇತಿನಿರತ ಪತ್ರಕರ್ತನಾಗಿದ್ದೆ. 'ಮಾಧುರಿ' ಎಂಬ ಪ್ರಸಿದ್ಧ ಸಿನಿಮಾ ನಿಯತಕಾಲಿಕೆಯಲ್ಲಿ ಕೆಲಸ ಮಾಡುತ್ತಿದ್ದೆ. ಭೇಟಿಗೆ ಮನವಿ ಮಾಡಿ ರಾಜ್ ಸಾಹೇಬ್‌ಗೆ ಪತ್ರವೊಂದನ್ನು ಬರೆದಿದ್ದೆ. ನನಗೆ ಅಚ್ಚರಿಯಾಗುವಂತೆ ಅವರು ಒಪ್ಪಿಯೇಬಿಟ್ಟರು. ತಮ್ಮ ಮನೆಗೇ ಬರುವಂತೆ ಸೂಚನೆ ಕಳುಹಿಸಿದರು. ನಾನು ಹೋದಾಗ ಆತ್ಮೀಯವಾಗಿ ಬರಮಾಡಿಕೊಂಡರು. ಮನೆಯೊಳಗೆ ಪ್ರವೇಶಿಸಿದಾಗ ಅವರು ಬೆತ್ತದ ಚಾಪೆಯ ಮೇಲೆ ಕುಳಿತು, ಎದುರಿಗೆ ರೈಟಿಂಗ್ ಬೋರ್ಡ್ ಇರಿಸಿಕೊಂಡು, ಪೆನ್ನು ಹಿಡಿದು, ಪಕ್ಕದಲ್ಲಿ ಇಂಕ್ ಪಾಟ್ ಇಟ್ಟುಕೊಂಡಿದ್ದರು. ಲುಂಗಿ-ಕುರ್ತಾ ಧರಿಸಿದ್ದರು. ಅವರ ಹಿಂದೆ ನರ್ಗಿಸ್ ಜತೆಗಿರುವ ಸುಂದರವಾದ ಫೋಟೋ ಇತ್ತು. ಅದನ್ನು ನೋಡುತ್ತಾ ನಾನು ಕಳೆದುಹೋಗಿದ್ದೆ. ಅವರೇ ನನ್ನನ್ನು ಎಚ್ಚರಿಸಿ ಈ ಲೋಕಕ್ಕೆ ಮರಳಿ ಕರೆಯುವಂತೆ, ''ಏನಿದೆ ಆ ಚಿತ್ರದಲ್ಲಿ? ನನ್ನ ಕಡೆಗೆ ನೋಡಿ. ಯಾವತ್ತಾದರೂ ನಿಮಗೆ ಚಿತ್ರಗಳು ಮಾತನಾಡುವುದು ಕಾಣಿಸಿದೆಯಾ'' ಎಂದು ಕೇಳಿದರು. ನಾನು ಅದಕ್ಕೆ, ''ಚಿತ್ರಗಳು ಮಾತನಾಡದೆ ಇದ್ದರೆ ನಾವೇಕೆ ಅವುಗಳನ್ನು ಇಟ್ಟುಕೊಳ್ಳುತ್ತೇವೆ?'' ಎಂದು ಕೇಳಿದ್ದೆ. ಹಾಗೆ ನಮ್ಮ ಮಾತುಕತೆ ಆರಂಭವಾಯಿತು.

''ಹೇಗೆ ನೀವು ಅಷ್ಟೊಂದು ಒಳ್ಳೊಳ್ಳೆಯ ಸಿನಿಮಾಗಳನ್ನು ಮಾಡಿದಿರಿ?'' ಎಂದು ಕೇಳಿದೆ. ಥಟ್ಟನೆ ಬಂದ ಅವರ ಉತ್ತರ - ''ನೀವು ಹೇಗೆ ಸುದ್ದಿ ಬರೆಯುತ್ತೀರೋ ಹಾಗೆ ನಾವು ಸಿನಿಮಾ ಮಾಡುತ್ತೇವೆ''. ಆಗ ನಾನು, ''ಸುದ್ದಿ ಯಾವತ್ತೂ ನೈಜ ಘಟನೆಗಳನ್ನು ಆಧರಿಸಿರುತ್ತದೆ'' ಎಂದೆ. ಅದಕ್ಕೆ ಅವರು, ''ನಾವು ಕೂಡ ಸಮಾಜದಲ್ಲಿ ಏನು ನಡೆಯುತ್ತದೆಯೋ ಅದನ್ನೇ ಸಿನಿಮಾದಲ್ಲಿ ತೋರಿಸುತ್ತೇವೆ. 'ಆವಾರಾ' ಸಿನಿಮಾವನ್ನೇ ನೋಡಿ. ಅದು ಸಮಾಜದಲ್ಲಿರುವ ಒಂದು ರೀತಿಯ ವಿಷಾದ ಅಥವಾ ನೋವಿನ ಕುರಿತಾಗಿದೆ. 'ಜಿಸ್



ದೇಶ್ ಮೆ ಗಂಗಾ ಬೆಹತಿ ಹೈ' ಸಿನಿಮಾದಲ್ಲಿ ಆ ಕಾಲದ ಘಟನೆಗಳೇ ಇವೆ. ಸಿನಿಮಾಗಳು ಜನರ ಬದುಕಿನ ಜತೆಗೆ ಸಂವಾದ ನಡೆಸಬೇಕು. ನೀವು ನನ್ನ ಸಹೋದ್ಯೋಗಿ ಶೈಲೇಂದ್ರರನ್ನು ಭೇಟಿಯಾಗಿದ್ದೀರಾ? ಅವರಿಗೆ ಎಂಥ ಸಿನಿಮಾಗಳು ಯಶಸ್ವಿಯಾಗುತ್ತವೆ ಎಂಬುದು ತುಂಬಾ ಚೆನ್ನಾಗಿ ಗೊತ್ತು. ಯಾರಿಗೆ ನಿಮ್ಮ ದೃಷ್ಟಿಕೋನ ಅರ್ಥವಾಗುತ್ತದೆಯೋ ಅವರು ಮಾತ್ರ ನಿಮಗೆ ಸ್ನೇಹಿತರಾಗಲು ಸಾಧ್ಯ. ಹಾಗೆಯೇ ನನ್ನ ಟೀಮ್‌ನವರು ನನ್ನ ಚಿಂತನೆಯನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಾರೆ. ಹಾಗಾಗಿ ಒಳ್ಳೆಯ ಸಿನಿಮಾಗಳು ಬರುತ್ತಿವೆ'' ಎಂದು ಹೇಳಿದರು.

ಮಾತಿನ ನಡುವೆ ''ನೀವು ಎಲ್ಲಿ ವಾಸಿಸುತ್ತೀರಿ'' ಎಂದು ಕೇಳಿದರು. ನಾನು ಚರ್ಚ್‌ಗೇಟ್ ಎಂದೆ. ''ಹಾಗಿದ್ದರೆ ಒಟ್ಟಿಗೇ ಹೋಗೋಣ. ನಾನೂ ಆ ಕಡೆಯೇ ಹೋಗುತ್ತಿದ್ದೇನೆ. ದಾರಿಯಲ್ಲಿ ಮಾತನಾಡುತ್ತಾ ಹೋಗಬಹುದು'' ಅಂದರು. ನಂತರ ಇಬ್ಬರೂ ಹೊರಟೆವು. ದಾರಿಯಲ್ಲಿ ''ನನಗೆ ನಿಮ್ಮ ತಂದೆ ದರಡಾಜೀ ಗೊತ್ತು. ನನ್ನ ತಂದೆ ಪೃಥ್ವಿರಾಜ್ ಕಪೂರ್ ಹಾಗೂ ನಿಮ್ಮ ಕುಟುಂಬದ ಮಧ್ಯೆ ಬಹಳ ದೀರ್ಘವಾದ ಒಡನಾಟವಿದೆ'' ಅಂದರು. ಆಗ ನಾನು, ''ಹೌದು. ನನ್ನ ತಂದೆಯವರು ಒಮ್ಮೆ ಪೃಥ್ವಿರಾಜ್ ಕಪೂರ್‌ರನ್ನು ಯವತ್ಮಾಲ್‌ನಲ್ಲಿ ಧ್ವಜಾರೋಹಣಕ್ಕೆ ಕರೆಸಿದ್ದರು. ಅವರು ನಾಟಕದ ತಂಡದೊಂದಿಗೆ ಬಂದಿದ್ದರು. ನನ್ನಲ್ಲಿ ಅದರ ಫೋಟೋಗಳಿವೆ'' ಎಂದೆ. ಅದನ್ನು ಕೇಳಿ ರಾಜ್ ಸಾಹೇಬ್ ಖುಷಿಯಾದರು. ಬಹುಶಃ ನಮ್ಮ ಕುಟುಂಬಗಳ ನಡುವೆ ಇದ್ದ ಒಡನಾಟದ ಕಾರಣದಿಂದಲೇ ನನ್ನಂಥ ಯುವ ಪತ್ರಕರ್ತನಿಗೆ ಅವರು ಭೇಟಿಗೆ ಅವಕಾಶ ನೀಡಿದ್ದರು ಎಂಬುದು ಆಗ ನನಗೆ ಹೊಳೆಯಿತು. ಕಾರಿನಲ್ಲೂ ಅವರೊಂದು ನೋಟ್‌ಪ್ಯಾಡ್ ಹಿಡಿದುಕೊಂಡಿದ್ದರು. ಮಾತಿನ ನಡುವೆ ಒಮ್ಮೊಮ್ಮೆ ಮೌನವಾಗಿಬಿಡುತ್ತಿದ್ದರು. ಕೆಲ ಕ್ಷಣಗಳ ಬಳಿಕ ಏನನ್ನೋ ಬರೆದುಕೊಳ್ಳುತ್ತಿದ್ದರು. ಧ್ಯಾನ, ಬರವಣಿಗೆ ಮತ್ತು ಯೋಚನೆಯ ನಡುವೆ ನನ್ನ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು.

''ನೀವೊಂದು ಬಹುಮುಖ ಪ್ರತಿಭೆ. ನಿಮ್ಮ ಬದುಕು ವೈವಿಧ್ಯಮಯ ಸಂಗತಿಗಳಿಂದ ತುಂಬಿದೆ. ನಟನೆ, ಗಾಯನ, ಸಂಗೀತ ಸಂಯೋಜನೆ ಹೀಗೆ ಬೇರೆ ಬೇರೆ ರೀತಿಯ ಕೆಲಸಗಳನ್ನೆಲ್ಲಾ ಅಚ್ಚುಕಟ್ಟಾಗಿ ಮಾಡುತ್ತೀರಿ. ಇದು ಹೇಗೆ ಸಾಧ್ಯ?'' ಎಂದು ನಾನು ಕೇಳಿದ್ದೆ. ಅದಕ್ಕೆ ಅವರು ತತ್ವಜ್ಞಾನಿಯಂತೆ ಉತ್ತರಿಸಿದ್ದರು. ''ನೀವು ನಿಮ್ಮ ಬದುಕಿಗೆ ಬಣ್ಣ ತುಂಬಿಕೊಳ್ಳುತ್ತೀರೋ ಅಥವಾ ದುಃಖದ ಹನಿಗಳನ್ನು ತುಂಬುತ್ತೀರೋ ಎಂಬುದು ನಿಮ್ಮ ಕೈಲಿದೆ. ಪ್ರತಿದಿನ ಊಟ ಮಾಡುವಾಗ ಮನಸ್ಸಿನಲ್ಲೇ ಹಾಡು ಗುನುಗುತ್ತಾ ಖುಷಿಯಿಂದ ತುತ್ತು ಬಾಯಿಗಿಡುತ್ತೀರೋ ಅಥವಾ ಅಳುತ್ತಾ ಹೊಟ್ಟೆ ತುಂಬಿಸಿಕೊಳ್ಳುತ್ತೀರೋ ನಿಮಗೆ ಬಿಟ್ಟದ್ದು. ಊಟ ಮಾಡುವಾಗ ಕಣ್ಣೀರು ಹಾಕುವ ಶ್ರೀಮಂತರನ್ನು ನಾನು ನೋಡಿದ್ದೇನೆ. ಹಾಗೆಯೇ, ಬಹಳ ಖುಷಿಯಿಂದ ಊಟ ಮಾಡುವ ಕಡುಬಡವರನ್ನೂ ನೋಡಿದ್ದೇನೆ'' ಎಂದು ಒಗಟಾಗಿ ಉತ್ತರಿಸಿದರು.

''ನಿಮ್ಮ ಕುಟುಂಬದಲ್ಲಿ ಮಹಿಳೆಯರು ಏಕೆ ನಟನೆಯ ವೃತ್ತಿಗೆ ಬಂದಿಲ್ಲ?'' ಎಂದು ಕೇಳಿದೆ. ಅದಕ್ಕೆ ಅವರು, ''ನಾನು ಚಿಕ್ಕವನಿದ್ದಾಗ ಚಿತ್ರರಂಗಕ್ಕೆ ಬರುವುದು ಒಳ್ಳೆಯ ವಿಷಯವಾಗಿರಲಿಲ್ಲ. ಹುಡುಗರು ಚಿತ್ರರಂಗಕ್ಕೆ ಬಂದರೆ ಕೆಟ್ಟುಹೋಗುತ್ತಾರೆ ಎಂದೇ ಎಲ್ಲರೂ ಹೇಳುತ್ತಿದ್ದರು. ಹೀಗಾಗಿ ಹೆಣ್ಣುಮಕ್ಕಳು ಚಿತ್ರರಂಗಕ್ಕೆ ಹೋಗುವುದನ್ನಂತೂ ಸಂಪ್ರದಾಯಸ್ಥ ಕುಟುಂಬದವರು ಒಪ್ಪುತ್ತಿರಲಿಲ್ಲ. ನಾವು ಸಿನಿಮಾಗಳಲ್ಲಿ ನಟಿಸುವುದು ನಮ್ಮ ತಾತನಿಗೆ ಇಷ್ಟವಿರಲಿಲ್ಲ'' ಎಂದು ಹೇಳಿದರು.

ಮಾತಿನ ನಡುವೆ ನಾವು 'ಲೋಕಮತ್' ಪತ್ರಿಕೆಯ ನಾಗ್ಪುರ ಆವೃತ್ತಿಯ ಬಗ್ಗೆ ಚರ್ಚಿಸಿದೆವು. ರಾಜ್ ಕಪೂರ್ ಅವರು ''ನನ್ನ ಸಹೋದರಿ ಊರ್ಮಿಳಾರನ್ನು ಸಿಯಾಲ್ ಕುಟುಂಬಕ್ಕೆ ಮದುವೆ ಮಾಡಿಕೊಟ್ಟಿದ್ದೇವೆ, ಹೀಗಾಗಿ ನಾಗ್ಪುರಕ್ಕೆ ಕೆಲ ಮದುವೆಗಳಿಗೆ ಹೋಗಿದ್ದೆ'' ಎಂದರು. ಅವರ ಪತ್ನಿ ಕೃಷ್ಣಾ ಜಬಲ್‌ಪುರದವರಾದರೂ ನಾಗ್ಪುರದಲ್ಲಿ ಕೆಲ ಕಾಲ ನೆಲೆಸಿದ್ದರಂತೆ. ''ನನ್ನ ತಂದೆ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಜಬಲ್‌ಪುರದ ಜೈಲಿನಲ್ಲಿದ್ದರು'' ಎಂದು ಹೇಳಿದೆ. ಅವರು ಜಬಲ್‌ಪುರದ ನ್ಯೂ ಎಂಪೈರ್ ಸಿನಿಮಾ ಹಾಲ್ ಬಗ್ಗೆ ಮಾತನಾಡಿದರು. ಅದು ಅವರ ಸಂಬಂಧಿಕರಿಗೆ ಸೇರಿದ್ದಂತೆ. ಪ್ರಸಿದ್ಧ ಚಿತ್ರನಟರಾದ ಪ್ರೇಮನಾಥ್, ರಾಜೇಂದ್ರನಾಥ್ ಮತ್ತು ನರೇಂದ್ರನಾಥ್ ಅವರು ರಾಜ್ ಕಪೂರ್‌ಗೆ ಭಾವಂದಿರು.

ಪ್ರಯಾಣದ ನಡುವೆ ಚೌಪಟ್ಟಿಯ ಭಾರತೀಯ ವಿದ್ಯಾಭವನದ ಸಮೀಪ ಪಾನ್ ಅಂಗಡಿಯೊಂದರ ಬಳಿ ಕಾರು ನಿಂತಿತು. ತಕ್ಷಣ ಅಂಗಡಿಯವನು ರಾಜ್ ಕಪೂರ್‌ಗಾಗಿ ಪಾನ್ ತಯಾರಿಸಿ ತಂದುಕೊಟ್ಟ. ಅದನ್ನವರು ಬಾಯಿಗಿಟ್ಟುಕೊಂಡರು. ಕೆಲ ಪಾನ್‌ಗಳನ್ನು ಪಾರ್ಸೆಲ್ ಕಟ್ಟಿಸಿಕೊಂಡರು. ನಂತರ ಕಾರು ಚರ್ಚ್‌ಗೇಟ್ ಬಳಿಯಿರುವ ಗೇಲಾರ್ಡ್ ಹೋಟೆಲ್ ಬಳಿ ನಿಂತಿತು. ರಾಜ್ ಕಪೂರ್ ಇಳಿದು ಒಳಗೆ ಹೋದರು. ನಾನೂ ಅವರನ್ನು ಹಿಂಬಾಲಿಸಿದೆ. ಆ ಹೋಟೆಲ್ ಹೇಗಿದೆ ಎಂಬುದನ್ನು ನನಗೆ ನೋಡಬೇಕಿತ್ತು. ಮೂಲೆಯಲ್ಲೊಂದು ಟೇಬಲ್ ಮುಂದೆ ಜೈಕಿಶನ್ ಕುಳಿತಿದ್ದರು. ರಾಜ್ ಕಪೂರ್ ಆಗಾಗ ಇಲ್ಲಿಗೆ ಟೀ ಕುಡಿಯಲು ಬರುತ್ತಾರೆಂದು ಅಲ್ಲಿ ಗೊತ್ತಾಯಿತು. ಅಲ್ಲೇ ಅವರು ನನಗೆ ಆರ್‌ಕೆ ಸ್ಟುಡಿಯೋದ ಹೋಳಿ ಆಚರಣೆಗೆ ಆಹ್ವಾನ ನೀಡಿದರು. ಆದರೆ ಯಾವತ್ತೂ ನನಗೆ ಹೋಗಲು ಸಾಧ್ಯವಾಗಲಿಲ್ಲ.

ರಾಜ್ ಸಾಹೇಬ್ ಕುರಿತ ಇನ್ನೊಂದು ಘಟನೆ ನೆನಪಾಗುತ್ತದೆ. ನನ್ನ ತಂದೆಯವರು ಮಹಾರಾಷ್ಟ್ರದ ಔದ್ಯೋಗಿಕ ಸಚಿವರಾಗಿದ್ದಾಗ ರಾಜ್ ಸಾಹೇಬ್ ಒಮ್ಮೆ ಅವರಲ್ಲಿಗೆ ಬಂದು, ತಮಗೆ ಮನೆ ಕಟ್ಟಲು ಸಿಮೆಂಟ್ ಸಿಗುತ್ತಿಲ್ಲ ಎಂದು ಹೇಳಿದ್ದರಂತೆ. ಆ ಕಾಲದಲ್ಲಿ ಸಿಮೆಂಟ್‌ಗೆ ಅಭಾವವಿತ್ತು. ಎ.ಆರ್.ಅಂತುಳೆಯವರು ಸಿಮೆಂಟ್ ವ್ಯಾಪಾರಕ್ಕೆ ಕೆಲ ನಿರ್ಬಂಧಗಳನ್ನು ವಿಧಿಸಿದ್ದರು. ರಾಜ್ ಕಪೂರ್ ಅವರು ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿದ್ದರಿಂದ ನನ್ನ ತಂದೆಯವರು ಮುತುವರ್ಜಿ ವಹಿಸಿ, ತಮ್ಮ ವ್ಯಾಪ್ತಿಗೆ ಬಾರದಿದ್ದರೂ, ಅವರಿಗೆ ಸಿಮೆಂಟ್ ದೊರಕಿಸಿಕೊಟ್ಟಿದ್ದರು. ಇವತ್ತಿಗೂ ರಷ್ಯಾ, ಜಪಾನ್, ಇಸ್ರೇಲ್‌ನಂಥ ದೇಶಗಳಲ್ಲಿ ರಾಜ್ ಕಪೂರ್‌ರನ್ನು ನೆನಪಿಸಿಕೊಳ್ಳುವ ಅಭಿಮಾನಿಗಳಿದ್ದಾರೆ. ಅಲ್ಮಾಟಿಯಲ್ಲಿ ಹೋಟೆಲ್‌ನ ಒಂದಿಡೀ ಮಹಡಿಗೆ ರಾಜ್ ಕಪೂರ್‌ರ ಹೆಸರಿಡಲಾಗಿದೆ. ರಾಜ್ ಸಾಹೇಬ್‌ಗೆ ಯವತ್ಮಾಲ್‌ಗೆ ಭೇಟಿ ನೀಡಬೇಕೆಂಬ ಆಸೆಯಿತ್ತು. ಆದರೆ ಅದು ಕೈಗೂಡಲಿಲ್ಲ. ರಿಷಿ ಕಪೂರ್‌ಗೆ ಈ ವಿಷಯ ತಿಳಿದಿತ್ತು. ಹೀಗಾಗಿ ಅವರು ನಂತರದ ವರ್ಷಗಳಲ್ಲಿ ಯವತ್ಮಾಲ್‌ನ ಕಬಡ್ಡಿ ಕ್ರೀಡಾಕೂಟವೊಂದಕ್ಕೆ ಆಗಮಿಸಿ ಶುಭ ಹಾರೈಸಿದ್ದರು. ರಣಬೀರ್ ಕಪೂರ್ ಕೂಡ ತಮ್ಮ ಕುಟುಂಬದ ಈ ಪರಂಪರೆಯನ್ನು ಮುಂದುವರಿಸಿ ಒಂದು ದಿನ ಯವತ್ಮಾಲ್‌ಗೆ ಭೇಟಿ ನೀಡುತ್ತಾರೆಂಬ ನಂಬಿಕೆ ನನಗಿದೆ. ರಣಬೀರ್ ಕಪೂರ್‌ರಲ್ಲಿ ನನಗೆ ರಾಜ್ ಸಾಹೇಬ್ ಕಾಣಿಸುತ್ತಾರೆ.

ದೇಶ ಕಂಡ ಅತ್ಯದ್ಭುತ ನಟ ರಾಜ್ ಸಾಹೇಬರಿಗೆ ಇದೋ ನನ್ನ ಶ್ರದ್ಧಾಂಜಲಿ! ನಿಮ್ಮನ್ನು ನಾವು ಯಾವತ್ತೂ ಮರೆಯಲಾರೆವು!

(ಲೇಖಕರು ಹಿರಿಯ ಪತ್ರಿಕೋದ್ಯಮಿ)

## ಭಟ್ಟರ್ ಸ್ಕಾಚ್

- **ರಾಘಣ್ಣ, ಮೈಸೂರು**
ಭಟ್ರೇ, ಅಪ್ರತಿಮ ಸಾಧನೆ ಮಾಡಿದವರು ಈ ಜಗತ್ತನ್ನೇ ಬಿಟ್ಟು ಹೋಗುವಾಗ ಏನನ್ನು ಕೊಟ್ಟು ಹೋಗುತ್ತಾರೆ?
– **ಆಶ್ವಾಸನೆ ಮತ್ತು ವೇದನೆ!**

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ನೀವು ಪ್ರಾಣಿಪ್ರಿಯರೋ, ಇಲ್ಲ ರಾಣಿಪ್ರಿಯರೋ?
– **ಹೊಸವರ್ಷದ ಕ್ಯಾಲೆಂಡರ್ ನೋಡಿ ನೀನೇ ನಿರ್ಧರಿಸುವಿ ಯಂತೆ!**

- **ತಗಡೂರು ಸುಬ್ಬಣ್ಣ, ನಂಜನಗೂಡು**
ಭಟ್ರೇ, ಭವಿಷ್ಯ ತಿಳಿಯಲು ಹಸ್ತ ಚಾಚಿದ ನನಗೆ ಜ್ಯೋತಿಷಿಗಳು ದಂಡಾಧಿಕಾರದ ಯೋಗ ಇದೆ ಎಂದಿದ್ದಾರೆ. ನೀವಾದರೂ ಬಿಡಿಸಿ ಹೇಳಬಾರದೇ?
– **ಲಾಠಿ ಹಿಡಿಯುವ ಪೊಲೀಸ್, ಇಲ್ಲ ದಂಡ ಹಿಡಿವ ಸ್ವಾಮಿ ಆಗ್ತೀಯಾ ಬಿಡು!**

- **ಕೃಷ್ಣ ಕುಮಾರ ಎ., ಕೋಲಾರ**
ಭಟ್ರೇ, ಈಗಿನ ನ್ಯಾಯದೇವತೆಯ ಕಣ್ಣುಗಳು ತೆರೆದಿದ್ದರೂ, ಪತ್ನಿ ಪೀಡಿತರಿಗೆ ನ್ಯಾಯ ಸಿಗುತ್ತಿಲ್ಲವಲ್ಲ?
– **ನ್ಯಾಯದೇವತೆಯೂ ಹೆಣ್ಣೇ ಅಲ್ಲವೇ?!**

- **ಘಂಟಿ ರಾಮಾಚಾರ್ಯ, (ಇಮೇಲ್ ಮೂಲಕ)**
ಭಟ್ರೇ, ಕೂತರೂ ನಿಂತರೂ ಬಿಜೆಪಿಯಲ್ಲಿ ತಪ್ಪು ಕಾಣುತ್ತಿರುವ ಪ್ರತಾಪ ಸಿಂಹ, ಈ ಹೊತ್ತಲ್ಲಿ ಏನು ಮಾಡಬೇಕು ಅಂತೀರಿ ?
– **ಸಿಂಹಾವಲೋಕನ!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ದರ್ಶನ್ ಟೀಮ್‌ಗೆ ಜಾಮೀನು ಕೊಟ್ಟಂತೆ ಉಳಿದವರಿಗೇಕೆ ಜಾಮೀನು ಕೊಡ್ತಿಲ್ಲ?
– **ಉಳಿದವರ ಪರ ವಾದ ಮಾಡಲು ಸಿ.ವಿ.ನಾಗೇಶ್ ಒಪ್ಪಬೇಕಲ್ಲ?!**

- **ಸಂಗೀತಾ ಬಡಗಣಿ, (ಇಮೇಲ್ ಮೂಲಕ)**
ಭಟ್ರೇ, ಕೆಲವರು ನಮ್ಮ ಮಾತನ್ನು ತಪ್ಪು ತಿಳಿಯುತ್ತಾರಲ್ಲ?
– **ಅಂಥವರು ತಿಳಿಯುವುದೇ ತಪ್ಪು!**

- **ರೂಪ, ಬೆಂಗಳೂರು**
ಭಟ್ರೇ, ಕುಳಿತಲ್ಲೇ ನಾವು ನಿದ್ದೆ ಹೋಗಿದ್ದೇವೆ ಎಂಬುದು ನಮಗೆ ಗೊತ್ತಾಗುವುದು ಯಾವಾಗ?
– **ಎಚ್ಚರವಾದಾಗಲೇ!**

- **ಕೆ.ಜಿ.ಸುಂದರ, ಬೆಳಗಾವಿ**
ಭಟ್ರೇ, ನೀವು ಬಾಡೂಟದ ಪರವೋ, ವಿರುದ್ಧವೋ ?
– **ನನ್ನ ಕೇಳಿ ಮಸಾಲೆ ಅರೆಯುವವರ ಪರ!**

# ಕನ್ನಡದ ಗುಡಿಯೂ ಅಧ್ಯಕ್ಷರ ನುಡಿಯೂ

ಕಾಡುದಾರಿ

ಹರೀಶ್ ಕೇರ

vveditoped@gmail.com

ನಾಳೆಯಿಂದ (ಡಿ.20) ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ 3 ದಿನಗಳ ಕಾಲ ನಡೆಯಲಿದೆ. ಸಮ್ಮೇಳನದ ಅಧ್ಯಕ್ಷರು ಏನೇನು ಮಾತನಾಡುತ್ತಾರೆ ಎಂದು ನಾವಾಗಲೇ ಊಹಿಸಬಹುದು. ಸಮ್ಮೇಳನಾಧ್ಯಕ್ಷರ ಪೀಠ ಒಂದು ಥರಾ ಆಶೀರ್ವಚನದ ಸ್ಥಾನ. ಅಲ್ಲಿಂದ 'ಕೇಳಿದ್ರೆ ಬೆಚ್ಚಿಬೀಳ್ತೀರಾ, ಶಾಕ್ ಆಗ್ತೀರಾ'ದಂಥ ಮಾತುಗಳು ಬರುವುದು ಸಾಧ್ಯವಿಲ್ಲ. ಏನಿದ್ದರೂ ಕೆಲವು ಸಣ್ಣಪುಟ್ಟ ಕಂಪನದ ಅಲೆಗಳನ್ನು ನಿರೀಕ್ಷಿಸಬಹುದು. ಯು.ಆರ್.ಅನಂತಮೂರ್ತಿ ಅವರು ಅಧ್ಯಕ್ಷರಾಗಿದ್ದಾಗ ಸಿದ್ಧ ಭಾಷಣದ ಪತ್ರ ಆಚೆಗಿಟ್ಟು ಆಶುಭಾಷಣ ಮಾಡಿದ್ದರು. ಉಳಿದವರು ಆ ಸಾಹಸವನ್ನೂ ಮಾಡಲಿಲ್ಲ.

ಆದರೆ ಯಾವ ಅಧ್ಯಕ್ಷರು ಏನು ಮಾತನಾಡಿದರು, ಅದು ಇಂದಿಗೂ ಜೀವಂತವಾಗಿದೆಯಾ ಅಥವಾ ತಮಾಷೆಯಾಗಿದೆಯಾ, ನಾಡು ಬೆಳೆದಂತೆ ಅಧ್ಯಕ್ಷರ ನುಡಿಗಳೂ ಹೇಗೆ ಬದಲಾಗುತ್ತ ಬಂದಿವೆ ಎಂದು ನೋಡುವುದು ಬಹಳ ಕುತೂಹಲಕರ. ಉದಾಹರಣೆಗೆ 1915ರಲ್ಲಿ ಬೆಂಗಳೂರಿನಲ್ಲಿ ನಡೆದ ಮೊದಲ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಎಚ್.ವಿ.ನಂಜುಂಡಯ್ಯ ಅವರು ''ಮೈಸೂರು ಕನ್ನಡಕ್ಕೇ ಹೆಚ್ಚಿನ ಆದ್ಯತೆಯನ್ನು ಕೊಡಬೇಕು'' ಎಂದು ಒತ್ತಿ ಹೇಳಿದರು.

''ದಕ್ಷಿಣ ಕನ್ನಡ ಅಥವಾ ಧಾರವಾಡ, ಬೆಳಗಾಂ ಪ್ರಾಂತಗಳಲ್ಲಿ ಈಗಲೂ ಕೆಲವು ಶಬ್ದಗಳೂ ಪ್ರಯೋಗಗಳೂ ಪೂರ್ವದಲ್ಲಿದ್ದಂತೆ ಶಬ್ದರೂಪದಲ್ಲಿ ಉಳಿದುಕೊಂಡಿರಬಹುದು, ಅವುಗಳನ್ನು ಇಲ್ಲಿ ನಾವು ನಿಷ್ಕಾರಣವಾಗಿ ಬಿಟ್ಟುಬಿಟ್ಟಿರಬಹುದು; ಇಲ್ಲವೆ ಆ ರೂಪಗಳನ್ನು ಕೆಡಿಸಿರಬಹುದು. ಅಂಥ ಸಂದರ್ಭಗಳು ಸರಿಯಾಗಿ ಸಿದ್ಧಾಂತಪಟ್ಟರೆ, ನಾವು ಅವರನ್ನೇ ಅನುಸರಿಸಲಿಚ್ಛಿಸುವೆವು. ವ್ಯಾಕರಣ ನಿಯಮಗಳಿಗೂ ಔಚಿತ್ಯ ನ್ಯಾಯಕ್ಕೂ ವಿರುದ್ಧವಾದ ಪ್ರಯೋಗಗಳು ಎಲ್ಲಿದ್ದರೂ ಅವುಗಳನ್ನು ತಿದ್ದಲೇ ಬೇಕು. ಆದರೆ ಯಾವುದಾದರೂ ಭಾಷಾರೂಢಿಯ ಅಥವಾ ಭಾಷಾವೈಪರೀತ್ಯದ ಪ್ರಯೋಗವು ಸಾಧುವೇ ಅಲ್ಲವೇ ಎಂದು ಚರ್ಚೆ ಹುಟ್ಟಿದಾಗ ಮೈಸೂರು ಕನ್ನಡಕ್ಕೆ ಪ್ರಾಶಸ್ತ್ಯ ತೋರಿಸುವುದು ಉಚಿತವಾಗಿರುತ್ತದೆ. ಮೈಸೂರು ದೇಶದಲ್ಲಾದರೋ ಕನ್ನಡವೇ ಎಲ್ಲೆಲ್ಲಿಯೂ ಹರಡಿಕೊಂಡಿದೆ'' ಎನ್ನುತ್ತಾರೆ. ಭಾಷೆಯ ದೃಷ್ಟಿಯಿಂದ 'ಮೈಸೂರು ಕನ್ನಡ'ವನ್ನೂ 'ಬ್ರಿಟಿಷ್ ಇಂಡಿಯಾ'ದ ಕನ್ನಡವನ್ನೂ ಅವರು ಭಿನ್ನವಾಗಿ ನೋಡುತ್ತಾರೆ. ಕನ್ನಡವೆಂದರೆ ಒಂದೇ ಭಾಷೆಯಲ್ಲ, 'ಹಲವು ಕನ್ನಡಂಗಳ್' ನಮ್ಮ ನಡುವೆ ಇವೆ ಎಂದು ಬಲವಾಗಿ ನಾವು ನಂಬಿರುವ ಇಂದು ಇಂಥ ಅಭಿಪ್ರಾಯವನ್ನು ಅಧ್ಯಕ್ಷರು ಮಂಡಿಸಿದರೆ ಕೋಲಾಹಲ ಆಗಬಹುದು.

ಜತೆಗೆ ಅವರ ಇನ್ನೊಂದು ಅಭಿಪ್ರಾಯ- ''ಕನ್ನಡ ಭಾಷಾಭಿವೃದ್ಧಿಯಲ್ಲಿ ಆಸಕ್ತರಾಗಿಯೂ, ಸಮರ್ಥರಾಗಿಯೂ, ಕಾರ್ಯಭಾರವನ್ನು ವಹಿಸಲು ತಕ್ಕವರಾಗಿಯೂ ಇರುವ ಜನಗಳು ಸೇರಿ, ಅನ್ಯೋನ್ಯ ಸಹಾಯದಿಂದ ಒಟ್ಟುಗೂಡಿ ಕೆಲಸಮಾಡತಕ್ಕ ಒಂದು ಸಭೆಯನ್ನು ಸರಕಾರದ ಸಂಬಂಧವಿಲ್ಲದೆ ನಿರ್ಮಿಸಬೇಕೆಂದು ಈ ಸಮ್ಮೇಳನವನ್ನು ಏರ್ಪಾಡು ಮಾಡಲಾಗಿದೆ''. ಕನ್ನಡ ಸಾಹಿತ್ಯ ಪರಿಷತ್ತು 'ಸರಕಾರದ ಸಂಬಂಧವಿಲ್ಲದೆ' ಕೆಲಸ ಮಾಡುವ ಸಂಸ್ಥೆಯಾಗಬೇಕು ಎಂಬ ಕನಸು ಅಂದಿನಿಂದಲೂ ಇತ್ತು. ಆದರೆ ರಾಜಕಾರಣಿಗಳಿಲ್ಲದ ಸಮ್ಮೇಳನವನ್ನು ಊಹಿಸುವುದು ಕಷ್ಟ.

ಇವರು ಮೊದಲ ಮೂರೂ ಸಾಹಿತ್ಯ ಸಮ್ಮೇಳನಗಳಿಗೂ ಅಧ್ಯಕ್ಷರಾಗಿದ್ದರು. ಮೂರರಲ್ಲೂ ಅವರು 'ಆಳುವ ಮಹಾರಾಜ'ರನ್ನು ಪೂಜ್ಯ ಭಾವನೆಯಿಂದ ಮತ್ತೆ ಮತ್ತೆ ನೆನೆದಿದ್ದಾರೆ. ಉದಾಹರಣೆಗೆ ಮೂರನೇ ಸಮ್ಮೇಳನದ ಭಾಷಣದಲ್ಲಿ- ''ಶ್ರೀಮದ್ಯುವರಾಜರವರು ಈ ಸಭಾಸಮಾರಂಭದ ಅಧ್ಯಕ್ಷಸ್ಥಾನವನ್ನು ಕೃಪಾಪರಿಪೂರ್ಣತೆಯಿಂದ ಅಂಗೀಕರಿಸಿರುವುದನ್ನು ನೋಡಿದರೆ, ಪರಿಷತ್ತಿನ ಸದುದ್ದೇಶಗಳು ಶ್ರೀಮದ್ಯುವರಾಜರವರ ಮೆಚ್ಚುಗೆಯನ್ನು ಪಡೆದಿರುವುದೆಂಬ ಸಂಗತಿಯೂ ಶ್ರೀಮನ್ಮಹಾರಾಜರವರಿಗೂ ವಿಶೇಷವಾದ ಆದರಾಸಕ್ತಿಗಳು ಉಂಟೆಂಬ ಸಂಗತಿಯೂ ಕನ್ನಡ ಭಾಷಾಸಾಹಿತ್ಯಗಳ ಏಳಿಗೆಗೆ ಬಲವಾದ ರಾಜಾಶ್ರಯವು ದೊರೆತಿರುವುದೆಂಬ ಸಂಗತಿಯೂ ದೃಢಪಡುತ್ತಿರುವುವು ಎಂದು ಸಂತುಷ್ಟರಾಗಿದ್ದೇವೆ. ಮಹಾಸ್ವಾಮಿ'' ಎಂದಿದ್ದಾರೆ. ಇಂದಿನ ಅನೇಕ ಕನ್ನಡ ಸಂಸ್ಥೆಗಳ ಪೀಠಸ್ಥರು ಇವೇ ಮಾತುಗಳನ್ನು ಬೇರೆ ವಾಕ್ಯಗಳಲ್ಲಿ 'ಆಳುವ ಮಹಾರಾಜರಿಗೆ' ನಿವೇದಿಸಿಕೊಳ್ಳುತ್ತಿರುತ್ತಾರೆ ಎಂಬುದನ್ನು ಮತ್ತೆ ಹೇಳುವ ಅಗತ್ಯವಿಲ್ಲವಷ್ಟೆ!

ಬಳ್ಳಾರಿಯಲ್ಲಿ 1926ರಲ್ಲಿ ನಡೆದ 12ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಫ.ಗು. ಹಳಕಟ್ಟಿಯವರು ಹೇಳುವ ಒಂದು ಮಾತು ವಿಶಿಷ್ಟವಾಗಿದೆ- ''ಸಾಹಿತ್ಯ ಪರಿಷತ್ತಿನವರು ಕೈಗೊಳ್ಳಬಹುದಾದ ಅನೇಕ ಕಾರ್ಯಗಳಲ್ಲಿ ಯೋಗ್ಯ ಪಠ್ಯಪುಸ್ತಕಗಳನ್ನು ನಿರ್ಮಿಸುವ ಕಾರ್ಯಕ್ಕೆ ನಾನು ಅಗ್ರಸ್ಥಾನವನ್ನು ಕೊಡುತ್ತೇನೆ. ಹೀಗೆ ನಿರ್ಮಿಸಿದ ಪುಸ್ತಕಗಳು ಎಲ್ಲ ಪ್ರಾಂತಗಳ ಕನ್ನಡ ಶಾಲೆಗಳಲ್ಲಿ ಉಪಯೋಗಿಸಲ್ಪಡಲು ಪ್ರಯತ್ನಿಸತಕ್ಕದ್ದು. ಹೀಗೆ ನಾವು ಈ ಪ್ರಯತ್ನದಲ್ಲಿ ಯಶಸ್ಸನ್ನು ಸಂಪಾದಿಸಿದರೆ, ಒಂದೇ ಮಾದರಿಯ ಪಠ್ಯಪುಸ್ತಕಗಳು ಎಲ್ಲ ಕಡೆಗೆ ಪ್ರಚಾರಕ್ಕೆ ಬಂದು, ಇದರಿಂದ ಕರ್ನಾಟಕದ ಅರಿವು ನಮ್ಮ ಜನರಿಗೆ ಆಗುವುದಲ್ಲದೆ, ಕರ್ನಾಟಕದ ಭಾಷೆಯಲ್ಲಿ ಈಗ ತೋರುವ ಭಿನ್ನತೆಗಳೂ ಕಡಿಮೆಯಾಗುತ್ತ ಹೋಗುವವು''. ಪಠ್ಯಪುಸ್ತಕಗಳನ್ನು ಕನ್ನಡ ಸಾಹಿತ್ಯ ಪರಿಷತ್ ರಚಿಸಬೇಕು ಎಂಬ ಈ ಸೂಚನೆ ಈಗ ಸ್ವಲ್ಪ ವಿಚಿತ್ರವಾಗಿ ಕಾಣಬಹುದು. ಆದರೆ ಇದರಲ್ಲಿ ಚರ್ಚೆ ಸಾಧ್ಯ.

ಇಂದು ನಮ್ಮ ಹಲವು ಅಧ್ಯಕ್ಷರು ದಿಟ್ಟವಾಗಿ ಆಡುತ್ತಿರುವ ಹಲವು ಮಾತುಗಳ ಬೀಜಗಳು ಹೈದರಾಬಾದ್‌ನಲ್ಲಿ 1941ರಲ್ಲಿ ನಡೆದ 26ನೇ ಸಮ್ಮೇಳನದ ಅಧ್ಯಕ್ಷರಾಗಿದ್ದ ಎ.ಆರ್. ಕೃಷ್ಣಶಾಸ್ತ್ರಿಗಳ ಭಾಷಣದಲ್ಲಿವೆ. ಭಾಷಾವಾರು ಪ್ರಾಂತ ವಿಭಾಗದ ಬಗ್ಗೆ ಮೊದಲು ದಿಟ್ಟವಾಗಿ ಹೇಳಿದವರು ಅವರು. ಜತೆಗೆ ಸಂಸ್ಕೃತದ ಮತ್ತು ಇಂಗ್ಲಿಷ್‌ನ ಕುರುಡು ಅಭಿಮಾನಗಳ ಬಗ್ಗೆ ಕಟುವಾಗಿ ಎಚ್ಚರಿಸಿದವರು. ''ಆಗ ಒಂದು ಭಾಷೆಯ ಮೇಲೆ ಹಿಂದಿನಿಂದ ಬಂದ ಅಭಿಮಾನವಿದ್ದರೆ, ಈಗ ಮತ್ತೊಂದು ಭಾಷೆಯ ಮೇಲೆ ಇಂದು ತಾನೇ ಬಂದ ಅಭಿಮಾನ ವುಂಟಾಯಿತು. ಮೊದಲು ಹುಟ್ಟಿದ ಕಿವಿಗಿಂತ ಆ ಮೇಲೆ ಹುಟ್ಟಿದ ಕೋಡೇ ಮುಂದಾಯಿತು; ಅದು ತಿವಿಯುವುದಕ್ಕೂ ಮೊದಲಾಯಿತು'' ಎಂದೂ ಅವರು ಟೀಕಿಸಿದರು.

ಮುಂಬಯಿಯಲ್ಲಿ 1951ರಲ್ಲಿ ನಡೆದ 34ನೇ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಮಂಜೇಶ್ವರ ಗೋವಿಂದ ಪೈಗಳು ಒಂದು ಆಸಕ್ತಿಕರ ಪ್ರಸ್ತಾವವನ್ನು ಮುಂದಿಡುತ್ತಾರೆ: ''ವರ್ಷೇವರ್ಷೇ ಅಲ್ಲಲ್ಲಿ ನಡೆಯತಕ್ಕ ಸಾಹಿತ್ಯ ಸಮ್ಮೇಳನದ ಜತೆಯಲ್ಲಿ ಕನ್ನಡ ನಾಡಿನ ವೈಜ್ಞಾನಿಕ ಸಮ್ಮೇಳನವನ್ನು ಕರೆಯುತ್ತಿರಬೇಕು. ಇದು ಮುಂದಣ ಪ್ರತಿ ವಾರ್ಷಿಕ ಸಾಹಿತ್ಯ ಸಮ್ಮೇಳನವನ್ನು ಕರೆಯಿಸುವ ಆಯಾ ಸ್ಥಳವಂದಿಗರಿಗೆ ಮಾಡುವ ಸೂಚನೆ, ಅವರಲ್ಲಿ ಮಾಡುವ ವಿಜ್ಞಾಪನೆ ಅಷ್ಟೆ. ಇಂದಿನ ಯುಗವೆಂದರೆ ಯಂತ್ರದ ಯುಗ, ವಿಜ್ಞಾನದ (Science) ಯುಗ, ವಿವಿಧ ಬಾಂಬುಗಳ (bombs) ಯುಗ. ಈ ಯುಗದಲ್ಲಿ ನಾವು ಹತ್ತು ಮಂದಿಯ ಜತೆಯಲ್ಲಿ ಇರಬೇಕಲ್ಲದೆ, ಬೆಕ್ಕಿನ ಬಿಡಾರ ಬೇರೆಯಂತೆ ಲೋಕದಿಂದ ಪೃಥಕ್ಕಾಗಿ ವಿಂಗಡವಾಗಿ ಇದ್ದಿರಲಾರೆವು. ಹಾಗೂ ಈ ಹತ್ತು ಮಂದಿ ವಿಜ್ಞಾನದಲ್ಲಿ ವಿಚಕ್ಷಣರಾಗಿದ್ದು ಅವರ ನಡುವೆ ನಾವು ಅವರಂತೆಯೇ ಸ್ವತಂತ್ರವಾಗಿ ತಲೆಯನ್ನು ಮೇಲೆತ್ತಿ ಬಾಳಬೇಕಾದರೆ ನಮಗೆ ಸಾಹಿತ್ಯ ನೆರವಾಗದು, ವಿಜ್ಞಾನ ಬೇಕು. ವಿಜ್ಞಾನವಲ್ಲದೆ ಅನ್ಯಗತಿಯಿಲ್ಲ. ಈ ಕಾರಣ ನಮ್ಮಲ್ಲಿ ಸಾಹಿತ್ಯ ಹತ್ತುವವರು ಸಾಹಿತ್ಯವನ್ನು ಹೇಗೋ ಹಾಗೆ ವಿಜ್ಞಾನ ಹತ್ತುವವರು ವಿಜ್ಞಾನವನ್ನು ಆಶ್ರಯಿಸಬೇಕು. ಹಾಗೆ ಎರಡೂ ದಾರಿಗಳಿಂದ ನಮ್ಮ ಜನ ಮುಂದುವರಿಸಬೇಕು''. ಇದು ಈಗಲೂ ನಾವು ಪರಿಗಣಿಸಬಹುದಾದ, ಪರಿಗಣಿಸಲೇಬೇಕಾದ ಸಂಗತಿ. ಯಾಕೆಂದರೆ ಶಿಕ್ಷಣದ ಜತೆಗೆ ಬಗೆಬಗೆಯ ಮೌಢ್ಯವೂ ವಿಸ್ತರಿಸುತ್ತಿರುವ ಕಾಲವಿದು.

ಪರಸ್ಪರ ವಿರೋಧಾಭಾಸ ಎನಿಸುವ ಒಂದು ಆಶಯವನ್ನು ಶಿವರಾಮ ಕಾರಂತರು 1955ರಲ್ಲಿ ನಡೆದ 37ನೇ ಸಮ್ಮೇಳನಾಧ್ಯಕ್ಷತೆಯಿಂದ ಹೇಳಿದರು. ಆ ಭಾಷಣದಲ್ಲಿ ಅವರು, ''ಸಾಹಿತ್ಯದಲ್ಲಿ ಏಕರೂಪ ಕನ್ನಡ ಅಗತ್ಯ ಎಂದರೆ, ನಿಘಂಟು ರಚನೆಯ ವಿಸ್ತರಣೆ ಜನನುಡಿಯಿಂದ ಆಗಬೇಕು'' ಎಂದರು. ''ನಮ್ಮ ಕನ್ನಡ ಜನಗಳ ಆಡುಭಾಷೆ ಒಂದೊಂದು ತೆರನಾಗಿದೆ. ಆದರೆ, ನಾವು ಬರೆಯುವುದು ಜನಕ್ಕೆ ತಿಳಿಯಬೇಕಾದಲ್ಲಿ ನಾವು ಭಾಷೆಯ ಏಕರೂಪತೆಗೆ ಗಮನ ಕೊಡಬೇಕಾಗುತ್ತದೆ. ಇಂದು ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ ಎಂದು ಹೇಳುವ ಸಂಪ್ರದಾಯ ನಮ್ಮ ಬರವಣಿಗೆಯಿಂದಾಗಿ ಬಂದುಬಿಟ್ಟಿದೆ. ಅಲ್ಲಲ್ಲಿನ ಸ್ಥಳೀಕ ಗ್ರಾಮ್ಯಪದಗಳನ್ನು ಹಟದಿಂದ, ಪುಸ್ತಕಗಳಲ್ಲಿ ತುಂಬಿಸುವ ಪ್ರಯತ್ನದಿಂದ, ಯಾವ ದೇವರಿಗೆ ಪ್ರೀತಿಯೋ ನಾನು ಕಾಣೆ. ಇರುವುದನ್ನು ಎಲ್ಲ ಭಾಗದ ಕನ್ನಡಿಗರಿಗೂ ಅರ್ಥವಾಗುವ ರೀತಿಯಲ್ಲಿ ಸಾಮಾನ್ಯವಾದ ಒಂದು ಭಾಷೆಯ ರೂಪ ಬೆಳೆಯುವಂತೆ ನಾವು ಮಾಡಬೇಡವೆ?'' ಎಂದು ಹೇಳಿದ ಕಾರಂತರೇ ಮುಂದುವರಿದು, ''ನಾವು ಮಾಡುತ್ತಿರುವುದು ಕನ್ನಡ-ಕನ್ನಡ ನಿಘಂಟನ್ನು. ಇದಕ್ಕೆ ಶಬ್ದಗಳ ಆಯ್ಕೆಗೆ ಆಧಾರ, ಹಳಗನ್ನಡ, ಹೊಸಗನ್ನಡ ಗ್ರಂಥಗಳು, ಇಷ್ಟೇ ನಮ್ಮ ಶಬ್ದಕೋಶದ ಮಿತಿಯಾದರೆ, ಅದು ತುಂಬ ಖೇದದ ಸಂಗತಿಯೇ ಸರಿ. ಕನ್ನಡ ಬದುಕಿರುವುದು ಗ್ರಂಥಗಳಲ್ಲಿ ಮಾತ್ರವಲ್ಲ, ಕವಿಗಳಲ್ಲಿ, ಕಾವ್ಯಗಳಲ್ಲಿ ಮಾತ್ರವಲ್ಲ. ಅದು ಸಮುದಾಯದ ಭಾಷೆ. ಅಲ್ಲಿ ಅದು ನಿತ್ಯ ನಿತ್ಯ ಬದುಕಿದೆ. ನಾನು ಮಾಡಬೇಕಾದುದು ಮಾತೃಭಾಷೆಯ ನಿಘಂಟನ್ನಲ್ಲ, ಜೀವಂತ ಭಾಷೆಯ ನಿಘಂಟನ್ನು, ಜೀವಂತ ಭಾಷೆಯು ಜನಜೀವನದಲ್ಲಿ ಬದಲಾಗುತ್ತಲೇ ಇರುತ್ತದೆ. ಗ್ರಂಥಗಳಿಗಿರುವ ಹತ್ತು ಪಾಲು ಹೆಚ್ಚಿನ ಮನ್ನಣೆ, ಜನಜೀವನ ಕನ್ನಡಕ್ಕೆ ಸಲ್ಲಬೇಕು'' ಎನ್ನುತ್ತಾರೆ.

ಮಂಡ್ಯದಲ್ಲಿ ನಡೆದ ಮೊದಲ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಜಯದೇವಿತಾಯಿ ಲಿಗಾಡೆ (48ನೇ ಸಮ್ಮೇಳನ, 1974) ಅವರು, ''ಒಮ್ಮೊಮ್ಮೆ ಈ ಭಾಷಾವಾರು ಪ್ರಾಂತ ರಚನೆಯಾದದ್ದು ತಪ್ಪಾಯಿತೇನೋ ಎನ್ನುವ ವಿಚಾರ ನನ್ನಲ್ಲಿಯೂ ಸುಳಿದು ಹೋಗುತ್ತದೆ. ದೇಶದಲ್ಲಿ ಇಂಥ ಒಂದು ಪರಿಸ್ಥಿತಿಯುಂಟಾಗಲು ಮೂಲಕಾರಣ ಭಾಷಾ ದುರಭಿಮಾನ ಮತ್ತು ರಾಷ್ಟ್ರೀಯ ಮನೋಭಾವದ ಕೊರತೆ. ಈ ಭಾಷಾ ಪ್ರಾಂತಗಳ ರಥವನ್ನು ಸರಿಯಾದ ದಾರಿಗೆ ತಿರುಗಿಸಿ ಮುನ್ನಡೆಸಬೇಕಾಗಿದೆ'' ಎಂದು ಕೂಡ ಹೇಳಿ ಕೊರಗಿದ್ದುಂಟು. ಅಲ್ಲೇ ನಡೆದ 63ನೇ (1994, ಮಂಡ್ಯದ 2ನೇ) ಸಮ್ಮೇಳನಾಧ್ಯಕ್ಷ ಚದುರಂಗ ಅವರು, ''ಕನ್ನಡ ಸಾಹಿತ್ಯ ಪರಿಷತ್ತನ್ನು ಒಳಗೊಂಡಂತೆ ಎಲ್ಲಾ ಪ್ರಾಧಿಕಾರಗಳು, ವಿಶ್ವವಿದ್ಯಾಲಯಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಾಹಿತ್ಯ, ಲಲಿತಕಲೆ, ನಾಟಕ, ಜಾನಪದ, ಸಂಗೀತ ಇವುಗಳಿಗೆ ಸಂಬಂಧಪಟ್ಟ ವಿವಿಧ ಅಕಾಡೆಮಿಗಳು ಎಲ್ಲವನ್ನೂ ಒಂದು ಸಮಗ್ರ ನೀಲನಕ್ಷೆಯ ಚೌಕಟ್ಟಿನಲ್ಲಿ ಕೆಲಸಮಾಡುವಂತೆ ನಿಯೋಜಿಸಿದರೆ ಸಂಪನ್ಮೂಲಗಳನ್ನು ಹೆಚ್ಚು ಫಲಪ್ರದವಾಗಿ ಬಳಸುವುದಕ್ಕೆ ಅನುಕೂಲವಾಗುತ್ತದೆ. ಅಂದರೆ ಕನ್ನಡ ಅಭಿವೃದ್ಧಿಗೆ ಸರಕಾರವು ಸಮಗ್ರ ಯೋಜನೆಯನ್ನು ತಯಾರಿಸುವುದು ಅತ್ಯವಶ್ಯಕವಾಗಿದೆ'' ಎಂದು ಕಿವಿಮಾತು ಹೇಳಿದ್ದುಂಟು.

ಹುಡುಕುತ್ತಾ ಹೋದರೆ ಇಂಥ ನೂರಾರು ಸ್ವಾರಸ್ಯಗಳು ನಮ್ಮ ಹಿಂದಿನ ಸಮ್ಮೇಳನಾಧ್ಯಕ್ಷರುಗಳ ಭಾಷಣಗಳಲ್ಲಿ ಸಿಗುತ್ತವೆ. ಈ ಸಲ ಗೊ.ರು. ಚನ್ನಬಸಪ್ಪ ಅವರ ಭಾಷಣದಲ್ಲೂ ಏನಿದ್ದೀತು ಅಂತ ನೋಡೋಣ.

## ಕಳಕಳಿ

ಎಚ್.ಆನಂದರಾಮ ಶಾಸ್ತ್ರೀ

### ಹೀಗೊಂದು ಕಿವಿಮಾತು

ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಹೊಣೆ ಹೊತ್ತಿರುವ 'ಕಸಾಪ' ಅಧ್ಯಕ್ಷ ಮಹೇಶ ಜೋಶಿಯವರಿಗೆ ಒಂದಷ್ಟು ಕಿವಿಮಾತುಗಳನ್ನು ಹೇಳಲಿಚ್ಛಿಸುವೆ.

- ಸಮ್ಮೇಳನಾಧ್ಯಕ್ಷರ ಮೆರವಣಿಗೆಯನ್ನು ಆದಷ್ಟು ಬೇಗನೆ ಮುಗಿಸಿ, ನಿಗದಿತ ಸಮಯಕ್ಕೆ ಸರಿಯಾಗಿ ಉದ್ಘಾಟನಾ ಸಮಾರಂಭವನ್ನು ಆರಂಭಿಸಿರಿ. ವಿಳಂಬ ಮಾಡಿ ಸಮ್ಮೇಳನಾಧ್ಯಕ್ಷರ ಭಾಷಣವನ್ನು ಮೊಟಕುಗೊಳಿಸುವ ಚೋದ್ಯ ನಡೆಯದಿರಲಿ. ಮುಖ್ಯಮಂತ್ರಿಯಾದಿಯಾಗಿ ಯಾರ ವಿಳಂಬಿತ ಆಗಮನಕ್ಕೂ ಕಾಯಬೇಡಿ. ಮೆರವಣಿಗೆಯ ನಂತರ, ಸಮಾರಂಭಕ್ಕೆ ಮುನ್ನ ಗೊ.ರು. ಚನ್ನಬಸಪ್ಪ ಅವರಿಗೆ ಸಾಕಷ್ಟು ವಿಶ್ರಾಂತಿ ದೊರಕುವಂತೆ ಸಮಯದ ನಿರ್ವಹಣೆ ಮಾಡಿ. ರಾಜಕಾರಣಿಗಳ ಭಾಷಣಗಳು ಚಿಕ್ಕದಾಗಿರಲಿ, ವೇದಿಕೆಯಲ್ಲಿರುವವರ ಹೆಸರುಗಳನ್ನೆಲ್ಲಾ ಹೇಳುತ್ತ ಅವರು ಕಾಲಹರಣ ಮಾಡದಿರಲಿ.
- ಉದ್ಘಾಟನಾ ಸಮಾರಂಭವೂ ಸೇರಿದಂತೆ ವೇದಿಕೆಯ ಎಲ್ಲ ಕಾರ್ಯಕ್ರಮಗಳಲ್ಲೂ ನಿರೂಪಕರು ಮತ್ತು ಸ್ವಾಗತ-ವಂದನಾರ್ಪಣೆ ಮಾಡುವವರು ಅವಶ್ಯ ಮಾತಿನ ಹೊರತು ಹೆಚ್ಚುವರಿಯಾಗಿ ಒಗ್ಗರಣೆ ಮಾತು ಆಡದಿರಲಿ. ಅವರಿಗೆ, ನಿಗದಿತ ಅವಧಿಗಿಂತ ಹೆಚ್ಚಿನ ಸಮಯ ನೀಡಬೇಡಿ.
- ಗೋಷ್ಠಿಗಳಲ್ಲಿ ವಿಷಯ ಮಂಡಿಸುವವರೂ ತಮ್ಮ ಮಾತನ್ನು ಅನಗತ್ಯ ಹಿಗ್ಗಿಸದೆ ಸಮಯಪಾಲನೆ ಮಾಡುವಂತೆ ನಯವಾಗಿ ನೋಡಿಕೊಳ್ಳಿ. ಮೈಕಿನ ಸಂಪರ್ಕ ಕಡಿತಗೊಳಿಸುವಂಥ ಅಗೌರವದ ಕ್ರಮ ಬೇಡ.
- ಸಭಾಸದ ಸಾಮಾನ್ಯರು ಏನಾದರೂ ಪ್ರಶ್ನೆ ಕೇಳಿದರೆ ಅದನ್ನು ವಿನಯ ಮತ್ತು ಚಾಕಚಕ್ಯತೆಗಳಿಂದ ನಿರ್ವಹಿಸುವಂತೆ ವೇದಿಕೆಯ ಗಣ್ಯರಿಗೆ ಮೊದಲೇ ಸೂಚನೆ ನೀಡಿಟ್ಟಿರಿ. ವೇದಿಕೆಯ ಮೇಲೆ ಅನಗತ್ಯವಾದ ಒಬ್ಬ ವ್ಯಕ್ತಿಯೂ ಇರದಂತೆ ನೋಡಿಕೊಳ್ಳಿ.
- ಪುಸ್ತಕ ಇತ್ಯಾದಿ ಮಳಿಗೆಗಳವರಿಗೆ, ಅದರಲ್ಲೂ ಸ್ತ್ರೀಯರಿಗೆ ಮತ್ತು ಸಮ್ಮೇಳನಕ್ಕೆ ಬರುವ ಎಲ್ಲರಿಗೂ ಸಾಕಷ್ಟು ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಅತ್ಯವಶ್ಯ. ಸಮ್ಮೇಳನದ ಒಟ್ಟು ಪ್ರದೇಶವು ಕಸ-ಧೂಳಿನಿಂದ ಮುಕ್ತವಾಗಿರಬೇಕಾದ್ದೂ ಅಷ್ಟೇ ಅವಶ್ಯ.
- ಉದ್ಘಾಟನಾ ಮತ್ತು ಸಮಾರೋಪ ಸಮಾರಂಭಗಳಲ್ಲಿ ತಥಾಕಥಿತ ಅಭಿಮಾನಿಗಳು, ಕಾರ್ಯಕರ್ತರು, ಸಂಘಟನೆಗಳವರು ವೇದಿಕೆಗೆ ನುಗ್ಗಿ ರಾಜಕಾರಣಿಗಳಿಗೆ ಹಾರಹಾಕುವ ಕೆಟ್ಟ ಮತ್ತು ಕಾಲಹರಣದ ಸಂಪ್ರದಾಯಕ್ಕೆ ಸರ್ವಥಾ ಅವಕಾಶ ನೀಡಬೇಡಿ.
- ಊಟದ ಅಂಗಳಗಳಲ್ಲಿ ಸಾಕಷ್ಟು ಪೊಲೀಸರು ಮತ್ತು ಸ್ವಯಂಸೇವಕರು ಹಾಜರಿದ್ದು, ಜನರನ್ನು ಮೃದುವಾಗಿ, ಆದರೆ, ದೃಢವಾಗಿ ನಿಯಂತ್ರಿಸಲಿ. ಸಮಾರಂಭ ನಡೆಯುತ್ತಿರುವಾಗ ವೇದಿಕೆಯ ಮೇಲೆ ಸೆಲ್ಫಿಗಳಿಗೆ ಯಾವ ಕಾರಣಕ್ಕೂ ಅವಕಾಶ ಬೇಡ.
- ಉತ್ತಮ ಧ್ವನಿವರ್ಧಕ ವ್ಯವಸ್ಥೆಯು ಸಮ್ಮೇಳನದ ಅತಿಮುಖ್ಯ ಅವಶ್ಯಕತೆ ಎಂಬುದು ನೆನಪಿರಲಿ. ಇದು ಸಾಹಿತ್ಯ ಸಮ್ಮೇಳನ, ರಾಜಕೀಯ ಸಮಾವೇಶವಲ್ಲ ಎಂಬ ಎಚ್ಚರವೂ ಆದ್ಯಂತ ಇರಲಿ. ಪರಿಷತ್ ಅಧ್ಯಕ್ಷರಾದ(ರೂ) ನೀವು ವೇದಿಕೆಗಳಲ್ಲಿ ಕಡಿಮೆ, ನಿರ್ವಹಣೆಯ ಎಡೆಗಳಲ್ಲಿ ಹೆಚ್ಚು ಕಾಣಿಸಿಕೊಳ್ಳುವುದು ಭೂಷಣ. ಸಮ್ಮೇಳನ ಯಶಸ್ವಿಯೂ ಸಾರ್ಥಕವೂ ಆಗಲೆಂದು ಹಾರೈಸುತ್ತೇನೆ.

**(ಲೇಖಕರು ಹಿರಿಯ ಸಾಹಿತಿ)**

# ಸ್ವಾಭಿಮಾನಿ ಮಾಜಿ ಸೈನಿಕರಿಗೆ ಬದುಕಿನ ಅಭದ್ರತೆ!

**ಮಾಜಿ ಸೈನಿಕರು ಸರಕಾರದ ಯಾವೊಂದು ಯೋಜನೆಗೂ ಅರ್ಹತೆ ಪಡೆಯುವುದಿಲ್ಲ. ಬಿಪಿಎಲ್, ಗೃಹಲಕ್ಷ್ಮಿಗಳಂಥ ಯಾವ ಯೋಜನೆಯೂ ಇವರನ್ನು ತಲುಪುವುದಿಲ್ಲ. ಸಮಾಜದ ಒಂದು ಭಾಗವಾಗಿದ್ದರೂ, ಇತರರು ಪಡೆವ ಲಾಭಗಳನ್ನು ಪಡೆಯಲೂ ಮಾಜಿ ಸೈನಿಕರು ಹೋರಾಡಬೇಕಾದ ಸ್ಥಿತಿಯಿದೆ.**

ಗಂಟಾಘೋಷ

ಗುರುರಾಜ್ ಗಂಟಿಹೊಳೆ

vveditoped@gmail.com

ದೇಶದ ರಕ್ಷಣೆಗೆ ಸಿಂಹಸದೃಶ ಯುವಕರ ಅಗತ್ಯವಿರುವುದರಿಂದ ಪ್ರತಿವರ್ಷವೂ ಸಾವಿರಾರು ಯುವಕರು ಸೇನೆಯನ್ನು ಸೇರುತ್ತಿರುತ್ತಾರೆ ಮತ್ತು ಸಾಮಾನ್ಯವಾಗಿ 35ರಿಂದ 40 ವರ್ಷಕ್ಕೆಲ್ಲ ನಿವೃತ್ತರಾಗುತ್ತಾರೆ. ಈ ನಿವೃತ್ತಿಯ ನಂತರ ಮುಂದೇನು ಎಂಬ ಸವಾಲು ಅವರಿಗೆ ಎದುರಾಗುತ್ತದೆ. ಜನಸಾಮಾನ್ಯರ ಜೀವನದಲ್ಲಿ ಇದು ನಿವೃತ್ತಿಯ ವಯಸ್ಸಲ್ಲ. ಹಾಗಾಗಿ, ಸೇನೆಯ ಶಿಸ್ತು, ಬದುಕಿನೆಡೆಗಿನ ಆಸ್ಥೆ, ಇನ್ನೂ ಏನಾದರೂ ಮಾಡುವಂತೆ ಪ್ರೇರೇಪಿಸುತ್ತದೆ. ಕೆಲವರು ನೌಕರಿ, ಸ್ವಯಂ ಉದ್ಯೋಗದಂಥ ಆಯ್ಕೆಯೆಡೆಗೆ ಗಮನಕೊಡುತ್ತಾರೆ.

ಕರ್ನಾಟಕದಿಂದ ಸೈನಿಕರಾಗಿ, ಸೇನೆಯ ವಿವಿಧ ವಿಭಾಗಗಳಿಗೆ ನಿಯೋಜನೆಗೊಂಡು ದೇಶಸೇವೆಗೆ ಕೊಡುಗೆ ನೀಡುತ್ತಿರುವವರು ಲಕ್ಷ ಸಂಖ್ಯೆಯಲ್ಲಿದ್ದಾರೆ. ಇಂಥವರು ನಿವೃತ್ತರಾಗಿ ಹುಟ್ಟೂರಿಗೆ ಮರಳಿದರೆ ಅವರನ್ನು ಸ್ವಾಗತಿಸುವ ಸಂಭ್ರಮವೇ ಬೇರೆ! ಹಳ್ಳಿಗಳಲ್ಲಂತೂ ಊರಹಬ್ಬದಂತೆ ಅಡುಗೆ ಮಾಡಿ ಖುಷಿಪಡುತ್ತಾರೆ. ಇವರಿಗೆಂದೇ ಕರ್ನಾಟಕ ಸರಕಾರದಿಂದ ಸೈನಿಕ ಕಲ್ಯಾಣ ಇಲಾಖೆ ಸ್ಥಾಪಿತವಾಗಿದ್ದು, ಇದಕ್ಕೆ 1,32,295ರಷ್ಟು ಮಾಜಿ ಸೈನಿಕರು, ವೀರನಾರಿಯರು ನೋಂದಣಿಯಾಗಿದ್ದಾರೆ. ಹೀಗಿದ್ದರೂ, ಸರಕಾರದಿಂದ ಇವರಿಗೆ ಸಿಗಬೇಕಾದ ಗೌರವ, ಸವಲತ್ತುಗಳು ಸರಿಯಾಗಿ ಸಿಗುತ್ತಿಲ್ಲ. ಕನಿಷ್ಠಪಕ್ಷ, ಸರಕಾರ ಹೊರಡಿಸಿರುವ ಈ ಹಿಂದಿನ ಆದೇಶಗಳನ್ನಾದರೂ ಸರಿಯಾಗಿ ಜಾರಿಗೆ ತಂದರೆ, ಮಾಜಿ ಸೈನಿಕರ ಉಳಿದ ಬದುಕು ಹಸನಾಗಬಲ್ಲದು. ಇವರಿಗೆ ನಿವೇಶನ/ಭೂಮಿ ಮಂಜೂರಾತಿ ಮಾಡಲು ಕರ್ನಾಟಕ ಸರಕಾರವು ಹತ್ತಾರು ಆದೇಶಗಳನ್ನು ಹೊರಡಿಸಿದ್ದರೂ, ಈ ಯೋಜನೆಗಳು ಅವರನ್ನು ತಲುಪುತ್ತಿಲ್ಲ. ಸ್ವತಃ ಕಚೇರಿಯಿಂದ ಕಚೇರಿಗೆ ಅಲೆದಾಡಿದರೂ ಜಿಲ್ಲಾಧಿಕಾರಿಗಳು, ತಹಶೀಲ್ದಾರರು ದಿವ್ಯನಿರ್ಲಕ್ಷ್ಯ ತೋರುತ್ತಿದ್ದಾರೆ ಎಂಬ ಅಳಲು ಈ ಮಾಜಿ ಸೈನಿಕರದು.

ಕರ್ನಾಟಕ ಸರಕಾರದ ಉದ್ಯೋಗದಲ್ಲಿ ಶೇ.10ರಷ್ಟು ಮೀಸಲಾತಿ ನೀಡಬೇಕೆಂದಿದ್ದರೂ, ಕೆಪಿಎಸ್‌ಸಿ, ಕೆಇಎ ಸೇರಿದಂತೆ ಇತರೆ ನೇಮಕಾತಿ ಪ್ರಾಧಿಕಾರಗಳು ಇವರೆಡೆಗೆ ಗಮನ ಕೊಡುತ್ತಿಲ್ಲ. ನಿವೃತ್ತಿಯ ಬಳಿಕ ಸ್ವಾವಲಂಬಿ ಜೀವನ ನಡೆಸಲು ಇವರಿಗೆ ಮತ್ತು ಇವರ ಮಕ್ಕಳ ವಿದ್ಯಾಭ್ಯಾಸಕ್ಕೆ ಆಸರೆಯಾಗಬೇಕಾದ ಸ್ಥಳೀಯ ಆಡಳಿತ/ಸರಕಾರಗಳು ನಿರ್ಲಕ್ಷ್ಯವನ್ನು ತೋರುತ್ತಿವೆ.

ಪುನರ್ ಉದ್ಯೋಗ ಪಡೆದವರಿಗೆ ವೇತನ ಭದ್ರತೆ ಕಲ್ಪಿಸಲು ಕೇಂದ್ರ ಸರಕಾರದ ಆದೇಶವಾಗಿದ್ದರೂ ಅದು ಕಾರ್ಯರೂಪಕ್ಕೆ ಬಂದಿಲ್ಲದಿರುವುದು ಕೂಡ ಶೋಚನೀಯ. ದೇಶಕ್ಕಾಗಿ ತ್ಯಾಗ-ಬಲಿದಾನ ಗೈದು ಮರಳಿಗೂಡಿಗೆ ಬಂದಿರುವ ಇಂಥವರಿಗೆ ಸಾಮಾಜಿಕ ಭದ್ರತೆ ಒದಗಿಸಲೆಂದು ನಿವೇಶನ/ಜಮೀನಿನ ಮೇಲೆ, ಸಿಎಸ್‌ಡಿ ಕ್ಯಾಂಟೀನ್ ಸಾಮಗ್ರಿಗಳ ಮೇಲೆ ಕೇಂದ್ರ ಸರಕಾರವು ಸಂಪೂರ್ಣ ರಿಯಾಯಿತಿ ನೀಡಿದೆ. ಆದರೆ ರಾಜ್ಯ ಸರಕಾರ ಶೇ.50ರಷ್ಟು ಕಂದಾಯ ವಸೂಲಿ ಮಾಡುತ್ತಿದೆ. ಹಾಗೆಯೇ, ಮಾಜಿ ಸೈನಿಕರ ಮಕ್ಕಳಿಗೆ ತಾಂತ್ರಿಕ, ವೈದ್ಯಕೀಯ ಶಿಕ್ಷಣಗಳಲ್ಲಿ ವಿಶೇಷ ಮೀಸಲಾತಿ ನೀಡಬೇಕು, ಮಾಜಿ ಸೈನಿಕರ ಮೇಲೆ ರಾಜ್ಯಾದ್ಯಂತ ವಿನಾಕಾರಣ ಹಲ್ಲೆ, ದೌರ್ಜನ್ಯ ನಡೆಯುತ್ತಿದ್ದು ಈ ನಿಟ್ಟಿನಲ್ಲಿ ಕಠಿಣ ಕ್ರಮ ಕೈಗೊಳ್ಳಬೇಕು ಮತ್ತು ಸಾಮಾಜಿಕ ಭದ್ರತೆಗೆ ಬೇಕಾದ ಅನುಕೂಲಗಳನ್ನು ಒದಗಿಸಬೇಕು ಎಂಬುದೂ ಅವರ ಬಹುದಿನದ ಬೇಡಿಕೆಯಾಗಿದೆ.

ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಸೈನಿಕ ಭವನ ನಿರ್ಮಿಸಲು ಉಚಿತ ನಿವೇಶನ ಮತ್ತು ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡುವಂತೆ ಬಹಳ ವರ್ಷಗಳಿಂದ ತಾವು ಮಾಡಿರುವ ಹಕ್ಕೊತ್ತಾಯವು ನನೆಗುದಿಗೆ ಬಿದ್ದಿದ್ದು,

ಇದನ್ನೂ ಸರಕಾರ ಪರಿಗಣಿಸಬೇಕು ಎಂಬುದೂ ಮಾಜಿ ಸೈನಿಕರ ಕೋರಿಕೆಯಾಗಿದೆ. ಕರ್ನಾಟಕ ಸರಕಾರದ ಸುತ್ತೋಲೆ ಆರ್‌ಡಿ 22 ಎಲ್‌ಜಿಪಿ 2019 ಮತ್ತು 2021ರಲ್ಲೂ ಕರ್ನಾಟಕ ಭೂ ಮಂಜೂರಾತಿ ನಿಯಮಗಳನ್ನು ಅಳವಡಿಸಿಕೊಂಡು ನಿಯಮ 12(5)ರ ಅಡಿಯಲ್ಲಿ ಉಚಿತವಾಗಿ ಕಡ್ಡಾಯವಾಗಿ ಭೂಮಿ ಮಂಜೂರು ಮಾಡಲು ಅವಕಾಶ ಕಲ್ಪಿಸಿದ್ದರೂ, ಅಧಿಕಾರಿಗಳು ನಿರ್ಲಕ್ಷಿಸುತ್ತಿದ್ದಾರೆ ಎಂಬ ಸಾತ್ವಿಕ ಕೋಪ, ಅಸಹನೆ ಮತ್ತು ನೋವು ಈ ಮಾಜಿ ಸೈನಿಕರದ್ದು.

ಮಿಕ್ಕಂತೆ, ರಾಜೀವ್ ಗಾಂಧಿ ವಸತಿ ಯೋಜನೆಗಳಲ್ಲಿಯೂ ನಮ್ಮನ್ನು ಸರಿಯಾಗಿ ಪರಿಗಣಿಸುತ್ತಿಲ್ಲ. ಇನ್ನು, ಪಾವತಿ ಆಯೋಗ ಕುರಿತಂತೆ ಕೇಂದ್ರ ಸರಕಾರದಿಂದ 10 ವರ್ಷಗಳಿಗಿದ್ದರೆ, ರಾಜ್ಯದಿಂದ 5 ವರ್ಷಕ್ಕೊಮ್ಮೆ ಅನುಷ್ಠಾನಕ್ಕೆ ತರುತ್ತಿದ್ದಾರೆ. ಈ ವಿಷಯದಲ್ಲೂ ಮಾಜಿ ಸೈನಿಕರಿಗೆ ಅನ್ಯಾಯವಾಗುತ್ತಿದೆ. ಹಾಗಾಗಿ, ವೇತನ ಆಯೋಗದ ಶಿಫಾರಸು ಜಾರಿಯಾಗಬೇಕೆಂಬುದು ನಮ್ಮ ಹಕ್ಕೊತ್ತಾಯವಾಗಿದೆ ಎನ್ನುತ್ತಾರೆ ಕುಂದಾಪುರದ ವೀರಯೋಧರೊಬ್ಬರು.

ಇನ್ನು ರೋಸ್ಟರ್ ಪದ್ಧತಿಯಲ್ಲಿ ಉದ್ಯೋಗ ನೀಡುವಿಕೆಯಂತೂ ಮಾಜಿ ಸೈನಿಕರನ್ನು ಹೈರಾಣು ಮಾಡಿಬಿಟ್ಟಿದೆ. ಉದ್ಯೋಗ ಮೀಸಲಾತಿಯು ಶೇ.10 ರಷ್ಟಿದ್ದರೂ, ಈ ಪದ್ಧತಿಯಲ್ಲಿ ನೂರು ಹುದ್ದೆಗಳನ್ನು ಕರೆದಿದ್ದರೆ ಸಿಗುವುದು ಒಂದೋ ಎರಡೋ ಮಾತ್ರ. ಹೀಗಾಗಿ ಬಹುತೇಕರು ಜೀವನ ನಿರ್ವಹಣೆಗಾಗಿ ಸೆಕ್ಯುರಿಟಿ ಗಾರ್ಡ್ ಉದ್ಯೋಗವನ್ನು ಆಯ್ಕೆಮಾಡಿಕೊಂಡಿದ್ದಾರೆ. ಇದರಿಂದಾಗಿ, ಮಾಜಿ ಸೈನಿಕರೆಂದರೆ ಸೆಕ್ಯುರಿಟಿ ಕೆಲಸ ಮಾಡಲು ಅರ್ಹರು ಎಂಬ ಮನೋಭಾವ ಶ್ರೀಸಾಮಾನ್ಯರಲ್ಲಿ ಬಂದುಬಿಟ್ಟಿದೆ. ಬಹಳಷ್ಟು ಜನರು ಸೇನೆಯಿಂದ ಮರಳಿದ ಬಳಿಕ ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆ, ಸಿನಿಮಾ, ಸೇವಾಕ್ಷೇತ್ರಗಳ ಮೂಲಕ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಮಿಕ್ಕಂತೆ, ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಶಿಸ್ತು, ದೈಹಿಕ ತರಬೇತಿ ನೀಡುವ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ. ಇನ್ನು ಕೆಲವರು ಮನೆಯ ಅಕ್ಕಪಕ್ಕದಲ್ಲಿ ಚಿಕ್ಕಪುಟ್ಟ ಜನರಲ್ ಸ್ಟೋರ್‌ಗಳನ್ನು ಹಾಕಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಇಂಥವರಿಗೆ ಸಾಲ ಸೌಲಭ್ಯ, ಈಗಾಗಲೇ ಘೋಷಿಸಿರುವ ಯೋಜನೆಗಳನ್ನು ತಲುಪಿಸಲು ಇಲಾಖೆ ಮತ್ತು ಸರಕಾರ ಯತ್ನಿಸಬೇಕು.

ಮತ್ತೊಂದು ಬೇಸರವೆಂದರೆ, ಈ ಮಾಜಿ ಸೈನಿಕರು ಸರಕಾರದ ಯಾವೊಂದು ಯೋಜನೆಗೂ ಅರ್ಹತೆ ಪಡೆಯುವುದಿಲ್ಲ. ಬಿಪಿಎಲ್, ಗೃಹಲಕ್ಷ್ಮಿಗಳಂಥ ಯಾವ ಯೋಜನೆಯೂ ಇವರನ್ನು ತಲುಪುವುದಿಲ್ಲ. ಸಮಾಜದ ಒಂದು ಭಾಗವಾಗಿದ್ದರೂ, ಇತರರು ಪಡೆವ ಲಾಭಗಳನ್ನು ಪಡೆಯಲೂ ಮಾಜಿ ಸೈನಿಕರು ಹೋರಾಡಬೇಕಾದ ಸ್ಥಿತಿಯಿದೆ. ಇನ್ನು, ತಮಗೆ ಬೇಕಾದೆಡೆಗೆ ಉದ್ಯೋಗ ಮಾಡಲು ವರ್ಗಾವಣೆ ಕೇಳಿದರೆ, 'ನಿಮ್ಮ ಸೇವಾಶ್ರೇಣಿಯನ್ನು ಬಿಟ್ಟುಕೊಟ್ಟರೆ ಮಾತ್ರ ನೀವು ಕೇಳಿದೆಡೆಗೆ ವರ್ಗ' ಎನ್ನುತ್ತಾರೆ ಅಧಿಕಾರಿಗಳು. ದಶಕಗಳ ಕಾಲ ಕುಟುಂಬವನ್ನು ಬಿಟ್ಟು, ದೇಶದ ಗಡಿ ಕಾಯಲು, ಸೇನೆಯ ವಿವಿಧ ಕಾರ್ಯಕ್ಕೆಂದು ನಿಯೋಜಿತರಾದವರು ನಿವೃತ್ತಿಯ ಬಳಿಕವಾದರೂ ಕುಟುಂಬಿಕರೊಂದಿಗೆ ಕಾಲ ಕಳೆಯೋಣವೆಂದರೆ, ಕೊಟ್ಟ ಉದ್ಯೋಗದಲ್ಲಿ ಹೀಗೆ ಕಾಡಿಸಲಾಗುತ್ತದೆ ಎನ್ನುತ್ತಾರೆ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಡಾ.ಶಿವಣ್ಣ ಅವರು.

ಕೇಂದ್ರದಲ್ಲಿ ನರೇಂದ್ರ ಮೋದಿ ಸರಕಾರ ಬಂದ ಮೇಲೆ ದಶಕಗಳ ಕಾಲ ಸೇನೆಯ ಬೇಡಿಕೆಯಾಗಿದ್ದ 'ಒನ್ ರ‍್ಯಾಂಕ್, ಒನ್ ಪೆನ್ಷನ್' ಜಾರಿಗೆ ತಂದು ಸೇನೆಯನ್ನು ಇನ್ನಷ್ಟು ಸದೃಢಗೊಳಿಸಲಾಯಿತು. ಅತ್ಯಾಧುನಿಕ ಉಪಕರಣಗಳ ಮೂಲಕ ವಿಶ್ವದರ್ಜೆಯ ಸೇನಾವ್ಯವಸ್ಥೆಯನ್ನು ರೂಪಿಸಲಾಯಿತು. ಹಾಗೆಯೇ, ರಾಷ್ಟ್ರರಕ್ಷಣೆಯ ಭಾಗವಾಗಿ 'ಅಗ್ನಿಪಥ' ಎಂಬ ಅಲ್ಪಕಾಲಿಕ ಸೇನಾಸೇವೆಯನ್ನು ಜಾರಿಗೆ ತರಲಾಯಿತು. ಇದು ಸೇನೆಗೆ ಯುವ ಸಮುದಾಯವನ್ನು ಆಕರ್ಷಿಸುವಲ್ಲಿ, ಸೇನೆಯನ್ನು ಸದಾ 'ತಾರುಣ್ಯದಲ್ಲಿ' ಇಡುವಲ್ಲಿ ಸಹಕಾರಿಯಾಗಿದೆ.

2005ರ ಸುಮಾರಿನಲ್ಲಿ ಕಂದಾಯ ಇಲಾಖೆಯು ವಿಶೇಷ ಆಶ್ರಯ ಯೋಜನೆಯನ್ನು, ಗುಂಜೂರು ಪಾಳ್ಯ, ಕೊಡತಿ, ಗಂಟಿಗಾನಹಳ್ಳಿ, ಬೆಟ್ಟಲಸೂರು, ಯಲಹಂಕ, ಉತ್ತರಹಳ್ಳಿಯಂಥ ಕೆಲ ಪ್ರಮುಖ ಜಾಗಗಳಲ್ಲಿ ಪ್ರತಿ ಬಡಾವಣೆಗೆ 10 ಎಕರೆಯಷ್ಟು ಜಾಗವನ್ನು ಮೀಸಲಿಟ್ಟು ಜಾರಿಗೆ ತಂದಿತು. ಮೂಲನಿವಾಸಿ ಸೈನಿಕ, ಅಂದರೆ ಕರ್ನಾಟಕದಲ್ಲೇ ಹುಟ್ಟಿ ಬೆಳೆದು ಸೇನೆ ಸೇರಿದವರಿಗೆ ಮಾತ್ರವೇ ಇಲ್ಲಿ ಉಚಿತ ನಿವೇಶನ ನೀಡುವ ಯೋಜನೆ ಇದಾಗಿತ್ತು. ಇಂಥ ಮಹತ್ವದ ಯೋಜನೆಯಡಿ ಅನ್ಯರಾಜ್ಯದವರು, ಸೈನಿಕರಲ್ಲದವರೂ ನಕಲಿ ಹೆಸರಿನಲ್ಲಿ ಇಲ್ಲಿ ನಿವೇಶನ ಪಡೆದಿದ್ದಾರೆ. ಇದರ ಹಿಂದೆ ಅಧಿಕಾರಿಗಳ ಕೈವಾಡವಿದೆ; ಈ ಒಂದೊಂದು ಜಾಗದಲ್ಲಿ 120 ನಿವೇಶನಗಳಿದ್ದು, ಒಂದೊಂದಕ್ಕೆ 50-60 ಲಕ್ಷ ರು.ನಷ್ಟು ಹಣ ಪಡೆದು ಅಕ್ರಮ ಮಾರಾಟ ಮಾಡಲಾಗುತ್ತಿದೆ ಎಂಬ ಆರೋಪವಿದೆ. ಈ ವಿಶೇಷ ಆಶ್ರಯ ಯೋಜನೆಯ ಭಾಗವಾದ ಉತ್ತರಹಳ್ಳಿ ಬಡಾವಣೆಯಲ್ಲಿ 44 ಎಕರೆ ಜಾಗವನ್ನು ಸೈನಿಕರಿಗೆ ಕೊಡಲೆಂದು ಖರೀದಿಸಿ, ಬೇರೆಯವರಿಗೆ ಅಕ್ರಮವಾಗಿ ಮಾರಾಟ ಮಾಡಲಾಗಿದೆ. ಇದರ ಮೇಲೆ ಬಿಡಿಎ ವಿಚಕ್ಷಣ ದಳದಿಂದ ದಾಳಿಯಾಗಿ, ಪತ್ರಿಕೆಗಳಲ್ಲೆಲ್ಲ ಈ ಹಗರಣದ ಮಾಹಿತಿ ಪ್ರಕಟವಾಗಿದೆ. ಸಾವಿರಾರು ಕೋಟಿಗೂ ಅಧಿಕ ಮೊತ್ತದ ಹಗರಣ ನಡೆದಿದ್ದರೂ, ಕಂದಾಯ ಇಲಾಖೆ, ಸರಕಾರ ಸೈನಿಕರ ಹೆಸರಿನಲ್ಲಿ ನಡೆದ ಭೂಮಾಫಿಯಾವನ್ನು ಬದಿಗೆ ಸರಿಸಿ ತೆಪ್ಪಗೆ ಕುಳಿತಿವೆ.

ಕೊಡತಿ ಬಡಾವಣೆಯಲ್ಲೂ ಬಹುಕೋಟಿ ಹಗರಣದ ವಾಸನೆ ಕಂಡುಬರುತ್ತಿದ್ದು, ದೊಡ್ಡ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎನ್ನಲಾಗುತ್ತಿದೆ. ಇತ್ತ ಚಿಕ್ಕಪುಟ್ಟ ಸೌಲಭ್ಯಕ್ಕಾಗಿ ನಮ್ಮ ಸೈನಿಕರು ಕಂಡಕಂಡ ಕಚೇರಿಯಲ್ಲಿ ಕೈಚಾಚುತ್ತ ಅಲೆಯುವಂತಾಗಿದೆ. ಈ ಕುರಿತು ಸೂಕ್ತ ತನಿಖೆಯಾಗಬೇಕಿದೆ ಎಂಬುದು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಹಕ್ಕೊತ್ತಾಯ. ಸೌಲಭ್ಯದ ವಿಚಾರದಲ್ಲಿ ಹೀಗಿದ್ದರೆ, ಹತ್ತಾರು ವರ್ಷಗಳಿಂದ ಕುಟುಂಬ ಸದಸ್ಯರಿಂದ ದೂರವಿದ್ದು ದೇಶಸೇವೆಯಲ್ಲಿ ನಿರತವಾಗಿದ್ದುದರಿಂದ, ಅಗತ್ಯವಿದ್ದ ಕಡೆಗೆ ಅವರ ಬೇಡಿಕೆ ಪರಿಗಣಿಸಿ, ಕನಿಷ್ಠಪಕ್ಷ ತಮ್ಮದೇ ಜಿಲ್ಲೆಗಾದರೂ ಕಡ್ಡಾಯವಾಗಿ ಕೋರಿರುವ ಜಾಗಕ್ಕೆ ವರ್ಗಾವಣೆ ಮಾಡಲು ಸ್ಪಷ್ಟ ಆದೇಶ ನೀಡಬೇಕೆಂದು ಸರಕಾರದೆಡೆಗೆ ಒತ್ತಿ ಹೇಳುತ್ತಿದ್ದಾರೆ ಮಂಗಳೂರಿನ ಮಾಜಿ ಸೈನಿಕರೊಬ್ಬರು.

ದೇಶಕ್ಕಾಗಿ, ದೇಶವಾಸಿಗಳ ಸುರಕ್ಷತೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಡುವ ಸೈನಿಕರಿಗೆ ಕೇಂದ್ರ ಸರಕಾರವು ಭರಪೂರ ಸೌಕರ್ಯಗಳನ್ನು, ಗೌರವವನ್ನು ಯಾವತ್ತೂ ನೀಡುತ್ತಾ ಬಂದಿದೆ. ಇದರೊಂದಿಗೆ ರಾಜ್ಯ ಸರಕಾರಗಳ ಕರ್ತವ್ಯಗಳೂ ಇದ್ದು, ಅವುಗಳನ್ನಾದರೂ ಸರಿಯಾಗಿ ಒದಗಿಸಿಕೊಟ್ಟರೆ, ಮಾಜಿ ಸೈನಿಕರು ಕಚೇರಿಯಿಂದ ಕಚೇರಿಗೆ ಬೇಡಿಕೆಪತ್ರ ಹಿಡಿದುಕೊಂಡು ಅಲೆದಾಡುವ ಅವಮಾನಕರ ಸ್ಥಿತಿಯಾದರೂ ತಪ್ಪುತ್ತದೆ.

ದೇಶ ರಕ್ಷಣೆಗೆ ತಮ್ಮನ್ನು ಅರ್ಪಿಸಿಕೊಂಡು ಬದುಕುವ ಧೀರೋದಾತ್ತ ಸೈನಿಕರ ಉತ್ತರಾರ್ಧದ ಬದುಕನ್ನು ಸುಂದರವಾಗಿಸಲು ಬೆಂಬಲಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವೂ ಹೌದು.



## ನಾರದ ಸಂಚಾರ

ಕಲಹಪ್ರಿಯ

naadigru@gmail.com

### ಇದು ಶಿಂಧೆ ಪುರಾಣ..!

ಮುಂಬೈ ಮಹಾನಗರಿಯಿಂದ ಬಂದಿರುವ ಸುದ್ದಿಯಿದು. ಅಲ್ಲಿನ ಮಲಬಾರ್ ಹಿಲ್ ಪ್ರದೇಶದ 'ಮೌಂಟ್ ಪ್ಲೆಸೆಂಟ್ ರೋಡ್'ನಲ್ಲಿ ನೆಲೆಸಿರುವವರಲ್ಲಿ ಬಹುತೇಕರು ಘಟಾನುಘಟಿಗಳೇ. ಅಂದರೆ, ತಮ್ಮದೇ ಆದ ಉದ್ಯಮ ಸಾಮ್ರಾಜ್ಯವನ್ನು ಕಟ್ಟಿದ ಬಿರ್ಲಾ, ರೂಯಿಯಾ ಕುಟುಂಬಿಕರು, ಶ್ರೀಮಂತ ಪಾರ್ಸಿಗಳು ಮುಂತಾದ ಪ್ರತಿಷ್ಠಿತರು ಬಹಳ ಕಾಲದಿಂದಲೂ ಇಲ್ಲಿನ ನಿವಾಸಿಗಳಾಗಿದ್ದಾರೆ. ಈ ರಸ್ತೆಯಲ್ಲಿ 'ವರ್ಷಾ' ಎಂಬ ಹೆಸರಿನ ಒಂದು ಬಂಗಲೆಯಿದ್ದು, ಇಲ್ಲಿ ಠಿಕಾಣಿ ಹೂಡಿದ್ದ ಮಹಾರಾಷ್ಟ್ರದ ಹಿಂದಿನ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರು ಈ ಬಂಗಲೆಯನ್ನು ಈಗ ಖಾಲಿಮಾಡಬೇಕಾಗಿ ಬಂದಿದೆ. ಆದರೆ, ಅದು ಯಾವಾಗ ಜರುಗಲಿದೆ ಎಂದು ನೆರೆಹೊರೆಯ ಈ ಪ್ರತಿಷ್ಠಿತ ಕುಟುಂಬಿಕರೆಲ್ಲಾ ಕಾತರಿಸಿ ಕಾಯುತ್ತಿದ್ದಾರಂತೆ!

ಏಕೆಂದರೆ, ಮುಖ್ಯಮಂತ್ರಿಯಾಗಿ ಶಿಂಧೆಯವರು ಈ ಪ್ರದೇಶಕ್ಕೆ ಆಗಮಿಸಿದ್ದರಿಂದಾಗಿ ಅಲ್ಲಿನ ಭವ್ಯ ವಾತಾವರಣವೇ ಸಂಪೂರ್ಣವಾಗಿ ಬದಲಾಗಿಬಿಟ್ಟಿತ್ತಂತೆ. ಶಿಂಧೆ ಅವರು 'ವರ್ಷಾ' ಬಂಗಲೆಯಲ್ಲಿ ನೆಲೆಸಿದ್ದರ ಜತೆಗೆ, ನೆರೆಹೊರೆಯಲ್ಲಿನ 'ಅಗ್ರದತ್' ಮತ್ತು 'ನಂದನವನ' ಎಂಬೆರಡು ಸರಕಾರಿ ಬಂಗಲೆಗಳನ್ನೂ ಆಕ್ರಮಿಸಿಕೊಂಡಿದ್ದಾರೆ. ಅವರು ಹೇಳಿ-ಕೇಳಿ ಕಷ್ಟಪಟ್ಟು ದುಡಿಯುವ ತಳಮಟ್ಟದ ರಾಜಕಾರಣಿಯಾಗಿರುವುದರಿಂದ, ತಮ್ಮ ಕುಂದುಕೊರತೆಗಳ ಪರಿಹಾರಕ್ಕಾಗಿ ರಾಜ್ಯದ ಮೂಲೆಮೂಲೆಯಿಂದ ಬರುವ ಜನರಿಗಾಗಿ ಅವರ ಮನೆಬಾಗಿಲು ಹಗಲಿರುಳೂ ತೆರೆದಿರುತ್ತದೆ. ಹಾಗೆ ಬಂದವರನ್ನು ಹಾಗೇ ಕಳಿಸದೆ, ಆಲೂ ಬೋಂಡಾ ಮತ್ತು ಚಹಾ ಸಮಾರಾಧನೆಯ ಆತಿಥ್ಯವನ್ನೂ ನೀಡುವುದು 'ಶಿಂಧೆಮನೆ'ಯ ಪರಿಪಾಠ. ಹೀಗೆ ಆತಿಥ್ಯ ಸ್ವೀಕರಿಸಿದ ಜನರು, ಪೇಪರ್ ಪ್ಲೇಟ್ ಮತ್ತು ಲೋಟಗಳನ್ನು ಆಚೀಚೆ, ಎಲ್ಲೆಂದರಲ್ಲಿ ಬೇಕಾಬಿಟ್ಟಿಯಾಗಿ ಎಸೆಯುತ್ತಿದ್ದುದರ ಜತೆಗೆ, ಬಡಾವಣೆಯಲ್ಲಿನ ಇಕ್ಕಟ್ಟಾದ ರಸ್ತೆಗಳಲ್ಲಿ ಜಮಾವಣೆಗೊಂಡು ಘೋಷಣೆಗಳನ್ನು ಕೂಗುವಂಥ, ಗೋಡೆಗಳಿಗೆ 'ರಾಜಕೀಯ' ಭಿತ್ತಿಪತ್ರಗಳನ್ನು ಮೆತ್ತುವಂಥ 'ಪತ್ಯೇತರ' ಚಟುವಟಿಕೆಗಳನ್ನೂ ನಡೆಸುತ್ತಿದ್ದರಂತೆ! ಸಾಲದೆಂಬಂತೆ, ಶಿಂಧೆಯವರು ಈ ನಿವಾಸಕ್ಕೆ ಪ್ರತಿ ಸಲ ಬಂದು ಹೋಗುವಾಗಲೂ ಸಂಚಾರಿ ದಟ್ಟಣೆ ತಾರಕಕ್ಕೇರುತ್ತಿದ್ದುದರಿಂದ, ಪೊಲೀಸರು ಜನಸಾಮಾನ್ಯರನ್ನು ಅಲ್ಲಲ್ಲೇ ತಡೆದು ನಿಲ್ಲಿಸಬೇಕಾಗುತ್ತಿತ್ತು. ಹೀಗಾಗಿ ಈ ಬಡಾವಣೆಯ 'ಪ್ರತಿಷ್ಠಿತರು' ಅಕ್ಕಪಕ್ಕದ ರಸ್ತೆಗಳಲ್ಲಿ ಕೆಲಕಾಲದವರೆಗೆ ಕಾಲ ತಳ್ಳಬೇಕಾಗುತ್ತಿತ್ತು.

ಈ ಕಿರಿಕಿರಿಯನ್ನು ಸಾಕಷ್ಟು ಕಾಲ ಸಹಿಸಿದ ಅಲ್ಲಿನ ನಿವಾಸಿಗಳ ಸಂಘವು ರಾಜ್ಯ ವಿಧಾನಸಭೆಯ ಸ್ಪೀಕರ್‌ರನ್ನು ಭೇಟಿಯಾಗಿ ಈ ವಿಷಯದಲ್ಲಿ ಮಧ್ಯಪ್ರವೇಶಿಸುವಂತೆ ಕೇಳಿಕೊಂಡಿದ್ದೂ ಉಂಟಂತೆ. ''ವಸಂತರಾವ್ ಪಾಟೀಲ್, ಉದ್ಧವ್ ಠಾಕ್ರೆ, ದೇವೇಂದ್ರ ಫಡ್ನವಿಸ್ ಮುಂತಾದವರೆಲ್ಲಾ ಈ ಬಂಗ್ಲೆಯಲ್ಲಿರುವಾಗ ನೆರೆಹೊರೆಯವರೊಂದಿಗೆ ಶಾಂತತೆಯನ್ನು ಕಾಯ್ದುಕೊಂಡಿದ್ದರು; ಆದರೆ ಶಿಂಧೆಯವರದ್ದು ಸ್ವಲ್ಪ 'ಡಿಫರೆಂಟ್' ಆಟಿಟ್ಯೂಡು'' ಎಂದು ವಿವರಿಸಿದ್ದೂ ಆಯಿತಂತೆ. ಆದರೆ ಸ್ಪೀಕರ್ ಮಹಾಶಯರು, ''ಈ ವಿಷಯದಲ್ಲಿ ನಾನು ಅಸಹಾಯಕ'' ಎಂದುಬಿಟ್ಟಿದ್ದರಂತೆ! ಈಗ ಶಿಂಧೆಯವರು ಸಹಜವಾಗಿಯೇ ಬಂಗಲೆಯನ್ನು ಖಾಲಿಮಾಡಬೇಕಾಗಿ ಬಂದಿರುವುದರಿಂದ ಈ ಬಡಾವಣೆಯ ಪ್ರತಿಷ್ಠಿತರೆಲ್ಲ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರಂತೆ!

## ಪಂಚ್ ಭಕ್ಷ್ಯ ಪರಮಾನ್ನ..!

ಯಗಟಿ ರಘು ನಾಡಿಗ್

### ಕನ್ನಡ ಸಾಹಿತ್ಯ ಸಮ್ಮೇಳನ: ಅಂದು-ಇಂದು




ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 330

## ಸಮಾಚಾರ ಸಣ್ಣದಲ್ಲ

### ಬಾಣಂತಿ ಮೃತ್ಯು: ವೈದ್ಯರ ನಿರ್ಲಕ್ಷ್ಯ ಆರೋಪ

**ಚಿಕ್ಕಮಗಳೂರು:** ಮೂರು ದಿನದ ಬಾಣಂತಿಯೊಬ್ಬರು ಮೃತಪಟ್ಟಿದ್ದು, ವೈದ್ಯರ ನಿರ್ಲಕ್ಷ್ಯವೇ ಕಾರಣವೆಂದು ಸಂಬಂಧಿಕರು ಆರೋಪ ಮಾಡಿದ್ದಾರೆ. ನಗರದ ಶಂಕರಪುರ ನಿವಾಸಿ ಸವಿತಾ (26) ಮೃತಪಟ್ಟವರು. ಸವಿತಾ ಕಳೆದ ಮೂರು ದಿನಗಳ ಹಿಂದೆ ಜಿಲ್ಲಾಸ್ಪತ್ರೆಯಲ್ಲಿ ಗಂಡು ಮಗುವಿಗೆ ಜನ್ಮ ನೀಡಿದ್ದರು. ಎರಡು ದಿನದ ಬಳಿಕ ಬಾಣಂತಿ ಆರೋಗ್ಯದಲ್ಲಿ ಏರುಪೇರಾಗಿದ್ದು, ಜಿಲ್ಲಾಸ್ಪತ್ರೆಯಲ್ಲಿ ಸೌಲಭ್ಯವಿಲ್ಲವೆಂದು ವೈದ್ಯರು ಹೇಳಿದ ಹಿನ್ನೆಲೆಯಲ್ಲಿ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಬಾಣಂತಿ ಸಾವಿಗೀಡಾಗಿದ್ದಾರೆ. ಬಾಣಂತಿ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣವೆಂದು ಕುಟುಂಬಸ್ಥರು ಆರೋಪಿಸಿದ್ದಾರೆ.

### ಮಂಗಳಮುಖಿ ಅತಿಥಿ ಉಪನ್ಯಾಸಕಿ

**ಬಳ್ಳಾರಿ:** ಇಲ್ಲಿನ ಶ್ರೀ ಕೃಷ್ಣದೇವರಾಯ ವಿವಿ (ವಿಎಸ್‌ಕೆವಿವಿ) ಕನ್ನಡ ವಿಭಾಗಕ್ಕೆ ಲಿಂಗತ್ವ ಅಲ್ಪಸಂಖ್ಯಾತ (ಮಂಗಳಮುಖಿ)ರೊಬ್ಬರು ಅತಿಥಿ ಉಪನ್ಯಾಸಕರಾಗಿ ನೇಮಕವಾಗಿದ್ದಾರೆ. ಕುರುಗೋಡು ತಾಲೂಕಿನ ರೇಣುಕಾ ಪೂಜಾರಿ ಈ ಹುದ್ದೆ ಪಡೆದ ರಾಜ್ಯದ ಮೊದಲ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಯಾಗಿದ್ದಾರೆ. ರೇಣುಕಾ ಪೂಜಾರಿ ಈ ಕುರಿತಾಗಿ ಪ್ರತಿಕ್ರಿಯಿಸಿ, 'ನಮ್ಮದು ಬಡ ಕುಟುಂಬ. ತಂದೆ ಪೂಜಾರಿ ಮಲ್ಲಯ್ಯ, ತಾಯಿ ತಿಪ್ಪಮ್ಮ ಇಬ್ಬರೂ ಅನಕ್ಷರಸ್ಥರು. ಸಮಾಜ ಕೊಂಕು ನುಡಿದರೂ ತಂದೆ-ತಾಯಿ ನನ್ನನ್ನು ದೂರ ತಳ್ಳಲಿಲ್ಲ, ಕಷ್ಟಪಟ್ಟು ಈ ಹಂತಕ್ಕೆ ಬಂದಿದ್ದೇನೆ. ಬಹಳಷ್ಟು ಅವಮಾನ ಎದುರಿಸಿದೆ, ಆದರೆ ಹಲವರು ನನಗೆ ನೆರವಾದರು ಎಂದು ಅವರು ಹೇಳಿದರು.

ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಕ್ಷಣಗಣನೆ | ನಾಳೆಯಿಂದ ಮಂಡ್ಯದಲ್ಲಿ ಕನ್ನಡ ನುಡಿ ಜಾತ್ರೆ

# ಜಾತಿ-ಪಕ್ಷ ಬಿಟ್ಟು ಸಮ್ಮೇಳನದ ಯಶಸ್ಸಿಗೆ ಕರೆ

**ಮಂಡ್ಯ:** ಜಾತಿ, ಪಕ್ಷ ಬಿಟ್ಟು ಎಲ್ಲರೂ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕೈ ಜೋಡಿಸಿ, ಇದು ಕನ್ನಡಿಗರ ಹಬ್ಬ. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ನಡೆಯಬೇಕು. ಎಲ್ಲರೂ ಸೇರಿ ಒಗ್ಗಟ್ಟಿನಿಂದ ಕನ್ನಡ ಹಬ್ಬ ಮಾಡುತ್ತಿದ್ದೇವೆ ಎಂಬ ಹೆಮ್ಮೆ ಇರಲಿ ಎಂದು ಕೃಷಿ ಸಚಿವ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಬುಧವಾರದಂದು ಸಚಿವ ಮತ್ತು ಸಮ್ಮೇಳನ ಸ್ವಾಗತ ಸಮಿತಿಯ ಅಧ್ಯಕ್ಷರಾದ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ್ದು, ಸಮ್ಮೇಳನದ ತಯಾರಿ ಮತ್ತು ಮೂರು ದಿನಗಳು ನಡೆಯಲಿರುವ ಒಟ್ಟು ಕಾರ್ಯಕ್ರಮದ ರೂಪುರೇಷೆಗಳನ್ನು ವಿವರಿಸಿದ್ದಾರೆ.

ನೂರಕ್ಕೆ ನೂರರಷ್ಟು ಕನ್ನಡ ಮಾತನಾಡುವ ಏಕೈಕ ಜಿಲ್ಲೆಯಾದ ಮಂಡ್ಯವು ಕಲೆಗಳ ತವರೂರು, ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತಿಗಳು ಇಲ್ಲೇ ಇದ್ದಾರೆ. ಈ ಬಾರಿಯ ಸಾಹಿತ್ಯ ಸಮ್ಮೇಳನ ಅದ್ದೂರಿಯಾಗಿ ನಡೆಯಲಿದ್ದು, ಕಾರ್ಯಕ್ರಮದ ಉದ್ಘಾಟನೆಯು ಇತಿಹಾಸದ ಪುಟಗಳಲ್ಲಿ ದಾಖಲಾಗುವ ರೀತಿ ನೆರವೇರಲಿದೆ. ಸಮ್ಮೇಳನ ಮಂಡ್ಯದ ಪ್ರತಿಷ್ಠೆಯ ವಿಷಯವಾಗಿದ್ದು, ಎಲ್ಲರೂ ಒಗ್ಗಟಿನಿಂದ ಕೆಲಸ ಮಾಡಬೇಕಿದೆ ಎಂದೂ ಅವರು ಹೇಳಿದರು.

87ನೇ ಅಖಿಲ ಬಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕ್ಷಣಗಣನೆ ಶುರುವಾಗಿದ್ದು, ಇಡೀ ಜಿಲ್ಲೆಯಲ್ಲಿ ವೈಭವದ ತಯಾರಿ ನಡೆಯುತ್ತಿದೆ. ನುಡಿಜಾತ್ರೆಯನ್ನು ಕಣ್ತುಂಬಿಕೊಳ್ಳಲು ರಾಜ್ಯದ ಲಕ್ಷಾಂತರ ಜನರು ತುದಿಗಾಲಿನಲ್ಲಿ ನಿಂತಿದ್ದಾರೆ. ಸರಿ ಸುಮಾರು ಮೂವತ್ತು ವರ್ಷಗಳ ನಂತರ ಮಂಡ್ಯ ಜಿಲ್ಲೆಯಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿದ್ದು, ಸಹಜವಾಗಿ ಎಲ್ಲರಲ್ಲೂ ಸಂಭ್ರಮ-ಸಡಗರ ಮನೆ ಮಾಡಿದೆ.

ಸಾಹಿತ್ಯ ಸಮ್ಮೇಳನದ ತಯಾರಿ: ನಾಳೆಯಿಂದ ಭಾನುವಾರದವರೆಗೆ ಮೂರು ದಿನಗಳ ಕಾಲ ಅದ್ಭುತ ಮತ್ತು ಅರ್ಥಪೂರ್ಣವಾದ ಸಾಹಿತ್ಯ ಸಮ್ಮೇಳನ ನಡೆಯಲಿದ್ದು, ಈಗಾಗಲೇ ಮಂಡ್ಯದ ಸ್ಯಾಂಜೋ ಆಸ್ಪತ್ರೆಯ ಹಿಂಭಾಗದಲ್ಲಿ ಮೂರು ಬೃಹತ್ ವೇದಿಕೆಗಳನ್ನು ನಿರ್ಮಾಣ ಮಾಡಲಾಗಿದೆ. ಸುಮಾರು 70-80 ಎಕರೆ ಜಾಗದಲ್ಲಿ ಈ ಬಾರಿಯ ಸಮ್ಮೇಳನ ಜರುಗಲಿದೆ. ಸಮ್ಮೇಳನದ ಉದ್ಘಾಟನಾ ಸಮಾರಂಬಕ್ಕೂ ಮುನ್ನ 50ಕ್ಕೂ ಹೆಚ್ಚು ಕಲಾ ತಂಡಗಳಿಂದ ಮೆರವಣಿಗೆ ಇರಲಿದೆ. ಮಂಡ್ಯದ ವಿಶ್ವೇಶ್ವರಯ್ಯ ಪ್ರತಿಮೆಯಿಂದ ಪ್ರಧಾನ ವೇದಿಕೆಯವರೆಗೆ ಮೆರವಣಿಗೆ ಹಾದು ಹೋಗಲಿದ್ದು, ರಾಜಮಾತೆ ಪ್ರಮೋದಾ ದೇವಿ ಒಡೆಯರ್ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಕಲಾತಂಡಗಳ ಜೊತೆ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಸಮ್ಮೇಳನಾಧ್ಯಕ್ಷರ ರಥ ಸಾಗಲಿದೆ ಎಂದು ಅವರು ತಿಳಿಸಿದರು.

### ಪ್ರಮುಖ ಸಾಂಸ್ಕೃತಿಕ ಆಕರ್ಷಣೆ

**ನಾಳೆ ಖ್ಯಾತ ಸಂಗೀತ ನಿರ್ದೇಶಕ ಸಾಧು ಕೋಕಿಲ ಹಾಗೂ ಮೆಲೋಡಿ ಕಿಂಗ್ ರಾಜೇಶ್ ಕೃಷ್ಣನ್ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ಇರಲಿದೆ. ಡಿ.21ರಂದು ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ತಂಡದಿಂದ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ.**

### ಎಲ್ಲವೂ ಅಚ್ಚುಕಟ್ಟು ವ್ಯವಸ್ಥೆ

**ಸಾಹಿತ್ಯ ಸಮ್ಮೇಳನದಲ್ಲಿ ಒಟ್ಟು 31 ಗೋಷ್ಠಿಗಳನ್ನು ಆಯೋಜಿಸಲಾಗಿದೆ. 450 ಪುಸ್ತಕ ಮಳಿಗೆ, 350 ವಾಣಿಜ್ಯ ಮಳಿಗೆ, 55 ವಸ್ತು ಪ್ರದರ್ಶನ ಮಳಿಗೆಗಳು ಇರಲಿವೆ. ನೋಂದಾಯಿತ ಪ್ರತಿನಿಧಿಗಳಿಗೆ 40 ಕೌಂಟರ್, ಸಾರ್ವಜನಿಕರಿಗೆ 100 ಊಟದ ಕೌಂಟರ್ ವ್ಯವಸ್ಥೆಯಾಗಿದ್ದು, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ. 150ಕ್ಕೂ ಹೆಚ್ಚು ಶೌಚಾಲಯಗಳ ನಿರ್ಮಾಣವಾಗಿದೆ. ಜಿಲ್ಲೆಯ ಏಳು ತಾಲೂಕಿಗೂ 15 ಪ್ರತ್ಯೇಕ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದ್ದು, ಮೈಸೂರಿನಿಂದ ಹಾಗೂ ಬೆಂಗಳೂರಿನಿಂದ 30 ನಿಮಿಷಕ್ಕೆ ಒಂದು ಬಸ್ ವ್ಯವಸ್ಥೆ ಮಾಡಲಾಗಿದೆ. ವಾಹನಗಳ ದಟ್ಟಣೆ ನಿಭಾಯಿಸಲು ಮಾರ್ಗ ಬದಲಾಯಿಸಿದ್ದು, ಬೆಂಗಳೂರು ಮಾರ್ಗದಿಂದ ಎಕ್ಸ್‌ಪ್ರೆಸ್ ವೇನಲ್ಲಿ ಸಂಚರಿಸಿ ಚಿಕ್ಕ ಮಂಡ್ಯ ಹಾಗೂ ಇಂಡವಾಳು ನಿರ್ಗಮನದ ಮೂಲಕ ಮಂಡ್ಯಕ್ಕೆ ಪ್ರವೇಶವಾಗಬಹುದು. ಭದ್ರತೆಯ ದೃಷ್ಟಿಯಿಂದ ಸಮ್ಮೇಳನದಲ್ಲಿ 4 ಸಾವಿರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿದೆ.**

ಮೂರು ವೇದಿಕೆಗಳಿಗೆ ಮಂಡ್ಯ ಜಿಲ್ಲೆಗೆ ಕೊಡುಗೆ ನೀಡಿದ ಮಹನೀಯರ ಹೆಸರುಗಳನ್ನು ಇಡಲಾಗಿದೆ. 87 ಪುಸ್ತಕಗಳ ಬೆಲ್ಲದಾರತಿಯ ಮೂಲಕ ಸಾಹಿತ್ಯ ಸಮ್ಮೇಳನವು ಕಳೆ ಕಟ್ಟುತ್ತದೆ. ಇಂದು ಮಂಡ್ಯಕ್ಕೆ ಸಮ್ಮೇಳನ ಅಧ್ಯಕ್ಷರಾದ ಗೊ.ರು.ಚನ್ನಬಸಪ್ಪ ಆಗಮಿಸಲಿದ್ದು, ಜಿಲ್ಲಾಡಳಿತ ಅವರನ್ನು ಸ್ವಾಗತಿಸಲಿದೆ. ನಾಳೆ ನಡೆಯಲಿರುವ ಉದ್ಘಾಟನೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಸೇರಿ ಸಚಿವ ಸಂಪುಟದ ಹಲವು ಸಚಿವರು ಉಪಸ್ಥಿತರಿರುತ್ತಾರೆ ಎಂದರು.

---

### ಪುರಸಭಾ ಕಾರ್ಯಾಲಯ, ದೇವನಹಳ್ಳಿ

ದೇವನಹಳ್ಳಿ ಬೆಂಗಳೂರು ಗ್ರಾಮಾಂತರ ಜಿಲ್ಲೆ-562110
ದೂರವಾಣಿ : 080-27682221, Email : itstaff_ulb_devanahalli@yahoo.co.in
ನಂ.ದೇಪು/ಆ.ಶಾ/ಟೆಂಡರ್/ಸಿಆರ್/10/2024-25 ದಿನಾಂಕ: 17.12.2024

**ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ ಪೋರ್ಟಲ್) ಮೂಲಕ ಮಾತ್ರ)**

ದೇವನಹಳ್ಳಿ ಪುರಸಭಾ ವ್ಯಾಪ್ತಿಯ ವೈಜ್ಞಾನಿಕ ಘನತ್ಯಾಜ್ಯ ನಿರ್ವಹಣಾ ಘಟಕವನ್ನು ಸ್ಥಾಪಿಸಲು Environmental clearance ಪಡೆಯಲು consultancy ನೇಮಕ ಮಾಡಲು ಕರೆದಿರುವ ಟೆಂಡರ್ DMA/2024-25/SE4166 ಪ್ರಕಟಣೆಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ : **www.kppp.karnataka.gov.in** ಮೂಲಕ ಟೆಂಡರ್ ಪ್ರಕಟಿಸಲಿದ್ದು. ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ: (As per KPPP Portal) ಹೆಚ್ಚಿನ ವಿವರಗಳಿಗಾಗಿ ದೇವನಹಳ್ಳಿ ಪುರಸಭಾ ಆರೋಗ್ಯ ಶಾಖೆಯನ್ನು ಸಂಪರ್ಕಿಸುವುದು.

ಸಹಿ/- ಆಡಳಿತಾಧಿಕಾರಿಗಳು ಪುರಸಭೆ, ದೇವನಹಳ್ಳಿ
ಸಹಿ/- ಮುಖ್ಯಾಧಿಕಾರಿ ಪುರಸಭೆ, ದೇವನಹಳ್ಳಿ
ವಾಸಾಸಂಇ/ವಾಪ್ರ/ಎಸ್‌ಎಸ್‌ಸಿ/3830/2024-25

---

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ

### ಕಾರ್ಯಪಾಲಕರ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.

ಇ-ಮೇಲ್:zped.cta@gmail.com ದೂರವಾಣಿ ಸಂ:08194-222372
ಸಂ:ಪಂರಾಜ್‌ಇಂವಿ/ಚಿದು/ಇಇ/ತಾಂ.ಶಾ/ಟೆಂಡರ್/2024-25/2125 ದಿನಾಂಕ:17.12.2024

**ಟೆಂಡರ್ ಪ್ರಕಟಣೆ**

**(Through e-Procurement Portal Only )**

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ.ಜಿ-1, ಕೆ.ಜಿ-2, ಕೆ.ಜಿ-3, ನಿಬಂಧನೆಗೊಳಪಟ್ಟಂತೆ ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ವ್ಯಾಪ್ತಿಯ 2023-24ನೇ ಸಾಲಿನ ಮಹಾತ್ಮಗಾಂಧಿ ನರೇಗಾ ಯೋಜನೆಯಡಿಯಲ್ಲಿ ಅನುಮೋದನೆಯಾದ 10 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಗಳ ಅಂದಾಜು ಮೊತ್ತ ಕನಿಷ್ಠ ರೂ. 6.28 ಲಕ್ಷ ಗರಿಷ್ಠ ರೂ.88.93ಲಕ್ಷಗಳು ಒಟ್ಟು ರೂ: 206.17 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು ದಿನಾಂಕಗಳು ಈ ಕೆಳಕಂಡಂತಿವೆ:-
ಮಾಹಿತಿ ಪಡೆಯಲು ಅಂತಿಮ ದಿನಾಂಕ: 26.12.2024 ರ : ಸಮಯ 11.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 27.12.2024 ರ : ಸಮಯ 16.00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30.12.2024 ರ : ಸಮಯ 16.01
ಆರ್ಥಿಕ ಬಿಡ್ ತೆರೆಯುವ ದಿನಾಂಕ: 31.12.2024 ರ : ಸಮಯ 16.02
ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (support@eprochelpdesk.com) or KPPP Helpdesk Phone No: tel:+91-8046010000, +91-8068948777 ಸಂಪರ್ಕಿಸಲು ಅಥವಾ ಈ ಕಛೇರಿ ದೂರವಾಣಿ ಸಂಖ್ಯೆ: 08194-222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

RO.No.442:DIPR/CTA/KSMCA/2024-25
ಸಹಿ/- ಕಾರ್ಯಪಾಲಕ ಅಭಿಯಂತರರು ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ

---

### ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು- 570 005.
ಸಂಖ್ಯೆ:ಮೈನಪ್ರಾನಯೋಶಾ:ಭೂಉಬ:ನಯೋ-1/42/2024-25, ದಿನಾಂಕ: 10.12.2024

**ಸಾರ್ವಜನಿಕ ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ) ರನ್ವಯ **ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಸರ್ಕಾರಿ ಉತ್ತರಹಳ್ಳಿ ಗ್ರಾಮದ ಸ.ನಂ.89/16ರಲ್ಲಿ 01ಎಕರೆ 09ಗುಂಟೆ ವಿಸ್ತೀರ್ಣದ ಜಮೀನುಗಳನ್ನು** ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ **ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಎಸ್. ಎಂ. ಶಿವಪ್ರಕಾಶ್** ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ **ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ** ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ **ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು-570005** ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.




ಸಹಿ/- ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
DIPR/MYS/RO941/2024-25

---

### ಅಪ್ರಾಪ್ತರ ಅಪರಾಧ ಕೃತ್ಯ ಬೆಂಗಳೂರಿನಲ್ಲೇ ಹೆಚ್ಚು

**ಶಿವಮೊಗ್ಗ:** ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳಲ್ಲಿ ಮೊದಲ ಸ್ಥಾನದಲ್ಲಿ ಬೆಂಗಳೂರು ಇದ್ದರೆ, ಆ ನಂತರದ ಸ್ಥಾನ ಮೈಸೂರಿಗಿದ್ದು, ಮೂರನೇ ಸ್ಥಾನದಲ್ಲಿ ಶಿವಮೊಗ್ಗಕ್ಕಿದೆ. ಮೈಸೂರಿನ ಒಡನಾಡಿ ಸಂಸ್ಥೆಯು ಮಾಹಿತಿ ಹಕ್ಕಿನಡಿ ಸಲ್ಲಿಸಿದ್ದ ಅರ್ಜಿಗೆ ರಾಜ್ಯ ಅಪರಾಧ ದಾಖಲಾತಿ ವಿಭಾಗವು ಈ ಅಂಕಿ-ಅಂಶವನ್ನು ಒದಗಿಸಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಸಂಸ್ಥೆಯ ನಿರ್ದೇಶಕ ಎಂ.ಎಲ್. ಪರಶುರಾಂ, ಅಂಕಿ-ಅಂಶಗಳು ಮಕ್ಕಳು ಅಪರಾಧ ಜಗತ್ತಿಗೆ ತೆರೆದುಕೊಳ್ಳುತ್ತಿರುವುದನ್ನು ಎಚ್ಚರಿಕೆಯ ಗಂಟೆ ಎಂದೇ ಸರಕಾರ ಭಾವಿಸಬೇಕು ಎಂದೂ ಬೊಟ್ಟು ಮಾಡಿದ್ದಾರೆ. 'ಅಪರಾಧ ಜಗತ್ತಿನಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಪೋಷಕರ ಸಾಲ, ಟಿ.ವಿ ಮಾಧ್ಯಮಗಳು, ಮೊಬೈಲ್ ಫೋನ್ ದುರ್ಬಳಕೆಯು ಮಕ್ಕಳನ್ನು ಕೆಟ್ಟದ್ದಾಗಿ ಬೆಳೆಯಲು ಪ್ರೇರೇಪಿಸುತ್ತದೆ.' ಎಂದು ವರದಿಯ ವಿಶ್ಲೇಷಣೆ ಮಾಡಿದ್ದಾರೆ.

---

ಕರ್ನಾಟಕ ಸರ್ಕಾರ

### ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಜಮಖಂಡಿ ಪ್ರಾದೇಶಿಕ ಉಪವಿಭಾಗ, ಜಮಖಂಡಿ

OFFICE OF THE ASSISTANT CONSERVATOR OF FORESTS, JAMKHANDI TERRITORIAL SUB DIVISION, JAMKHANDI
ದೂರವಾಣಿ ಸಂಖ್ಯೆ: 9481992903 ಇ-ಮೇಲ್: acftjkd@gmail.com
ಸಂಖ್ಯೆ: ಸಅಸಂ/ಇ-ಟೆಂಡರ್/2024-25/461 ದಿನಾಂಕ: 16-12-2024

**ಟೆಂಡರ್ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2024-25ನೇ ಸಾಲಿಗೆ ಜಮಖಂಡಿ ಪ್ರಾದೇಶಿಕ ಉಪವಿಭಾಗ ವ್ಯಾಪ್ತಿಯ ವಿವಿಧ ವಲಯಗಳಲ್ಲಿ ಮುಂಗಡ ಕಾಮಗಾರಿ, ಸಸಿ ಬೆಳೆಸುವ ಮತ್ತು ಟ್ರೀ ಪಾರ್ಕ್ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.kppp.karnataka.gov.in ನಲ್ಲಿ ಪ್ರಕಟಿಸಿದಂತೆ, ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 30-12-2024 ರಂದು ಮಧ್ಯಾಹ್ನ 01-30 ಗಂಟೆ ಇರುತ್ತದೆ. ಸದರಿ ದಿನಾಂಕದಂದು ಯಾವುದೇ ಟೆಂಡರ್ ಸ್ವೀಕೃತ ಆಗದೇ ಇದ್ದಲ್ಲಿ ಮರು ಟೆಂಡರ್‌ಗೆ 7 ದಿನ ಕಾಲಾವಧಿಯನ್ನು ಸ್ವಯಂಚಾಲಿತ ವಿಸ್ತರಿಸಲಾಗುವುದು. ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಇ-ಟೆಂಡರ್‌ಗಾಗಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ರಜೆ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಜಮಖಂಡಿ ಉಪವಿಭಾಗ, ಜಮಖಂಡಿ
DIPR/BGK/RO-NO-390/KSMCA/2024-25

---

### ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂ: ಅಇಂ(ವಿ)/ಪ್ರ(ನಿ)/ರಾಮನಗರವೃತ್ತ/ಸಕಾನಿಇಂ(ಸಿ)/2024-25/2854-57 ದಿ: 16.12.2024

**ಸಂಕ್ಷಿಪ್ತ ಟೆಂಡರ್ ಪ್ರಕಟಣೆ (KPP ಪೋರ್ಟಲ್ ಮೂಲಕ ಮಾತ್ರ)**

ಕವಿಪ್ರನಿನಿಯು ಅರ್ಹ ಬಿಡ್ಡರ್‌ಗಳಿಂದ ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ನಿರ್ವಹಣೆ), ರಾಮನಗರ ವೃತ್ತದ ವ್ಯಾಪ್ತಿಗೆ ಬರುವ **12 ಸಿವಿಲ್ ಕಾಮಗಾರಿಗಳನ್ನು** ನಿರ್ವಹಿಸುವ ಸಲುವಾಗಿ, **ಕೆಪಿಪಿ ಪೋರ್ಟಲ್** ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ.

ಕಾಮಗಾರಿ ನಿರ್ವಹಿಸಲು ಅರ್ಹತಾ ಅಗತ್ಯತೆಗಳು, ಟೆಂಡರ್‌ಗಳಿಗೆ ಸಂಬಂಧಿಸಿದಂತೆ ಇತ್ಯಾದಿ ಹೆಚ್ಚಿನ ವಿವರಗಳನ್ನು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ಗೆ ಹೈಪರ್‌ಲಿಂಕ್ **"E Procurement KPTCL"** ನಲ್ಲಿ ಅಥವಾ **https://kppp.karnataka.gov.in**ಗೆ **ದಿನಾಂಕ: 23.12.2024ರ ನಂತರ** ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಇತರೆ ವಿವರಗಳನ್ನು ಕೆಳಸಹಿದಾರರ ಕಚೇರಿಯಿಂದ ಕಚೇರಿ ಸಮಯದಲ್ಲಿ ಪಡೆಯಬಹುದು.

ಸಹಿ/-ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ನಿ), ರಾಮನಗರ ವೃತ್ತ, ಕವಿಪ್ರನಿನಿ, ಆರ್.ಆರ್. ನಗರ ಮೆಟ್ರೋ ನಿಲ್ದಾಣದ ಎದುರು, ಪಂತರಪಾಳ್ಯ, ಮೈಸೂರು ರಸ್ತೆ, ಬೆಂಗಳೂರು-560 039, ದೂರವಾಣಿ: 080-29620155.

---

ಕರ್ನಾಟಕ ಸರ್ಕಾರ

### ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಶಿವಮೊಗ್ಗ

ಉಪನಿರ್ದೇಶಕರ ಕಛೇರಿ,
ಪೃಥ್ವಿ ಮ್ಯಾನ್ಷನ್, 100 ಅಡಿ ರಸ್ತೆ, ವಿನೋಬನಗರ, ಶಿವಮೊಗ್ಗ
ದೂರವಾಣಿ.ಸಂ:08182-249241 E-mail : dswsmg@gmail.com
ಸಂ: ಉನಿ/ಸಕಇಶಿ/ಪ.ವ್ಯ/ಸಿಆರ್-01(ಆಸಾಟೆಂ)/2024-25 ದಿ: 13.12.2024

**E-PROCUREMENT ಟೆಂಡರ್ ಪ್ರಕಟಣೆ**

2024-25ನೇ ಸಾಲಿಗೆ ಶಿವಮೊಗ್ಗ/ಭದ್ರಾವತಿ/ಶಿಕಾರಿಪುರ/ಸಾಗರ/ಸೊರಬ/ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿ ನಿಲಯ/ವಸತಿಶಾಲೆಗಳಿಗೆ ಆಹಾರ ಪದಾರ್ಥಗಳು, ವಿವಿದ ತರಕಾರಿ ಮತ್ತು ಇತರೆ ಸಂಕೀರ್ಣ ಸಾಮಗ್ರಿಗಳ (ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ, ಗ್ರೂಪ್-ಡಿ, ಗ್ರೂಪ್-ಇ, ಗ್ರೂಪ್-ಎಫ್, ಗ್ರೂಪ್-ಜಿ, ಗ್ರೂಪ್-ಹೆಚ್ ಮತ್ತು ಗ್ರೂಪ್-ಐ) ಪೂರೈಕೆಗಾಗಿ ಆಸಕ್ತಿಯುಳ್ಳ ಟೆಂಡರ್‌ದಾರರಿಂದ E-Procurement ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ಆದ್ದರಿಂದ ಆಸಕ್ತಿಯುಳ್ಳ ಟೆಂಡರ್‌ದಾರರು ಶಿವಮೊಗ್ಗ /ಭದ್ರಾವತಿ/ಶಿಕಾರಿಪುರ/ಸಾಗರ/ಸೊರಬ/ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿ ನಿಲಯ/ವಸತಿಶಾಲೆಗಳಿಗೆ ಆಹಾರ ಪದಾರ್ಥಗಳು, ವಿವಿಧ ತರಕಾರಿ ಮತ್ತು ಇತರೆ ಸಂಕೀರ್ಣ ಸಾಮಗ್ರಿಗಳ (ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ, ಗ್ರೂಪ್-ಡಿ, ಗ್ರೂಪ್-ಇ, ಗ್ರೂಪ್-ಎಸ್, ಗ್ರೂಪ್-ಜಿ, ಗ್ರೂಪ್-ಹಚ್ ಮತ್ತು ಗ್ರೂಪ್-ಐ) ಜಿಲ್ಲಾವಾರು ಪೂರೈಕೆಗಾಗಿ ದಿನಾಂಕ:13-01-2025ರ ಸಂಜೆ 5.30 ಗಂಟೆಯೊಳಗಾಗಿ ಟೆಂಡರ್ ಅರ್ಜಿಗಳನ್ನು Website:https://kppp.karnataka.gov.in ನಲ್ಲಿ ಅಪ್ಲೋಡ್ ಮಾಡುವುದು. ಹಾಗೂ ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಛೇರಿ, ಪೃಥ್ವಿ ಮ್ಯಾನ್ಷನ್, 100 ಅಡಿರಸ್ತೆ, ವಿನೋಬನಗರ, ಶಿವಮೊಗ್ಗ ಇಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಕಛೇರಿ ದೂರವಾಣಿ ಸಂಖ್ಯೆ: 08182-249241

ಸಹಿ/- ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಶಿವಮೊಗ್ಗ ಜಿಲ್ಲೆ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24-25/105/12/1250

---

# ರಷ್ಯಾದಲ್ಲಿ ಕ್ಯಾನ್ಸರ್‌ಗೆ ರಾಮಬಾಣ ಲಸಿಕೆ ಅಭಿವೃದ್ಧಿ

← ಮೊದಲಪುಟದಿಂದ

ಈ ಮಾಹಿತಿಯನ್ನು ರಷ್ಯಾದ ಆರೋಗ್ಯ ಸಚಿವಾಲಯದ ರೇಡಿಯಾಲಜಿ ವೈದ್ಯಕೀಯ ಸಂಶೋಧನಾ ಕೇಂದ್ರದ ಮಹಾ ನಿರ್ದೇಶಕ ಆಂಡ್ರೆ ಕಪ್ರಿನ್ ಡಿ.15ರಂದು 'ರೇಡಿಯೊ ರೊಸ್ಸಿಯ'ಗೆ ನೀಡಿದ್ದಾರೆ.

ಪ್ರಸ್ತುತ ಕ್ಯಾನ್ಸರ್ ಚಿಕಿತ್ಸಕ ಲಸಿಕೆ ಅಭಿವೃದ್ಧಿ ಪ್ರಕ್ರಿಯೆ ಬಹಳ ದೀರ್ಘವಾಗಿದೆ. ಕೃತಕ ಬುದ್ಧಿಮತ್ತೆ(ಎಐ) ಬಳಸಿದಲ್ಲಿ ಲಸಿಕೆ ಅಭಿವೃದ್ಧಿ ಪ್ರಕ್ರಿಯೆ 1 ಗಂಟೆಗಿಂತ ಕಡಿಮೆ ಸಮಯದಲ್ಲಿ ಆಗಲಿದೆ ಎಂದು 'ನ್ಯಾಷನಲ್ ರಿಸರ್ಚ್ ಸೆಂಟರ್ ಫಾರ್ ಎಪಿಡೆಮಿಯಾಲಜಿ ಮತ್ತು ಮೈಕ್ರೋಬಯಾಲಜಿ' ಸಂಸ್ಥೆಯ ನಿರ್ದೇಶಕ ಅಲೆಕ್ಸಾಂಡರ್ ಗಿಂಟ್ಸಂಬರ್ಗ್ ಹೇಳಿದ್ದಾರೆ.

ಇದೇ ಮಾರ್ಗದಲ್ಲಿ ವ್ಯಕ್ತಿ ಕೇಂದ್ರಿತ (ರೋಗಿಗೆ ಇರುವ ಬೇರೆ ಬೇರೆ ಕ್ಯಾನ್ಸರ್ ಚಿಕಿತ್ಸೆಗೆ ಕೇಂದ್ರೀಕೃತವಾದಂತೆ) ಅಗತ್ಯಗಳ ಆಧರಿಸಿದ ಕ್ಯಾನ್ಸರ್ ಲಸಿಕೆ ಅಭಿವೃದ್ಧಿಗೆ ಅಗತ್ಯವಾದ ಕಂಪ್ಯೂಟಿಂಗ್ ಅವಧಿಯನ್ನು ಕೃತಕ ಬುದ್ಧಿಮತ್ತೆ(ಎಐ) ಬಳಸಿ ತಗ್ಗಿಸಬಹುದಾಗಿದೆ ಎಂದೂ ಗಿಂಟ್ಸಂಬರ್ಗ್ ಅಭಿಪ್ರಾಯಪಟ್ಟಿದ್ದಾರೆ.

**ಹಲವು ದೇಶಗಳಲ್ಲಿ ಸಂಶೋಧನೆ:** ಸದ್ಯ ರಷ್ಯಾ ಪೂರ್ಣ ಪ್ರಮಾಣದ ಕ್ಯಾನ್ಸರ್ ಚಿಕಿತ್ಸಕ ಲಸಿಕೆ ಅಭಿವೃದ್ಧಿಪಡಿಸಿದೆ. ಅಮೆರಿಕ, ಇಸ್ರೇಲ್, ಫ್ರಾನ್ಸ್ ಸೇರಿದಂತೆ ಹಲವು ದೇಶಗಳಲ್ಲೂ ಕ್ಯಾನ್ಸರ್ ಚಿಕಿತ್ಸಕ ಲಸಿಕೆ ಅಭಿವೃದ್ಧಿಗೆ ಸಂಶೋಧನೆ ನಡೆಯುತ್ತಿದೆ. ಮಾಡೆರ್ನಾ ಅಂಡ್ ಮೆರ್ಕ್, ಬಯೋಎನ್‌ಟೆಕ್, ಕ್ಯೂರ್ ವ್ಯಾಕ್ ಮೊದಲಾದ ಫಾರ್ಮಾ ಕಂಪನಿಗಳು ಎಂಆರ್‌ಎನ್‌ಎ ತತ್ವ ಆಧರಿಸಿಯೇ ಕ್ಯಾನ್ಸರ್ ಚಿಕಿತ್ಸೆಯ ಲಸಿಕೆ ಅಭಿವೃದ್ಧಿಯಲ್ಲಿ ನಿರತವಾಗಿವೆ.

**ವ್ಯಕ್ತಿಗತ ಲಸಿಕೆಗೆ 2 ತಿಂಗಳು:** ಈಗ ರಷ್ಯಾ ಅಭಿವೃದ್ಧಿಪಡಿಸಿರುವ ಲಸಿಕೆಯು ಬೇರೆ ಬೇರೆ ಬಗೆಯ ಕ್ಯಾನ್ಸರ್ ಕೋಶಗಳನ್ನೂ ನಾಶಪಡಿಸಬಲ್ಲದಾಗಿದೆ. ಪ್ರತಿ ರೋಗಿಯ ದೇಹದಲ್ಲಿನ ಕ್ಯಾನ್ಸರ್ ಗಡ್ಡೆ, ಕೋಶಗಳಿಗೆ ತಕ್ಕಂತೆ ರೋಗ ನಿರೋಧಕ ಕೋಶಗಳು ರೋಗಿಯ ದೇಹದಲ್ಲೇ ಅಭಿವೃದ್ಧಿ ಹೊಂದಿ ಕ್ಯಾನ್ಸರ್ ನಾಶಕ್ಕೆ ನೆರವಾಗಲಿದೆ. ಆದರೆ, ವ್ಯಕ್ತಿಗತವಾಗಿ ಭಿನ್ನವಾದ ಪ್ರತಿ ಲಸಿಕೆಯ ತಯಾರಿಕೆಯೂ ಹೆಚ್ಚು ಸಮಯ(2 ತಿಂಗಳು) ತೆಗೆದುಕೊಳ್ಳುತ್ತದೆ ಎಂದು ವರದಿ ವಿವರಿಸಿದೆ.

### ಲಸಿಕೆ ಹೇಗೆ ಕೆಲಸ ಮಾಡುತ್ತದೆ?

**ಸಾಮಾನ್ಯವಾಗಿ ಚಿಕಿತ್ಸಕ ಲಸಿಕೆಗಳ ರೋಗಿಗಳ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ವೇಗವಾಗಿ ವೃದ್ಧಿಗೊಳಿಸುವ ಕೆಲಸ ಮಾಡುತ್ತವೆ. ಆದರೆ, ಕ್ಯಾನ್ಸರ್ ಚಿಕಿತ್ಸೆಗೆಂದು ರಷ್ಯಾ ಅಭಿವೃದ್ಧಿ ಪಡಿಸಿರುವ 'ಎಂಆರ್‌ಎನ್‌ಎ' ಆಧಾರಿತ ಲಸಿಕೆಯು ನಿರ್ದಿಷ್ಟ ಕ್ಯಾನ್ಸರ್ ಪ್ರೋಟಿನ್(ಆಂಟಿಜೆನ್)ಗಳನ್ನು ಉತ್ಪತ್ತಿ ಮಾಡುವಂತೆ ದೇಹದ ಜೀವಕೋಶಗಳನ್ನು ಉದ್ದೀಪನಗೊಳಿಸುತ್ತದೆ. ಆಗ ದೇಹದಲ್ಲಿನ ರೋಗ ನಿರೋಧಕ ಶಕ್ತಿಯು ಕ್ಯಾನ್ಸರ್ ಪ್ರೋಟಿನ್(ಆಂಟಿಜೆನ್)ಗಳನ್ನು ಗುರುತಿಸಿ ಅವುಗಳ ನಾಶಕ್ಕೆ ಪ್ರೇರಣೆ ನೀಡುತ್ತದೆ. ಇಂತಹುದೇ ಬಗೆಯ ಆಂಟಿಜೆನ್‌ಗಳು ಕ್ಯಾನ್ಸರ್ ಗಡ್ಡೆಗಳ ಮೇಲೆಯೂ ಇರುವುದರಿಂದ ರೋಗ ನಿರೋಧಕ ಜೀವಕಣಗಳು ಕ್ಯಾನ್ಸರ್ ಗಡ್ಡೆಯ ಮೇಲೆಯೂ ದಾಳಿ ಮಾಡುತ್ತವೆ. ಆ ಮೂಲಕ ಕ್ಯಾನ್ಸರ್ ಗಡ್ಡೆಯ ನಿರ್ನಾಮಕ್ಕೆ ಕಾರಣವಾಗುತ್ತವೆ ಎಂದು ಲಸಿಕೆ ಕುರಿತ ವೈದ್ಯಕೀಯ ವರದಿಯಲ್ಲಿ ತಿಳಿಸಲಾಗಿದೆ. ಕೋವಿಡ್-19 ಚಿಕಿತ್ಸೆಗಾಗಿ ಅಭಿವೃದ್ಧಿಪಡಿಸಿದ್ದ ಎಂಆರ್‌ಎನ್‌ಎ ಆಧಾರಿತ ಲಸಿಕೆಯು ಕರೋನಾ ಪ್ರೋಟೀನ್ ವೈರಸ್ ಒಂದನ್ನೇ ನಾಶಪಡಿಸಲು ಶಕ್ತವಾಗಿತ್ತು. ಆದರೆ, ಕ್ಯಾನ್ಸರ್ ಚಿಕಿತ್ಸಕ ಎಂಆರ್‌ಎನ್‌ಎ ಲಸಿಕೆಯು ಬಹುಬಗೆಯ ಆಂಟಿಜೆನ್‌ಗಳನ್ನು ಪತ್ತೆ ಮಾಡಿ ದಾಳಿ ಮಾಡುತ್ತದೆ. ಅದೇ ರೀತಿ ರೋಗಕಾರಕ ಗಡ್ಡೆಗಳ ಮೇಲೆ ಬೆಳೆಯುವ ಹಲವು ಬಗೆಯ ಕ್ಯಾನ್ಸರ್ ಕೋಶಗಳನ್ನೂ ಗುರುತಿಸಿ ನಾಶಪಡಿಸಬಲ್ಲದಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.**

---

ಕರ್ನಾಟಕ ಸರಕಾರ

### ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ - 581 301

DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301
ದೂರವಾಣಿ: 08382 221170 Email: ka.uttarakannada.dudc@gmail.com
No: UK/DUDC/AmrutNagarothanaPhase-4/CR/2024-25 Dated: 17-12-2024

**ಟೆಂಡರು ಪ್ರಕಟಣೆ**

ಕೆಟಿಪಿಪಿ ಕಾಯ್ದೆ 1999 ನಿಯಮ 2000 ರಂತೆ, ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕಾರವಾರರವರು ಅಮೃತ ನಗರೋತ್ಥಾನ ಹಂತ - 4 ಯೋಜನೆಯಡಿ ಈ ಕೆಳಗೆ ವಿವರಿಸಿದ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **KPWD** ಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರು ಎಲ್ಲಾ ದಾಖಲಾತಿಗಳೊಂದಿಗೆ **KPPP** ಪೋರ್ಟಲ್ **(http:/kppp.karnataka.gov.in)** ಮೂಲಕ ತಮ್ಮ ದರವನ್ನು ಸಲ್ಲಿಸಬಹುದಾಗಿದೆ. ಟೆಂಡರ್ ವಿವರ ಹಾಗೂ ವೇಳಾ ಪಟ್ಟಿ ಈ ಕೆಳಗಿನಂತಿರುತ್ತದೆ.

ಟೆಂಡರ್‌ನ್ನು ಸಲ್ಲಿಸಲು ಪ್ರಾರಂಭದ **ದಿನಾಂಕ: 17-12-2024 ಸಮಯ 16.00 ಗಂಟೆ** (1) ಗುತ್ತಿಗೆದಾರರೊಂದಿಗೆ ಪೂರ್ವಭಾವಿ ಸಭೆ/ಸ್ಪಷ್ಟೀಕರಣ **ದಿನಾಂಕ: 24-12-2024 ಸಮಯ 11.30 ಗಂಟೆ** ಜಿಲ್ಲಾ ನಗರಾಭಿವೃದ್ಧಿ ಕೋಶ ಕಚೇರಿ ಮಾಡುವುದು (2) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 02-01-2025 ಸಮಯ 17.00 ಗಂಟೆ** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 03-01-2025 ಸಮಯ 17.30 ಗಂಟೆ** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 04-01-2025 ಸಮಯ 11.00 ಗಂಟೆ**

| ನಗರ ಸ್ಥಳೀಯ ಸಂಸ್ಥೆ ಹೆಸರು | ಇಂಡೆಂಟ್ ನಂಬರ್ |
|---|---|
| ನಗರಸಭೆ ಕಾರವಾರ | DMA/2024-25/ WS/ WORK_INDENT 31751 |
| | DMA/2024-25/ BD/ WORK_INDENT 31736 |
| ನಗರಸಭೆ ಶಿರಸಿ | DMA/2024-25/ OW/ WORK_INDENT 30944/CALL-2 |
| ಪುರಸಭೆ ಅಂಕೋಲಾ | DMA/2024-25/ RD/ WORK_INDENT 18785/CALL-2 |

ಟೆಂಡರ್ ಕುರಿತು ಹೆಚ್ಚಿನ ಮಾಹಿತಿಗಾಗಿ **http:/kppp.karnataka.gov.in. & http://www.uttarakannadadudc.mrc.gov.in/** ಅಥವಾ ಈ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ
DIPR/ADK/MCA/635/24-25 dt. 17.12.2024

---

ಕರ್ನಾಟಕ ಸರಕಾರ
(ಲೋಕೋಪಯೋಗಿ, ಇಲಾಖೆ )

### ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆಃ ಕಲಬುರಗಿ.

ಸಂ:ಕಾನಿಇಂ/ಲೋಇ./ಸೇವಿ/ತಾಶಾ-1/2024-25/2366 ದಿನಾಂಕ: 17-12-2024

**:: ಅಲ್ಪಾವಧಿ ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::**

1) ಕಾಮಗಾರಿಯ ವಿವರ : 1. ಸೇಡಂ ತಾಲೂಕಿನ 07 ಕೆ.ಕೆ.ಆರ್.ಡಿ.ಬಿ ಯೋಜನೆ ಅಡಿಯಲ್ಲಿನ ಕಾಮಗಾರಿ ಇಂಡೆಂಟ್ ಸಂ.: 17028 (ಎಸ್.ಸಿ), 17058, 17064, 17065 (ಎಸ್.ಟಿ), 17066, 17012(ಎಸ್.ಸಿ), 17029, 2. ಚಿತ್ತಾಪೂರ ತಾಲೂಕಿನ 02 ಕೆ,ಕೆ,ಆರ್.ಡಿ.ಬಿ ಯೋಜನೆ ಅಡಿಯಲ್ಲಿನ ಕಾಮಗಾರಿ ಇಂಡೆಂಟ್ ಸಂ : 17167, 16748, 2) ಲೆಕ್ಕ ಶೀರ್ಷಿಕೆ: 2024-25ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಯೋಜನೆ ಅಡಿಯಲ್ಲಿನ ಕಾಮಗಾರಿಗಳು, 3) ಟೆಂಡರಿಗಿಟ್ಟ ಮೊತ್ತ: **ಕನಿಷ್ಠ ರೂ. 15.00 ಲಕ್ಷಗಳು, ಗರಿಷ್ಠ ರೂ. 367.80 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ & ಮೇಲ್ಪಟ್ಟು, 5) ಪೂರ್ವಭಾವಿ ಸಭೆ ದಿನಾಂಕ : **23-12-2024 ಬೆಳಿಗ್ಗೆ 11:30 ಗಂಟೆವರೆಗೆ,** 6) ಟೆಂಡರ್ ಸ್ಪಷ್ಟೀಕರಣ ಪಡೆಯುವ ಹಾಗೂ ಸಲ್ಲಿಸುವ ಅಂತಿಮ ದಿನಾಂಕ: **24-12-2024 ಸಾಯಂಕಾಲ 17:30 ಗಂಟೆಯವರೆಗೆ.** 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **26-12-2024 ರ ಸಾಯಂಕಾಲ 16:00 ಗಂಟೆಯವರೆಗೆ.** 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **30-12-2024 ರ ಸಾಯಂಕಾಲ 16:30 ಗಂಟೆಯವರೆಗೆ.** 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **31-12-2024 ರ ಸಾಯಂಕಾಲ 16:30 ಗಂಟೆಯವರೆಗೆ.** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ : ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.

**ಟಿಪ್ಪಣಿ :** 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮುಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರ್ ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ
ವಾ.ಸಾ.ಸಂ.ಇ/ಕಲಬುರಗಿ/736/ಕೆ.ಎಸ್.ಎಂ.ಸಿ.&ಎ/2024-25

---

### ಮಂಡ್ಯ ಸಾಹಿತ್ಯ ತೇರಿಗೆ ಚಳಿ, ಮಳೆ ಭೀತಿ

← ಮೊದಲಪುಟದಿಂದ

**ಚುಮು ಚುಮು ಚಳಿ:** ರಾಜ್ಯದಲ್ಲಿ ಚಳಿ ಮತ್ತು ಮಂಜಿನ ವಾತಾವರಣ ಜೋರಾಗಿದ್ದು, ಉತ್ತರ ಒಳನಾಡಿನಲ್ಲಿ ಶೀತ ಅಲೆಗಳ ಅಬ್ಬರ ಹೆಚ್ಚಾಗಿರುವ ಹಿನ್ನೆಲೆ ಮೂರು ದಿನಗಳ ಕಾಲ ಮೂರು ಜಿಲ್ಲೆಗಳಿಗೆ ತೀವ್ರ ಶೀತಗಾಳಿ ಅಲರ್ಟ್ ಘೋಷಿಸಲಾಗಿದೆ.

ಬುಧವಾರದಿಂದ ಮೂರು ದಿನಗಳ ಕಾಲ ಬೀದರ್, ಕಲಬುರಗಿ,ವಿಜಯಪುರಕ್ಕೆ ತೀವ್ರ ಶೀತಗಾಳಿ ಯೆಲ್ಲೋ ಅಲರ್ಟ್ ನೀಡಲಾಗಿದ್ದು, ಉತ್ತರ ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ತಾಪಮಾನವು ಸಾಮಾನ್ಯಕ್ಕಿಂತ 2 ರಿಂದ 4 ಡಿಗ್ರಿ ಕಡಿಮೆ ಇರಲಿದೆ. ಇನ್ನು ಒಳನಾಡಿನ ಒಂದೆರಡು ಜಿಲ್ಲೆಗಳಲ್ಲಿ ದಟ್ಟ ಮಂಜು ಕವಿಯುವ ಸಾಧ್ಯತೆ ಕೂಡ ಹೆಚ್ಚಿದೆ ಎಂದು ಮಾಹಿತಿ ನೀಡಿದೆ.

ಬೆಂಗಳೂರು ನಗರ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಮುಂದಿನ 48 ಗಂಟೆಗಳ ಕಾಲ ಭಾಗಶಃ ಮೋಡ ಕವಿದ ಆಕಾಶ ಇರಲಿದ್ದು, ಕೆಲವು ಕಡೆಗಳಲ್ಲಿ ಬೆಳಗಿನ ಜಾವ ದಟ್ಟ ಮಂಜು ಇರುವ ಸಾಧ್ಯತೆ ಇದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನ ಕ್ರಮವಾಗಿ 25 ಮತ್ತು 15 ಡಿಗ್ರಿ ದಾಖಲಾಗಲಿದೆ ಎಂದು ಹೇಳಿದೆ.

ಮುಖ್ಯವಾಗಿ ಮುಂದಿನ 3 ದಿನಗಳ ಕಾಲ ಉತ್ತರ ಒಳನಾಡಿನ ಬೀದರ್, ಬಿಜಾಪುರ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಶೀತ ಅಲೆಗಳು ಬೀಸುವ ಪರಿಸ್ಥಿತಿ ಇದೆ. ಅಲ್ಲಿ 2 ರಿಂದ 4 ಡಿಗ್ರಿ ಉಷ್ಣಾಂಶ ಕಡಿಮೆಯಾಗಲಿದೆ. ಉತ್ತರ ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನ ಇಳಿಕೆಯಾಗಲಿದೆ. ಕರಾವಳಿ ಜಿಲ್ಲೆಗಳ ಕನಿಷ್ಠ ತಾಪಮಾನದಲ್ಲಿ ದೊಡ್ಡ ಬದಲಾವಣೆ ಕಂಡು ಬರುವುದಿಲ್ಲ. ಮಂಗಳವಾರದಿಂದ ಅತಿ ಕಡಿಮೆ ಉಷ್ಣಾಂಶ 8 ಡಿಗ್ರಿ, ಬೀದರ್ ಜಿಲ್ಲೆಯಲ್ಲಿ ದಾಖಲಾಗಿದೆ ಎಂದು ಹೇಳಿದೆ.

## ಸಮಾಚಾರ ಸಣ್ಣದಲ್ಲ

### ಅಧಿಕಾರಿಗಳ ಎರವಲು ಸೇವೆ ರದ್ದು

**ಬೆಂಗಳೂರು:** ಆಹಾರ ಸುರಕ್ಷತಾ ಅಧಿಕಾರದಲ್ಲಿ ಎರವಲು ಸೇವೆ ಮೇಲೆ ಕಾರ್ಯನಿರ್ವಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ನಿಯೋಜನೆ (ಎರವಲು ಸೇವೆ) ರದ್ದುಪಡಿಸಿ ವಾಪಸ್ ಆರೋಗ್ಯ ಇಲಾಖೆಗೆ ವಾಪಸ್ ಪಡೆಯಲು ಸರಕಾರ ನಿರ್ಧರಿಸಿದೆ. ಆಹಾರ ಸುರಕ್ಷತಾ ಪ್ರಾಧಿಕಾರದಲ್ಲಿ ಅಧಿಕಾರಿಗಳ ನೇಮಕ ಮತ್ತು ಅಕ್ರಮಗಳ ಬಗ್ಗೆ ವಿಶ್ವವಾಣಿ ಡಿ.9ರಂದು ವಿಶೇಷ ವರದಿ ಪ್ರಕಟಿಸಿತ್ತು. ಇದಕ್ಕೆ ಸ್ಪಂದಿಸಿರುವ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರು ವರದಿಯಲ್ಲಿ ಪ್ರಕಟವಾಗಿರುವ ಅಂಶ ಗಳನ್ನು ಕುರಿತು ಆರೋಗ್ಯ ಇಲಾಖೆ ಉನ್ನತ ಅಧಿ ಕಾರಿಗಳ ಸಭೆ ನಡೆಸಿ ವಿಸ್ತೃತವಾಗಿ ಚರ್ಚೆ ನಡೆಸಿದರು. ಹಾಗೆಯೇ ಹಿರಿಯ ಅಧಿಕಾರಿಗಳ ಸ್ಥಾನದಲ್ಲಿ ಕಿರಿಯ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ನೀಡುವಂತೆ ಇಲಾಖೆ ಆಯುಕ್ತರಿಗೆ ಸೂಚಿಸಿದರು.

### ಅಮೆರಿಕ: ವಿಮಾನ ಉರುಳಿ ಇಬ್ಬರ ಸಾವು

**ಹೊನೊಲುಲು:** ಅಮೆರಿಕದ ಹವಾಯಿಯಲ್ಲಿ ಸೆಸ್ನಾ ಲಘು ಪ್ರಯಾಣಿಕ ವಿಮಾನ ಬುಧವಾರ ಪತನವಾಗಿದ್ದು, ಇಬ್ಬರು ಸಾವಿಗೀಡಾಗಿದ್ದಾರೆ. ಅಮೆರಿಕದ ಹವಾಯಿಯಲ್ಲಿರುವ ಹೊನೊಲುಲು ವಿಮಾನ ನಿಲ್ದಾಣದ ಬಳಿಯ ಕೈಗಾರಿಕಾ ಪ್ರದೇಶದಲ್ಲಿ ಸಂಚರಿಸುತ್ತಿದ್ದ ಸೆಸ್ನಾ 208 ಪ್ರಯಾಣಿಕ ವಿಮಾನ ನಿಯಂತ್ರಣ ಕಳೆದುಕೊಂಡಿತು. ಬಳಿಕ ವಿಮಾನ ನಿಲ್ದಾಣದ ಸಮೀಪದ ಕಟ್ಟಡಕ್ಕೆ ಢಿಕ್ಕಿ ಹೊಡೆಯಿತು. ನಂತರ ವಿಮಾನ ನಿಲ್ದಾಣದ ಆವರಣದಲ್ಲೇ ನೆಲಕ್ಕೆ ಅಪ್ಪಳಿಸಿತು. ತಕ್ಷಣ ಬೆಂಕಿ ಹೊತ್ತಿಕೊಂಡಿದ್ದು, ಸುಟ್ಟು ಹೋಗಿದೆ. ಕಮಲಾ ಏರ್ ಕಂಪನಿಯ ವಿಮಾನ ತರಬೇತಿ ಹಾರಾಟ ನಡೆಸಿದ್ದಾಗ ದಿಢೀರ್ ವೇಗ ಹೆಚ್ಚಳವಾಗಿದೆ. ಎಡಕ್ಕೆ ತಿರುಗಿ ಖಾಲಿ ಕಟ್ಟಡಕ್ಕೆ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ತರಬೇತಿ ಪೈಲಟ್ ಮತ್ತು ತರಬೇತುದಾರ ಸಾವನ್ನಪ್ಪಿದ್ದಾರೆ. ಮೃತರನ್ನು ಪ್ರೆಸ್ಟನ್ ಕಲುಹಿವಾ ಮತ್ತು 22 ವರ್ಷದ ತರಬೇತುದಾರ ಪೈಲಟ್ ಹಿರಾಮ್ ಡಿಫ್ರೈಸ್ ಎಂದು ಗುರುತಿಸಲಾಗಿದೆ. ಫೆಡರಲ್ ವಿಮಾನಯಾನ ಆಡಳಿತ ಅಪಘಾತ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದೆ.

### ಎಚ್-1ಬಿ ವೀಸಾ ನಿಯಮ ವಿನಾಯ್ತಿ

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಜೊ ಬೈಡನ್ ಅವರ ಆಡಳಿತ ಕೊನೆಗೊಳ್ಳುವುದಕ್ಕೆ ಒಂದು ತಿಂಗಳಷ್ಟೆ ಬಾಕಿ ಇದೆ. ಈ ಮಧ್ಯೆ, ವಿದೇಶಿ ಉದ್ಯೋಗಾಕಾಂಕ್ಷಿಗಳು ಮತ್ತು ದೇಶದ ಐಟಿ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಎಚ್-1ಬಿ ವೀಸಾಗೆ ಸಂಬಂಧಿಸಿದ ನಿಯಮಗಳನ್ನು ಸಡಿಲಗೊಳಿಸಿ ಆದೇಶ ಹೊರಡಿಸಿದೆ. ವಿಶೇಷ ಕೌಶಲವಿರುವ ವಿದೇಶಿ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ಅಮೆರಿಕನ್ ಕಂಪನಿಗಳಿಗೆ ಸುಲಭ ಮಾಡಿಕೊಡುತ್ತದೆ. ಎಫ್-1 ವಿದ್ಯಾರ್ಥಿ ವೀಸಾ ಪಡೆದವರೂ ಎಚ್-1ಬಿ ವೀಸಾಗಳಿಗೆ ಸುಗಮ ಪರಿವರ್ತನೆಗೆ ಅನುಕೂಲವಾಗುತ್ತದೆ. ಭಾರತದ ತಾಂತ್ರಿಕ ವೃತ್ತಿಪರರಲ್ಲಿ ಸಾವಿರಾರು ಉದ್ಯೋಗಾಕಾಂಕ್ಷಿಗಳಿಗೆ ಬೈಡನ್ ಸರಕಾರದ ಈ ಕ್ರಮದಿಂದ ಪ್ರಯೋಜನವಾಗಲಿದೆ.

### ದಾವತ್ ಥಾಯ್ ರೈಸ್ ಬಿಡುಗಡೆ

**ಬೆಂಗಳೂರು:** ಖ್ಯಾತ ಆಹಾರ ಉತ್ಪಾದನಾ ಕಂಪನಿ ಎಲ್ಟಿ ಫುಡ್ಸ್‌ನ ದಾವತ್ ರೈಸ್ ಇತ್ತೀಚೆಗೆ ಜಾಸ್ಮಿನ್ ಥೈ ಅಕ್ಕಿಯನ್ನು ಭಾರತದಲ್ಲಿ ಬಿಡುಗಡೆ ಮಾಡಿದೆ. ಈ ಅಕ್ಕಿಯನ್ನು ಥಾಯ್ಲೆಂಡ್‌ನಿಂದ ಆಮದು ಮಾಡಿಕೊಳ್ಳಲಾಗಿದ್ದು ಕಂಪನಿಯ ಉತ್ಪನ್ನ ಶ್ರೇಣಿಯನ್ನು ಹೆಚ್ಚಿಸುವುದರ ಜತೆಗೆ ಭಾರತೀಯರಿಗೆ ಹೊಸ ರುಚಿಯನ್ನು ನೀಡುವ ಉದ್ದೇಶವನ್ನು ಹೊಂದಿದೆ. ವಿಭಿನ್ನ ಪರಿಮಳವನ್ನು ಹೊಂದಿರುವ ಈ ಅಕ್ಕಿ ದೇಶಾದ್ಯಂತ ಎಲ್ಲ ಪ್ರಮುಖ ಇ ಕಾಮರ್ಸ್ ವೇದಿಕೆಗಳಾದ, ಅಮೆಜಾನ್, ಬ್ಲಿಂಕಿಟ್, ಜೆಪ್ಟೊ, ಬಿಗ್ ಬಾಸ್ಕೆಟ್, ಸ್ವಿಗಿ ಇನ್ಸ್ಟಾಮಾರ್ಟ್ ಮತ್ತು ಆಯ್ದ ಅಂಗಡಿಗಳಲ್ಲಿ ಲಭ್ಯವಿರಲಿವೆ ಎಂದು ಎಲ್ಟಿ ಫುಡ್ ಲಿಮಿಟೆಡ್ ಸಿಇಒ ರಿತೇಶ್ ಓರಾ ತಿಳಿಸಿದ್ದಾರೆ.

### ಮಾರ್ಚ್ ಅಂತ್ಯಕ್ಕೆ ಸುನಿತಾ ಭೂಮಿಗೆ

**ಕೇಪ್ ಕೆನವೆರಾಲ್ (ಅಮೆರಿಕ):** ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ಐಎಸ್ಎಸ್) ಸಿಲುಕಿರುವ ನಾಸಾದ ಗಗನಯಾನಿಗಳಾದ ಸುನಿತಾ ವಿಲಿಯಮ್ಸ್ ಹಾಗೂ ಬುಚ್ ವಿಲ್ಮೋರ್ ಭೂಮಿಗೆ ಮರಳುವುದು ಮತ್ತಷ್ಟು ವಿಳಂಬವಾಗಲಿದೆ. ಈ ಇಬ್ಬರು ಗಗನಯಾನಿಗಳು ಭೂಮಿಗೆ ಮರಳುವುದು ಇನ್ನಷ್ಟು ತಡವಾಗಲಿದೆ. ಮಾರ್ಚ್ ಅಂತ್ಯಕ್ಕೆ ವಾಪಸಾಗಬಹುದು ಎಂದು ನಾಸಾ ಮಂಗಳವಾರ ಘೋಷಿಸಿದೆ. ಬೋಯಿಂಗ್ ಸಂಸ್ಥೆಯ ಸ್ಟಾರ್ ಲೈನರ್ ಗಗನನೌಕೆಯಲ್ಲಿ ಸುನಿತಾ ಹಾಗೂ ವಿಲ್ಮೋರ್ ಅವರು ಜೂನ್ 5ರಂದು ಐಎಸ್ಎಸ್ ನತ್ತ ಪ್ರಯಾಣ ಬೆಳೆಸಿದ್ದರು. ಗಗನನೌಕೆಯಲ್ಲಿ ಕಂಡುಬಂದ ತಾಂತ್ರಿಕ ದೋಷದಿಂದಾಗಿ ಭೂಮಿಗೆ ಮರಳಲು ಸಾಧ್ಯವಾಗದೇ, ಅವರು ಅಲ್ಲಿಯೇ ಸಿಲುಕಿದ್ದಾರೆ. ಇಬ್ಬರು ಗಗನಯಾನಿಗಳನ್ನು ಹೊತ್ತ ಗಗನನೌಕೆಯನ್ನು ಐಎಸ್ಎಸ್‌ಗೆ ಕಳುಹಿಸುವುದು. ಹೊಸ ಗಗನಯಾನಿಗಳು ಐಎಸ್ಎಸ್‌ನಲ್ಲಿ ಇಳಿದ ನಂತರ, ಸುನಿತಾ ಮತ್ತು ವಿಲ್ಮೋರ್ ಅವರನ್ನು ತ್ವರಿತವಾಗಿ ಭೂಮಿಗೆ ಕರೆತರುವ ಪರ್ಯಾಯ ವ್ಯವಸ್ಥೆ ಕುರಿತು ನಾಸಾ ಸಿದ್ಧತೆ ನಡೆಸಿತ್ತು. ಈಗ, ಹೊಸ ಗಗನನೌಕೆಯ ಉಡ್ಡಯನ ವಿಳಂಬವಾಗಲಿದೆ. ಹೀಗಾಗಿ, ಈ ಮೊದಲು ನಿಗದಿ ಮಾಡಿದಂತೆ ಈ ಇಬ್ಬರು ಮಾರ್ಚ್ ಅಂತ್ಯಕ್ಕೆ ಅಥವಾ ಏಪ್ರಿಲ್ ವೇಳೆಗೆ ಭೂಮಿಗೆ ಮರಳುವ ಸಾಧ್ಯತೆ ಇದೆ.

# ನಿಮ್ಮ ಪಕ್ಷಕ್ಕೆ ಮೋದಿ ಎಂದು ಹೇಳುವುದು ಒಂದು ವ್ಯಸನ

## ಅಮಿತ್ ಶಾ ಅಂಬೇಡ್ಕರ್ ಹೇಳಿಕೆಗೆ ಸಿಎಂ ಬಹಿರಂಗ ಪತ್ರ

**ಬೆಂಗಳೂರು:** ನಿಮ್ಮ ಮಾತಿನ ಧಾಟಿಯಲ್ಲಿಯೇ ಪ್ರತಿಕ್ರಿಯಿಸುತ್ತೇನೆ. ನಿಮ್ಮ ಪಕ್ಷ ಮತ್ತು ಅದರ ಹಿಂದಿರುವ ಪರಿವಾರಕ್ಕೆ ಇತ್ತೀಚೆಗೆ ಮೋದಿ, ಮೋದಿ ಮೋದಿ ಎಂದು ಹೇಳುವುದು ಒಂದು ವ್ಯಸನ ಆಗಿದೆ. ಮೋದಿಯವರ ಬದಲಿಗೆ ಅಷ್ಟು ಬಾರಿ ದೇವರ ನಾಮ ಸ್ಮರಣೆ ಮಾಡಿದ್ದರೆ ಏಳು ಜನ್ಮದಲ್ಲಿ ಮಾತ್ರ ಅಲ್ಲ, ನೂರು ಜನ್ಮದಲ್ಲಿಯೂ ನಿಮಗೆ ಸ್ವರ್ಗವೇ ಸಿಗುತ್ತಿತ್ತು, ಕೇವಲ ಅಧಿಕಾರದಲ್ಲಿ ಉಳಿಯಲಿಕ್ಕಾಗಿ ಮಾಡಿರುವ ಪಾಪಕೃತ್ಯಗಳಿಗೆ ಕ್ಷಮೆಯೂ ಸಿಗುತ್ತಿತ್ತು ಎಂದು ಸಿಎಂ ಸಿದ್ದರಾಮಯ್ಯ ಕೇಂದ್ರ ಗೃಹ ಸಚಿವ ಅಮಿತ್ ಶಾಗೆ ಬಹಿರಂಗ ಪತ್ರ ಬರೆದು ಟೀಕಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಮೊದಲಿಗೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಭಾರತೀಯ ಜನತಾ ಪಕ್ಷದ ಅಂತರಂಗದ ಅಭಿಪ್ರಾಯವನ್ನು ಬಹಿರಂಗವಾಗಿ ಧೈರ್ಯದಿಂದ ದೇಶದ ಮುಂದೆ ತೆರೆದಿಟ್ಟದ್ದಕ್ಕಾಗಿ ಮತ್ತು ಕೊನೆಗೂ ನಿಮ್ಮ ಜೀವಮಾನದಲ್ಲಿ ಒಂದು ಸತ್ಯವನ್ನಾದರೂ ಹೇಳಿದ್ದಕ್ಕೆ ನಿಮ್ಮನ್ನು ಅಭಿನಂದಿಸುತ್ತೇನೆ. ನಿಮ್ಮ ಮಾತಿನಿಂದ ನಮಗೆ ಆಶ್ಚರ್ಯವಾಗಿಲ್ಲ, ನಮಗೆ ಇದು ಗೊತ್ತಿತ್ತು. ಸಂಸತ್‌ನಲ್ಲಿ (18-12-2024) ಆಡಿದ ನಿಮ್ಮ ಮಾತಿನಿಂದ ಇಡೀ ದೇಶಕ್ಕೆ ನಿಮ್ಮ ಅಂತರಂಗದ ಅರಿವಾಗಿದೆ. ಬಾಬಾ ಸಾಹೇಬ್ ಅವರು ಕೊಟ್ಟ ಸಂವಿಧಾನದಡಿಯಲ್ಲಿಯೇ ಕಾರ್ಯನಿರ್ವಹಿಸುತ್ತಿರುವ ಸಂಸತ್‌ನಲ್ಲಿ ನಿಂತು ಅವರ ಸ್ಮರಣೆಯನ್ನು ವ್ಯಸನ ಎಂದು ತುಚ್ಛೀಕರಿಸುವ ನಿಮ್ಮ ಧಾರ್ಷ್ಟ್ಯತನಕ್ಕೆ ಶಹಭಾಸ್ ಅನ್ನಲೇಬೇಕು ಎಂದು ವಾಗ್ದಾಳಿ ನಡೆಸಿದ್ದಾರೆ.

**ಸೂರ್ಯ - ಚಂದ್ರ ಇರುವವರೆಗೆ ಅಂಬೇಡ್ಕರ್ ಸ್ಮರಣೆ**

ಅಮಿತ್ ಶಾ ಅವರೇ, ಬಾಬಾಸಾಹೇಬರ ಬಗ್ಗೆ ತಮಗೆ ಅಪಾರ ಅಭಿಮಾನ ಇದೆ, ಗೌರವ ಇದೆ, ನನ್ನ ಮಾತುಗಳನ್ನು ತಿರುಚಲಾಗಿದೆ ಎಂದೆಲ್ಲ ಸ್ಪಷ್ಟೀಕರಣ ಕೊಟ್ಟು ಆತ್ಮವಂಚನೆ ಮಾಡಿಕೊಳ್ಳಬೇಡಿ. ಅದನ್ನು ಸಮರ್ಥಿಸಿಕೊಂಡು ದೇಶವನ್ನು ಎದುರಿಸಿ. ಅಂಬೇಡ್ಕರ್ ನಮಗೆ ವ್ಯಸನ ಅಲ್ಲ, ನಿತ್ಯ ಸ್ಮರಣೆ. ನಮ್ಮ ಉಸಿರು ಇರುವವರೆಗೆ, ಈ ಭೂಮಿಯಲ್ಲಿ ಸೂರ್ಯ - ಚಂದ್ರ ಇರುವವರೆಗೆ ಅಂಬೇಡ್ಕರ್ ಸ್ಮರಣೆ ಇರಲಿದೆ. ನೀವು ತುಚ್ಛೀಕರಿಸಿದಷ್ಟೂ ಪುಟಿದು ಪುಟಿದು ಮೇಲೆದ್ದು ಬಂದು ಅವರು ನಮ್ಮ ಮುನ್ನಡೆಯ ಹಾದಿಗೆ ಬೆಳಕಾಗುತ್ತಾರೆ. ನಿಮ್ಮ ದುರಹಂಕಾರದ ಮಾತಿಗೆ ನಿಮ್ಮ ಬೆನ್ನ ಹಿಂದಿರುವ ಚೇಲಾಗಳು ಮೇಜುಕುಟ್ಟಿ ಸಂಭ್ರಮಿಸಿರಬಹುದು. ಆದರೆ ಅಂಬೇಡ್ಕರ್ ಅವರಿಂದಾಗಿ ಸಮಾನತೆ ಮತ್ತು ಘನತೆಯ ಬದುಕನ್ನು ಪಡೆದಿರುವ ದೇಶದ ಕೋಟ್ಯಂತರ ಜನ ನಿಮಗೆ ಛೀಮಾರಿ ಹಾಕುತ್ತಿದ್ದಾರೆ ಎನ್ನುವುದು ತಿಳಿದಿರಲಿ ಎಂದಿದ್ದಾರೆ.

> **ಸಂವಿಧಾನ ಇಲ್ಲದಿದ್ದರೆ ನೀವು ಗೃಹ ಸಚಿವರೇ ಆಗುತ್ತಿರಲಿಲ್ಲ**
>
> ನಾನು ಮಾತ್ರ ಅಲ್ಲ, ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಅವರು ಕೊಟ್ಟಿರುವ ಸಂವಿಧಾನ ಇಲ್ಲದೇ ಇರುತ್ತಿದ್ದರೆ ನೀವು ಕೂಡಾ ಗೃಹಸಚಿವರಾಗಿ ಬದುಕು ಕೊಟ್ಟ ಮಹಾತ್ಮನನ್ನೇ ತುಚ್ಛೀಕರಿಸುವ ಅವಕಾಶ ನಿಮಗೆ ಸಿಗುತ್ತಿರಲಿಲ್ಲ. ನೀವು ನಿಮ್ಮೂರಿನಲ್ಲಿ ಎಲ್ಲಾದರೂ ಗುಜರಿ ವ್ಯಾಪಾರ ಮಾಡಿಕೊಂಡು ಇರಬೇಕಾಗುತ್ತಿತ್ತು. ದೇಶದ ಪ್ರಧಾನಿ ಮತ್ತು ನಿಮ್ಮ ಸಹದ್ಯೋಗಿ ನರೇಂದ್ರ ಮೋದಿ ಅವರು ಕೂಡಾ ರೈಲ್ವೆ ಸ್ಟೇಷನ್‌ನಲ್ಲಿ ಚಹಾ ಮಾರಿಕೊಂಡೇ ಇರಬೇಕಾಗಿತ್ತೋ ಏನೋ? ಅವರಿಗೂ ಪ್ರಧಾನಿಯಾಗುವ ಅವಕಾಶವೇ ಸಿಗುತ್ತಿರಲಿಲ್ಲ. ಇದನ್ನು ಪ್ರಧಾನಿಯವರೂ ಒಪ್ಪಿಕೊಳ್ಳಬಹುದು ಎಂದು ನಂಬಿದ್ದೇನೆ, ನೀವೂ ಒಪ್ಪಿಕೊಂಡು ಬಿಡಿ ಎಂದು ತಿಳಿಸಿದ್ದಾರೆ.

ಅಂಬೇಡ್ಕರ್ ಎಂಬ ಮನುಷ್ಯ ಈ ಭೂಮಿಯಲ್ಲಿ ಹುಟ್ಟದೇ ಇರುತ್ತಿದ್ದರೆ, ನನಗೆ ಮುಖ್ಯಮಂತ್ರಿಯಾಗುವ ಅವಕಾಶವೇ ಬರುತ್ತಿರಲಿಲ್ಲ. ನಾನು ಊರಲ್ಲಿ ದನ-ಕುರಿ ಮೇಯಿಸಿಕೊಂಡು ಇರಬೇಕಾಗುತ್ತಿತ್ತು. ನಮ್ಮ ಪಕ್ಷದ ಹಿರಿಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ರಾಜಕೀಯ ಕ್ಷೇತ್ರದಲ್ಲಿ ಉನ್ನತ ಸ್ಥಾನಗಳನ್ನು ಪಡೆದು ಎಐಸಿಸಿಯ ಅಧ್ಯಕ್ಷ ಸ್ಥಾನ ಅಲಂಕರಿಸುತ್ತಿರಲಿಲ್ಲ. ಕಲಬುರಗಿಯ ಯಾವುದಾದರೂ ಕಾರ್ಖಾನೆಯಲ್ಲಿ ಕಾರ್ಮಿಕರಾಗಿರುತ್ತಿದ್ದರು. ಈ ವಾಸ್ತವ ಸದಾ ನಮ್ಮ ನೆನಪಲ್ಲಿರುತ್ತದೆ. ನೀವು ಹೇಳುವ ವ್ಯಸನ ನಮ್ಮ ಪಾಲಿನ ಅಂಬೇಡ್ಕರ್ ಸ್ಮರಣೆ, ನಮ್ಮನ್ನೆಲ್ಲ ಇಲ್ಲಿಗೆ ತಂದು ನಿಲ್ಲಿಸಿ ನಮಗೆ ಸ್ಥಾನಮಾನ, ಗೌರವ ಮತ್ತು ಜನರ ಸೇವೆ ಮಾಡುವ ಅವಕಾಶವನ್ನು ಕೊಟ್ಟಿದೆ ಎನ್ನುವುದನ್ನು ನಾವು ಮರೆತಿಲ್ಲ ಎಂದಿದ್ದಾರೆ.

ಅಮಿತ ಶಾ ಅವರೇ, ಇತಿಹಾಸ ಓದಿರುವ ನಮ್ಮಂತಹವರಿಗೆ ನಿಮ್ಮೊಳಗಿನ ಅಂಬೇಡ್ಕರ್ ದ್ವೇಷ ಹೊಸದಲ್ಲ. ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಅವರು ಬರೆದಿರುವ ದೇಶದ ಸಂವಿಧಾನ ಅವರು ಬದುಕಿರುವಾಗಲೇ ನಿಮ್ಮ ಮಾತೃಸಂಸ್ಥೆಯಾದ ಆರ್‌ಎಸ್‌ಎಸ್ ಯಾಕೆ ತಿರಸ್ಕರಿಸಿತ್ತು? ಆರ್‌ಎಸ್‌ಎಸ್ ನಾಯಕರಾಗಿದ್ದ ಹೆಡಗೆವಾರ್, ಗೋಲ್ವಾಲ್ಕರ್ ಮತ್ತು ಸಾವರ್ಕರ್ ಸಂವಿಧಾನ ವಿರೋಧಿಸಿ ನೀಡಿರುವ ಹೇಳಿಕೆಗಳೇನು ಎನ್ನುವ ವಿವರಗಳೆಲ್ಲ ಇತಿಹಾಸದ ಪುಟಗಳಲ್ಲಿ ಇವೆ. ನಿಮ್ಮ ಸುಳ್ಳುಗಳು ಮತ್ತು ಆತ್ಮವಂಚನೆಯ ನಡವಳಿಕೆಗಳಿಂದ ಅದನ್ನು ಮರೆಮಾಚಬಹುದು, ಆದರೆ ಅಳಿಸಿ ಹಾಕಲಾಗು ವುದಿಲ್ಲ ಎನ್ನುವುದು ನೆನಪಿರಲಿ. ಆ ಅಭಿಪ್ರಾಯವನ್ನೇ ನೀವು ಸಂಸತ್‌ನಲ್ಲಿ ಆಡಿದ್ದೀರಿ ಎಂದು ವಾಗ್ದಾಳಿ ನಡೆಸಿದ್ದಾರೆ.

# ಏಕರೂಪ ಪರಿಹಾರಕ್ಕೆ ನಿರ್ಣಯ

## ಮುಳುಗಡೆ ಪ್ರದೇಶಕ್ಕೆ ಒಂದೇ ಕಂತಿನಲ್ಲಿ ಪರಿಹಾರ ಪಾವತಿಸಲು ಸರಕಾರ ನಿರ್ಧಾರ

**ವಿಧಾನಸಭೆ:** ಕೃಷ್ಣಾ ಮೇಲ್ದಂಡೆ ನದಿ ಪಾತ್ರದ ಆಲಮಟ್ಟಿ ಅಣೆಕಟ್ಟಿನ ಎತ್ತರದಿಂದ ಮುಳುಗಡೆಯಾಗುವ 75 ಸಾವಿರ ಎಕರೆಗೆ ಏಕರೂಪದಲ್ಲಿ ಪರಿಹಾರ ಪಾವತಿಸಲು ಮುಖ್ಯಮಂತ್ರಿಯವರು ನಿರ್ಣಯಿಸಿದ್ದಾರೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು.

ಮುಳುಗಡೆ ಪ್ರದೇಶಕ್ಕೆ ಎರಡು ಕಂತಿನಲ್ಲಿ ಪರಿಹಾರ ಪಾವತಿಸಲು ಈ ಸರಕಾರ ನಿರ್ಣಯ ಕೈಗೊಂಡಿದೆ ಎಂದು ಯತ್ನಾಳ ಹೇಳಿದಾಗ, ಇದು ತಪ್ಪು ಕಲ್ಪನೆ, ಹಿಂದಿನ ಸರಕಾರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಎರಡು ಕಂತಿನ ಪರಿಹಾರ ಪಾವತಿಸುವ ನಿರ್ಣಯ ಕೈಗೊಂಡು ಆದೇಶವು ಜಾರಿಯಾಗಿದೆ. ಆದರೆ ನಮ್ಮ ಸರಕಾರದಲ್ಲಿ ಅದರ ಮುಂದುವರೆದ ಸಂಪರ್ಕದ ಪತ್ರಗಳು ರವಾನೆಯಾಗಿವೆ. ಇದು ನಮ್ಮ ಸರಕಾರ ಕೈಗೊಂಡ ನಿರ್ಣಯವಲ್ಲ ಎಂದು ಹೇಳಿದರು. ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದಲ್ಲಿ ಆಲಮಟ್ಟಿ ಎತ್ತರ ಸೇರಿ ದಂತೆ ಹಲವು ಕಾಮಗಾರಿಗಳಿಗೆ 1.50 ಲಕ್ಷ ಕೋಟಿ ರು. ವೆಚ್ಚವಾಗಲಿದೆ ಎಂದು ಪದೇ ಪದೇ ಹೇಳುವ ಮೂಲಕ ಆ ಯೋಜನೆಯ ನ್ನು ಮುಟ್ಟಲು ಹೆದರುವಂತಹ ಪರಿಸ್ಥಿತಿ ನಿರ್ಮಿಸಲಾಗಿದೆ ಎಂದು ಸಚಿವರು ಆಕ್ಷೇಪಿಸಿದರು.

> **₹75 ಸಾವಿರ ಕೋಟಿ ವೆಚ್ಚದಲ್ಲಿ ಯೋಜನೆ ಪೂರ್ಣ**
>
> ಈ ಯೋಜನೆಗೆ ಅಷ್ಟೊಂದು ಹಣ ಬೇಕಾಗುವುದಿಲ್ಲ. ಸುಮಾರು 75 ಸಾವಿರ ಕೋಟಿ ರು. ವೆಚ್ಚದಲ್ಲೆ ಪೂರ್ಣಗೊಳಿಸಲು ಅವಕಾಶವಿದೆ. ತಾವು ಜಲಸಂಪನ್ಮೂಲ ಸಚಿವರಾಗಿದ್ದಾಗ 51 ಸಾವಿರ ಕೋಟಿ ರು.ಗಳಿಗೆ ಯೋಜನಾ ಮಂಜೂರಾತಿಯನ್ನು ನೀಡಿದ್ದೆ. 75 ಸಾವಿರ ಎಕರೆ ಭೂಸ್ವಾಧೀನಕ್ಕೆ 35 ಸಾವಿರ ಕೋಟಿ ರು. ವೆಚ್ಚವಾಗಲಿದೆ.20 ಹಳ್ಳಿಗಳ ಸ್ಥಳಾಂತರಕ್ಕೆ 12 ಸಾವಿರ ಕೋಟಿ, ಕೆಲವು ಕಾಲುವೆಗಳ ಕಾಮಗಾರಿ ಅರ್ಧಕ್ಕೆ ನಿಂತಿದ್ದು, ಅದನ್ನು ಮುಂದುವರಿಸಲು ಹಾಗೂ ಭೂಸ್ವಾಧೀನಕ್ಕೆ ಎಲ್ಲಾ ಸೇರಿ 75 ಸಾವಿರ ಕೋಟಿ ರು. ವೆಚ್ಚದಲ್ಲಿ ಯೋಜನೆ ಪೂರ್ಣಗೊಳ್ಳಲಿದೆ. ಆದರೆ 1.50 ಲಕ್ಷ ಕೋಟಿ ರು. ಎಂದು ಹೇಳಿ ಆತಂಕ ಮೂಡಿಸಲಾಗುತ್ತಿದೆ ಎಂದರು.

ಪ್ರಯಾಣಿಕರಿದ್ದ ದೋಣಿಗೆ ನೌಕಾಪಡೆ ಸ್ಪೀಡ್‌ಬೋಟ್ ಡಿಕ್ಕಿ | ಎಂಜಿನ್ ಪರೀಕ್ಷೆ ವೇಳೆ ದುರ್ಘಟನೆ

# ನೌಕಾಪಡೆ ಸಿಬ್ಬಂದಿ ಸೇರಿ 13 ಪ್ರಯಾಣಿಕರು ಸಾವು

**ಮುಂಬೈ:** ಗೇಟ್‌ವೇ ಆಫ್ ಇಂಡಿಯಾ ಬಳಿ ಪ್ರಯಾಣಿಕರಿದ್ದ ದೋಣಿಗೆ ಸ್ಪೀಡ್‌ಬೋಟ್ ಡಿಕ್ಕಿ ಹೊಡೆದಿದ್ದು 13 ಪ್ರಯಾಣಿಕರು ಮೃತಪಟ್ಟಿದ್ದು 101 ಮಂದಿಯನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಿಬ್ಬಂದಿ ಸೇರಿದಂತೆ ಸುಮಾರು 110ಕ್ಕೂ ಹೆಚ್ಚು ಪ್ರವಾಸಿಗರನ್ನು ಹೊತ್ತ ದೋಣಿಯು ಚಾರಿತ್ರಿಕ ಗೇಟ್‌ವೇ ಆಫ್ ಇಂಡಿಯಾದಿಂದ ಯುನೆಸ್ಕೋ ಪರಂಪರೆಯ ಎಲಿಫೆಂಟಾ ದ್ವೀಪಕ್ಕೆ ತೆರಳುತ್ತಿದ್ದಾಗ ಬುಧವಾರ ಸಂಜೆ 5.15ರ ಸುಮಾರಿಗೆ ಈ ಘಟನೆ ನಡೆದಿದೆ.

ಮೃತರ ಪೈಕಿ 10 ಮಂದಿ ಪ್ರಯಾಣಿಕರಿದ್ದು ಮೂವರು ನೌಕಾಪಡೆ ಸಿಬ್ಬಂದಿ ಎಂದು ತಿಳಿದುಬಂದಿದೆ. ನೌಕಾಪಡೆಯ ಸ್ಪೀಡ್‌ಬೋಟ್ ನ ಎಂಜಿನ್ ಪರೀಕ್ಷೆ ವೇಳೆ ಈ ದುರ್ಘಟನೆ ಸಂಭವಿಸಿದೆ. ಜಾಯಿಂಟ್ ಆಪರೇಷನ್ ಕಮಾಂಡ್ (ಜೆಒಸಿ) ಮತ್ತು ಬಿಎಂಸಿ ಪ್ರಕಾರ, ಕಾರಂಜಾದ ಉರಾನ್ ಬಳಿ ದೋಣಿ 'ನೀಲ್ಕಮಲ್' ದೋಣಿಗೆ ಸ್ಪೀಡ್‌ಬೋಟ್ ಡಿಕ್ಕಿ ಹೊಡೆದಿದೆ. ಇತರ ದೋಣಿಗಳಿಂದ ಪ್ರಯಾಣಿಕರು ಕ್ಲಿಕ್ ಮಾಡಿದ ಅಪಘಾತದ ವೀಡಿಯೊಗಳಲ್ಲಿ, ಜನರು ಸಹಾಯಕ್ಕಾಗಿ ಪ್ರಯತ್ನಿಸುವುದನ್ನು ಕಾಣಬಹುದು. ಸದ್ಯ 101 ಮಂದಿಯನ್ನು ರಕ್ಷಿಸಲಾಗಿದೆ. ದುರಂತದ ಬಗ್ಗೆ ಮಾಹಿತಿ ಪಡೆದ ಭಾರತೀಯ ನೌಕಾಪಡೆಯ ನಾಲ್ಕು ಹೆಲಿಕಾಪ್ಟರ್‌ಗಳು, ಮೆರೈನ್ ಪೊಲೀಸ್, ಇಂಡಿಯನ್ ಕೋಸ್ಟ್ ಗಾರ್ಡ್, ಜವಾಹರಲಾಲ್ ನೆಹರು ಬಂದರು ಪ್ರಾಧಿಕಾರ, ಸ್ಥಳೀಯ ಮೀನುಗಾರರು ಮತ್ತು ಇತರ ದೋಣಿಗಳು ಪ್ರವಾಸಿಗರನ್ನು ರಕ್ಷಿಸಲು ಭಾರಿ ರಕ್ಷಣಾ ಕಾರ್ಯಾಚರಣೆಯನ್ನು ನಡೆಸುತ್ತಿವೆ. ಅಪಘಾತ ಸಂಭವಿಸುವ ಕೆಲವೇ ಕ್ಷಣಗಳ ಮುಂಚೆ ಸೆರೆಹಿಡಿದ ದೃಶ್ಯಗಳಲ್ಲಿ ನೌಕಾಪಡೆಯ ಸ್ಪೀಡ್ ಬೋಟ್ ಚಲಾಯಿಸಲಾಗುತ್ತಿತ್ತು.

ಮುಳುಗಿದ ಬೋಟು ಮತ್ತು ಸಂತ್ರಸ್ಥರು.

ದುರಂತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಲಾ 5 ಲಕ್ಷ ಪರಿಹಾರ ನೀಡುವುದಾಗಿ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಘೋಷಿಸಿದ್ದಾರೆ.

ನಮಗೂ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ನೀಡಿ

# ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ರಚಿಸಿ: ಲಕ್ಷ್ಮಣ ಸವದಿ

**ವಿಶ್ವವಾಣಿ ಸುದ್ದಿಮನೆ ವಿಧಾನಸಭೆ** ಸುವರ್ಣಸೌಧ

ಕಲ್ಯಾಣ ಕರ್ನಾಟಕದ ರೀತಿಯಲ್ಲಿಯೇ ಕಿತ್ತೂರು ಕರ್ನಾಟಕ ಜಿಲ್ಲೆಗಳ ಅಭಿವೃದ್ಧಿಗೂ ಪ್ರತ್ಯೇಕ ಮಂಡಳಿಯನ್ನು ರಚಿಸಿ ಒಂದು ಸಾವಿರ ಕೋಟಿ ರು. ಮೀಸಲಿಡಬೇಕು ಎಂದು ಶಾಸಕ ಲಕ್ಷ್ಮಣ ಸವದಿ ಅಭಿಪ್ರಾಯಪಟ್ಟರು.

ಉತ್ತರ ಕರ್ನಾಟಕ ಭಾಗದ ಚರ್ಚೆಯ ಮೇಲೆ ಮಾತನಾಡಿದ ಅವರು, ಉತ್ತರ ಕರ್ನಾಟಕದಲ್ಲಿ ಅಭಿವೃದ್ಧಿಗೆ ಕಲ್ಯಾಣ ಕರ್ನಾಟಕವೊಂದೇ ಕಾಣುತ್ತದೆ. ಆ ಭಾಗದ ಪ್ರತಿ ಶಾಸಕರಿಗೆ ಕನಿಷ್ಠ 200 ಕೋಟಿ ರು. ಸಿಗುತ್ತದೆ. ಆದರೆ ಆ ಕ್ಷೇತ್ರಗಳಷ್ಟೇ ಹಿಂದುಳಿದ ಕಿತ್ತೂರು ಕರ್ನಾಟಕ ಭಾಗಕ್ಕೆ ಅನುವಾದವಿಲ್ಲ. ಆದ್ದರಿಂದ ಬಯಲು ಸೀಮೆಯಿಂದ ನಮ್ಮ ನಾಲ್ಕು ಜಿಲ್ಲೆಗಳನ್ನು ಹಿಂಪಡೆದು, ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ರಚಿಸಬೇಕು. ನಾಲ್ಕು ಜಿಲ್ಲೆಯ 30ಕ್ಕೂ ಹೆಚ್ಚು ಕ್ಷೇತ್ರಗಳಿಗೆ ಒಂದು ಸಾವಿರ ಕೋಟಿ ರು. ಅನುದಾನ ಮೀಸಲಿಡಬೇಕು ಎಂದು ಸಲಹೆ ನೀಡಿದರು. ಈ ಹಿಂದೆ ಜಾರಿಗೊಳಿಸಿದ್ದ ಕೈಗಾರಿಕೆ ನೀತಿ ಸಮರ್ಪಕವಾಗಿ ಅನುಷ್ಠಾನವಾಗಿಲ್ಲ. ಬೆಳಗಾವಿ ಜಿಲ್ಲೆಗಳಿಗೆ ಕೈಗಾರಿಕೆಗಳು ಬರುವಂತೆ ಪ್ರೋತ್ಸಾಹಿಸಬೇಕು. ರೈತರ ಮಕ್ಕಳಿಗೆ ಉದ್ಯೋಗ ಸಿಗುವಂತಾಗಬೇಕು. ಉದ್ಯೋಗ ಕ್ರಾಂತಿಯಾಗಬೇಕು. ಇದರೊಂದಿಗೆ ವಿಜಯಪುರ ಭಾಗದಲ್ಲಿ ಬೆಳೆಯುವ ದ್ರಾಕ್ಷಿಗೆ ಹೆಚ್ಚುವರಿ ಬೆಂಬಲ ಸಿಗುವಂತಾಗಲು ಕೇಂದ್ರ ಸರಕಾರದಿಂದ ಕನಿಷ್ಠ ಬೆಂಬಲ ಬೆಲೆಯನ್ನು ಘೋಷಿಸಬೇಕು. ಇದರೊಂದಿಗೆ ಬಾಣಂತಿಯರಿಗೆ ಹಾಗೂ ಶಾಲಾ ಮಕ್ಕಳಿಗೆ ಒಣ ದ್ರಾಕ್ಷಿಯನ್ನು ಒದಗಿಸಬೇಕು ಎಂದು ಅಭಿಪ್ರಾಯಪಟ್ಟರು.

**ನೀರಾವರಿ ಬಾಂಡ್ ಮೂಲಕ ಯೋಜನೆ ಪೂರ್ಣಗೊಳಿಸಿ:** ಉತ್ತರ ಕರ್ನಾಟಕ ಭಾಗದ ಬಹುದೊಡ್ಡ ನೀರಾವರಿ ಯೋಜನೆಯಾಗಿರುವ ಕೃಷ್ಣ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸಲು ರಾಜ್ಯ ಸರಕಾರ ಹೆಚ್ಚುವರಿ ಅನುದಾನ ನೀಡಬೇಕು. ಒಂದು ವೇಳೆ ಅನುದಾನ ನೀಡಲು ಆರ್ಥಿಕ ಸಮಸ್ಯೆಯಿದ್ದರೆ, ನೀರಾವರಿ ಬಾಂಡ್‌ಗಳನ್ನು ಶುರು ಮಾಡಿ, ಅದರಿಂದ ಹಣವನ್ನು ಎತ್ತುವಳಿ ಮಾಡಬೇಕು. ಈ ಮೂಲಕ ನೀರಾವರಿ ಯೋಜನೆ ಪೂರ್ಣಗೊಳಿಸಲು ಹಣ ಕ್ರೋಢೀಕರಿಸಬೇಕು ಎಂದು ಸಲಹೆ ನೀಡಿದರು. ಇದರೊಂದಿಗೆ ಕಬ್ಬು ತೂಕ ಹಾಕುವ ಯಂತ್ರಗಳನ್ನು ಸಕ್ಕರೆ ಕಾರ್ಖಾನೆಗಳ ಮುಂದೆ ಸರಕಾರದ ವತಿಯಿಂದಲೇ ಅಳವಡಿಸಬೇಕು. ಇದರಿಂದ ಕಬ್ಬು ರೈತರಿಗೆ ಆಗುತ್ತಿರುವ ಅನ್ಯಾಯ ಸರಿಯಾಗುತ್ತದೆ ಎಂದು ಹೇಳಿದರು.

> ಬೆಂಗಳೂರು ಮಿತಿ ಮೀರಿ ಬೆಳೆಯುತ್ತಿದೆ. ಆದರೆ ಉತ್ತರ ಕರ್ನಾಟಕ ಭಾಗದ ಯುವಕರಿಗೆ ತವರಿನಲ್ಲಿಯೇ ಕೆಲಸ ಸಿಗುವಂತೆ ಮಾಡಬೇಕು. ಊರಲ್ಲಿರುವ ಯುವಕರಿಗೆ ಮದುವೆಗೆ ಹೆಣ್ಣು ಸಿಗುತ್ತಿಲ್ಲ. ಈ ಎಲ್ಲವನ್ನೂ ಸರಿಪಡಿಸಬೇಕು ಎಂದರೆ, ಕೈಗಾರಿಕೆಗಳು ನಮ್ಮ ಭಾಗದಲ್ಲಿಯೂ ಆರಂಭವಾಗಬೇಕು. ಈ ನಿಟ್ಟಿನಲ್ಲಿ ಸರಕಾರ ಕ್ರಮವಹಿಸಬೇಕು.
>
> - ಲಕ್ಷ್ಮಣ ಸವದಿ, ಶಾಸಕ

# ವಂಚಕ ಉದ್ಯಮಿಗಳ ₹22 ಸಾವಿರ ಕೋಟಿ ಆಸ್ತಿ ಜಪ್ತಿ

**ದೆಹಲಿ:** ಸಾವಿರಾರು ಕೋಟಿ ರು. ಸಾಲ ಪಡೆದು ಬ್ಯಾಂಕ್‌ಗಳಿಗೆ ವಂಚಿಸಿ ಭಾರತದಿಂದ ಪರಾರಿಯಾಗಿ ಬೇರೆ ಬೇರೆ ದೇಶಗಳಲ್ಲಿ ತಲೆಮರೆಸಿಕೊಂಡಿರುವ ವಿಜಯ ಮಲ್ಯ, ನೀರವ್ ಮೋದಿ ಮತ್ತು ಮಹುಲ್ ಚೋಕ್ಸಿ ಮತ್ತಿತರ ವಂಚಕ ಉದ್ಯಮಿಗಳಿಗೆ ಸೇರಿದ ಭಾರತದಲ್ಲಿನ 22,000 ಕೋಟಿ ರು. ಆಸ್ತಿಗಳನ್ನು ವಶಪಡಿಸಿಕೊಂಡು, ಸಾಲ ಬಾಕಿಯಾಗಿದ್ದ ವಿವಿಧ ಬ್ಯಾಂಕ್‌ಗಳಿಗೆ ಹಸ್ತಾಂತರಿಸಲಾಗಿದೆ ಎಂದು ಕೇಂದ್ರ ಸರಕಾರ ಹೇಳಿದೆ.

ಕಿಂಗ್‌ಫಿಶರ್ ಏರ್‌ಲೈನ್ಸ್ ಮತ್ತು ಯುನೈಟೆಡ್ ಬ್ರುವರೀಸ್ ಮೊದಲಾದ ಕಂಪನಿಗಳ ಸಮೂಹದ ಒಡೆಯನಾಗಿದ್ದ ವಂಚಕ ಉದ್ಯಮಿ ವಿಜಯ್ ಮಲ್ಯಗೆ ಸೇರಿದ್ದ 14,131.60 ಕೋಟಿ ರು. ಮೌಲ್ಯದ ಆಸ್ತಿಯನ್ನು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ(ಪಿಎಂಎಲ್ಎ) ವಶಪಡಿಸಿಕೊಂಡು ಸರಕಾರಿ ಒಡೆತನದ ಮತ್ತು ಖಾಸಗಿ ವಲಯದ ಬ್ಯಾಂಕ್‌ಗಳಿಗೆ ಹಸ್ತಾಂತರಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಲೋಕಸಭೆಗೆ ಬುಧವಾರ ಮಾಹಿತಿ ನೀಡಿದರು.

- ವಿಜಯ ಮಲ್ಯ, ನೀರವ್ ಮೋದಿ, ಮೆಹುಲ್ ಚೋಕ್ಸಿ ಆಸ್ತಿ ಜಪ್ತಿ
- ಲೋಕಸಭೆಗೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಾಹಿತಿ

ಮತ್ತಿಬ್ಬರು ವಂಚಕ ಉದ್ಯಮಿಗಳಾದ ನೀರವ್ ಮೋದಿ ಮತ್ತು ಮೆಹುಲ್ ಚೋಕ್ಸಿಯಿಂದ ಕ್ರಮವಾಗಿ 1,052 ಕೋಟಿ ರು ಮತ್ತು 2,565 ಕೋಟಿ ರು. ಮೊತ್ತದ ಆಸ್ತಿಗಳ ಜಪ್ತಿ ಮಾಡಲಾಗಿದೆ. ಇಬ್ಬರಿಂದಲೂ ಸಾಲ ಬಾಕಿಯಾಗಿದ್ದ ಬ್ಯಾಂಕ್‌ಗಳಿಗೆ ಒಟ್ಟು 3,617 ಕೋಟಿ ರು. ಮರುಪಾವತಿ ಆದಂತಾಗಿದೆ ಎಂದು ಸಚಿವೆ ಸದನಕ್ಕೆ ವಿವರಿಸಿದರು.

ಅಷ್ಟೇ ಅಲ್ಲದೇ, ಆರ್ಥಿಕ ಅಪರಾಧಿಗಳ ವಿರುದ್ಧದ ಕಾನೂನು ಸಮರ ಮುಂದುವರಿಸಲು ನಿರ್ಧರಿಸಲಾಗಿದೆ. ಮೂವರೂ ವಂಚಕ ಉದ್ಯಮಿಗಳನ್ನು ದೇಶಕ್ಕೆ ಎಳೆದುತರುವ ಯತ್ನವನ್ನೂ ಸರಕಾರ ನಡೆಸುತ್ತಿದೆ ಎಂದೂ ಹೇಳಿದರು.

ಮಾಜಿ ಸಂಸದರಾದ ವಂಚಕ ಉದ್ಯಮಿ ವಿಜಯ್ ಮಲ್ಯ 2016ರಲ್ಲಿ ಭಾರತದಿಂದ ಪಲಾಯನ ಮಾಡಿದರು. ನ್ಯಾಯಾಲಯ ವಿಚಾರಣೆ ಎದುರಿಸಲು ಭಾರತ ಸರಕಾರ ಆತನನ್ನು ಇಂಗ್ಲೆಂಡ್‌ನಿಂದ ಕರೆತರಲು ಪ್ರಯತ್ನಿಸುತ್ತಿದೆ. ಆತನ ಹಸ್ತಾಂತರಕ್ಕಾಗಿ ಕಾನೂನು ಪ್ರಕ್ರಿಯೆ ಮುಂದುವರಿದಿದೆ ಎಂದರು.

# ಬಿಬಿಎಂಪಿ ವಿಧೇಯಕಕ್ಕೆ ಮೇಲ್ಮನೆಯಲ್ಲಿಯೂ ಅಸ್ತು

**ಬೆಳಗಾವಿ:** ವಿಧಾನಸಭೆಯಿಂದ ಅಂಗೀಕೃತಗೊಂಡ ರೂಪದಲ್ಲಿದ್ದ 2024ನೇ ಸಾಲಿನ ಬೃಹತ್ ಬೆಂಗಳೂರು ನಗರ ಪಾಲಿಕೆ ಎರಡನೇ ತಿದ್ದುಪಡಿ ವಿಧೇಯಕವನ್ನು ವಿಧಾನ ಪರಿಷತ್ತಿನಲ್ಲಿ ಬುಧವಾರ ಅಂಗೀಕರಿಸಲಾಯಿತು. ಸುವರ್ಣಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ವಿಧಾನಮಂಡಲ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಡಿಸಿಎಂ ಡಿ.ಕೆ. ಶಿವಕುಮಾರ್ ಈ ವಿಧೇಯಕವನ್ನು ಮಂಡಿಸಿದರು.

ಒಟಿಎಸ್ ವ್ಯವಸ್ಥೆಯಿಂದ 3 ಲಕ್ಷ ಆಸ್ತಿಗಳು ಹೊಸದಾಗಿ ತೆರಿಗೆ ವ್ಯಾಪ್ತಿಯೊಳಗೆ ಸೇರ್ಪಡೆಯಾಗಿವೆ. ಇನ್ನೂ 2.26 ಲಕ್ಷ ಆಸ್ತಿಗಳು ಬಾಕಿ ಇವೆ. ಈ ಅವಕಾಶವನ್ನು 2024ರ ನವೆಂಬರ್ 30 ರವರೆಗೆ ವಿಸ್ತರಣೆ ಮಾಡಲಾಗಿತ್ತು. ಇದರಿಂದ ಪ್ರಸಕ್ತ ಸಾಲಿನಲ್ಲಿ ದಾಖಲೆ ಪ್ರಮಾಣದಲ್ಲಿ ಒಟ್ಟು 4284 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಲಾಗಿದೆ. ಸುಗ್ರೀವಾಜ್ಞೆ ಮೂಲಕ ಕಾಯ್ದೆ ಜಾರಿಗೆ ತರಲಾಗಿತ್ತು. ಈಗ ಇದನ್ನು ವಿಧಾನ ಪರಿಷತ್ತಿನಲ್ಲಿ ಮಂಡನೆ ಮಾಡಿದ್ದು ಅಂಗೀಕಾರ ಮಾಡಬೇಕು ಎಂದು ಪ್ರಸ್ತಾಪಿಸುತ್ತಿದ್ದೇನೆ ಎಂದು ಅವರು ತಿಳಿಸಿದರು.

ಈ ವೇಳೆ ಮಾತನಾಡಿದ ಜೆಡಿಎಸ್ ಸದಸ್ಯ ಶರವಣ ಅವರು, 'ಉಪ ಮುಖ್ಯಮಂತ್ರಿಗಳು ಈಗಾಗಲೇ ಸುಗ್ರೀವಾಜ್ಞೆ ಮೂಲಕ ಜಾರಿಗೆ ತಂದಿದ್ದಾರೆ. ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಜತೆಗೆ ಒಟಿಎಸ್ ವ್ಯವಸ್ಥೆ ಉತ್ತಮವೇ. ಸಾರ್ವಜನಿಕರಿಗೆ ಬಿಬಿಎಂಪಿ ಅಧಿಕಾರಿಗಳಿಂದ ದಿನನಿತ್ಯ ಕಾಟ, ಕಿರುಕುಳ ನಡೆಯುತ್ತಿದೆ. ಅದನ್ನು ತಪ್ಪಿಸಬೇಕು. ನೀವು ಉತ್ತಮ ಉದ್ದೇಶದಿಂದ ಕಾಯ್ದೆ ತರುತ್ತಿದ್ದರೂ, ಅಧಿಕಾರಿಗಳ ಮಟ್ಟದಲ್ಲಿ ರೆವೆನ್ಯೂ ಇನ್ಸ್‌ಪೆಕ್ಟರ್‌ನಿಂದ ಎಲ್ಲಾ ಹಂತದಲ್ಲಿ ಕಿರುಕುಳ ನೀಡಲಾಗುತ್ತಿದೆ. ನಾಗರೀಕರಿಗೆ ಅನುಕೂಲವಾಗಬೇಕು, ಬಿಬಿಎಂಪಿಗೆ ಆರ್ಥಿಕ ಸಂಪನ್ಮೂಲ ಕ್ರೂಢೀಕರಣವಾಗಬೇಕು ಎಂಬ ಉದ್ದೇಶವಿದೆ. ಇದು ಪಾರದರ್ಶಕವಾಗಿ ನಡೆಯುತ್ತಿಲ್ಲ, ತೆರಿಗೆ ಪಾವತಿದಾರರ ದಾರಿ ತಪ್ಪಿಸುವ ಕೆಲಸವಾಗುತ್ತಿದೆ. 10 ಲಕ್ಷ ತೆರಿಗೆ ಬಾಕಿ ಇದ್ದರೆ 1 ಲಕ್ಷ ತೆಗೆದುಕೊಂಡು ಉಳಿದಿದ್ದನ್ನು ಬಿಟ್ಟು ಬಿಡುತ್ತಿದ್ದಾರೆ. ಇದಕ್ಕೆ ಸೂಕ್ತ ದಾಖಲೆ ನೀಡಲು ನಾನು ಸಿದ್ಧನಿದ್ದೇನೆ. ಇಂತಹ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳುತ್ತೀರಿ? ಪ್ರಾಮಾಣಿಕವಾಗಿ ತೆರಿಗೆ ಪಾವತಿಸುವವರಿಗೆ ನ್ಯಾಯ ಒದಗಿಸಬೇಕು. ಸರ್ಕಾರದಿಂದ ಬಡ್ಡಿ ವಜಾ, ದಂಡ ಕಡಿಮೆ ಮಾಡಿದ್ದೀರಿ. ಈ ಹಿಂದೆ ಆಸ್ತಿ ತೆರಿಗೆ ಪಾವತಿ ಮಾಡಿರುವವರಿಗೆ ಯಾವ ರೀತಿ ನೆರವು ನೀಡುತ್ತೀರಿ' ಎಂದು ಕೇಳಿದರು.

ಇದಕ್ಕೆ ಉತ್ತರ ನೀಡಿದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, 'ಪ್ರತಿ ಪ್ರಕರಣಕ್ಕೆ 100 ರೂ. ದಂಡ ವಿಧಿಸಲಾಗಿದೆ. ನಮಗೆ ಹೆಚ್ಚು ಹಣ ಸಂಗ್ರಹಿಸುವುದಷ್ಟೇ ಉದ್ದೇಶವಲ್ಲ. ಸಾಧ್ಯವಾದಷ್ಟು ಹೆಚ್ಚು ಅರ್ಹರನ್ನು ಆಸ್ತಿ ತೆರಿಗೆ ವ್ಯಾಪ್ತಿಯೊಳಗೆ ತರುವುದಾಗಿದೆ. ತೆರಿಗೆ ವ್ಯಾಪ್ತಿಗೆ ಬರದೇ ಇರುವುದಕ್ಕಿಂತ ಕಡಿಮೆ ದಂಡ ವಿಧಿಸಿ ಅವರನ್ನು ತೆರಿಗೆ ವ್ಯಾಪ್ತಿಗೆ ತರುವುದು ಮುಖ್ಯ. ನಗರದಲ್ಲಿ ಇನ್ನೂ 2.50 ಲಕ್ಷ ಮನೆಗಳು ಇನ್ನೂ ತೆರಿಗೆ ವ್ಯಾಪ್ತಿಯೊಳಗೆ ಬರುವುದು ಬಾಕಿ ಇದೆ. ನಾವು ಬೆಂಗಳೂರಿನ ಪ್ರತಿ ಮನೆ ಸಮೀಕ್ಷೆ ಮಾಡಿ ಅವರಿಗೆ ಮನೆಬಾಗಿಲಲ್ಲೇ ಖಾತಾ ನೀಡಬೇಕು ಎಂದು ತೀರ್ಮಾನಿಸಿದ್ದೇವೆ. ನಂತರ ನೀವು ಇಷ್ಟು ಆಸ್ತಿ, ಕಟ್ಟಡ ಹೊಂದಿದ್ದು, ಪ್ರತಿ ವರ್ಷ ಇಂತಿಷ್ಟು ಆಸ್ತಿ ತೆರಿಗೆ ಪಾವತಿ ಮಾಡಬೇಕು ಎಂದು ತಿಳಿಸುವ ತೀರ್ಮಾನ ಮಾಡಲಾಗಿದೆ' ಎಂದು ತಿಳಿಸಿದರು.

ಬಳಿಕ ಸಭಾಪತಿಗಳು ವಿಧೇಯಕವನ್ನು ಧ್ವನಿಮತಕ್ಕೆ ಹಾಕಿದರು. ನಂತರ ಸರ್ವಾನುಮತದೊಂದಿಗೆ ಈ ವಿಧೇಯಕವನ್ನು ಅಂಗೀಕರಿಸಲಾಯಿತು.

# ಎನ್‌ಎಚ್‌ಆರ್‌ಸಿ ಅಧ್ಯಕ್ಷರ ನೇಮಕಕ್ಕಾಗಿ ಪ್ರಧಾನಿ ಸಭೆ

**ದೆಹಲಿ:** ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ (ಎನ್‌ಎಚ್‌ಆರ್‌ಸಿ) ನೂತನ ಅಧ್ಯಕ್ಷರ ನೇಮಕ ಸಂಬಂಧ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಉನ್ನತ ಮಟ್ಟದ ಸಮಿತಿಯ ಸಭೆ ಬುಧವಾರ ನಡೆದಿದ್ದು, ರಾಜ್ಯಸಭೆ ಮತ್ತು ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಭಾಗಿಯಾಗಿದ್ದರು.

2021ರ ಜೂನ್‌ನಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡಿದ್ದ ನಿವೃತ್ತ ನ್ಯಾ.ಅರುಣ್ ಕುಮಾರ್ ಮಿಶ್ರಾ ಅವರ ಅಧಿಕಾರವಧಿ ಇದೇ ವರ್ಷದ ಜೂ.1ರಂದೇ ಪೂರ್ಣಗೊಂಡಿತ್ತು. ಆಗಿನಿಂದಲೂ ಈ ಸ್ಥಾನ ಖಾಲಿ ಇದೆ. ಆಯೋಗದ ಸದಸ್ಯರಾದ ವಿಜಯ ಭಾರತಿ ಸಾಯನಿ ಹಂಗಾಮಿ ಮುಖ್ಯಸ್ಥರಾಗಿದ್ದಾರೆ.

ಎನ್‌ಎಚ್‌ಆರ್‌ಸಿ ಆಡಳಿತದ ನಿಯಮಗಳ ಪ್ರಕಾರ ಪ್ರಧಾನಿ ನೇತೃತ್ವದ ಹಾಗೂ ರಾಜ್ಯಸಭೆ ಉಪ ಸಭಾಪತಿ, ಲೋಕಸಭೆ ಸ್ಪೀಕರ್, ಕೇಂದ್ರ ಗೃಹ ಸಚಿವ, ಲೋಕಸಭೆ ಮತ್ತು ರಾಜ್ಯಸಭೆ ಪ್ರತಿಪಕ್ಷ ನಾಯಕರು ಸದಸ್ಯರಾಗಿರುವ ಸಮಿತಿ ಆಯೋಗದ ಅಧ್ಯಕ್ಷರ ನೇಮಕ ಮಾಡುವ ಅಧಿಕಾರ ಹೊಂದಿದೆ.

## ಸಂಶೋಧನಾ ವಿದ್ಯಾರ್ಥಿಗಳಿಂದ ಪ್ರತಿಭಟನೆ

**ಬೆಂಗಳೂರು:** ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ರವರ ಕುರಿತಾದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವಹೇಳನಕಾರಿ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿ ಗುರುವಾರ ಬೆಳಗ್ಗೆ 10.30 ಗಂಟೆಗೆ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಗ್ರಂಥಾಲಯ ವೃತ್ತ ಬಳಿ ಮುನೇಶ್ವರ ದೇವಸ್ಥಾನ ರಸ್ತೆಯಲ್ಲಿ ಬೃಹತ್ ಪ್ರತಿಭಟನೆ ಮತ್ತು ಪ್ರತಿಕೃತಿ ದಹನ ನಡೆಸಲಾಗುವುದೆಂದು ಒಕ್ಕೂಟದ ಅಧ್ಯಕ್ಷ ಸತೀಶ್ ಜಿ.ಕೆ.ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

@vishwavaninews

ವಿಶ್ವವಾಣಿ ಆರಾಮ

ಬೆಂಗಳೂರು
ಗುರುವಾರ
19|12|2024

ಅನುದಿನವೂ ವಿರಾಮಕ್ಕೆ ಒಂದು ನೆಪ

## ಚಿತ್ತ ವಿಹಾರ

### ಇತರರಲ್ಲೂ ನಮ್ಮ ಬಿಂಬ

ಒಮ್ಮೆ ಮುಲ್ಲಾ ನಸ್ರುದ್ದಿನ ಹೆಂಡತಿ ಹಬ್ಬದ ದಿನದಂದು ಬೇಗನೆ ಎದ್ದು ತನ್ನ ಕೆಲಸ ಕಾರ್ಯಗಳಲ್ಲಿ ತೊಡಗಿದಳು. ಸ್ವಲ್ಪ ಸಮಯದ ನಂತರ ಎದ್ದ ಮುಲ್ಲಾ ನಸ್ರುದ್ದೀನ್‌ನ ಹೆಂಡತಿ 'ನಾನು ಇವತ್ತು ಬೆಳಿಗ್ಗೆ ಸುಂದರವಾದ ಕನಸೊಂದನು ಕಂಡೆ' ಎಂದಳು. ಮುಲ್ಲಾ ನಸ್ರದ್ದೀನ 'ಅದೇನು ಕನಸು?' ಎಂದ. 'ಹಬ್ಬಕ್ಕೆ ನೀವು ನನಗೆ ಬಂಗಾರದ ಆಭರಣವನ್ನು ಉಡುಗೊರೆಯಾಗಿ ನೀಡಿದಿರಿ. ಅದರ ಅರ್ಥವೇನು? ಅದು ಶುಭ ಸೂಚಕವೇ?' ಎಂದಳು. ಮುಲ್ಲಾ ನಸ್ರುದ್ದೀನ 'ಇದರ ಅರ್ಥ ನಿನಗೆ ಸಂಜೆಯ ಹೊತ್ತಿಗೆ ಗೊತ್ತಾಗುತ್ತೆ. ಅಲ್ಲಿಯವರೆಗೂ ತಾಳ್ಮೆಯಿಂದ ಇರು' ಎಂದ. ಆ ಕ್ಷಣದಿಂದ ಹೆಂಡತಿಯ ಜೊತೆಗೆ ತುಂಬ ಪ್ರೀತಿಯಿಂದ ನಡೆದುಕೊಂಡ. ಗೌರವ ದಿಂದಲೇ ಅವಳನ್ನು ಆದರಿಸಿದ. ಸಂಜೆಯ ಸಮ ಯಕ್ಕೆ ಅವಳಿಗೆ ಬಂಗಾರದ ಸರವೊಂದನ್ನು ತಂದು ಉಡುಗೊರೆ ಯಾಗಿ ನೀಡಿದ. ಹೆಂಡತಿಯ ಮುಖ ದಲ್ಲಿ ನಗುವರಳಿತ್ತು. ಜೀವನ ತುಂಬ ಅವರು ಬದುಕನ್ನು ತುಂಬ ಖುಷಿಯಾಗಿ ಕಳೆದರು. ಹೆಂಡತಿಯ ಕನಸಿನಲ್ಲಿ ತನ್ನ ತಪ್ಪನ್ನು ಮುಲ್ಲಾ ನಸ್ರುದ್ದೀನ ಕಂಡುಕೊಂಡಿದ್ದ. ಇನ್ನೊಬ್ಬರ ಮಾತುಗಳು, ನಡೆ-ನುಡಿಗಳು, ಕಟುನುಡಿಗಳು ನಮ್ಮನ್ನು ಕೆರಳಿಸುತ್ತವೆ. ಅವುಗಳಿಗೆ ಪ್ರತಿಯಾಗಿ ನಾವು ಉದ್ವೇಗದಿಂದ, ತರಾತುರಿಯಿಂದ ಪ್ರತಿಕ್ರಿಯಿಸುತ್ತೇವೆ. ವಾಸ್ತವದಲ್ಲಿ ಅವುಗಳಲ್ಲಿ ನಮ್ಮ ದೌರ್ಬಲ್ಯತೆಗಳನ್ನು, ನಮ್ಮ ತಪ್ಪುಗಳನ್ನು ಕಂಡುಕೊಳ್ಳಬಹುದಾಗಿದೆ. ನಮ್ಮ ಬೆನ್ನನ್ನು ನಮಗೆ ತೆರೆದು ತೋರಿಸುವ ಕೈಗನ್ನಡಿಯಾಗಿರುತ್ತವೆ. ಅವರ ಬೇಸರದ ನುಡಿಗಳು, ಸವಾಲುಗಳು ನಮ್ಮ ಬದುಕಿನ ಚೆಲುವುಗಳನ್ನು ಕಂಡುಕೊಳ್ಳುವ ತೋರು ದೀಪಗಳಾಗಿರುತ್ತವೆ. ನಮ್ಮಲ್ಲಿ ಹುದುಗಿಕೊಂಡಿರುವ ಅಂತಃಶಕ್ತಿಯನ್ನು ಅನಾವರಣಗೊಳಿಸಬಲ್ಲ ಸಾಧನಗಳಾಗಿರುತ್ತವೆ. ನಮ್ಮ ಅರಿವಿನ ಆಳವನ್ನು ಇನ್ನಷ್ಟು ಹೆಚ್ಚಿಸಬಲ್ಲ ಅವಕಾಶದ ಒರತೆಗಳಾಗಿರುತ್ತವೆ. ಅವುಗಳು ಇನ್ನೊಬ್ಬರ ಜೊತೆಗೆ ಸೌಹಾರ್ದತೆಯ ಸೇತುವೆ ಕಟ್ಟಬಲ್ಲವು. ಸಂಬಂಧಗಳ ಸಿರಿಯನ್ನು ಹೆಚ್ಚಿಸಬಲ್ಲವು. ಅವುಗಳನ್ನು ಒಂದಷ್ಟು ತಾಳ್ಮೆಯಿಂದ ಕೇಳಿಸಿಕೊಳ್ಳುವ, ಧ್ಯಾನಸ್ಥ ಸ್ಥಿತಿಯಿಂದ ಅರ್ಥೈಯಿ ಸಿಕೊಳ್ಳುವ ವ್ಯವಧಾನವನ್ನು ನಾವು ರೂಢಿಸಿಕೊಂಡರೆ ಬದುಕಿನ ಪ್ರಗತಿಗೆ ಮೆಟ್ಟಿಲುಗಳಾಗುತ್ತವೆ.

● ಮಹಾದೇವ ಬಸರಕೋಡ

## ಪುಸ್ತಕ ಲೋಕ

ಪಾಂಚಾಲಿಯ ಭಾವಾಗ್ನಿ - ಇದು ದ್ರೌಪದಿಯ ಬದುಕಿನಲ್ಲಾದ ಏರುಪೇರುಗಳನ್ನು ಕೇಂದ್ರವಾಗಿಟ್ಟುಕೊಂಡು ರಚಿಸಿದ ಕೃತಿ.




ಕುರುಕ್ಷೇತ್ರದಲ್ಲಿ ಹಲವು ವೀರರ ಸಾವು, ನೋವಿನ ಘಟನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದು, ಅಭಿಮನ್ಯುವಿನ ಸಾವಿನ ಘಟನೆಯನ್ನು ವಿವರವಾಗಿ ಚಿತ್ರಿಸಿದ್ದಾರೆ. ಒಂದು ಪಾತ್ರವನ್ನು ಕೇಂದ್ರವಾಗಿಟ್ಟುಕೊಂಡು, ಮಹಾಭಾರತದ ಕಥೆಯನ್ನು ನಿರ್ವಹಿಸಿರುವ ಸಾಹಸವನ್ನು ಈ ಕೃತಿಯಲ್ಲಿ ಕಾಣುತ್ತೇವೆ. ಅಭಿಮನ್ಯುವಿನ ಸಾವು ಹೇಗೆ ದ್ರೌಪದಿಯನ್ನು ಕದಡಿತು ಎಂಬುದನ್ನು ವಿಶೇಷವಾಗಿ ಚಿತ್ರಿಸಲಾಗಿದೆ. ಈ ಕೃತಿಯುದ್ದಕ್ಕೂ ಸ್ತ್ರೀ ಸಂವೇದನೆಯನ್ನು ಸಹ ಕಾಣಬಹುದು. ಬೆಂಗಳೂರಿನ ಸಪ್ನ ಬುಕ್ ಹೌಸ್ ಈ ಪುಸ್ತಕವನ್ನು ಪ್ರಕಟಿಸಿದ್ದು, ಇದು ಸಪ್ನ ಆನ್‌ಲೈನ್‌ನಲ್ಲಿ ಸಹಾ ಲಭ್ಯವಿದೆ.

## ಪಾಕ ಪ್ರವೀಣೆ

ಫೋನಿನ ಸೌಲಭ್ಯ
ಇಂಟರ್ನೆಟ್‌ನಲ್ಲಿ
ಎಲ್ಲಾ ಅಡುಗೆ
ರೆಸಿಪಿಯೂ ಲಭ್ಯ
ಮಾಡುವಳು ಅವರಮ್ಮನಿಗೆ ಕರೆ
ಕೇಳಲು ಚಹಾಕೆ ಎಷ್ಟು
ನೀರು, ಹಾಲು, ಸಕ್ಕರೆ?

● ಮಹಾಂತೇಶ ಮಾಗನೂರ



# ಉದಯವಾಗಲಿ ನಮ್ಮ.. ಗೀತೆಗೆ 100 ವರ್ಷ!

**ಪ್ರಸಿದ್ಧವಾಗಿರುವ 'ಉದಯವಾಗಲಿ ನಮ್ಮ ಚೆಲುವಕನ್ನಡ ನಾಡು' ಗೀತೆಗೆ ಈಗ ನೂರು ವರ್ಷ! ಈ ಸಂಭ್ರಮವನ್ನು ಎಲ್ಲಾ ಕನ್ನಡಿಗರೂ ಆಚರಿಸುವಂತಾಗಲಿ; ಇದೇ 20ರಂದು ಉದ್ಘಾಟನೆಗೊಳ್ಳಲಿರುವ ಮಂಡ್ಯದ ಸಾಹಿತ್ಯ ಸಮ್ಮೇಳನದಲ್ಲೂ ಇದನ್ನು ನೆನಪಿಸಿಕೊಂಡು, ಆ ಗೀತೆಯನ್ನು ಗೌರವಿಸುವಂತಾಗಲಿ.**

● ರಾ.ನಂ. ಚಂದ್ರಶೇಖರ

1924ರ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಾಗತ ಗೀತೆಯಾಗಿ ಹಾಡಿದ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಇಂದಿಗೂ ಎಲ್ಲರಿಗೂ ಸ್ಫೂರ್ತಿಯ ಸೆಲೆಯಾಗಿದೆ. ಕರ್ನಾಟಕ ಏಕೀಕರಣವಾಗಿ ಏಳು ದಶಕಗಳು ಸಮೀಪಿಸುತ್ತಿರುವ ಇಂದಿಗೂ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಪ್ರಸ್ತುತವಾಗಿದೆ. ಹತ್ತಾರು ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡದ ಪ್ರದೇಶಗಳನ್ನು ಒಂದು ಗೂಡಿಸಲು ನಡೆದ ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಈ ಗೀತೆ ಸ್ಫೂರ್ತಿಯ ಸೆಲೆಯಾಗಿತ್ತು.

1924 ಡಿಸೆಂಬರ್ 26-28ರಂದು ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ 39ನೆಯ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಬೆಳಗಾವಿಯಲ್ಲಿ ಜರುಗಿತು. ಈ ಅಧಿವೇಶನ ಬೆಳಗಾವಿಯಲ್ಲಿ ನಡೆಯಲು ಕಾರಣರಾದವರು ಕರ್ನಾಟಕ ಕೇಸರಿ ಎಂದೇ ಹೆಸರಾಗಿದ್ದ ಗಂಗಾಧರ ದೇಶಪಾಂಡೆ. ದೇಶಪಾಂಡೆಯವರು ಈ ಅವಕಾಶವನ್ನು ಬಳಸಿಕೊಂಡು ಬೆಳಗಾವಿಯ ಕನ್ನಡ ಪ್ರದೇಶ ಹಾಗೂ ಹತ್ತಾರು ಪ್ರಾಂತ್ಯಗಳಲ್ಲಿ ಹಂಚಿ ಹೋಗಿರುವ ಕನ್ನಡಿಗರು ಒಂದಾಗಲು ಹಂಬಲಿಸುತ್ತಿದ್ದಾರೆ ಎಂಬುದನ್ನು ರಾಷ್ಟ್ರೀಯ ಕಾಂಗ್ರೆಸ್ ನಾಯಕರಿಗೆ ತಿಳಿಸಿಕೊಡಲು ಬಳಸಿಕೊಂಡರು. ಅಧಿವೇಶನ ನಡೆದ ಸ್ಥಳಕ್ಕೆ ವಿಜಯನಗರ ಎಂದು ಹೆಸರಿಸಲಾಯಿತು. ಪ್ರತಿನಿಧಿಗಳಿಗೆ ನಿರ್ಮಿಸಲಾದ ನೀರಿನ ಕೊಳಕ್ಕೆ ಪಂಪಾ ಸರೋವರ ಎಂದು ಕರೆದರು. ಪ್ರವೇಶ ದ್ವಾರವನ್ನು ಹಂಪೆಯ ವಿರುಪಾಕ್ಷ ದೇವಸ್ಥಾನದ ಗೋಪುರದ ಮಾದರಿಯಲ್ಲಿ ನಿರ್ಮಿಸಲಾಗಿತ್ತು. ಅಧಿವೇಶನದ ಆವರಣದಲ್ಲಿ ಕನ್ನಡ ಸಂಸ್ಕೃತಿ ಎದ್ದು ಕಾಣುವ ವಾತಾವರಣ ನಿರ್ಮಾಣವಾಗಿತ್ತು.

### ಜ್ವರದಲ್ಲಿದ್ದರೂ ಬರೆದರು

ಸ್ವಾಗತ ಸಮಿತಿಯವರು ಕನ್ನಡ ಭಾಷೆಯಲ್ಲಿ ಸ್ವಾಗತ ಗೀತೆ ರಚನಾ ಸ್ಪರ್ಧೆಯನ್ನಿಟ್ಟು ಗೀತೆಗಳಿಗೆ ಆಹ್ವಾನಿಸಿದರು. ಆಗ ಹುಯಿಲುಗೋಳರು ಮಲೇರಿಯಾದಿಂದ ಹಾಸಿಗೆ ಹಿಡಿದಿದ್ದರು. ಅವರನ್ನು ನೋಡಲು ಹೋದ ಮಿತ್ರರು ವೃತ್ತಪತ್ರಿಕೆಯನ್ನು ತೋರಿಸಿ 'ನೀವು ಏಕೆ ಬರೆಯಬಾರದು?' ಎಂದು ಕೇಳಿದರಂತೆ. ಅದೇ ಪ್ರೇರಣೆಯಾಗಿ ಅವರು 'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು' ಬರೆದರು. ಅದು ಆಯ್ಕೆಯಾಯಿತು. ಅದನ್ನು ಕಾಂಗ್ರೆಸ್ ಅಧಿವೇಶನದಲ್ಲಿ ಧಾರವಾಡದ ಹಿರಿಯ ಗಾಯಕ ಗವಾಯಿ ಸುಬ್ಬರಾಯರು ಹಾಡಿದರು (ಸಾಮಾಜಿಕ ತಾಣಗಳಲ್ಲಿ, ವೃತ್ತ ಪತ್ರಿಕೆಗಳಲ್ಲಿ ಕಾಣ ಬರುವ ಹೆಸರು ಹನ್ನೊಂದು ವರ್ಷದ ಗಂಗೂ ಬಾಯಿ ಹಾನಗಲ್ ಎನ್ನುವುದಕ್ಕೆ ದಾಖಲೆ ಇಲ್ಲ.)

ಕಾಂಗ್ರೆಸ್ ಅಧಿವೇಶನ ನಡೆದ ಕೆಲವೇ ದಿಮಗಳಲ್ಲಿ ಸರ್ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಪರಿಷತ್ತಿನ ಮೊದಲ ಸಮಾವೇಶವೂ ಬೆಳಗಾವಿಯಲ್ಲೇ ನಡೆಯಿತು. ಅಲ್ಲೂ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಗೀತೆಯಿಂದಲೇ ಸಭೆ ಪ್ರಾರಂಭವಾಯಿತು. ಏಕೀಕರಣದ ಸಾರ್ವಜನಿಕ ಸಭೆಗಳಲ್ಲಿಯೂ ಅದನ್ನೇ ಹಾಡಲಾಗುತ್ತಿತ್ತು. ಬಂಕಿಮಚಂದ್ರ ಚಟರ್ಜಿಯವರ ವಂದೇ ಮಾತರಂ ಗೀತೆಯಷ್ಟೇ ಪರಿಣಾಮವನ್ನು ಈ ಗೀತೆ ಕನ್ನಡಿಗರ ಮೇಲೆ ಮಾಡಿತೆಂದರೆ ಅತಿಶಯೋಕ್ತಿಯಲ್ಲ ಎಂದಿದ್ದಾರೆ ಪ್ರಸಿದ್ಧ ಇತಿಹಾಸಕಾರ ಡಾ. ಗೋವಿಂದಮೂರ್ತಿ ದೇಸಾಯಿ. ಹರಿದು ಹಂಚಿಹೋದ ಕರ್ನಾಟಕವನ್ನು ಒಂದೆಡೆ ತರಲು ಅಸಂಖ್ಯಾತ ಕನ್ನಡಿಗರಿಗೆ ಪ್ರೇರಣೆ ಕೊಟ್ಟ ಹಾಡಿದು ಎಂದಿದ್ದಾರೆ ಪ್ರಸಿದ್ಧ ಲೇಖಕ ವರದರಾಜ ಹುಯಿಲಗೋಳ. ಮುಂಬಯಿ ಕರ್ನಾಟಕದಲ್ಲಿ ಸೇರ್ಪಡೆಯಾಗಿದ್ದ ನಾಲ್ಕು ಜಿಲ್ಲೆಗಳಲ್ಲಿ ಉದಯವಾಗಲಿ ನಮ್ಮ ಕನ್ನಡ ನಾಡು ಗೀತೆಯನ್ನೇ ಆಗ ನಾಡಗೀತೆಯೆಂದು ಕರೆಯಲಾಗುತ್ತಿತ್ತು. ಕರ್ನಾಟಕದ ನಾಡಗೀತೆಯೆಂದು ಖ್ಯಾತಿ ಪಡೆದಿದ್ದ ಈ ಗೀತೆಯನ್ನು 1970ರಲ್ಲಿ ಅಧಿಕೃತ ನಾಡಗೀತೆ ಪಟ್ಟಿಯಿಂದ ತೆಗೆದು ಹಾಕಲಾಯಿತು.

### ಹುಯಿಲಗೋಳರಿಗೆ ಸನ್ಮಾನ

ಭಾಷಾನ್ವಯ ರಾಜ್ಯಗಳು ರಚನೆಯಾಗಿ 1956 ನವೆಂಬರ್ 1ರಂದು ಬೆಂಗಳೂರಿನ ಸೆಂಟ್ರಲ್ ಕಾಲೇಜು ಮೈದಾನದಲ್ಲಿ ವಿಶಾಲ ಮೈಸೂರು ಎಂಬ ಹೆಸರಿನಲ್ಲಿ ಕನ್ನಡನಾಡನ್ನು ಮಾನ್ಯ ರಾಷ್ಟ್ರಪತಿ ಬಾಬು ರಾಜೇಂದ್ರಪ್ರಸಾದ ಉದ್ಘಾಟಿಸಿದರು. ಅಂದು ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಗೀತೆ ರಚಿಸಿದ ಹುಯಿಲುಗೋಳ ನಾರಾಯಣರಾಯರು ಮತ್ತು ಆ ಗೀತೆಯನ್ನು ದಶಕಗಳ ಕಾಲ ಹಾಡಿ ಕನ್ನಡಿಗರ ಮನಮುಟ್ಟಿದ ಮೈಸೂರು ಆಕಾಶವಾಣಿಯಲ್ಲಿ ಹಾಡಿದ ಪಿ. ಕಾಳಿಂಗರಾಯರನ್ನು, ಮಾನ್ಯ ರಾಷ್ಟ್ರಪತಿ ಬಾಬು ರಾಜೇಂದ್ರಪ್ರಸಾದರಿಂದ ಸ್ವರ್ಣ ಪದಕಗಳನ್ನು ನೀಡಿ ಸನ್ಮಾನಿಸಲಾಯಿತು. ಅಂದು ಕಾಳಿಂಗರಾಯರು 'ಉದಯವಾಯಿತು ಚೆಲುವ ಕನ್ನಡನಾಡು' ಎಂದು ಹಾಡಿದಾಗ ಅಲ್ಲಿ ನೆರದಿದ್ದ ಕನ್ನಡಿಗರು ಹರ್ಷೋದ್ಗಾರ ಮಾಡಿ ಸಂಭ್ರಮಿಸಿದ್ದರು. ಆದರೆ, ಏಕೀಕರಣಕ್ಕೆ ಹೋರಾಡಿದ ಕೆಲವು ಗಣ್ಯರು ಇದನ್ನು ಒಪ್ಪದೆ, 'ಇನ್ನೂ ಹಲವು ಕನ್ನಡ ಪ್ರದೇಶಗಳು ನೆರೆ ರಾಜ್ಯಗಳಲ್ಲಿ ಉಳಿದಿವೆ. ಕನ್ನಡಿಗರೆಲ್ಲ ಒಂದಾಗುವವರೆಗೆ ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು.. ಗೀತೆಯನ್ನೇ ಹಾಡಬೇಕು' ಎಂದರು.

ಹುಯಿಲುಗೋಳ ನಾರಾಯಣರಾಯರ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಕೇವಲ ಒಂದು ಕವನವಲ್ಲ. ಇದು ನಾಡಾಭಿಮಾನ ಮತ್ತು ಕನ್ನಡಿಗರ ತಾಯ್ನಾಡಿನೊಂದಿಗಿನ ಭಾವನಾತ್ಮಕ ಬಂಧದ ಅಭಿವ್ಯಕ್ತಿಯಾಗಿದೆ. ಐತಿಹಾಸಿಕವಾಗಿ ಮಹತ್ವದ ಪರಿಣಾಮ ಬೀರಿದ ಈ ಗೀತೆಯ ಶತಮಾನೋತ್ಸವವನ್ನು ಈಗಿನ ಕರ್ನಾಟಕ ಸರ್ಕಾರ, ಕನ್ನಡಿಗರು ಗಮನಿಸದಿರುವುದ ದುರಂತವೇ ಸರಿ.

### ಸೂಕ್ತ ಗೌರವ ಅಗತ್ಯ

ವಂದೇ ಮಾತರಂ ಗೀತೆಯ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಶಿಕ್ಷಣ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಸರ್ಕಾರಿ ಕಚೇರಿಗಳಲ್ಲಿ ಸೆಪ್ಟೆಂಬರ್ 08, 2006ರಂದು ಬಂಕಿಮಚಂದ್ರ ಚಟ್ಟೋಪಾಧ್ಯಾಯ ಅವರು ರಚಿಸಿದ ರಾಷ್ಟ್ರೀಯ ಗೀತೆ 'ವಂದೇಮಾತರಂ' ಗೀತೆಯನ್ನು ಪಠಿಸುವಂತೆ ಸುತ್ತೋಲೆ ಹೊರಡಿಸಿತ್ತು. ರಾಜಕೀಯ ಪಕ್ಷಗಳು, ವಿದ್ಯಾರ್ಥಿ ಸಂಘಟನೆಗಳು, ಮತ್ತು ಸಾರ್ವಜನಿಕರು ರಾಷ್ಟ್ರಾದ ಎಲ್ಲೆಡೆ ಮೆರವಣಿಗ ನಡೆಸಿ ವಂದೇ ಮಾತರಂ ಪಠಿಸಿದರು. ಆದರೆ, ಅಷ್ಟೇ ಮಹತ್ವದ 'ಉದಯವಾಗಲಿ..' ಗೀತೆಗೆ ಈ ಭಾಗ್ಯ ಇನ್ನೂ ದೊರೆತಿಲ್ಲ. ಇನ್ನೂ ಕಾಲ ಮಿಂಚಿಲ್ಲ; ನಮ್ಮ ಸರಕಾರ, ಸಂಬಂಧಪಟ್ಟ ಇಲಾಖೆಗಳು, ಸಂಘ ಸಂಸ್ಥೆಗಳು ಈ ಗೀತೆ ಶತಮಾನೋತ್ಸವವನ್ನು ಆಚರಿಸುವಂತಾಗಲಿ. ಮಂಡ್ಯದ ಸಾಹಿತ್ಯ ಸಮ್ಮೇಳನದಲ್ಲೂ ಈ ಗೀತೆಯ ಶತಮಾನೋತ್ಸವವನ್ನು ಸ್ಮರಿಸಿ, ಗೌರವಿಸುವಂತಾಗಲಿ.

27-12-2024ರಂದು ಕನ್ನಡ ಗೆಳೆಯರ ಬಳಗ ಮತ್ತು ಕರ್ನಾಟಕ ವಿಕಾಸ ರಂಗ 'ಉದಯವಾಗಲಿ ಚೆಲುವ ಕನ್ನಡ ನಾಡು-100' ಕಾರ್ಯಕ್ರಮವನ್ನು ಬಸವನಗುಡಿ ನ್ಯಾಷನಲ್ ಸ್ಕೂಲ್ ವೃತ್ತದಲ್ಲಿರುವ ಬಿ.ಎಂ.ಶ್ರೀ. ಪ್ರತಿಮೆ ಎದುರು ಸಣ್ಣ ಪ್ರಮಾಣದಲ್ಲಿ ಹಮ್ಮಿಕೊಂಡಿವೆ.

# ಸ್ವರ್ಗಕ್ಕೆ ಒಂದು ಹೆದ್ದಾರಿ!

● ವೀಣಾ ಭಟ್

ನಾನು ಕಚ್ಛ್ ನ ಉಪ್ಪಿನ ಸರೋವರದ ಮೇಲೆ ಕಾಲಿಟ್ಟಾಗ, ಇದು ಹಿಮ ಸಾಗರದಂತೆ ಭ್ರಮೆ ಹುಟ್ಟಿಸುತ್ತದೆ; ಆದರೆ ಇದು ಹಿಮವೂ ಅಲ್ಲ, ಸಾಗರವೂ ಅಲ್ಲ. ಇದು ಉಪ್ಪಿನ ಸರೋವರ. ಈ ಉಪ್ಪಿನ ಮೇಲೆ ಕೊನೆಯಿಲ್ಲದೆ ನಡೆಯುತ್ತಾ ಹೋಗಬಹುದು. ಇದು ಬಗೆದಷ್ಟೂ ಖಾಲಿಯಾಗದ ಉಪ್ಪು. ಕಣ್ಣು ಮುಟ್ಟುವವರೆಗೆ ಬರೀ ಉಪ್ಪು. ಈ ವಿಸ್ಮಯವನ್ನು ನೋಡಿಯೇ ಅನುಭವಿಸಬೇಕು.

ಕಚ್ಛ್ ದಕ್ಷಿಣ ಮತ್ತು ಪಶ್ಚಿಮಕ್ಕೆ ಕಚ್ ಕೊಲ್ಲಿ ಮತ್ತು ಅರೇಬಿಯನ್ ಸಮುದ್ರದಿಂದ ಸುತ್ತುವರೆದಿದೆ; ಉತ್ತರ ಮತ್ತು ಪೂರ್ವ ಭಾಗಗಳು ಕಚ್ಛ್ ನ ಗ್ರೇಟ್ ಮತ್ತು ಲಿಟಲ್ ರಣ್‌ನಿಂದ ಆವೃತವಾಗಿವೆ. ಇದು ಪಾಕಿಸ್ತಾನದ ಗಡಿಯ ಪಕ್ಕದಲ್ಲಿದೆ. ಈ ಪ್ರದೇಶದಲ್ಲಿ ಸಿಂಧೂ ಕಣಿವೆಯ ನಾಗರಿಕತೆಗೆ ಸಂಬಂಧಿಸಿದ ಹಲವಾರು ತಾಣಗಳಿವೆ. ಈ ಜಿಲ್ಲೆಯ ಹಳ್ಳಿಗಳಲ್ಲಿ, ಮುಖ್ಯ ಆಹಾರಗಳಲ್ಲಿ ಕಡಿ-ಖಿಚಡಿ, ಹಾಲು ಮತ್ತು ಬಾಜ್ರಾ ಸೇರಿವೆ. ಈ ಪ್ರದೇಶದಲ್ಲಿ, ಹಾಲನ್ನು ಪವಿತ್ರ ಆಹಾರವೆಂದು ಪರಿಗಣಿಸಲಾಗುತ್ತದೆ.

ಸಿಟಿಯನ್ನು ರಚಿಸಲಾಗುತ್ತದೆ. ತಾತ್ಕಾಲಿಕವಾಗಿ ಮೂಲಸೌಕರ್ಯಗಳನ್ನು ನಿರ್ಮಿಸಲಾಗುತ್ತದೆ. ಇಲ್ಲಿಯ ಟೆಂಟ್‌ಗಳಲ್ಲಿ ಪಂಚತಾರಾ ಹೋಟೇಲಿನಲ್ಲಿರುವಂತೆಯೇ ಎಲ್ಲಾ ಸೌಲಭ್ಯಗಳನ್ನು ಒದಗಿಸುತ್ತಾರೆ. ಇಲ್ಲಿದ್ದುಕೊಂಡು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಬಹುದು.

### ರೋಡ್ ಟು ಹೆವೆನ್

ದಿ ರೋಡ್ ಟು ಹೆವೆನ್ ಭಾರತದ ಗುಜರಾತ್‌ನ ಕಚ್ಛ್ ಜಿಲ್ಲೆಯಲ್ಲಿರುವ ಒಂದು ಹೆದ್ದಾರಿ. ಇದು ನಿಜ ಅರ್ಥದಲ್ಲಿ ಸ್ವರ್ಗದ ದಾರಿ. ಉಪ್ಪಿನ ಸರೋವರದ ಮಧ್ಯದಲ್ಲಿ ಸ್ವರ್ಗಕ್ಕೆ ದಾರಿ! ಇಕ್ಕೆಲಗಳಲ್ಲಿ ನೀರು, ಮಧ್ಯದಲ್ಲಿ ರಸ್ತೆ. ಇದು ರಣ್ ಆಫ್ ಕಚ್ಛ್ ಮೂಲಕ ಸರಿಸುಮಾರು 30 ಕಿಲೋಮೀಟರ್ ವ್ಯಾಪಿಸಿದೆ. ಇದು ಭಾರತದ ಅತಿದೊಡ್ಡ ಉಪ್ಪು ಮೈದಾನದ ಅದ್ಭುತ ನೋಟವನ್ನು ನೀಡುತ್ತದೆ. ಇಲ್ಲಿನ ರಮಣೀಯ ಸೌಂದರ್ಯವಯ ಹೆಸರುವಾಸಿಯಾಗಿದೆ. ಈ ಹೆದ್ದಾರಿಯ ನಿರ್ಮಾಣವು 2019 ರಲ್ಲಿ ಪ್ರಾರಂಭವಾಯಿತು. ಈ ರಸ್ತೆಯು ಪ್ರವಾಸೋದ್ಯಮವನ್ನು ಉತ್ತೇಜಿಸುವ ಮೂಲಕ ಸ್ಥಳೀಯ ಆರ್ಥಿಕತೆಗೆ ಕೊಡುಗೆ ನೀಡುತ್ತದೆ, ವಿಶೇಷವಾಗಿ ವಾರ್ಷಿಕ ರಾನ್ ಉತ್ಸವ್ ಉತ್ಸವದ ಸಮಯದಲ್ಲಿ.

**ಗುಜರಾತ್‌ನ ಕಚ್ಛ್ ಉಪ್ಪಿನ ಮರುಭೂಮಿಯಲ್ಲ ರೋಡ್ ತೊ ಹೆವನ್ ಎಂಬ ರಸ್ತೆಯಿದೆ. ಹೆಸರಿಗೆ ತಕ್ಕಂತೆ, ಇಲ್ಲಿನ ನೋಟವೆಲ್ಲವೂ ಆಹ್ಲಾದಕರ, ಸುಂದರ!**

ರಣ್ ಆಫ್ ಕಚ್ಛ್ ನಲ್ಲಿ ಉಪ್ಪು ಉತ್ಪಾದನೆಯಲ್ಲಿ ತೊಡಗಿರುವ ಸಮುದಾಯ 107 ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಈ ಸಮುದಾಯಗಳನ್ನು 'ಅಗಾರಿಯರು' ಎನ್ನುತ್ತಾರೆ. ಕಚ್ಛ್ ನಲ್ಲಿ 45000 ಅಗಾರಿಯರು ಉಪ್ಪು ತಯಾರಿಸುತ್ತಿದ್ದಾರೆ.

### ಕಚ್ಛ್ ರಣ್ ಉತ್ಸವ

ಕಚ್ಛ್‌ನ ರಣ್ ಉತ್ಸವ ಮೂರು ದಿನಗಳ ಉತ್ಸವ 2005ರಲ್ಲಿ ಪ್ರಾರಂಭವಾಯಿತು; ಕ್ರಮೇಣ 100 ದಿನಗಳ ಆಚರಣೆಯಾಗಿ ವಿಕಸನಗೊಂಡಿತು. ಇದಕ್ಕೆಂದೇ ರೂಪುಗೊಂಡ ಟೆಂಟ್ ಸಿಟಿ ರಣ್ ಆಫ್ ಕಚ್ಛ್ ಹಳ್ಳಿಯ ಸಮೀಪದಲ್ಲಿದೆ. ಅಲ್ಲಿ ಪ್ರತೀ ವರ್ಷ ಅಕ್ಟೋಬರ್ ನಲ್ಲಿ ಹೊಸ ಟೆಂಟ್

### ಕಾಲೊ ಡುಂಗರ್

ಕಾಲೊ ಡುಂಗರ್ ಅಥವಾ ಕಪ್ಪು ಬೆಟ್ಟವು ಕಚ್ಛ್‌ನ ಅತೀ ಎತ್ತರದ ಪ್ರದೇಶ. ಇಲ್ಲಿಂದ ಪಾಕಿಸ್ತಾನದ ಗಡಿ ಬರೀ 40 ಕಿ.ಮೀ. ದೂರ; ಇಲ್ಲೊಂದು ಸೇನಾ ಪೋಸ್ಟ್ ಇದೆ. ಕಾಲೊ ಡುಂಗರ್ ಮೇಲೆ 400 ವರ್ಷಗಳಷ್ಟು ಹಳೆಯದಾದ ದತ್ತಾತ್ರೇಯ ದೇವಸ್ಥಾನವಿದೆ. ಇಲ್ಲಿಂದ ಸುಂದರ ಸೂರ್ಯಾಸ್ತವನ್ನು ನೋಡಬಹುದು. ಬೈನಾಕ್ಯುಲರ್‌ನಿಂದ ಗಡಿಭಾಗದಲ್ಲಿರುವ ಬ್ರಿಡ್ಜ್ ಕೂಡಾ ನೋಡಬಹುದು. ಕಾಲೊ ಡುಂಗರ್‌ನಲ್ಲಿನ ಮ್ಯಾಗ್ನೆಟಿಕ್ ಹಿಲ್ ಒಂದು ಆಪ್ಟಿಕಲ್ ಭ್ರಮೆಯಾಗಿದ್ದು, ಇಲ್ಲಿ ವಾಹನವು ಗುರುತ್ವಾಕರ್ಷಣೆಯಿಂದ ಇಳಿಜಾರಿನ ಮೇಲೆ ಚಲಿಸುತ್ತದೆ. ಕಚ್ಛ್ ನ ಸುತ್ತುಮುತ್ತಲೆಲ್ಲ ಪ್ರವಾಸಿ ಆಕರ್ಷಣೆಗಳೇ, ಒಮ್ಮೆ ನೋಡಲೇಬೇಕಾದವು.

## ಪ | ದ | ಬಂ | ಧ



**ಎಡದಿಂದಬಲಕ್ಕೆ:**

5. ಸೂರ್ಯನನ್ನು ನೆನಪಿಸುವ ಅರುವತ್ತು ಸಂವತ್ಸರಗಳಲ್ಲಿ ಒಂದು (4)
6. ಸವಿಯಾದ ಪ್ರಪಂಚವನ್ನು ಹೀಗೆನ್ನಬಹದೇ? (4)
7. ಮೊಸಳೆಗೆ ಇನ್ನೊಂದು ಹೆಸರು (3)
9. ತೆಳುವಾಗಿರುವ ಲೋಹದ ಹಾಳೆ (3)
11. ಸೊಳ್ಳೆಗೆ ಮತ್ತೊಂದು ಹೆಸರು (3)
13. ಬಡಾವಣೆಯಲ್ಲಿನ ಕಷ್ಟ (3)
14. ಹದಿನೈದು ದಿನಗಳಿಗೊಮ್ಮೆ ಪ್ರಕಟವಾಗುವ ಪತ್ರಿಕೆ (3)
15. ಸ್ವಲ್ಪ ಹೆಚ್ಚಾಗಿಯೇ ಕಂಡ ರಾಜ (3)
17. ಅಷ್ಟ ಸರ್ಪಗಳಲ್ಲಿ ಒಂದು (3)
19. ನಾವು ವಾಸಿಸುವ ಮನೆಗೆ ಹೀಗೆಯೂ ಹೇಳಬಹುದು (4)
20. ಅರಳುವಿಕೆ (4)

**ಮೇಲಿನಿಂದಕೆಳಕ್ಕೆ:**

1. ವಾಜಶ್ರವಸ್ ಮಗ (4)
2. ಮಾರುತಿಗೆ ಮತ್ತೊಂದು ಹೆಸರು ಹೀಗೂ ಇದೆ (3)
3. ಸಾವಿಲ್ಲದ ಎಂದರ್ಥದಲ್ಲಿ ತರುವೂ ಇದೆ (3)
4. ಚಿತ್ತವನ್ನು ಸೆಳೆಯುವಂಥ (4)
8. ನಿದ್ದೆಯಲ್ಲಿ ಮಾತನಾಡಿಕೊಳ್ಳು (5)
10. ಬೆಳಕು, ಗಾಳಿ ಬರಲು ಮಾಡಿದ ವ್ಯವಸ್ಥೆ (3)
12. ಮತ್ತೊಂದು ಬಾಣದಿಂದ ಆರಂಭವಾಗುವ ಸಮುದ್ರ (3)
14. ಶಾಂತಿಸೂಚಕವಾಗಿ ಬಳಸುವ ಪಕ್ಷಿ (4)
16. ಆಂಜನೇಯನಿಗೆ ಹೀಗೊಂದು ಹೆಸರಿದೆ (4)
17. ವಾರದ ನಡುವೆ ಕಾಣುವ ಮಂಗ (3)
18. ಮೀನಿನ ಉಸಿರಾಡುವ ಅಂಗ (3)

**ನಿನ್ನೆಯ ಉತ್ತರ**

**ಎಡದಿಂದ ಬಲಕ್ಕೆ:** 1. ಅರಸ 4. ಕಾಗದ 6. ಕರತಾಡನ 7. ರಿಪು 9. ಅಹನಿ 11. ಮಾರ 12. ಕಾಜಾಣ 13. ಯಜನ 14. ಏರು 15. ಕಮಲ 17. ಸರ 21. ರಸಕವಳ 22. ತೆರಳು 23. ದಿವಾನ

**ಮೇಲಿನಿಂದ ಕೆಳಕ್ಕೆ:** 1. ಅಲೆಮಾರಿ 2. ಸಕಲ 3. ಪಿತಾಮಹ 4. ಹನನ 5. ದಫೇದಾರ 8. ಪುಕಾರು 9. ಅಣಕ 10. ನಿಯಲ 11. ಮಾನಸ 14. ಏಕಾಗ್ರತೆ 16. ಮದಕರಿ 18. ರಸಾಯನ 19. ಮರಳು 20. ಹಳದಿ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

# ಕೃಷ್ಣನ ಪರಮ ಭಕ್ತೆ ಕೃಷ್ಣಾಬಾಯಿ

## ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಒಂದೂರಿನಲ್ಲಿ ಕೃಷ್ಣಾಬಾಯಿ ಎಂಬ ಹೆಸರಿನ ವೃದ್ಧೆ ಒಂದು ಗುಡಿಸಿಲನಲ್ಲಿ ಇರುತ್ತಿದ್ದಳು. ಅವಳು ಶ್ರೀಕೃಷ್ಣ ಪರಮಾತ್ಮನ ಪರಮ ಭಕ್ತಳಾಗಿದ್ದಳು. ವಾಸ್ತವದಲ್ಲಿ ಅವಳ ಹೆಸರು ಸುಖಿ ಬಾಯಿ ಎಂದಾಗಿತ್ತು. ಆದರೆ ಕೃಷ್ಣನ ಪರಮ ಭಕ್ತಳಾಗಿದ್ದರಿಂದ ಊರವರೆಲ್ಲ ಕೃಷ್ಣಾಬಾಯಿ ಎನ್ನುತ್ತಿದ್ದರು. ಆ ಊರಿನ ಮನೆಮನೆಯ ಅಡುಗೆ ಕೆಲಸ, ಕಸ ಮುಸುರೆ ಅವಳ ಕಾಯಕವಾಗಿತ್ತು. ಅವಳು ನಿತ್ಯವೂ ಹೂವಿನ ಹಾರ ಮಾಡಿ ಎರಡು ಹೊತ್ತು ಕೃಷ್ಣನಿಗೆ ತೊಡಿಸುತ್ತಿದ್ದಳು. ತಾನು ಬಿಡುವಾಗಿದ್ದಾಗ ಗಂಟೆಗಟ್ಟಲೆ ಕೃಷ್ಣನೊಂದಿಗೆ ಮಾತನಾಡುತ್ತಿದ್ದಳು. ಇದನ್ನು ನೋಡಿ ಊರ ಜನರು ಅವಳಿಗೆ ಮರುಳು ಎಂದು ತಿಳಿದಿದ್ದರು. ಒಂದು ರಾತ್ರಿ ಶ್ರೀ ಕೃಷ್ಣನು ಅವಳ ಕನಸಲ್ಲಿ ಬಂದು 'ನಾಳೆ ಈ ಊರಲ್ಲಿ ಭೂಕಂಪವಾಗುತ್ತದೆ. ನೀನು ಈ ಊರು ಬಿಟ್ಟು ಬೇರೆ ಊರಿಗೆ ಹೋಗು' ಎಂದು ಹೇಳಿದ.

ಇನ್ನೇನು ಲೋಕ ರಕ್ಷಕನೇ ಈ ಮಾತು ಹೇಳಿದ ಮೇಲೆ ಕೃಷ್ಣಾಬಾಯಿ ಹೊರಡುವ ಸಿದ್ಧತೆ ನಡೆಸಿ ತನ್ನ ಎಲ್ಲ ಸಾಮಗ್ರಿಗಳನ್ನು ಕಟ್ಟಿಕೊಳ್ಳ ತೊಡಗಿದಳು. ಆಮೇಲೆ ಊರವರಿಗೂ ಕೂಡ ಈ ವಿಷಯ ತಿಳಿಸಿದಳು. ಆದರೆ ಊರಿನ ಜನ ಆ ಮುದುಕಿಯ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಮೊದಲೇ ಅವಳು ಕೃಷ್ಣನೊಂದಿಗೆ ಮಾತನಾಡುವುದು ಕಂಡು ಅವಳಿಗೆ ಅರಳೋ ಮರಳೋ ಎನ್ನುತ್ತಿದ್ದ ಜನ ಅವಳ ಮಾತು ಕೇಳಿ ಅಪಹಾಸ್ಯ ಮಾಡಿ ನಕ್ಕರು. ನಗುವವರು ನಗಲಿ, ಉಳಿದುಕೊಳ್ಳುವವರು ಉಳಿಯಲಿ. ಇದು ನನ್ನ ಕೃಷ್ಣನ ಆದೇಶ, ನಾನಂತೂ ಅದನ್ನು ಪಾಲಿಸುವೆ. ಎಂದುಕೊಂಡು ಒಂದು ಎತ್ತಿನ ಗಾಡಿ ತರಿಸಿ, ಅದರಲ್ಲಿ ಮನೆಯಲ್ಲಿಯ ಎಲ್ಲ ಸಾಮಗ್ರಿಗಳನ್ನು ಹಾಕಿಸಿ, ತನ್ನ ಕೃಷ್ಣನ ಮೂರ್ತಿ ಕೈಯಲ್ಲಿ ಹಿಡಿದು ಮುದುಕಿ ಮುದುಕಿ ನಡೆದೇಬಿಟ್ಟಳು. ಅವಳನ್ನು ನೋಡಿ ಎಂಥ ಮೂರ್ಖತನ ಎಂದು ಜನ ನಗತೊಡಗಿದರು.

ಇನ್ನು ತನ್ನ ಊರಿನ ಸೀಮೆ ದಾಟಿ ಬೇರೆ ಊರಿನ ಸೀಮೆ ಪ್ರವೇಶಿಸುವವಳಿದ್ದಳು ಅಷ್ಟರಲ್ಲಿ ಹಿಂದಿನಿಂದ ಶ್ರೀಕೃಷ್ಣನ ಧ್ವನಿ ಬಂತು 'ಅರೆ ಹುಚ್ಚಿ ಹಿಂತಿರುಗಿ ಹೋಗು. ನಿನ್ನ ಗುಡಿಸಲಲ್ಲಿ ಮರೆತು ಬಂದ ಆ ಸೂಜಿಯನ್ನು ತೆಗೆದುಕೊಂಡು ಬಾ. ಅದರಿಂದಲೇ ನೀನು ನನಗೆ ಹೂವಿನ ಮಾಲೆ ಮಾಡಿ ಹಾಕುತ್ತಿದ್ದೆ..!'

ಈ ಮಾತನ್ನು ಕೇಳಿ ಕೃಷ್ಣಬಾಯಿ ಬೇಸರಗೊಂಡಳು. ನನ್ನಿಂದ ಇಷ್ಟು ದೊಡ್ಡ ತಪ್ಪು ಹೇಗಾಯಿತು. ಇನ್ನು ನಾನು ನನ್ನ ಕೃಷ್ಣನಿಗೆ ಮಾಲೆಯಾದರೂ ಹೇಗೆ ಮಾಡಿ ಹಾಕ ಬಲ್ಲೆ..!? ಅವಳು ಕೂಡಲೇ ಎತ್ತಿನಗಾಡಿಯವನನ್ನು ತಡೆದು ನಿಲ್ಲಿಸಿ 'ನಾನು ಮರಳಿ ಬರುವವರೆಗೂ ಇಲ್ಲೇ ಇರು..!' ಎಂದು ಕಾಯಲು ಹೇಳಿ ತನ್ನ ಗುಡಿಸಿಲಿನತ್ತ ಅವಸರ ಅವಸರವಾಗಿ ಹೊರಟು ಬಂದಳು. ಊರವರೆಲ್ಲ ಅವಳ ಹುಚ್ಚುತನಕ್ಕೆ ಅಪಹಾಸ್ಯ ಮಾಡಿ ನಗುವುದೇ ಆಯಿತು. ಕೃಷ್ಣಾಬಾಯಿ ತನ್ನ ಗುಡಿಸಲಲ್ಲಿ ಕಸದಲ್ಲಿ ಸಿಲುಕಿಕೊಂಡ ಸೂಜಿಯನ್ನು ಹುಡುಕಿ ತೆಗೆದುಕೊಂಡು ಹುಚ್ಚಿಯಂತೆ ಎತ್ತಿನಗಾಡಿಯ ಬಳಿ ಓಡಿದಳು. ಗಾಡಿಯವ ಕೇಳಿದ 'ಅಜ್ಜಿ, ನೀನ್ಯಾಕೆ ಇಷ್ಟು ಚಿಂತೆಯಲ್ಲಿ ಇದ್ದಿ..?' ಕೃಷ್ಣಾಬಾಯಿ ಅವನ ಜೊತೆ ಹೆಚ್ಚು ಮಾತು ಬೆಳೆಸದೆ 'ಸರಿ ಈಗ ನೀನು ಮೊದಲು ಈ ಊರಿನ ಸೀಮೆ ದಾಟು..!' ಎಂದು ಹೇಳಿ ಅವಸರ ಮಾಡಿದಳು. ಅವನು ಕೂಡ ಅಷ್ಟೇ ಅವಸರದಿಂದ ಎತ್ತಿನಗಾಡಿ ಓಡಿಸಿದ. ಆದರೇನು... ಅವರು ಆ ಊರಿನ ಸೀಮೆ ದಾಟಿ ಮುಂದೆ ಬರುವುದೇ ತಡ, ಆ ಊರು ಭೂಕಂಪದಿಂದ ಅಲ್ಲೋಲ ಕಲ್ಲೋಲವಾಯಿತು. ಎಲ್ಲಿಂದಲೋ ಪ್ರವಾಹದಂತೆ ಬಂದ ನೀರು ಆ ಊರನ್ನೇ ನುಂಗಿ ಹಾಕಿತು. ಎತ್ತಿನ ಗಾಡಿಯವನೂ ಕೂಡ ಕೃಷ್ಣ ಭಕ್ತನಾಗಿದ್ದ. ಹೀಗಾಗಿ ಯೋಗಾ ಯೋಗದಂತೆ ಭಗವಂತನು ಅವನ ರಕ್ಷಣೆಯನ್ನೂ ಮಾಡಿದ್ದ.

ಭಗವಂತನನ್ನು ನಂಬಿದರೆ ಅವನು ನಮ್ಮ ಬದುಕಿನ ಸಣ್ಣ ಸಣ್ಣ ವಿಷಯಗಳನ್ನೂ ಕೂಡ ಸರಿಪಡಿಸಿ ಜೀವನ ಸುಂದರವಾಗಿಸುತ್ತಾನೆ. ಅವನಿಗೆ ನೂರು ಪ್ರಾರ್ಥನೆಗಳ ಅಗತ್ಯವಿಲ್ಲ . ನಮ್ಮ ಸಮರ್ಪಣೆಯೊಂದೇ ಸಾಕು.

# ಗುಲಾಬಿ ಎಂದೂ ಕಮಲವಾಗುವುದಿಲ್ಲ

ಒಬ್ಬನ ಸ್ವಧರ್ಮ (ಗುಣ)ದ ಬಗ್ಗೆ ಕೃಷ್ಣ ವಿವರಿಸುತ್ತಾನೆ (2.31, 2.37)ಮತ್ತು ಯುದ್ಧ ಮಾಡುವುದು ಕ್ಷತ್ರಿಯನಾದ ಅರ್ಜುನನ ಸ್ವಧರ್ಮವಾದ್ದರಿಂದ ಅವನು ಮಾಡಬೇಕೆಂದು ಅವನಿಗೆ ಉಪದೇಶಿಸುತ್ತಾನೆ(2.31).

ಶಾಶ್ವತವಾದ ಅವ್ಯಕ್ತವಾದ ಹಾಗೂ ಸರ್ವ ವ್ಯಾಪಿಯಾದ 'ಅದು' ಇದರೊಂದಿಗೆ ಕೃಷ್ಣ ಗೀತೆಯನ್ನು ಪ್ರಾರಂಭಿಸುತ್ತಾನೆ. ಸುಲಭವಾಗಿ ತಿಳಿಯಲು ಅದನ್ನು 'ಆತ್ಮ' ಎಂದು ಕರೆಯಲಾಗುತ್ತದೆ. ನಂತರ ಆ 'ಅದು' ಕ್ಕಿಂತ ಒಂದು ಹೆಜ್ಜೆ ಮುಂಚೆ ಬರುವ ಸ್ವಧರ್ಮದ ಬಗ್ಗೆ ಹೇಳಿ ನಂತರ 'ಕರ್ಮ'ಕ್ಕೆ ಬರುತ್ತಾನೆ. ಅಂತರಾತ್ಮವನ್ನು ಅರಿಯುವ ಪ್ರಯಾಣವನ್ನು ಮೂರು ಹಂತಗಳಾಗಿ ವಿಭಜಿಸಬಹುದು. ಮೊದಲನೆಯ ಹಂತ ನಮ್ಮ ಸದ್ಯದ ಪರಿಸ್ಥಿತಿ. ಎರಡನೆಯದು ಸ್ವಧರ್ಮ ವನ್ನು ತಿಳಿಯುವುದು. ಕೊನೆಯದಾಗಿ ಅಂತರಾತ್ಮವನ್ನು ತಲುಪುವುದು. ನಿಜವಾಗಿ ನಮ್ಮ ಸದ್ಯದ ಪರಿಸ್ಥಿತಿಯು ಸ್ವಧರ್ಮ, ಅನುಭವಗಳು, ಜ್ಞಾನ, ಸ್ಮರಣೆಗಳು ಮತ್ತು ನಮ್ಮ ಚಂಚಲ ಮನಸ್ಸಿನಿಂದ ಸಂಗ್ರಹವಾದ ಕಲ್ಪನೆ ಇವುಗಳ ಸಂಯೋಜನೆಯಾಗಿದೆ. ನಾವು ನಮ್ಮನ್ನು ನಮ್ಮ ಮನಸ್ಸಿನ ಮೂಟೆಗಳಿಂದ ಮುಕ್ತಗೊಳಿಸಿಕೊಂಡಾಗ ಸ್ವಧರ್ಮ ನಿಧಾನವಾಗಿ ಬಿಚ್ಚಿಕೊಳ್ಳುತ್ತದೆ. ಕ್ಷತ್ರಿಯ ಶಬ್ದವು ಕ್ಷತ್ -ಅರ್ಥ ನೋಯಿಸು ಹಾಗೂ ತ್ರಯತೇ ಅರ್ಥ ರಕ್ಷಣೆ ಕೊಡು ಎಂಬುವುಗಳ ಸಂಯೋಜನೆ ಯಾಗಿದೆ. ನೋವುಗಳಿಂದ ರಕ್ಷಿಸುವವನೇ ಕ್ಷತ್ರಿಯ.



ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ತಾಯಿ. ಅವಳು ತನ್ನ ಮಗುವನ್ನು ಗರ್ಭದಲ್ಲಿರುವಾಗಲೇ ರಕ್ಷಿಸಿ ಅದು ತನ್ನ ಕಾಲ ಮೇಲೆ ತಾನೇ ನಿಲ್ಲುವವರೆಗೆ ಸಂರಕ್ಷಣೆ ಮಾಡುತ್ತಾಳೆ. ಆದ್ದರಿಂದ ನಮ್ಮ ಜೀವನದಲ್ಲಿ ಬರುವ ಮೊದಲನೇ ಕ್ಷತ್ರಿಯಳೇ ತಾಯಿ.

ಅವಳಿಗೆ ಶಿಶು ಪಾಲನೆಯಲ್ಲಿ ತರಬೇತಿ ಹಾಗೂ ಅನುಭವ ಇಲ್ಲದೆ ಇರಬಹುದು ಆದರೆ ಅದು ಅವಳಿಗೆ ಸ್ವಾಭಾವಿಕವಾಗಿಯೇ ಬಂದಿರುತ್ತದೆ. ಈ ಲಕ್ಷಣವು ಸ್ವಧರ್ಮದ ಒಂದು ಮಿಣುಕು ನೋಟವಾಗಿದೆ. ಒಮ್ಮೆ ಒಂದು ಗುಲಾಬಿ ಹೂವು ಒಂದು ದೊಡ್ಡ ಕಮಲದ ಹೂವಿನಿಂದ ಹೊಸಕಿ ಹಾಕಲ್ಪಟ್ಟಿತು. ಆ ಗುಲಾಬಿ ಹೂವು ತಾನು ಕಮಲದ ಹೂವು ಆಗಬೇಕೆಂಬ ಭಾವನೆಯನ್ನು ಬೆಳಗಿಸಿಕೊಂಡಿತ್ತು. ಆದರೆ ಯಾವುದೇ ರೀತಿಯಿಂದಲೂ ಒಂದು ಗುಲಾಬಿ ಹೂವು ಕಮಲದ ಹೂವು ಆಗಲು ಸಾಧ್ಯವಿಲ್ಲ. ಗುಲಾಬಿ ಹೂವು ತನ್ನ ಸಾಮರ್ಥ್ಯಕ್ಕೆ ಮೀರಿದ ಏನೋ ಆಗಬೇಕೆಂದು ಬಯಸಿತು. ಹಾಗೆಯೇ ನಾವು ಕೂಡ ನಾವಿರುವುದಕ್ಕಿಂತ ಬೇರೆ ಆಗಿರಬೇಕೆಂಬ ಮನೋಧರ್ಮ ಹೊಂದಿದ್ದೇವೆ. ಇದರಿಂದಾಗಿ ಅರ್ಜುನನು ಎದುರಿಸಿದ ವಿಷಾದಕ್ಕೆ ನಾವೂ ಒಳಗಾಗುತ್ತೇವೆ. ಗುಲಾಬಿ ಹೂವು ತನ್ನ ಬಣ್ಣ ಆಕಾರ ಪಾತ್ರವನ್ನು ಬದಲಿಸಿಕೊಳ್ಳಬಹುದು ಆದರೆ ಅದು ಗುಲಾಬಿ ಹೂವಾಗಿಯೇ ಉಳಿಯುತ್ತದೆ ಅದು ಅದರ ಸ್ವಧರ್ಮ.

## ಸಮಾಚಾರ ಸಣ್ಣದಲ್ಲ

### ಸದನಕ್ಕೆ 20 ಸಂಸದರ ಗೈರು; ಬಿಜೆಪಿ ತನಿಖೆ

**ದೆಹಲಿ:** 'ಒಂದು ದೇಶ 1 ಚುನಾವಣೆ' ವಿಧೇಯಕ ಮಂಗಳವಾರ ಲೋಕಸಭೆಯಲ್ಲಿ ಮಂಡನೆಯಾಗಿ ಮತದಾನ ಪ್ರಕ್ರಿಯೆ ನಡೆದಾಗ ಕೇಂದ್ರ ಸಚಿವ ಸಿ.ಆರ್.ಪಾಟೀಲ್ ಸೇರಿದಂತೆ ಬಿಜೆಪಿಯ 20ಕ್ಕೂ ಹೆಚ್ಚು ಸಂಸದರು ಸದನದಲ್ಲಿ ಹಾಜರಿರಲಿಲ್ಲ. ಹಾಗಾಗಿ ವಿಧೇಯಕದ ಪರವಾಗಿ ಎನ್‌ಡಿಎಯಿಂದ ಕೇವಲ 269 ಮತಗಳಷ್ಟೇ ಚಲಾವಣೆ ಆಗಿವೆ. ಮತದಾನ ವೇಳೆ ಕಲಾಪದಲ್ಲಿ ಕಡ್ಡಾಯ ಹಾಜರಿರುವಂತೆ ವಿಪ್ ನೀಡಿದ್ದರೂ ಪಕ್ಷದ ಸಂಸದರು ಗೈರು ಹಾಜರಾಗಿದ್ದಕ್ಕೆ ಬಿಜೆಪಿ ವರಿಷ್ಠರು ಸಿಟ್ಟಾಗಿದ್ದಾರೆ. ಈ ಬಗ್ಗೆ ಪಕ್ಷ ಆಂತರಿಕ ತನಿಖೆಗೆ ಆದೇಶಿಸಿದೆ. ಬಿಜೆಪಿ ಸಂಸದರು ಗೈರಾಗಲು ಏನು ಕಾರಣ ಎಂಬುದನ್ನು ಪರಿಶೀಲಿಸುತ್ತಿದ್ದೇವೆ. ಎನ್‌ಡಿಎ ಮೈತ್ರಿಕೂಟದ ಕೆಲವು ಮಿತ್ರಪಕ್ಷಗಳ 4-5 ಸಂಸದರೂ ಮತದಾನ ವೇಳೆ ಹಾಜರಿರಲಿಲ್ಲ, ಈ ಬಗೆಗೂ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಬಿಜೆಪಿ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ. ಕೆಲವು ಸಂಸದರು ಮಾತ್ರ ವೈಯಕ್ತಿಕ ಮತ್ತು ಅಧಿಕೃತ ಕಾರ್ಯವಿದ್ದ ಹಿನ್ನೆಲೆ ಸದನಕ್ಕೆ ಮಂಗಳವಾರ ಹಾಜರಾಗಲು ಆಗದೇ ಇರುವ ಬಗ್ಗೆ ಮುಂಚಿತವಾಗಿಯೇ ತಿಳಿಸಿದ್ದರು ಎಂಬ ಮಾಹಿತಿ ಲಭ್ಯವಾಗಿದೆ. ಗುಜರಾತ್‌ನಿಂದ ಲೋಕಸಭೆಗೆ ಚುನಾಯಿತರಾಗಿರುವ ಕೇಂದ್ರ ಸಚಿವ ಸಿ.ಆರ್. ಪಾಟೀಲ್ ಮತ್ತು ಕೆಲ ಬಿಜೆಪಿ ಸಂಸದರು ರಾಜಸ್ಥಾನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ 50 ಸಾವಿರ ಕೋಟಿ ರು. ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡುವ ಸಮಾರಂಭದಲ್ಲಿದ್ದರು ಎಂದು ಮೂಲಗಳು ತಿಳಿಸಿವೆ.

### ಉ.ಪ್ರ: ಬಲ್ಲಿಯ ಬಿಜೆಪಿ ಕಚೇರಿಗೇ ಬುಲ್ಡೋಜರ್!

**ಬಲ್ಲಿಯ:** ಉತ್ತರಪ್ರದೇಶ ರಾಜ್ಯದ ಬಲ್ಲಿಯ ನಗರದಲ್ಲಿನ ಬಿಜೆಪಿ ಕಚೇರಿ ಮೇಲೆಯೇ ನಗರ ಪಾಲಿಕೆ ಅಧಿಕಾರಿಗಳು ಬುಲ್ಡೋಜರ್ ಚಲಾಯಿಸಿ ನೆಲಸಮಗೊಳಿಸಿದ್ದಾರೆ. ನಗರದ ಇಂದಿರಾ ಮಾರ್ಕೆಟ್ ಪ್ರದೇಶದ ಚಿಟ್ಟು ಪಾಂಡೆಯಲ್ಲಿ ಅತಿಕ್ರಮಿತ ಜಾಗದಲ್ಲಿ ನಿರ್ಮಾಣಗೊಂಡಿದ್ದ ಬಿಜೆಪಿ

ಕಚೇರಿಯನ್ನು ಬಲ್ಲಿಯ ನಗರ ಪಾಲಿಕೆ ಅಧಿಕಾರಿಗಳು ಮಂಗಳವಾರ ಬುಲ್ಡೋಜರ್ ಕಾರ್ಯಾಚರಣೆ ಮೂಲಕ ತೆರವುಗೊಳಿಸಿದ್ದಾರೆ. ಜಿಲ್ಲಾಡಳಿತ ಸಿಬ್ಬಂದಿ ಮತ್ತು ಭಾರೀ ಸಂಖ್ಯೆಯ ಪೊಲೀಸರ ಭದ್ರತೆಯಲ್ಲಿ ಬಿಜೆಪಿ ಕಚೇರಿ ತೆರವು ಕಾರ್ಯಾಚರಣೆ ನಡೆಸಲಾಗಿದೆ. ಪಕ್ಷದ ಕಚೇರಿ ಕಟ್ಟಡಕ್ಕೇ ಬುಲ್ಡೋಜರ್ ನುಗ್ಗಿಸಿದ್ದಕ್ಕೆ ಸ್ಥಳೀಯ ಬಿಜೆಪಿ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ ಎಂದು ವರದಿಯಾಗಿದೆ. ಕಾನೂನು ಪ್ರಕಾರ ತೆರವು ಕಾರ್ಯಾಚರಣೆ ನಡೆದಿದೆ. ಜಾಗ ಅತಿಕ್ರಮಿಸಿ ಕಟ್ಟಡ ನಿರ್ಮಿಸಿದ್ದರಿಂದ ಬುಲ್ಡೋಜರ್ ಕಾರ್ಯಾಚರಣೆ ಅನಿವಾರ್ಯವಾಯಿತು ಎಂದು ಉಪ ವಿಭಾಗಾಧಿಕಾರಿ ರಾಜೇಶ್ ಕುಮಾರ್ ಸುದ್ದಿಗಾರರಿಗೆ ತಿಳಿಸಿದ್ದಾರೆ. ಜಿಲ್ಲಾಡಳಿತದ ನಡೆಗೆ ಬಿಜೆಪಿ ಜಿಲ್ಲಾ ಘಟಕದ ಉಪಾಧ್ಯಕ್ಷ ಸುರೇಂದ್ರ ಸಿಂಗ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

### ಮಣಿಪುರ ಗಲಭೆಯಲ್ಲಿ 'ಸ್ಟಾರ್‌ಲಿಂಕ್' ಬಳಕೆ?

**ದೆಹಲಿ:** ಮಣಿಪುರದಲ್ಲಿನ ಜನಾಂಗೀಯ ಸಂಘರ್ಷ ಘಟನೆಗಳಲ್ಲಿ ಅಮೆರಿಕ ಮೂಲದ ಉಪಗ್ರಹ ಸಂಪರ್ಕ ಸೇವಾ ಕಂಪನಿ 'ಸ್ಟಾರ್‌ಲಿಂಕ್' ಬಳಕೆಯಾಗಿದೆ ಎಂದು ಗಂಭೀರ ಆರೋಪ ಕೇಳಿಬಂದಿದೆ. ಇಂಫಾಲ ಪೂರ್ವ ಜಿಲ್ಲೆಯ ಕೀರಾವೊ ಖುನೌನಲ್ಲಿ ಇತ್ತೀಚೆಗೆ ನಡೆಸಲಾದ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಗಳು, ಶಂಕಿತ ಉಗ್ರರ ಅಡಗುತಾಣಗಳಿಂದ ಶಸ್ತ್ರಾಸ್ತ್ರಗಳ ಜತೆಗೇ ಕೆಲವು ಇಂಟರ್ನೆಟ್ ಉಪಕರಣಗಳನ್ನೂ ವಶಪಡಿಸಿಕೊಂಡಿದ್ದವು. ಅದರ ಫೋಟೋಗಳನ್ನು ಸೇನಾಪಡೆಗಳ ಭಾಗವಾದ ಸ್ಪಿಯರ್ ಕಾರ್ಪ್ಸ್ ತಂಡ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿತ್ತು. ಈ ಉಪಗ್ರಹ ಸಂಪರ್ಕ ಸಾಧನಗಳ ಪೈಕಿ ಒಂದರಲ್ಲಿ ಸ್ಟಾರ್‌ಲಿಂಕ್ ಲೋಗೋ ಇರುವುದನ್ನು ಜಾಲತಾಣ ಬಳಕೆದಾರರು ಗುರುತಿಸಿದ್ದರು. 'ಮಣಿಪುರ ಹಿಂಸಾಚಾರದಲ್ಲಿ ಭಾಗಿಯಾಗಿರುವ ಉಗ್ರ ತಂಡಗಳು ಸ್ಟಾರ್‌ಲಿಂಕ್ ಸೇವೆ ಬಳಸುತ್ತಿದ್ದಾರೆ. ಎಲಾನ್ ಮಸ್ಕ್ ಈ ವಿಚಾರ ಪರಿಶೀಲಿಸಬೇಕು ಮತ್ತು ತಂತ್ರಜ್ಞಾನದ ದುರುಪಯೋಗ ನಿಯಂತ್ರಿಸಲು ನೆರವಾಗಬೇಕು' ಎಂದು 'ಎಕ್ಸ್' ಸಂದೇಶದಲ್ಲೇ ಎಲಾನ್ ಮಸ್ಕ್ ಅವರಿಗೆ ನೆಟ್ಟಿಗರು ಮನವಿ ಮಾಡಿದ್ದರು. ಸಂದೇಶಕ್ಕೆ ಪ್ರತಿಕ್ರಿಯಿಸಿದ ಮಸ್ಕ್, ಇದೆಲ್ಲಾ ಸುಳ್ಳು ಆರೋಪ. ಸ್ಟಾರ್‌ಲಿಂಕ್ ಉಪಗ್ರಹದ ತರಂಗಗಳನ್ನು ಭಾರತದ ಮೇಲೆ ಬಳಕೆ ಮಾಡಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.

{ ಜಿತೇಂದ್ರ ಸಿಂಗ್ } ಕೇಂದ್ರ ಸಚಿವ

**ನೇರ ನೇಮಕ ಪ್ರಕ್ರಿಯೆ ಮೂಲಕ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಜ್ಞಾನ ಹೊಂದಿರುವ ವಿಷಯ ತಜ್ಞರಾದ 51 ಮಂದಿಯನ್ನು ನೇಮಿಸಿಕೊಳ್ಳಲಾಗಿದೆ. ಅವರೆಲ್ಲರೂ ಸದ್ಯ ಅವರ ಪರಿಣತಿ ಆಧರಿಸಿ ಕೇಂದ್ರ ಸರಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. 2018ರಿಂದ ಈವರೆಗೂ 63 ತಜ್ಞರನ್ನು ಇದೇ ರೀತಿ ನೇಮಿಸಿಕೊಳ್ಳಲಾಗಿದೆ.**



# ವಾಯುಭಾರ ಕುಸಿತ; 3 ದಿನ ಆಂಧ್ರ ಭಾರಿ ಮಳೆ

ಬಂಗಾಳ ಕೊಲ್ಲಿಯಲ್ಲಿ ಚಂಡಮಾರುತದ ಸಾಧ್ಯತೆ | ಡಿ.20ರವರೆಗೂ ಗುಡುಗು-ಮಿಂಚು ಸಹಿತ ಮಳೆ | ಕರ್ನಾಟಕದ 5 ಜಿಲ್ಲೆ, ತೆಲಂಗಾಣ ವಿವಿಧೆಡೆ ಮಳೆ | ಹವಾಮಾನ ಇಲಾಖೆ ಮುನ್ಸೂಚನೆ

**ಅಮರಾವತಿ:** ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಪರಿಸ್ಥಿತಿ ಉಂಟಾಗಿದ್ದು, ಆಂಧ್ರಪ್ರದೇಶ ರಾಜ್ಯದಲ್ಲಿ ಮುಂದಿನ 3 ದಿನಗಳಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ. ಕರ್ನಾಟಕ ರಾಜ್ಯದಲ್ಲಿಯೂ ಬೆಂಗಳೂರು ಸೇರಿದಂತೆ ನೆರೆಯ ಐದು ಜಿಲ್ಲೆಗಳಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬಂಗಳ ಕೊಲ್ಲಿಯಲ್ಲಿನ ವಾಯುಭಾರ ಕುಸಿತದ ಕಾರಣ ಮುಂದಿನ ಮೂರು ದಿನಗಳು ಆಂಧ್ರದಲ್ಲಿ ಭಾರಿ ಮಳೆಯಾಗಲಿದೆ. ಡಿ.18ರಿಂದ 20ರವರೆಗೂ ಆಂಧ್ರಪ್ರದೇಶದ ಉತ್ತರ ಮತ್ತು ದಕ್ಷಿಣ ಕರಾವಳಿ, ಯಾನಂ ಮತ್ತು ರಾಯಲಸೀಮಾ ಪ್ರದೇಶಗಳಲ್ಲಿ ಗುಡುಗು-ಮಿಂಚಿನಿಂದ ಕೂಡಿದ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಬುಧವಾರ ಮಾಹಿತಿ ನೀಡಿದೆ.

**ಚಂಡಮಾರುತ:** ವಾಯುಭಾರ ಕುಸಿತವೇನಾದರೂ ಚಂಡಮಾರುತವಾಗಿ ರೂಪು ತಳೆದರೆ ಅದರ ಪರಿಚಲನೆ ಸಮುದ್ರ ಮಟ್ಟದಿಂದ 5.8 ಕಿ.ಮೀವರೆಗೂ ವಿಸ್ತರಿಸಲಿದೆ. ಗುರುವಾರ ಉತ್ತರ ತಮಿಳುನಾಡು ಮತ್ತು ದಕ್ಷಿಣ ಆಂಧ್ರಪ್ರದೇಶ ಕರಾವಳಿಯತ್ತ ವಾಯವ್ಯ ಮಾರ್ಗವಾಗಿ ಚಂಡಮಾರುತ ಚಲಿಸುವ ಸಾಧ್ಯತೆಯಿದೆ ಎಂದೂ ಮುನ್ಸೂಚನೆಯಲ್ಲಿ ತಿಳಿಸಲಾಗಿದೆ.

ಆ ಬಳಿಕ, ಆಂಧ್ರಪ್ರದೇಶದ ಕರಾವಳಿ ಭಾಗದ ಉದ್ದಕ್ಕೂ ಉತ್ತರ ಮಾರ್ಗವಾಗಿ ಚಂಡಮಾರುತ ಸಾಗುವ ನಿರೀಕ್ಷೆಯಿದೆ. ಡಿ.25ರವರೆಗೆ ಉತ್ತರ ಕರಾವಳಿ ಆಂಧ್ರಪ್ರದೇಶ ಮತ್ತು ಯಾನಂ ಭಾಗದ ಕೆಲವೆಡೆ ಹಗುರದಿಂದ ಮಧ್ಯಮ ಪ್ರಮಾಣದಲ್ಲಿ ಮಳೆ ಸುರಿಯಲಿದೆ ಎಂದು ಮುನ್ಸೂಚನೆಯಲ್ಲಿ ಅಂದಾಜು ಮಾಡಲಾಗಿದೆ.

ಆರೆಂಜ್-ಯೆಲ್ಲೋ ಅಲರ್ಟ್: ಕಾಕಿನಾಡ, ಅನಕಾಪಲ್ಲಿ, ವಿಶಾಖಪಟ್ಟಣ, ವಿಜಯನಗರಂ, ಪ್ರಕಾಶಂ, ಎಸ್‌ಪಿಆರ್ ನೆಲ್ಲೂರು, ತಿರುಪತಿ ಜಿಲ್ಲೆಗಳಿಗೆ ಬುಧವಾರ ಯೆಲ್ಲೋ ಅಲರ್ಟ್ ನೀಡಲಾಗಿತ್ತು. ಗುರುವಾರಕ್ಕೆ ಕಾಕಿನಾಡ, ಅನಕಾಪಲ್ಲಿ, ವಿಶಾಖಪಟ್ಟಣಂ, ವಿಜಯನಗರಂ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇರುವುದರಿಂದ ಆರೆಂಜ್ ಅಲರ್ಟ್ ನೀಡಲಾಗಿದೆ.

**ಉತ್ತರದಲ್ಲಿ ಒಣಹವೆ:** ಕರ್ನಾಟಕದ ಕರಾವಳಿ ಮತ್ತು ಉತ್ತರ ಒಳನಾಡಿನಲ್ಲಿ ಗುರುವಾರ ಒಣ ಹವೆ ಮುಂದುವರೆಯಲಿದೆ. ಒಳನಾಡಿನ ಕೆಲವೆಡೆ ಮುಂಜಾನೆ ಮಂಜು ಬೀಳಲಿದೆ. ಶುಕ್ರವಾರವೂ ದಕ್ಷಿಣ ಒಳನಾಡಿನ ಇತರ ಭಾಗಗಳಲ್ಲಿ ಒಣ ಹವೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.




ಕರ್ನಾಟಕದಲ್ಲಿ ಡಿ.18ರಿಂದ 26ರವರೆಗಿನ ಮಳೆ ಮೋಡಗಳ ಚಲನೆ ಅಂದಾಜು ಚಿತ್ರ.

#### ತೆಲಂಗಾಣ, ಕರ್ನಾಟಕದಲ್ಲೂ ಮಳೆ

**ತೆಲಂಗಾಣದ ಕೆಲವೆಡೆ ಗುರುವಾರ ಮತ್ತು ಶುಕ್ರವಾರ ಹಗುರದಿಂದ ಮಧ್ಯಮ ಪ್ರಮಾಣದಲ್ಲಿ ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಗುರುವಾರ ಕರ್ನಾಟಕದ ದಕ್ಷಿಣ ಭಾಗ, ಕರಾವಳಿ ಮತ್ತು ಮಧ್ಯ ಕರ್ನಾಟಕದ ಕೆಲವೆಡೆ ಹಗುರದಿಂದ ಮಧ್ಯಮ ಪ್ರಮಾಣದಲ್ಲಿ ಮಳೆಯಾಗುವ ನಿರೀಕ್ಷೆ ಇದೆ. ಕರ್ನಾಟಕದ ರಾಜಧಾನಿ ಬೆಂಗಳೂರು, ನೆರೆಯ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಗುರುವಾರ ಮಳೆಯಾಗುವ ಸಾಧ್ಯತೆ ಇದೆ. ಶುಕ್ರವಾರ ಕೂಡಾ ಕೋಲಾರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಮತ್ತೆ ಹಗುರ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತನ್ನ ಮುನ್ಸೂಚನೆಯಲ್ಲಿ ತಿಳಿಸಿದೆ.**

ಮದ್ದುಗುಂಡು ತುಂಬುತ್ತಿದ್ದಾಗ ಅವಘಡ

## ಬಿಕಾನೇರ್: ಯುದ್ಧ ಟ್ಯಾಂಕ್ ಸ್ಫೋಟ-ಸೈನಿಕರಿಬ್ಬರ ಸಾವು

**ಬಿಕಾನೇರ್:** ರಾಜಸ್ಥಾನದ ಬಿಕಾನೇರ್‌ನ ಮಹಾಜನ್ ಫೀಲ್ಡ್ ಫೈರಿಂಗ್ ರೇಂಜ್‌ನಲ್ಲಿ ಬುಧವಾರ ಯುದ್ಧ ಟ್ಯಾಂಕ್ ದಿಢೀರ್ ಸ್ಫೋಟಗೊಂಡು ಇಬ್ಬರು ಸೈನಿಕರು ಹುತಾತ್ಮರಾಗಿದ್ದಾರೆ. ಒಬ್ಬ ಯೋಧ ಗಾಯಗೊಂಡಿದ್ದಾರೆ.

ಯುದ್ಧ ಟ್ಯಾಂಕ್‌ಗೆ ಮದ್ದುಗುಂಡುಗಳನ್ನು ಭರ್ತಿ ಮಾಡುತ್ತಿದ್ದಾಗ ದಿಢೀರ್ ಸ್ಫೋಟವಾಗಿದೆ. ಇದು ಸೇನಾ ಶಿಬಿರದಲ್ಲಿ ಈ ವಾರ ನಡೆದ ಎರಡನೇ ಅವಘಡವಾಗಿದೆ. ಮಾಹಿತಿ ತಿಳಿದು ಸ್ಥಳೀಯ ಪೊಲೀಸರು ಸ್ಥಳಕ್ಕೆ ದೌಡಾಯಿಸಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಮೂವರು ಸೈನಿಕರು ಟ್ಯಾಂಕ್‌ಗೆ ಮದ್ದುಗುಂಡು ಭರ್ತಿ ಮಾಡುವ ತಾಲೀಮು ನಡೆಸುತ್ತಿದ್ದಾಗ ಚಾರ್ಜರ್ ಸ್ಫೋಟದಿಂದಾಗಿ ಅವಘಡವಾಗಿದೆ ಎಂದು ರಕ್ಷಣಾ ಇಲಾಖೆ ವಕ್ತಾರ ಲೆಫ್ಟಿನೆಂಟ್ ಕರ್ನಲ್ ಅಮಿತಾಭ್ ಶರ್ಮಾ ಹೇಳಿದ್ದಾರೆ.

ಸ್ಫೋಟದಲ್ಲಿ ಯೋಧರಾದ ಅಶುತೋಷ್ ಮಿಶ್ರಾ ಮತ್ತು ಜಿತೇಂದ್ರ ಸಾವನ್ನಪ್ಪಿದ್ದಾರೆ. ಗಾಯಾಳು ಯೋಧನನ್ನು ಹೆಲಿಕಾಪ್ಟರ್‌ನಲ್ಲಿ ಚಂಡೀಗಢದಲ್ಲಿನ ಸೇನಾ ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ಸರ್ಕಲ್ ಆಫೀಸರ್ ನರೇಂದ್ರ ಕುಮಾರ್ ಪೂನಿಯ ತಿಳಿಸಿದ್ದಾರೆ.

ಮಿಶ್ರಾ ಉತ್ತರ ಪ್ರದೇಶದ ಡಿಯೋರಿಯಾದವರು. ಜಿತೇಂದ್ರ ರಾಜಸ್ಥಾನದ ದೌಸಾದವರು. ಇಬ್ಬರ ಮೃತದೇಹಗಳನ್ನು ಸೂರತ್‌ಗಢದಲ್ಲಿನ ಸೇನಾ ಶಿಬಿರಕ್ಕೆ ಕೊಂಡೊಯ್ಯಲಾಗಿದೆ.

ರಾಜಸ್ಥಾನದ ಬಿಕಾನೇರ್‌ನಲ್ಲಿನ ಸೇನಾ ತಾಲೀಮು ಸ್ಥಳದಲ್ಲಿ ಯುದ್ಧ ಟ್ಯಾಂಕ್ ಸ್ಫೋಟಗೊಂಡಿದೆ.

## ಒಂದು ಚುನಾವಣೆ ಜೆಪಿಸಿಗೆ ಪ್ರಿಯಾಂಕಾ ವಾದ್ರಾ ನೇಮಕ

**ದೆಹಲಿ:** ಲೋಕಸಭೆಯಲ್ಲಿ ಮಂಗಳವಾರ ಮಂಡನೆಯಾದ 'ಒಂದು ರಾಷ್ಟ್ರ ಒಂದು ಚುನಾವಣೆ' ವಿಧೇಯಕದ ಪರಾಮರ್ಶೆಗೆ ಜಂಟಿ ಸಂಸದೀಯ ಸಮಿತಿ(ಜೆಪಿಸಿ) ರಚಿಸಲಾಗುತ್ತಿದ್ದು, 21 ಲೋಕಸಭೆ ಸದಸ್ಯರು ಮತ್ತು 10 ರಾಜ್ಯಸಭೆ ಸದಸ್ಯರನ್ನು ಒಳಗೊಂಡಿರಲಿದೆ. ಕಾಂಗ್ರೆಸ್ ಪಕ್ಷ ತನ್ನ ಪ್ರತಿನಿಧಿಯಾಗಿ ಕೇರಳದ ವಯನಾಡ್ ಕ್ಷೇತ್ರದ ಸಂಸದೆ, ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾದ್ರಾ ಅವರನ್ನು ನಾಮನಿರ್ದೇಶನ ಮಾಡಲಿದೆ. ಅಲ್ಲದೆ ಮನೀಶ್ ತಿವಾರಿ, ರಾಜ್ಯಸಭಾ ಸಂಸದರಾದ ಸುಖದೇವ್ ಭಗತ್, ರಣದೀಪ್ ಸುರ್ಜೆವಾಲಾ ಅವರನ್ನು ಕಾಂಗ್ರೆಸ್ ಜೆಪಿಸಿಗೆ ನಾಮನಿರ್ದೇಶನ ಮಾಡಲಿದೆ.

ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷ ಸಂಸದ ಕಲ್ಯಾಣ್ ಬ್ಯಾನರ್ಜಿ ಅವರನ್ನು ನಾಮನಿರ್ದೇಶನ ಮಾಡಲಿದ್ದರೆ, ಡಿಎಂಕೆಯಿಂದ ಪಿ. ವಿಲ್ಸನ್, ಸಮಾಜವಾದಿ ಪಕ್ಷದಿಂದ (ಎಸ್‌ಪಿ) ಧರ್ಮೇಂದ್ರ ಯಾದವ್ ಸಮಿತಿಯ ಭಾಗವಾಗಲಿದ್ದಾರೆ ಎಂದು ತಿಳಿದುಬಂದಿದೆ. ಡಿ.20ರಂದು ಸಂಸತ್ ಚಳಿಗಾಲದ ಅಧಿವೇಶನ ಕೊನೆಗೊಳ್ಳಲಿದ್ದು, ಅದಕ್ಕೂ ಮುನ್ನವೇ ಜೆಪಿಸಿ ರಚನೆ ಅಂತಿಮಗೊಳ್ಳುವ ಸಾಧ್ಯತೆ ಇದೆ.

### ಎಎಪಿ ಸಂಸದ ವಿರುದ್ಧ 100 ಕೋಟಿ ರು. ದಾವೆ

**ಪಣಜಿ:** 'ಉದ್ಯೋಗಕ್ಕಾಗಿ ನಗದು' ಹಗರಣ ಸಂಬಂಧ ತಮ್ಮ ವಿರುದ್ಧ ಆರೋಪ ಮಾಡಿದ ಆಮ್ ಆದ್ಮಿ ಪಕ್ಷದ ಸಂಸದ ಸಂಜಯ್ ಸಿಂಗ್ ವಿರುದ್ಧ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರ ಪತ್ನಿ ಸುಲಕ್ಷಣಾ ಸಾವಂತ್ 100 ಕೋಟಿ ರು.ಗಳ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ಉತ್ತರ ಗೋವಾದ ಬಿಚೋಲಿಂನ ಸಿವಿಲ್ ನ್ಯಾಯಾಲಯ 2025ರ ಜ.10ರೊಳಗೆ ಉತ್ತರ ನೀಡುವಂತೆ ಸಂಜಯ್ ಸಿಂಗ್‌ಗೆ ನೋಟಿಸ್ ಜಾರಿ ಮಾಡಿದೆ. ಸಂಜಯ್ ಸಿಂಗ್ ಇತ್ತೀಚೆಗೆ ದೆಹಲಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಸುಲಕ್ಷಣಾ ಸಾವಂತ್ ನೌಕರಿ ನೇಮಕದಲ್ಲಿ ಹಣ ಪಡೆದಿದ್ದಾರೆಂದು ಆರೋಪ ಮಾಡಿದ್ದರು.

### ಶಂಭುಗಡಿ: ಆತ್ಮಹತ್ಯೆಗೆ ಯತ್ನಿಸಿದ್ದ ರೈತ ಸಾವು

**ಪಟಿಯಾಲ:** ಪಂಜಾಬ್, ಹರಿಯಾಣ ಸೇರಿದಂತೆ ಉತ್ತರ ಭಾರತದ ಹಲವು ರಾಜ್ಯಗಳ ರೈತರು 'ಕನಿಷ್ಠ ಬೆಂಬಲ ಬೆಲೆ ಕಾಯಿದೆ ಜಾರಿಗೆ ಆಗ್ರಹಿಸಿ' ಶಂಭು ಗಡಿಯಲ್ಲಿ ಹಲವು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದು, ರೈತರೊಬ್ಬರು ಡಿ.14ರಂದು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅವರು ಪಟಿಯಾಲದ ಸರಕಾರಿ ರಾಜೇಂದ್ರ ಆಸ್ಪತ್ರೆಯಲ್ಲಿ ಬುಧವಾರ ಸಾವನ್ನಪ್ಪಿದರು. ಲೂದಿಯಾನ ಜಿಲ್ಲೆಯ ರತನ್ಹೇರಿ ಗ್ರಾಮದ ರೈತ 57 ವರ್ಷದ ರಂಜೋಧ್ ಸಿಂಗ್ ಮೃತರು. ನ.26ರಿಂದಲೂ ಖಾನೌರಿ ಗಡಿಯಲ್ಲಿ ಆಮರಣಾಂತ ಉಪವಾಸ ನಡೆಸುತ್ತಿರುವ ರೈತ ನಾಯಕ ಜಗಜಿತ್ ಸಿಂಗ್ ದಲ್ಲೆವಾಲ್ ಅವರ ದೇಹಸ್ಥಿತಿ ಹದಗೆಟ್ಟಿದ್ದನ್ನು ಕಂಡು ಹತಾಶೆಗೊಂಡ ರೈತ ರಂಜೋಧ್ ಸಿಂಗ್ ಆತ್ಮಹತ್ಯೆಗೆ ಯತ್ನಿಸಿದ್ದರು ಎನ್ನಲಾಗಿದೆ.

### ಬೆಂಕಿ ಅವಘಡ; ಆರು ಸಾವು

**ಕಥುವಾ:** ಜಮ್ಮು-ಕಾಶ್ಮೀರದ ಕಥುವಾ ಜಿಲ್ಲೆಯಲ್ಲಿ ತೀವ್ರ ಚಳಿ ಎಂದು ಶಾಖ ಪಡೆಯಲು ಹೊತ್ತಿಸಿದ್ದ ಬೆಂಕಿ ಮನೆಯಿಡೀ ಹೊಗೆ ತುಂಬಿಸಿದ್ದರಿಂದ ನಿವೃತ್ತ ಡಿವೈಎಸ್‌ಪಿ ಅವತಾರ್ ಕೃಷ್ಣ ರೈನಾ(81) ಮತ್ತು ಅವರ 3 ವರ್ಷದ ಮೊಮ್ಮಗ ಸೇರಿದಂತೆ 6 ಜನರು ಬುಧವಾರ ಮೃತಪಟ್ಟಿದ್ದಾರೆ. ಮಗಳು ಬರ್ಖಾ ರೈನಾ(25), ಆಕೆಯ ಪುತ್ರ ತಕ್ಷ(3), ಗಂಗಾ ಭಗತ್(17), ಡ್ಯಾನಿಶ್ ಭಗತ್(15), ಅದ್ವಿಕ್(6) ಮೃತರಾಗಿದ್ದಾರೆ. ಅವತಾರ್ ಕೃಷ್ಣ ರೈನಾ ಅವರ ಪತ್ನಿ(61) ಸೇರಿ ನಾಲ್ವರು ಆಸ್ಪತ್ರೆಯಲ್ಲಿದ್ದಾರೆ.

## ಭಾರತ ಹೇಗೋ ನಾವೂ ಹಾಗೇ: ಟ್ರಂಪ್

ಅಮೆರಿಕ ಉತ್ಪನ್ನಗಳಿಗೆ ಅತ್ಯಧಿಕ ತೆರಿಗೆ ವಿಧಿಸಿರುವ ಭಾರತ
ಭಾರತದ ವಿಚಾರದಲ್ಲಿ ಗರಂ ಆಗಿರುವ ನಿಯೋಜಿತ ಅಧ್ಯಕ್ಷ

**ವಾಷಿಂಗ್ಟನ್:** ನಾನು ಅಧಿಕಾರಕ್ಕೆ ಬಂದ ಬಳಿಕ ಭಾರತದ ಸರಕುಗಳ ಮೇಲೆ ಅತಿ ಹೆಚ್ಚು ತೆರಿಗೆ ವಿಧಿಸಲಾಗುವುದು ಎಂದು ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಟ್ರಂಪ್ ಅಮೆರಿಕ ಅಧ್ಯಕ್ಷರಾಗಿ ಜ.20ರಂದು ಪದಗ್ರಹಣ ಮಾಡಲಿದ್ದಾರೆ.

ಅಮೆರಿಕದ ಕೆಲವು ಉತ್ಪನ್ನಗಳ ಮೇಲೆ ಭಾರತ ಸರಕಾರ ಅತ್ಯಧಿಕ ಪ್ರಮಾಣದ ತೆರಿಗೆ ವಿಧಿಸುತ್ತಿದೆ. ಇದನ್ನು ಸ್ವತಃ ಉದ್ಯಮಿಯೂ ಆಗಿರುವ ಟ್ರಂಪ್ ಸ್ಪಷ್ಟವಾಗಿಯೇ ವಿರೋಧಿಸಿದ್ದಾರೆ. ಈ ಮೊದಲು ಅಸಮಾಧಾನವನ್ನಷ್ಟೇ ವ್ಯಕ್ತಪಡಿಸಿದ್ದ ಟ್ರಂಪ್, ಈ ಬಾರಿ ಬಲು ಕಠಿಣವಾಗಿಯೇ ಮಾತನಾಡಿದ್ದಾರೆ.

'ನಮ್ಮನ್ನು ನೀವು ಹೇಗೆ ನಡೆಸಿಕೊಳ್ಳುತ್ತೀರೋ ನಾವೂ ಅದೇ ರೀತಿ ನಿಮ್ಮನ್ನು ನಡೆಸಿಕೊಳ್ಳುತ್ತೇವೆ' ಎಂದು ಟ್ರಂಪ್ ಸಂದರ್ಶನವೊಂದರಲ್ಲಿ ಭಾರತವನ್ನು ಉದ್ದೇಶಿಸಿ ಹೇಳಿದ್ದಾರೆ. ಟ್ರಂಪ್ ಆಡಳಿತ ಅವಧಿಯಲ್ಲಿ ಭಾರತ- ಅಮೆರಿಕ ನಡುವಿನ ಸಂಬಂಧ ಹೇಗಿರಲಿದೆ ಎಂಬ ಪ್ರಶ್ನೆಗೆ ಟ್ರಂಪ್ ಅವರ ಈ ಮಾತೇ ಉತ್ತರದಂತಿದೆ.

ಭಾರತ ಅಮೆರಿಕದ ಸರಕುಗಳ ಮೇಲೆ ಅತ್ಯಧಿಕ ಮೊತ್ತದ ಆಮದು ಸುಂಕ ವಿಧಿಸಿದರೆ, ನಾವು ಕೂಡಾ ಭಾರತದಿಂದ ಅಮೆರಿಕಕ್ಕೆ ಬರುವ ವಸ್ತುಗಳಿಗೆ ಗರಿಷ್ಠ ಪ್ರಮಾಣದ ತೆರಿಗೆ ವಿಧಿಸುತ್ತೇವೆ ಎಂದಿದ್ದಾರೆ.

ಟ್ರಂಪ್ ಮೊದಲ ಆಡಳಿತ ಅವಧಿಯಲ್ಲಿ ಭಾರತ-ಅಮೆರಿಕ ಸಂಬಂಧ ಉತ್ತಮವಾಗಿತ್ತು. ಆಗ ಸಂದರ್ಶನವೊಂದರಲ್ಲಿ ಮಾತನಾಡಿದ್ದ ಟ್ರಂಪ್, ನರೇಂದ್ರ ಮೋದಿ ಅವರೊಬ್ಬರು ಬಲು ಕಠಿಣ ವ್ಯವಹಾರಸ್ಥ ಎಂದಿದ್ದರು. ಈಗ ಎರಡನೇ ಅವಧಿಗೆ ಅಧಿಕಾರಕ್ಕೇರಲು ಸಜ್ಜಾಗಿರುವ ಟ್ರಂಪ್, ಭಾರತದ ಜತೆಗಿನ ಸಂಬಂಧದ ವಿಚಾರದಲ್ಲಿ 'ನೀವು ಹೇಗೋ ನಾವೂ ಹಾಗೇ' ಎಂಬಂತೆ ಪ್ರತಿಕ್ರಿಯಿಸಿದ್ದಾರೆ.

#### 'ಪರಸ್ಪರ' ಎಂಬುದು ಬಹಳ ಮುಖ್ಯ

**ಅಮೆರಿಕದ ಕೆಲ ಉತ್ಪನ್ನಗಳ ಮೇಲೆ ಹೆಚ್ಚು ಸುಂಕ ವಿಧಿಸುವ ದೇಶಗಳಲ್ಲಿ ಭಾರತ ಮತ್ತು ಬ್ರೆಜಿಲ್ ಸೇರಿವೆ. ಇಲ್ಲಿ 'ಪರಸ್ಪರ' ಎಂಬ ಪದ ಮುಖ್ಯವಾಗುತ್ತದೆ. ಭಾರತ ನಮಗೆ ಶೇ.100ರಷ್ಟು ಶುಲ್ಕ ವಿಧಿಸಿದರೆ. ನಾವೂ ಅದಕ್ಕೆ ತಕ್ಕಂತೆ ತೆರಿಗೆ ವಿಧಿಸಬೇಕಲ್ಲವೇ? ಬ್ರೆಜಿಲ್ ಕೂಡಾ ಇದೇ ನಮ್ಮ ಉತ್ತರವಾಗಿರುತ್ತದೆ ಎಂದು ಸುದ್ದಿಗೋಷ್ಠಿಯಲ್ಲಿ ಟ್ರಂಪ್ ಹೇಳಿದ್ದಾರೆ. ಟ್ರಂಪ್ ಆಡಳಿತ ಅವಧಿಗಾಗಿ ವಾಣಿಜ್ಯ ಕಾರ್ಯದರ್ಶಿಯಾಗಿ ನಿಯೋಜನೆಗೊಳ್ಳಲಿರುವ ಪಿಕ್ ಹೋವರ್ಡ್ ಲುಟ್ನಿಕ್ ಕೂಡಾ, 'ಪರಸ್ಪರ' ಎಂಬುದು ದೇಶಗಳ ನಡುವಿನ ವಾಣಿಜ್ಯ ಸಂಬಂಧ ವಿಚಾರದಲ್ಲಿ ಟ್ರಂಪ್ ಆಡಳಿತದಲ್ಲಿ ಮುಖ್ಯವಾಗಿರಲಿದೆ ಎಂದು ಪ್ರತಿಕ್ರಿಯಿಸಿದ್ದಾರೆ.**

## ಮುಂಬೈ ಪ್ರವಾಸಿಗರ ದೋಣಿಗೆ ಸ್ಪೀಡ್ ಬೋಟ್ ಡಿಕ್ಕಿ-13 ಸಾವು

ಮೂವರು ಕಣ್ಮರೆ-101 ಪ್ರಯಾಣಿಕರ ರಕ್ಷಣೆ

**ಮುಂಬೈ:** ದೇಶದ ಪ್ರಮುಖ ವಾಣಿಜ್ಯ ನಗರಿ ಮುಂಬೈನ 'ಗೇಟ್ ಆಫ್ ಇಂಡಿಯ' ಬಳಿ ಪ್ರಯಾಣಿಕರಿದ್ದ ದೋಣಿಗೆ ಸ್ಪೀಡ್ ಬೋಟ್ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ 13 ಪ್ರಯಾಣಿಕರು ಮೃತಪಟ್ಟಿದ್ದಾರೆ, ಮೂವರು ನಾಪತ್ತೆಯಾಗಿದ್ದಾರೆ. ಸದ್ಯ 101 ಮಂದಿಯನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರವಾಸಿಗರು ಮತ್ತು ಸಿಬ್ಬಂದಿ ಸೇರಿದಂತೆ 110ಕ್ಕೂ ಅಧಿಕ ಜನರಿದ್ದ 'ನೀಲ್‌ಕಮಲ್' ಹೆಸರಿನ ದೋಣಿಯು ಬುಧವಾರ ಸಂಜೆ 5.15ರ ವೇಳೆ 'ಗೇಟ್ ವೇ ಆಫ್ ಇಂಡಿಯ'ದಿಂದ 'ಎಲಿಫೆಂಟಾ' ದ್ವೀಪಕ್ಕೆ ತೆರಳುತ್ತಿತ್ತು. ಕಾರಂಜಾದ ಉರಾನ್ ಬಳಿ ದೋಣಿ ದೋಣಿಗೆ ಸ್ಪೀಡ್ ಬೋಟ್ ವೇಗವಾಗಿ ಬಂದು ಡಿಕ್ಕಿ ಹೊಡೆದಿದೆ.

ಅತಿವೇಗದಲ್ಲಿ ಸಾಗುತ್ತಿದ್ದ ಸ್ಪೀಡ್ ಬೋಟ್ ದಿಢೀರ್ ಎಂಬಂತೆ ಯು-ಟರ್ನ್ ತೆಗೆದುಕೊಂಡಿದ್ದರಿಂದಲೇ ಅಪಘಾತವಾಗಿದೆ ಎಂದು ಪ್ರಾಥಮಿಕ ವರದಿಗಳಿಂದ ತಿಳಿದುಬಂದಿದೆ.

ಸಮೀಪದಲ್ಲೇ ಸಾಗುತ್ತಿದ್ದ ದೋಣಿಗಳಲ್ಲಿದ್ದ ಪ್ರಯಾಣಿಕರು ಅಪಘಾತದ ದೃಶ್ಯಗಳನ್ನು ಮೊಬೈಲ್ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾರೆ. ನೀಲ್‌ಕಮಲ್ ದೋಣಿಯಲ್ಲಿದ್ದ ಜನರು ಸಹಾಯಕ್ಕಾಗಿ ಕೂಗುತ್ತಿದ್ದ ದೃಶ್ಯಗಳು ವೈರಲ್ ಆಗಿವೆ.

ಅಪಘಾತದ ಬಗ್ಗೆ ಮಾಹಿತಿ ಪಡೆದ ಭಾರತೀಯ ನೌಕಾಪಡೆಯು 4 ಹೆಲಿಕಾಪ್ಟರ್‌ಗಳನ್ನು ತಕ್ಷಣ ರಕ್ಷಣಾ ಕಾರ್ಯಕ್ಕೆ ಕಳುಹಿಸಿಕೊಟ್ಟಿದೆ. ಕಡಲ ತೀರದ ಪೊಲೀಸರು, ಭಾರತೀಯ ಕರಾವಳಿ ಕಾವಲು ಪಡೆ, ಜವಾಹರ ಲಾಲ್ ನೆಹರು ಬಂದರು ಪ್ರಾಧಿಕಾರದ ಸಿಬ್ಬಂದಿ, ಸ್ಥಳೀಯ ಮೀನುಗಾರರು ಸೇರಿಕೊಂಡು ಪ್ರವಾಸಿಗರನ್ನು ರಕ್ಷಿಸಲು ಭಾರಿ ರಕ್ಷಣಾ ಕಾರ್ಯಾಚರಣೆ ನಡೆಸಿದರು.

## ಹಿರಿಯರಿಗೆ ದೆಹಲಿಯ ಎಲ್ಲ ಆಸ್ಪತ್ರೆಗಳಲ್ಲೂ ಚಿಕಿತ್ಸೆ ಉಚಿತ

**ದೆಹಲಿ:** 60 ವರ್ಷ ತುಂಬಿದ ಹಿರಿಯ ನಾಗರಿಕರಿಗೆ ದೆಹಲಿಯ ಸರಕಾರಿ ಮತ್ತು ಖಾಸಗಿ ಸೇರಿದಂತೆ ಎಲ್ಲಾ ಆಸ್ಪತ್ರೆಗಳಲ್ಲಿಯೂ ಉಚಿತ ಚಿಕಿತ್ಸೆ ನೀಡಲಾಗುವುದು ಎಂದು ಆಮ್ ಆದ್ಮಿ ಪಕ್ಷದ(ಎಎಪಿ) ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಬುಧವಾರ ಘೋಷಣೆ ಮಾಡಿದ್ದಾರೆ.

ಮುಂದಿನ ಫೆಬ್ರವರಿಯಲ್ಲಿ ನಡೆಯುವ ದೆಹಲಿ ವಿಧಾನಸಭೆ ಚುನಾವಣೆಗೆ ಭಾರೀ ಹುರುಪಿನಿಂದ ಸಿದ್ಧತೆ ನಡೆಸಿರುವ ಎಎಪಿ, ದೆಹಲಿ ವಿಧಾನಸಭೆಯ 70 ಸ್ಥಾನಗಳಿಗೂ ಎಎಪಿ ಅದಾಗಲೇ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಈಗ ಹಿರಿಯ ನಾಗರಿಕರ ಮತ ಸೆಳೆಯಲು ಉಚಿತ ಚಿಕಿತ್ಸೆ ಯೋಜನೆ ಘೋಷಿಸಿದೆ.

'ಸಂಜೀವಿನಿ ಯೋಜನೆ'ಯಡಿ 60 ವರ್ಷ ತುಂಬಿದ ಹಿರಿಯರಿಗೆ ರಾಜಧಾನಿ ಪ್ರದೇಶದಲ್ಲಿನ ಎಲ್ಲಾ ಆಸ್ಪತ್ರೆಗಳಲ್ಲಿಯೂ ಉಚಿತವಾಗಿ ಚಿಕಿತ್ಸೆ ದೊರೆಯಲಿದೆ. ಚಿಕಿತ್ಸೆ ವೆಚ್ಚದ ಮೇಲೆ ಗರಿಷ್ಠ ಮಿತಿ ಇಲ್ಲ. ಚುನಾವಣೆ ನಂತರ ಎಎಪಿ ಮರಳಿ ಅಧಿಕಾರಕ್ಕೇರಿದ ನಂತರ ಈ ಯೋಜನೆ ಜಾರಿಗೆ ಬರಲಿದೆ ಎಂದು ಕೇಜ್ರಿವಾಲ್ ಹೇಳಿದರು.

ದೇಶವನ್ನು ಮುನ್ನಡೆಸಲು ನೀವೆಲ್ಲಾ ಶ್ರಮಿಸಿದ್ದೀರಿ. ವೃದ್ಧಾಪ್ಯದಲ್ಲಿ ನಿಮ್ಮ ಆರೋಗ್ಯದತ್ತ ನಿಗಾ ಇಡುವುದು ನಮ್ಮ ಕರ್ತವ್ಯ. ಒಂದೆರಡು ದಿನದಲ್ಲಿ ಯೋಜನೆಗೆ ನೋಂದಣಿ ಆರಂಭವಾಗಲಿದೆ. ಎಎಪಿ ಕಾರ್ಯಕರ್ತರು ನಿಮ್ಮ ಮನೆಗೇ ಬಂದು ಉಚಿತ ಚಿಕಿತ್ಸೆಯ ಆರೋಗ್ಯ ಕಾರ್ಡ್ ನೀಡುತ್ತಾರೆ ಎಂದು ಕೇಜ್ರಿವಾಲ್ ಹೇಳಿದರು.

ಹೊಸ ವರ್ಷಾರಂಭದಲ್ಲಿ ದೆಹಲಿ ವಿಧಾನಸಭೆ ಚುನಾವಣೆ ನಡೆಯಲಿದ್ದು, ಚುನಾವಣಾ ಆಯೋಗ ಇದೇ ವಾರ ಪೂರ್ವಸಿದ್ಧತಾ ಸಭೆ ಕರೆದಿದೆ. ಚುನಾವಣೆ ದಿನ ಈ ಸಭೆ ನಂತರ ಪ್ರಕಟವಾಗಲಿದೆ ಎಂದು ನಿರೀಕ್ಷಿಸಲಾಗಿದೆ.

## ದೆಹಲಿ ಚಲೋಗೆ ಅಡಚಣೆ; ರೈತರಿಂದ 'ರೈಲ್ ರೋಕೊ'

**ಚಂಡೀಗಢ:** ಕೃಷಿ ಉತ್ಪನ್ನಗಳಿಗೆಲ್ಲಾ ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ) ಘೋಷಿಸಿ ಕಾನೂನು ಜಾರಿಗೊಳಿಸಿ ಎಂಬುದೂ ಸೇರಿದಂತೆ ಕೃಷಿ ಕ್ಷೇತ್ರದ ಉದ್ಧಾರಕ್ಕೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 'ದೆಹಲಿ ಚಲೋ' ಪ್ರತಿಭಟನೆ ನಡೆಸುತ್ತಿರುವ ವಿವಿಧ ರೈತ ಸಂಘಟನೆಗಳು, ಬುಧವಾರ ದೇಶಾದ್ಯಂತ 3 ಗಂಟೆಗಳ ಕಾಲ 'ರೈಲ್ ರೋಕೊ' ಪ್ರತಿಭಟನೆ ನಡೆಸಿದವು.

ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಮತ್ತು ಕಿಸಾನ್ ಮಜ್ದೂರ್ ಮೋರ್ಚಾ ಬುಧವಾರ 'ರೈಲ್ ರೋಕೊ' ನಡೆಸುವುದಕ್ಕೆ ಕರೆ ನೀಡಿವೆ. ಪಂಜಾಬ್‌ನ ಹಲವೆಡೆ ರೈತರು ರೈಲು ಗಾಡಿಗಳನ್ನು ತಡೆದು ಕೇಂದ್ರ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಚಂಡೀಗಢದಲ್ಲಿ ಕಿಸಾನ್ ಮಜ್ದೂರ್ ಮೋರ್ಚಾ ಮುಖಂಡ ಸರ್ವಾನ್ ಸಿಂಗ್ ಪಂಧೇರ್ ಮಾತನಾಡಿ, 'ದೆಹಲಿ ಚಲೋ' ಆಂದೋಲವನ್ನು ಮತ್ತೆ ಮತ್ತೆ ತಡೆಯುತ್ತಿರುವುದರಿಂದ ರೈಲ್ ರೋಕೊ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ದೇಶದ ಹಲವೆಡೆ ರೈತರು ರೈಲು ಹಳಿಗಳ ಮೇಲೆ ಮಧ್ಯಾಹ್ನ 12ರಿಂದ 3 ಗಂಟೆವರೆಗೂ ಪ್ರತಿಭಟನೆ ನಡೆಸಿದರು ಎಂದು ವಿವರಿಸಿದರು.

ಪಂಜಾಬ್ ರೈತ ನಾಯಕ ಜಗಜಿತ್ ಸಿಂಗ್ ದಲ್ಲೆವಾಲ್ ಅವರು ಪಂಜಾಬ್ ಮತ್ತು ಹರಿಯಾಣ ನಡುವಿನ ಖಾನೌರಿ ಗಡಿಯಲ್ಲಿ ಆಮರಣಾಂತ ಉಪವಾಸ ನಡೆಸುತ್ತಿದ್ದು, ಈಗಾಗಲೇ 3 ವಾರಗಳು ಕಳೆದಿವೆ.

## ಗಡಿ ಶಾಂತಿ: ಚೀನಾ ಸಚಿವ ಜತೆ ದೋವಲ್ ಮಾತು

**ಬೀಜಿಂಗ್:** ಚೀನಾ ಪ್ರವಾಸದಲ್ಲಿರುವ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ಭಾರತ-ಚೀನಾ ಗಡಿಯಲ್ಲಿ ಶಾಶ್ವತ ಶಾಂತಿ ನೆಲೆಸುವಂತೆ ಮಾಡುವುದರ ಕುರಿತು ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಜತೆ ಬುಧವಾರ ಮಹತ್ವದ ಮಾತುಕತೆ ನಡೆಸಿದರು.



ವಾಸ್ತವ ಗಡಿ ನಿಯಂತ್ರಣ ರೇಖೆ(ಎಲ್‌ಎಸಿ) ಯಲ್ಲಿ ಶಾಂತಿ ಸ್ಥಾಪನೆ ಮತ್ತು ಪೂರ್ವ ಲಡಾಖ್‌ನಲ್ಲಿನ ಮಿಲಿಟರಿ ಬಿಕ್ಕಟ್ಟಿನಿಂದಾಗಿ ಕಳೆದ 4 ವರ್ಷ ಗಳಿಂದ ಸ್ಥಗಿತಗೊಂಡ ದ್ವಿಪಕ್ಷೀಯ ಸಂಬಂಧಗಳ ಮರುಸ್ಥಾಪನೆ ಸೇರಿದಂತೆ ಹಲವು ವಿಷಯಗಳ ಕುರಿತು ವಾಂಗ್ ಯಿ ಜತೆ ದೋವಲ್ ಚರ್ಚಿಸಿದರು. ಐದು ವರ್ಷಗಳ ನಂತರ ನಡೆಯುತ್ತಿರುವ ವಿಶೇಷ ಪ್ರತಿನಿಧಿಗಳ 23ನೇ ಸುತ್ತಿನ ಮಾತುಕತೆಯಲ್ಲಿ ಪಾಲ್ಗೊಳ್ಳಲು ಭಾರತೀಯ ನಿಯೋಗವನ್ನು ಅಜಿತ್ ದೋವಲ್ ಮಂಗಳವಾರ ಬೀಜಿಂಗ್‌ಗೆ ಕರೆದೊಯ್ದಿದ್ದಾರೆ. ಈ ವಿಚಾರದಲ್ಲಿ ಕೊನೆಯ ಸಭೆ 2019ರಲ್ಲಿ ದೆಹಲಿಯಲ್ಲಿ ನಡೆದಿತ್ತು. ಪೂರ್ವ ಲಡಾಖ್‌ನಲ್ಲಿ ಅ.21ರ ಒಪ್ಪಂದ ಮತ್ತು ಗಸ್ತು ತಿರುಗುವಿಕೆ ನಂತರ ದ್ವಿಪಕ್ಷೀಯ ಸಂಬಂಧಗಳನ್ನು ಸಾಮಾನ್ಯಗೊಳಿಸಲು ಉಭಯ ದೇಶಗಳಿಗೆ ಒಂದು ಮಾರ್ಗವನ್ನು ಒದಗಿಸುವ ನಿರೀಕ್ಷೆಯಿದೆ. 2024ರ ಅ.23ರಂದು ಕಜಾನ್‌ನಲ್ಲಿ ಉಭಯ ನಾಯಕರ ಸಭೆಯ ಸಮಯದಲ್ಲಿ ಒಪ್ಪಿಕೊಂಡಂತೆ, ಇಬ್ಬರು ವಿಶೇಷ ಪ್ರತಿನಿಧಿಗಳು ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ನೆಮ್ಮದಿಯ ನಿರ್ವಹಣೆಯ ಬಗ್ಗೆ ಚರ್ಚಿಸುತ್ತಾರೆ ಮತ್ತು ಗಡಿ ಪ್ರಶ್ನೆಗೆ ನ್ಯಾಯಯುತ, ಸಮಂಜಸ, ಪರಸ್ಪರ ಸ್ವೀಕಾರಾರ್ಹ ಪರಿಹಾರವನ್ನು ಅನ್ವೇಷಿಸುತ್ತಾರೆ ಎಂದು ತಿಳಿಸಲಾಗಿದೆ.

# ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಆರ್.ಅಶ್ವಿನ್ ವಿದಾಯ

# ಬೈ ಬೈ ಅಶ್ವಿನ್

**ಭಾರತ ತಂಡದ ಅನುಭವಿ ಸ್ಪಿನ್ ಬೌಲರ್, ಆಲ್ರೌಂಡರ್**

**14 ವರ್ಷ ಭರ್ತಿ ಅಂತಾರಾಷ್ಟ್ರೀಯ ಕ್ರಿಕೆಟ್ ಅನುಭವ**

**ಕ್ಲಬ್ ಮಟ್ಟದ ಆಟ ಆಡಲು ನಿರ್ಧರಿಸಿದ ಅಶ್ವಿನ್**

**106 ಟೆಸ್ಟ್‌ನಲ್ಲಿ 537 ವಿಕೆಟ್ ಪಡೆದಿರುವ ಸ್ಪಿನ್ ಮಾಂತ್ರಿಕ**

**ಬ್ರಿಸ್ಬೇನ್:** ಭಾರತ ತಂಡದ ಅನುಭವಿ ಸ್ಪಿನ್ ಆಲ್ರೌಂಡರ್ ಆರ್. ಅಶ್ವಿನ್ ಅವರು ಬುಧವಾರ ಎಲ್ಲ ಮಾದರಿಯ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ದಿಢೀರ್ ನಿವೃತ್ತಿ ಘೋಷಿಸಿದ್ದಾರೆ. ಆಸೀಸ್ ವಿರುದ್ಧದ ಮೂರನೇ ಟೆಸ್ಟ್ ಪಂದ್ಯ ಡ್ರಾಗೊಳ್ಳುತ್ತಿದ್ದಂತೆ ಅಶ್ವಿನ್ ತಮ್ಮ ನಿವೃತ್ತಿ ಪ್ರಕಟಿಸಿದರು. ಈ ಮೂಲಕ 14 ವರ್ಷಗಳ ಅಂತಾರಾಷ್ಟ್ರೀಯ ಕ್ರಿಕೆಟ್ ಬಾಳ್ವೆಗೆ ತೆರೆ ಎಳೆದರು. 2010ರಲ್ಲಿ ಏಕದಿನ ಪಂದ್ಯವನ್ನಾಡುವ ಮೂಲಕ ಅಶ್ವಿನ್ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಲ್ಲ ಮಾದರಿಯ ಆಟಗಳಲ್ಲಿ ಭಾರತೀಯ ಕ್ರಿಕೆಟರ್ ಆಗಿ ಇದು ನನ್ನ ಕೊನೆಯ ದಿನವಾಗಿದೆ. ನನ್ನಲ್ಲಿ ಕ್ರಿಕೆಟ್ ಇನ್ನೂ ಸ್ವಲ್ಪ ಉಳಿದಿದೆ ಎಂದು ನಾನು ಭಾವಿಸುತ್ತೇನೆ. ನಾನು ಅದನ್ನು ಕ್ಲಬ್ ಮಟ್ಟದ ಕ್ರಿಕೆಟ್‌ನಲ್ಲಿ ಪ್ರದರ್ಶಿಸಲು ಬಯಸುತ್ತೇನೆ. ಹಾಗಾಗಿ ಇದು ನನ್ನ ಕೊನೆಯ ದಿನವಾಗಿದೆ ಎಂದು ನಾನು ಹೇಳಲೇಬೇಕು. ರೋಹಿತ್ ಶರ್ಮ ಮತ್ತು ತಂಡದ ಅನೇಕ ಸಹ ಆಟಗಾರರೊಂದಿಗೆ ಸಾಕಷ್ಟು ಸವಿ ನೆನಪುಗಳನ್ನು ಹೊಂದಿದ್ದೇನೆ ಎಂದು ಅಶ್ವಿನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಶ್ವಿನ್ ಅವರು ತಮ್ಮ ನಿವೃತ್ತಿ ವಿಚಾರವನ್ನು ಮೊದಲು ಹೇಳಿದ್ದು ವಿರಾಟ್ ಕೊಹ್ಲಿಗೆ. ಡ್ರೆಸ್ಸಿಂಗ್ ರೂಮ್‌ನಲ್ಲಿ ಕೂತಿದ್ದ ಅಶ್ವಿನ್ ಅವರು ಕೊಹ್ಲಿ ಬಳಿ ತಾವು ನಿವೃತ್ತಿಯಾಗುತ್ತಿದ್ದೇನೆ ಎಂದು ಹೇಳಿದರು. ಈ ವೇಳೆ ಕೊಹ್ಲಿ ಭಾವುಕರಾಗಿ ಒಂದು ಅಪ್ಪುಗೆ ಕೊಟ್ಟರು. 38 ವರ್ಷದ ಅಶ್ವಿನ್ ಅಂತಾರಾಷ್ಟ್ರೀಯ ಕ್ರಿಕೆಟ್ ಹಾಗೂ ಟೆಸ್ಟ್ ಕ್ರಿಕೆಟ್‌ನಲ್ಲಿ ಅತೀ ಹೆಚ್ಚು ವಿಕೆಟ್ ಪಡೆದ ಎರಡನೇ ಭಾರತೀಯ ಆಟಗಾರನಾಗಿದ್ದಾರೆ.

2011 ರಲ್ಲಿ ದೆಹಲಿಯಲ್ಲಿ ನಡೆದಿದ್ದ ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯದಲ್ಲಿ ಆಡುವ ಮೂಲಕ ಅಶ್ವಿನ್ ಟೆಸ್ಟ್ ಕ್ರಿಕೆಟ್‌ಗೆ ಟೆಸ್ಟ್ ಪಾದರ್ಪಣೆ ಮಾಡಿದ್ದರು. ಒಟ್ಟು 106 ಟೆಸ್ಟ್ ಪಂದ್ಯವನ್ನಾಡಿ 537 ವಿಕೆಟ್‌ಗಳನ್ನು ಪಡೆದಿದ್ದಾರೆ. ಜತೆಗೆ 6 ಶತಕವನ್ನು ಸಿಡಿಸಿದ್ದಾರೆ. 2011ರ ಏಕದಿನ ವಿಶ್ವಕಪ್ ಗೆಲುವಿನ ತಂಡದ ಸದಸ್ಯನೂ ಆಗಿದ್ದಾರೆ.

ಸರಣಿಯ ಇನ್ನುಳಿದ ಪಂದ್ಯಕ್ಕೆ ಅಶ್ವಿನ್ ತಂಡದೊಂದಿಗೆ ಉಳಿಯುವುದಿಲ್ಲ ಮತ್ತು ನಾಳೆಯೇ ಅವರು ಭಾರತಕ್ಕೆ ಹಿಂತಿರುಗಲಿದ್ದಾರೆ ಎಂದು ನಾಯಕ ರೋಹಿತ್ ಶರ್ಮಾ ಖಚಿತಪಡಿಸಿದ್ದಾರೆ. ಇದೇ ವೇಳೆ ಮಾತನಾಡಿದ ರೋಹಿತ್, ನಾವು ತಂಡದ ಸಹ ಆಟಗಾರರಾಗಿ ಅಶ್ವಿನ್ ಅವರ ನಿರ್ಧಾರ ಗೌರವಿಸಬೇಕು. ತಂಡವು ಅವರ ನಿರ್ಧಾರಕ್ಕೆ ಸಂಪೂರ್ಣ ಬೆಂಬಲವನ್ನು ನೀಡಿದೆ. ನಿವೃತ್ತಿಯಾದರೂ ತಂಡಕ್ಕೆ ಅವರ ಸಲಹೆ ಅಗತ್ಯ ಎಂದು ಹೇಳಿದರು.

## ಅಶ್ವಿನ್ ಬಗ್ಗೆ

1986ರ ಸೆಪ್ಟಂಬರ್ 17ರಂದು ಚೆನ್ನೈಯಲ್ಲಿ ಜನಿಸಿದ ಅಶ್ವಿನ್ ಮಾಹಿತಿ ತಂತ್ರಜ್ಞಾನದಲ್ಲಿ ಬಿ.ಟೆಕ್ ಪದವಿ ಪಡೆದಿದ್ದರೂ ಕ್ರಿಕೆಟ್‌ನತ್ತ ಒಲವು ವ್ಯಕ್ತ ಪಡಿಸಿ ಅಪ್ರತಿಮ ಸಾಧನೆ ಮಾಡಿ ಮಿಂಚಿದ್ದಾರೆ. ಅರಂಭಿಕ ಬ್ಯಾಟರ್ ಆಗಿ ವೃತ್ತಿ ಜೀವನ ಆರಂಭಿಸಿದ ಅವರು ಕ್ರಮೇಣ ಆಫ್ ಸ್ಪಿನ್ನರ್ ಆಗಿ ರೂಪುಗೊಳ್ಳುವ ಮೊದಲು ಮಧ್ಯಮ ವೇಗಿ ಯಾಗಿಯೂ ಗುರುತಿಸಿಕೊಂಡಿದ್ದರು. 2006ರಲ್ಲಿ ತಮಿಳುನಾಡು ಪರ ರಣಜಿ ಪಂದ್ಯದಲ್ಲಿ ಆಡುವ ಮೂಲಕ ಪ್ರಥಮ ದರ್ಜೆ ಕ್ರಿಕೆಟಿಗೆ ಕಾಲಿಟ್ಟ ಅವರು ಆರು ವಿಕೆಟ್ ಕಿತ್ತು ತನ್ನ ಬೌಲಿಂಗ್ ಶಕ್ತಿಯನ್ನು ತೆರೆದಿಟ್ಟರು. ಆರು ವರ್ಷ ತಂಡದ ನಾಯಕರಾಗಿ ಕರ್ತವ್ಯ ನಿರ್ವಹಿಸಿದ್ದರು.

ನಿಸ್ಸಂಶಯವಾಗಿ, ಧನ್ಯವಾದ ಹೇಳಲು ಬಹ.ಳಷ್ಟು ಜನರಿದ್ದಾರೆ. ಆದರೆ, ನಾನು ಬಿಸಿಸಿಐ ಮತ್ತು ತಂಡದ ಆಟಗಾರ ರಿಗೆ ಧನ್ಯವಾದ ಹೇಳದಿದ್ದರೆ ನಾನು ನನ್ನ ಕರ್ತವ್ಯದಲ್ಲಿ ವಿಫಲನಾಗುತ್ತೇನೆ. ನಾನು ಅವರಲ್ಲಿ ಕೆಲವರನ್ನು ಹೆಸರಿಸಲು ಬಯಸು ತ್ತೇನೆ,ರೋಹಿತ್, ವಿರಾಟ್, ಅಜಿಂಕ್ಯ ಮತ್ತು ಪೂಜಾರ ಅವರು ಸ್ಲಿಪ್‌ನಲ್ಲಿ ಎಲ್ಲ ಕ್ಯಾಚ್‌ಗಳನ್ನು ಹಿಡಿ ಯುವ ಮೂಲಕ ನನಗೆ ವಿಕೆಟ್‌ಗಳನ್ನು ಪಡೆಯಲು ಸಹಾಯ ಮಾಡಿದರು. ಅವರ ಈ ಕೊಡುಗೆಯನ್ನು ಮರೆಯಲು ಅಸಾಧ್ಯ

**-ಆರ್.ಅಶ್ವಿನ್**



**ವಿಕೆಟ್**

ಏಕದಿನ ಪಂದ್ಯ-156

ಟೆಸ್ಟ್-537

ಟಿ20-72

**ರನ್**

ಟೆಸ್ಟ್- 3503, 6 ಸೆಂಚುರಿ

ಏಕದಿನ-5180

ಟಿ20-1672

## ಅಶ್ವಿನ್ ಸಾಧನೆ

1. ಟೆಸ್ಟ್ ಕ್ರಿಕೆಟ್‌ನಲ್ಲಿ ಅತೀ ವೇಗವಾಗಿ 250, 300 ಮತ್ತು 350 ವಿಕೆಟ್ ಕಿತ್ತ ಕ್ರಿಕೆಟಿಗ.
2. ಕ್ಯಾಲೆಂಡರ್ ವರ್ಷವೊಂದರಲ್ಲಿ 500 ರನ್ ಮತ್ತು 50 ವಿಕೆಟ್ ಪಡೆದ ಭಾರತದ ಎರಡನೇ ಕ್ರಿಕೆಟಿಗ.
3. ಒಟ್ಟಾರೆ 700 ಅಂತಾರಾಷ್ಟ್ರೀಯ ವಿಕೆಟ್ ಪಡೆದ ಭಾರತದ 3ನೇ ಕ್ರಿಕೆಟಿಗ.
4. ತವರಿನ ಟರ್ನಿಂಗ್ ಟ್ರ್ಯಾಕ್‌ನಲ್ಲಿ ಅಪಾರ ಯಶಸ್ಸು ಸಾಧಿಸಿದ ಅಶ್ವಿನ್ ಆಸ್ಟ್ರೇಲಿಯ ವಿರುದ್ಧದ ನಾಲ್ಕು ಪಂದ್ಯಗಳ ಸರಣಿಯಲ್ಲಿ 29 ವಿಕೆಟ್ ಕಿತ್ತ ಮೊದಲ ಬೌಲರ್.

5. ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಟೂರ್ನಿಯಲ್ಲಿ 100 ವಿಕೆಟ್‌ಗಳನ್ನು ತಲುಪಿದ ಮೊದಲ ಬೌಲರ್.
6. ಟೆಸ್ಟ್ ಪಂದ್ಯವೊಂದರಲ್ಲಿ ಶತಕ ಮತ್ತು ಐದು ವಿಕೆಟ್ ಕಿತ್ತ ಭಾರತದ ಏಕೈಕ ಆಟಗಾರ.
7. ಟಿ20 ಕ್ರಿಕೆಟ್‌ನಲ್ಲಿ 50 ವಿಕೆಟ್ ಕಿತ್ತ ಭಾರತದ ಮೊದಲ ಆಟಗಾರ
8. ಶ್ರೀಲಂಕಾದ ಮಾಜಿ ಕ್ರಿಕೆಟಿಗ ಮುತ್ತಯ್ಯ ಮುರಳೀಧರನ್ (67) ಬಳಿಕ ಟೆಸ್ಟ್‌ನಲ್ಲಿ ಅತ್ಯಧಿಕ ಬಾರಿ ಟೆಸ್ಟ್‌ನಲ್ಲಿ ಐದು ವಿಕೆಟ್ ಗೊಂಚಲು ಪಡೆದ ಬೌಲರ್ ಎಂಬ ದಾಖಲೆಯೂ ಅಶ್ವಿನ್(37) ಹೆಸರಿನಲ್ಲಿದೆ.
9. ಭಾರತದ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಅತ್ಯಧಿಕ ಸರಣಿ ಶ್ರೇಷ್ಠ ಪಡೆದ ಆಟಗಾರ ಎಂಬ ಹೆಗ್ಗಳಿಕೆ ಅಶ್ವಿನ್ ಅವರದ್ದಾಗಿದೆ. ಅಶ್ವಿನ್ ಒಟ್ಟು 10 ಬಾರಿ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅಶ್ವಿನ್ ಬಳಿಕ ಸಚಿನ್ ತೆಂಡೂಲ್ಕರ್ ಕಾಣಿಸಿಕೊಂಡಿದ್ದಾರೆ. ಸಚಿನ್ 5 ಬಾರಿ ಈ ಪ್ರಶಸ್ತಿ ಗೆದ್ದಿದ್ದಾರೆ.
10. ಭಾರತ ಪರ ಭರ್ತಿ 106 ಟೆಸ್ಟ್ ಪಂದ್ಯಗಳನ್ನು ಆಡಿರುವ ಅಶ್ವಿನ್ 537 ವಿಕೆಟ್ ಕಿತ್ತು ಭಾರತ ಪರ ಅತ್ಯಧಿಕ ಟೆಸ್ಟ್ ವಿಕೆಟ್ ಪಡೆದ ಬೌಲರ್‌ಗಳ ಯಾದಿಯಲ್ಲಿ ದ್ವಿತೀಯ ಸ್ಥಾನದಲ್ಲಿದ್ದಾರೆ. 619 ವಿಕೆಟ್ ಕಿತ್ತ ಕನ್ನಡಿಗ ಅನಿಲ್ ಕುಂಬ್ಳೆ ಅಗ್ರಸ್ಥಾನದಲ್ಲಿದ್ದಾರೆ.
11. ಭಾರತ, 2011ರ ವಿಶ್ವಕಪ್, 2013ರ ಚಾಂಪಿಯನ್ ಟ್ರೋಫಿ ಗೆಲ್ಲಲು ಅಶ್ವಿನ್ ಮಹತ್ತರ ಪಾತ್ರ ವಹಿಸಿದ್ದರು. 2011ರಲ್ಲಿ ವೆಸ್ಟ್‌ಇಂಡೀಸ್ ವಿರುದ್ಧದ ಪಂದ್ಯದ ಮೂಲಕ ಟೆಸ್ಟ್‌ಗೆ ಪದಾರ್ಪಣೆಗೈದದಲ್ಲದೇ ಐದು ವಿಕೆಟ್ ಕಿತ್ತ ಸಾಧಕರಾಗಿ ಮೂಡಿ ಬಂದಿದ್ದರು.
12. ಅತೀ ಕಡಿಮೆ ಟೆಸ್ಟ್‌ನಲ್ಲಿ 500 ವಿಕೆಟ್ ಸಾಧನೆಗೈದ ವಿಶ್ವದ ಎರಡನೇ ಕ್ರಿಕೆಟಗರಾಗಿದ್ದಾರೆ. ಅಗ್ರಸ್ಥಾನದಲ್ಲಿರುವ ಮುತ್ತಯ್ಯ ಮುರಳೀಧರನ್ ಕೇವಲ 87 ಟೆಸ್ಟ್‌ಗಳಲ್ಲಿ ಈ ಸಾಧನೆ ದಾಖಲಿಸಿದ್ದರು. ಅಶ್ವಿನ್ 98ನೇ ಟೆಸ್ಟ್‌ನಲ್ಲಿ ಈ ಪರಾಕ್ರಮಗೈದಿದ್ದರು.

# ಮಳೆಯದ್ದೇ ಆಟ: ಬ್ರಿಸ್ಬೇನ್ ಟೆಸ್ಟ್ ಡ್ರಾ

ಭಾರತ ಆಸ್ಟ್ರೇಲಿಯಾ ಟೆಸ್ಟ್ ಸರಣಿ

**ಬ್ರಿಸ್ಬೇನ್:** ಮಳೆಯ ಕಾರಣದಿಂದಾಗಿ ಬುಧವಾರದ ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಮೂರನೇ ಟೆಸ್ಟ್ ಪಂದ್ಯ ಡ್ರಾದಲ್ಲಿ ಅಂತ್ಯ ಕಂಡಿದೆ. ನಾಲ್ಕನೇ ಪಂದ್ಯ ಡಿ.26 ರಿಂದ ಮೆಲ್ಬರ್ನ್ ಕ್ರಿಕೆಟ್ ಸ್ಟೇಡಿಯಂನಲ್ಲಿ ಆರಂಭಗೊಳ್ಳಲಿದೆ. ಇದು ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯವಾಗಿದೆ.

4ನೇ ದಿನದ ಕೊನೆಯಲ್ಲಿ 9 ವಿಕೆಟಿಗೆ 252 ರನ್ ಗಳಿಸಿದ್ದ ಭಾರತ ಬುಧವಾರ 260 ರನ್‌ಗೆ ಆಲೌಟ್ ಆಯಿತು. ಫಾಲೋಆನ್ ತೂಗುಗತ್ತಿಯಿಂದ ತಂಡವನ್ನು ಪಾರು ಮಾಡಿದ್ದ ವೇಗಿಗಳಾದ ಆಕಾಶ್ ದೀಪ್ ಅತ್ಯಮೂಲ್ಯ 31 ರನ್ ಕೊಡುಗೆ ನೀಡಿದರು. ಜಸ್ಪ್ರೀತ್ ಬುಮ್ರಾ 10 ರನ್ ಬಾರಿಸಿ ಅಜೇಯರಾಗಿ ಉಳಿದರು. ಆಸೀಸ್ ಪರ ಪ್ಯಾಟ್ ಕಮಿನ್ಸ್ 4, ಮಿಚೆಲ್ ಸ್ಟಾರ್ಕ್ 3 ವಿಕೆಟ್ ಕಿತ್ತು ಮಿಂಚಿದರು.

ದ್ವಿತೀಯ ಇನ್ನಿಂಗ್ಸ್ ಬ್ಯಾಟಿಂಗ್ ನಡೆಸಿದ ಆಸ್ಟ್ರೇಲಿಯಾ 7 ವಿಕೆಟ್‌ಗೆ 89 ರನ್ ಬಾರಿಸಿ ಡಿಕ್ಲೇರ್ ಘೋಷಿಸಿ ಭಾರತಕ್ಕೆ 275 ರನ್‌ಗಳ ಗೆಲುವಿನ ಗುರಿ ನೀಡಿತು. ಗುರಿ ಬೆನ್ನಟ್ಟಿದ ಭಾರತ ವಿಕೆಟ್ ನಷ್ಟವಿಲ್ಲದೆ 8 ರನ್ ಗಳಿಸಿದ ವೇಳೆ ಮತ್ತೆ ಮಳೆ ಸುರಿಯಲಾರಂಭಿಸಿತು. ಭೋಜನ ವಿರಾಮದ ತನಕ ಕಾದರೂ ಮಳೆ ನಿಲ್ಲು ಸೂಚನೆ ಕಂಡು ಬಾರದ ಕಾರಣ ಅಂತಿಮವಾಗಿ ಪಂದ್ಯವನ್ನು ಡ್ರಾ ಎಂದು ಘೋಷಿಸಲಾಯಿತು. ಜೈಸ್ವಾಲ್(4) ಮತ್ತು ಕೆ.ಎಲ್ ರಾಹುಲ್(4) ರನ್ ಬಾರಿಸಿದ್ದರು.

185 ರನ್ ಲೀಡ್‌ನೊಂದಿಗೆ ದ್ವಿತೀಯ ಇನ್ನಿಂಗ್ಸ್ ಆರಂಭಿಸಿದ ಆಸ್ಟ್ರೇಲಿಯಾ ಬಿರುಸಿನ ಬ್ಯಾಟಿಂಗ್ ನಡೆಸಲು ಮುಂದಾಗಿ ಸತತವಾಗಿ ವಿಕೆಟ್ ಕಳೆದುಕೊಂಡಿತು. ನಾಯಕ ಪ್ಯಾಟ್ ಕಮಿನ್ಸ್(22) ಮತ್ತು ಅಲೆಕ್ಸ್ ಕ್ಯಾರಿ(20★) ರನ್ ಗಳಿಸಿದರು. ಇವರದ್ದೇ ತಂಡದ ಪರ ಅತ್ಯಧಿಕ ಗಳಿಕೆ. ಮೊದಲ ಇನ್ನಿಂಗ್ಸ್ ಶತಕ ವೀರ ಟ್ರಾವಿಸ್ ಹೆಡ್ 17 ರನ್ ಗಳಿಸಿದರು. ಭಾರತ ಪರ ಘಾತಕ ಬೌಲಿಂಗ್ ದಾಳಿ ನಡೆಸಿದ ಜಸ್ಪ್ರೀತ್ ಬುಮ್ರಾ 18 ರನ್‌ಗೆ 3 ವಿಕೆಟ್ ಕಿತ್ತರೆ, ಮೊಹಮ್ಮದ್ ಸಿರಾಜ್ ಮತ್ತು ಆಕಾಶ್ ದೀಪ್ ತಲಾ 2 ವಿಕೆಟ್ ಕಿತ್ತರು.

ಡ್ರಾಗೊಂಡರೂ ಭಾರತ ತಂಡ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಂಕಪಟ್ಟಿಯಲ್ಲಿ 2 ಅಂಕಗಳ ನಷ್ಟ ಎದುರಿಸಿದೆ. ಪಂದ್ಯಕ್ಕೂ ಮುನ್ನ ಗೆಲುವಿನ ಪ್ರತಿಶತ ಅಂಕ ಶೇ. 57 ಇತ್ತು. ಇದೀಗ 55ಕ್ಕೆ ಕುಸಿದೆ. ಆದರೆ ಸ್ಥಾನದಲ್ಲಿ ಯಾವುದೇ ಬದಲಾವಣೆ ಸಂಭವಿಸಿಲ್ಲ. ಸದ್ಯ ಮೂರನೇ ಸ್ಥಾನದಲ್ಲೇ ಕಾಣಿಸಿಕೊಂಡಿದೆ. ದಕ್ಷಿಣ ಆಫ್ರಿಕಾ ಮತ್ತು ಆಸೀಸ್ ಕ್ರಮವಾಗಿ ಮೊದಲೆರಡು ಸ್ಥಾನ ಪಡೆದಿದೆ. ಭಾರತ ಉಳಿದಿರುವ 2 ಟೆಸ್ಟ್ ಪಂದ್ಯಗಳಲ್ಲಿ ಗೆಲುವು ಸಾಧಿಸಿದರೇ ಮಾತ್ರ ಫೈನಲ್ ತಲುಪಬಹುದು. ಗೆಲುವಿನ ಜತೆಗೆ ಇತರ ತಂಡಗಳ ಫಲಿತಾಂಶ ಕೂಡ ಮಹತ್ವವಾಗಿದೆ.

## ಬಾಕ್ಸಿಂಗ್ ಡೇ ಪಂದ್ಯಕ್ಕೆ ಉಮೇಶ್

ಆಸ್ಟ್ರೇಲಿಯಾ ವಿರುದ್ಧದ ನಾಲ್ಕನೇ ಟೆಸ್ಟ್ ಪಂದ್ಯಕ್ಕೆ ಭಾರತ ತಂಡ ಮಹತ್ವ ಬದಲಾವಣೆಯೊಂದನ್ನು ಮಾಡಲು ನಿರ್ಧರಿಸಿರುವುದಾಗಿ ವರದಿಯಾಗಿದೆ. ಹಿರಿಯ ವೇಗಿ ಉಮೇಶ್ ಯಾದವ್ ಅವರನ್ನು ತಂಡಕ್ಕೆ ಸೇರ್ಪಡೆಗೊಳಿಸಲು ಟೀಮ್ ಇಂಡಿಯಾ ಮ್ಯಾನೇಜ್ಮೆಂಟ್ ಮುಂದಾಗಿದೆ ಎಂದು ತಿಳಿದುಬಂದಿದೆ. ಉಮೇಶ್ ಯಾದವ್ ಅವರು ಈ ಹಿಂದಿನ ಎರಡು ಆಸೀಸ್ ಪ್ರವಾಸದಲ್ಲಿ ಅಮೋಘ ಬೌಲಿಂಗ್ ಪ್ರದರ್ಶನ ತೋರುವ ಮೂಲಕ ಗಮನಸೆಳೆದಿದ್ದರು. ಉಮೇಶ್ ಇದುವರೆಗೆ ಆಸೀಸ್ ನೆಲದಲ್ಲಿ 10 ಪಂದ್ಯಗಳನ್ನಾಡಿ 31 ವಿಕೆಟ್ ಕಿತ್ತ ಸಾಧನೆ ಮಾಡಿದ್ದಾರೆ. ಒಂದು ಬಾರಿ 5 ವಿಕೆಟ್ ಗೊಂಚಲು ಪಡೆದಿದ್ದಾರೆ. ಬಾರ್ಡರ್-ಗವಾಸ್ಕರ್ ಟೆಸ್ಟ್ ಇತಿಹಾಸದಲ್ಲಿ 16 ಪಂದ್ಯವನ್ನಾಡಿ 51 ವಿಕೆಟ್ ಕಿತ್ತಿದ್ದಾರೆ.

## ವಿಟಾಕೀಸ್

# ಚಿಕಿತ್ಸೆಗಾಗಿ ಅಮೆರಿಕಗೆ ತೆರಳಿದ ಶಿವಣ್ಣ

ನಟ ಶಿವರಾಜ್‌ಕುಮಾರ್, ಅನಾರೋಗ್ಯದಿಂದ ಬಳಲುತ್ತಿದ್ದು ಚಿಕಿತ್ಸೆಗಾಗಿ ಅಮೆರಿಕಗೆ ತೆರಳಿದ್ದಾರೆ. ನಾನು ಆತ್ಮವಿಶ್ವಾಸದಿಂದ ಇದ್ದೇನೆ. ಡಿಸೆಂಬರ್ 24ರಂದು ಸರ್ಜರಿ ನಡೆಯುತ್ತದೆ. ಅದರ ಬಗ್ಗೆ ಏನೂ ಯೋಚನೆ ಇಲ್ಲ. ಕಡಿಮೆ ಅವಧಿ ಆದರೆ ಪರವಾಗಿಲ್ಲ. ಆದರೆ ಮೂವತ್ತೈದು ದಿನ ಮನೆಯಿಂದ, ಭಾರತದಿಂದ ಹೊರಗೆ ಇರುತ್ತೇನೆ ಎಂಬ ನೋವು ಇರುತ್ತದೆ. ಎಲ್ಲರ ಹಾರೈಕೆ ಇದೆ. ಅಭಿಮಾನಿಗಳು, ಮಾಧ್ಯಮದವರು ಕಾಳಜಿ ತೋರಿಸಿದ್ದಾರೆ. ಆರೋಗ್ಯ ಸಮಸ್ಯೆ ಇದೆ ಎಂಬುದು ಗೊತ್ತಿದ್ದರೂ ಕೂಡ ಯಾರೂ ಅದನ್ನು ವೈಭವಿಕರಿಸಿಲ್ಲ. ಅದು ನನಗೆ ಖುಷಿ ಕೊಟ್ಟಿದೆ. ಅಷ್ಟು ಪ್ರೀತಿ ಮತ್ತು ಗೌರವ ನನ್ನ ಮೇಲೆ ಇಟ್ಟಿದ್ದಾರೆ ಎಂದು ಶಿವರಾಜ್‌ಕುಮಾರ್ ಹೇಳಿದ್ದಾರೆ. ಸುಮಾರು ಮೂವತ್ತೈದು ದಿನ ಚಿಕಿತಸೆ ಪಡೆಯಲಿರುವ ಶಿವಣ್ಣ ಬಳಿಕ ಅಮೆರಿಕದಲ್ಲಿಯೇ ವಿಶ್ರಾಂತಿ ಪಡೆಯಲಿದ್ದು, ಆ ಬಳಿಕ ಭಾರತಕ್ಕೆ ಮರಳಲಿದ್ದಾರೆ. ಅದಾದನಂತರ ಚಿತ್ರೀಕರಣದಲ್ಲಿ ಪಾಲ್ಗೊಳ್ಳಲಿದ್ದಾರೆ. ಇತ್ತೀಚೆಗಷ್ಟೇ ಶಿವಣ್ಣ ಕುಟುಂಬ ತಿರುಪತಿಗೆ ತೆರಳಿ ತಿಮ್ಮಪ್ಪನ ದರ್ಶನ ಮಾಡಿತ್ತು. ಶಿವರಾಜ್‌ಕುಮಾರ್ ಹಾಗೂ ಗೀತಾ ಶಿವರಾಜ್ ಕುಮಾರ್ ತಿಮ್ಮಪ್ಪನಿಗೆ ಮುಡಿಕೊಟ್ಟು ವಿಶೇಷ ಪ್ರಾರ್ಥನೆ ನೆರವೇರಿ ಸಿದ್ದರು.

# ವಿಶ್ವಾದ್ಯಂತ ಯುಐ ದರ್ಶನ

ರಿಯಲ್ ಸ್ಟಾರ್ ಉಪೇಂದ್ರ, ನಿರ್ದೇಶಿಸಿ, ನಟಿಸಿರುವ ಬಹು ನಿರೀಕ್ಷಿತ ಯುಐ ಡಿಸೆಂಬರ್ 20 ರಂದು ಪ್ರಪಂಚದಾದ್ಯಂತ ಎರಡು ಸಾವಿರಕ್ಕೂ ಹೆಚು ಚಿತ್ರಮಂದಿರಗಳಲ್ಲಿ ತೆರೆಗೆ ಬರಲಿದೆ. ಒಂಬತ್ತು ವರ್ಷಗಳ ನಂತರ ರಿಯಲ್ ಸ್ಟಾರ್ ಉಪೇಂದ್ರ, ಅವರು ನಿರ್ದೇಶಿಸಿ, ನಟಿಸಿರುವ ಬಹು ನಿರೀಕ್ಷಿತ ಯುಐ ಚಿತ್ರ ಡಿಸೆಂಬರ್ 20 ರಂದು ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ವಿಶ್ವದಾದ್ಯಂತ ಎರಡು ಸಾವಿರಕ್ಕೂ ಅಧಿಕ ಸ್ಕ್ರೀನ್‌ಗಳಲ್ಲಿ ಅದ್ದೂರಿಯಾಗಿ ಬಿಡುಗಡೆಯಾಗುತ್ತಿದೆ. ಪೋಸ್ಟರ್, ಹಾಡು, ಟೀಸರ್ ಹಾಗೂ ವಾರ್ನರ್ ಮೂಲಕ ಈಗಾಗಲೇ ಕುತೂಹಲ ಮೂಡಿಸಿರುವ ಈ ಚಿತ್ರವನ್ನು ನೋಡಲು ಉಪೇಂದ್ರ, ಅವರ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ. ಲಹರಿ ಫಿಲಂಸ್ ಹಾಗೂ ವೀನಸ್ ಎಂಟರ್‌ಪ್ರೈಸಸ್ ಲಾಂಛನದಲ್ಲಿ ಜಿ.ಮನೋಹರನ್ ಹಾಗೂ ಕೆ.ಪಿ.ಶ್ರೀಕಾಂತ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಈ ಚಿತ್ರದಲ್ಲಿ ಉಪೇಂದ್ರ, ಅವರಿಗೆ ಜತೆಯಾಗಿ ರೀಷ್ಮಾ ನಾಣಯ್ಯ ನಟಿಸಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನೀಡಿದ್ದಾರೆ. ಹೆಸರಾಂತ ಕೆ.ವಿ.ಎನ್ ಪ್ರೊಡಕ್ಷನ್ಸ್ ಸಂಸ್ಥೆ ಈ ಚಿತ್ರವನ್ನು ವಿತರಣೆ ಮಾಡುತ್ತಿದೆ. ಯುಐ ಭವಿಷ್ಯದ ಜಗತ್ತನ್ನು ತೆರೆಯಲ್ಲಿ ದರ್ಶನ ಮಾಡಿಸಲಿದೆ. ಇದು ಈಗಾಗಲೇ ಬಿಡುಗಡೆಯಾದ ಟ್ರೇಲರ್‌ನಲ್ಲಿ ಸ್ಪಷ್ಟವಾಗಲಿದೆ. ಟ್ರೇಲರ್ ನೋಡಿ ಇಡೀ ಭಾರತೀಯ ಚಿತ್ರರಂಗದ ದಿಗ್ಗಜರು ಮೆಚ್ಚಿದ್ದಾರೆ. ಬಾಲಿವುಡ್ ಸ್ಟಾರ್ ಅಮಿರ್ ಖಾನ್, ಪುಷ್ಪ ಖ್ಯಾತಿಯ ಅಲ್ಲು ಅರ್ಜುನ್ ಯುಐ ಟ್ರೇಲರ್ ನೋಡಿ ಮೆಚ್ಚಿ ಕೊಂಡಾಡಿದ್ದಾರೆ.

# ಬಿಗ್‌ಬಾಸ್ ನನ್ನನ್ನು ಮನೆ ಮಗನಾಗಿ ಮಾಡಿದೆ

ಕಿರುತೆರೆಯಲ್ಲಿ ಖ್ಯಾತಿ ಗಳಿಸಿದ್ದ ಶಿಶಿರ್ ಈ ಬಾರಿ ಬಿಗ್‌ಬಾಸ್ ಮನೆಗೆ ಎಂಟ್ರಿಕೊಟ್ಟಿದ್ದರು. ಬಿಗ್‌ಬಾಸ್ ಕಿರೀಟ ಧರಿಸುವ ಸ್ಪರ್ಧಿಗಳಲ್ಲೂ ಮುಂಚೂಣಿಯಲ್ಲಿದ್ದರು. ಆದರೆ ಹನ್ನೊಂದನೇ ವಾರದಲ್ಲಿ ದೊಡ್ಮನೆಯಿಂದ ಹೊರಬಂದರು. ಬಿಗ್‌ಬಾಸ್ ಮಗೆಗೆ ತೆರಳಿ ಜನತೆಯ ಪ್ರೀತಿ ಪಾತ್ರರಾದ ಖುಷಿ ಶಿಶಿರ್‌ಗಿದೆ. ಬಿಗ್‌ಬಾಸ್ ಜರ್ನಿಯ ಕುರಿತಂತೆ ಶಿಶಿರ್, ವಿ. ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

**ವಿ.ಸಿನಿಮಾಸ್ :ಹೇಗಿತ್ತು ಬಿಗ್‌ಬಾಸ್ ಜರ್ನಿ ?**

**ಶಿಶಿರ್:** ಬಿಗ್‌ಬಾಸ್ ಜರ್ನಿ ನನಗೆ ನಿಜಕ್ಕೂ ಖುಷಿಕೊಟ್ಟಿದೆ. ಬಿಗ್‌ಬಾಸ್‌ವ ಮನೆಯಲ್ಲಿ ಕಳೆದ ಒಂದೊಂದು ಕ್ಷಣವೂ ಕೂಡ ಸ್ಮರಣೀಯ. ಮೊದಲು ಬಿಗ್‌ಬಾಸ್ ಮನೆಗೆ ಹೋದಾಗ ಮುಂದೇನು ಎಂಬ ಯೋಚನೆ ಇತ್ತು. ಆದರೆ ದಿನ ಕಳೆಯುತ್ತಿದ್ದಂತೆ, ಮನೆಯಲ್ಲಿದ್ದ ಎಲ್ಲರೂ ಆತ್ಮೀಯರಾದರು. ಎಲ್ಲರೂ ನಮ್ಮ ಮನೆಯವರೇ ಎನಿಸಿದರು. ಬಳಿಕ ಸಿಕ್ಕಿದ ಟಾಸ್ಕ್, ಅದರಲ್ಲಿ ಪಾಲ್ಗೊಳ್ಳುವ ಸಂತಸ ಎಲ್ಲವೂ ಮನದಲ್ಲಿ ಹಾಗೇ ಉಳಿದಿದೆ. ಒಬ್ಬ ನಟನಾಗಿದ್ದ ನನ್ನನ್ನು ಬಿಗ್‌ಬಾಸ್ ಎಲ್ಲರ ಮನೆಯ ಮಗನಾಗಿ ಮಾಡಿದೆ ಆ ಸಂತಸ ನನಗಿದೆ.

**ವಿ.ಸಿ: ಕ್ಯಾಪ್ಟನ್ಸಿ ಸವಾಲು ಹೇಗಿತ್ತು?**

**ಶಿಶಿರ್:** ಬಿಗ್‌ಬಾಸ್ ಮನೆಯಲ್ಲಿ ಕ್ಯಾಪ್ಟನ್ ಆಗಿ ನಮ್ಮ ಜವಾಬ್ದಾರಿ ನಿರ್ವಹಿಸುವುದು ಇದೆಯಲ್ಲಾ ಅದು ನಿಜಕ್ಕೂ ಚಾಲೆಂಜಿಂಗ್. ಮನೆಯೊಳಗೆ ಯಾರು ಹೇಗಿರುತ್ತಾರೆ, ಅವರ ಮನೋಭಾವ ಎಂತಹದ್ದು ಎಂಬುದನ್ನು ಅರಿತಿಕೊಳ್ಳಲು ಸಾಧ್ಯವೇ ಇಲ್ಲ. ಅದರಲ್ಲಿಯೂ ಆರಂಭದಲ್ಲಿಯೇ ನನಗೆ ಕ್ಯಾಪ್ಟನ್ಸಿ ಸಿಕ್ಕಿದ್ದು ಖುಷಿ ಕೊಟ್ಟಿತು. ಹೆಮ್ಮೆ ಎನಿಸಿತು. ಆಮೇಲೆ ಮನೆಯ ಎಲ್ಲರನ್ನೂ ಸಂಭಾವಳಿ ಸುವುದು ಸಾಕು ಸಾಕಾಗಿ ಹೋಯಿತು. ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿತ್ತು. ಆಗ ಎಲ್ಲರನ್ನು ಸಮಾಧಾನಪಡಿ ಸುವುದು ಅಬ್ಬಾಬ್ಬಾ.. ಅದನ್ನು ಹೇಳತೀರದು. ಆ ಸವಾಲನ್ನು ಎದುರಿಸಿ ಇಷ್ಟು ದಿನ ಮನೆಯಲ್ಲಿದ್ದ ಇದ್ದೇ ಎಂಬುದೇ ಖುಷಿ.

**ವಿ.ಸಿ: ಬಿಗ್‌ಬಾಸ್ ಮನೆಯಲ್ಲಿದ್ದಾಗ ನಿಮ್ಮ ಬಗ್ಗೆ ಗಾಸಿಪ್ ಶುರುವಾಗಿತ್ತಲ್ಲ ?**

**ಶಿಶಿರ್:** ಬಿಗ್‌ಬಾಸ್ ಮನೆಯಲ್ಲಿ ಎಲ್ಲರೂ ನಮ್ಮವರೇ ಹಾಗಾಗಿ ಎಲ್ಲರೊಂದಿಗೂ ಸಂತಸದಿಂದ ಬೆರೆಯುತ್ತಿದ್ದೆ. ಐಶ್ವರ್ಯಾ ಹಾಗೂ ನಾನು ಹಿಂದೆ ಒಂದೇ ಚಿತ್ರದಲ್ಲಿ ನಟಿಸಿದ್ದೆವು. ಆಗಿನಿಂದಲೂ ಐಶ್ವರ್ಯಾ ಪರಿಚಯ. ಅದರಿಂದ ಮನೆಯಲ್ಲಿಯೂ ಅವರೊಂದಿಗೆ ಸ್ನೇಹದಿಂದಿದ್ದೆ. ಅದು ಗಾಸಿಪ್‌ಗೆ ಕಾರಣವಾಗಿರಬಹುದು ಅಷ್ಟೇ. ಐಶ್ವರ್ಯಾ ನನ್ನ ಗುಡ್ ಫ್ರೆಂಡ್.

**ವಿ.ಸಿ: ನಿಮ್ಮ ಪ್ರಕಾರ ಈ ಬಾರಿಯ ಬಿಗ್‌ಬಾಸ್ ಕಿರೀಟ ಯಾರ ಪಾಲಾಗಬಹುದು?**

**ಶಿಶಿರ್:** ಮನೆಯಲ್ಲಿರುವ ಎಲ್ಲರೂ ಸ್ಪರ್ಧಿಗಳೇ, ಅದರಲ್ಲಿ ಯಾರು ಗೆಲ್ಲುತ್ತಾರೆ ಎಂದು ಹೇಳುವುದು ಕಷ್ಟ. ಆದರೂ ನನ್ನ ಪ್ರಕಾರ ಈ ಬಾರಿ ಹನುಮಂತ ಬಿಗ್‌ಬಾಸ್ ವಿಜೇತನಾಗಿ ಹೊರಹೊಮ್ಮಬಹುದು ಎಂಬ ನಂಬಿಕೆ ಇದೆ.

# ಫೆಬ್ರವರಿಗೆ ರಾಘವನ ಆಗಮನ

ಚಿತ್ರ ಆರಂಭವಾದಗಿನಿಂದಲೂ ಸಾಕಷ್ಟು ನಿರೀಕ್ಷೆಗಳನ್ನು ಮೂಡಿಸಿರುವ ಅನ್‌ಲಾಕ್ ರಾಘವ ಫೆಬ್ರವರಿ 7 ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ದೀಪಕ್ ಮಧುವನಹಳ್ಳಿ ನಿರ್ದೇಶಿಸಿರುವ ಈ ಚಿತ್ರದಲ್ಲಿ ಮಿಲಿಂದ್ ನಾಯಕನಾಗಿ ನಟಿಸಿದ್ದು, ರೆಚೆಲ್ ಡೇವಿಡ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಮಂಜುನಾಥ್ ದಾಸೇಗೌಡ ಹಾಗೂ ಗಿರೀಶ್ ಕುಮಾರ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ರಾಮ ರಾಮ ರೆ ಖ್ಯಾತಿಯ ಸತ್ಯಪ್ರಕಾಶ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದಾರೆ. ಲವಿತ್ ಅವರ ಛಾಯಾಗ್ರಹಣದಲ್ಲಿ ಚಿತ್ರದುರ್ಗದ ಸೊಬಗನ್ನು ನೋಡುವುದೆ ಚೆಂದ. ಅನೂಪ್ ಸೀಳಿನ್ ಸಂಗೀತ ನೀಡಿರುವ ಈ ಚಿತ್ರದ ಹಾಡುಗಳು ಈಗಾಗಲೇ ಪ್ರೇಕ್ಷಕರ ಮನಗೆದ್ದಿವೆ.

ನಮ್ಮ ಚಿತ್ರ ಕೂಡ ಎಲ್ಲರ ಮನಸ್ಸಿಗೆ ಹತ್ತಿರವಾಗಲಿದೆ. ಮನಸಿಗೆ ಹಿಸಲಿದೆ ಎಂದು ನಿರ್ದೇಶಕ ದೀಪಕ್ ಮಧುವನಹಳ್ಳಿ ಹೇಳಿದರು. ಈ ಹಿಂದೆ ಯಾವ ಚಿತ್ರಗಳಲ್ಲೂ ನೋಡಿರದ ಸಾಧುಕೋಕಿಲ ಹಾಗೂ ಶೋಭ್ ರಾಜ್ ಅವರನ್ನು ನಮ್ಮ ಚಿತ್ರದಲ್ಲಿ ನೋಡಬಹುದು. ಅವಿನಾಶ್, ಭೂಮಿ ಶೆಟ್ಟಿ ಮುಂತಾದವರು ಈ ಚಿತ್ರದಲ್ಲಿದ್ದಾರೆ. ತಂತ್ರಜ್ಞರ ಕಾರ್ಯವೈಖರಿ ಕೂಡ ಚೆನ್ನಾಗಿದೆ. ಎಲ್ಲರ ಮುಖದಲ್ಲಿ ಭರವಸೆಯ ನಗು ಮೂಡಿತ್ತು. ಆ ನಗು ಪ್ರೇಕ್ಷಕನ ಮುಖದಲ್ಲೂ ಮೂಡಲಿದೆ ಎಂಬ ಭರವಸೆ ಇದೆ ಎಂದು ನಾಯಕ ಮಿಲಿಂದ್ ತಿಳಿಸಿದರು. ದೀಪಕ್ ಅವರು ಈ ಚಿತ್ರದ ಕಥೆ ಹೇಳಿದಾಗಲೇ ಈ ಚಿತ್ರದಲ್ಲಿ ನಟಿಸಲು ನಿರ್ಧರಿಸಿದ್ದೆ. ಅಷ್ಟು ಸುಂದರ ಕಥಾನಕವಿದು. ನಾನು ಈ ಚಿತ್ರದಲ್ಲಿ ಜಾನಕಿ ಪಾತ್ರದಲ್ಲಿ ನಟಿಸಿದ್ದೇನೆ ಎಂದು ರೆಚೆಲ್ ಡೇವಿಡ್ ಹೇಳಿದರು.